ಹುಬ್ಬಳ್ಳಿ ಸೋಮವಾರ, 9 ಮಾರ್ಚ್ 2026 ಸಂಪುಟ 15, ಸಂಚಿಕೆ 350, ಪುಟಗಳು 12 ■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ RNI No.KARKAN/2011/64413 hosadigantha.com epaper.hosadigantha.com ₹5

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

T20 ವಿಶ್ವಕಪ್ 2026

ಮತ್ತೊಂದು ವಿಶ್ವಗರಿ 3ನೇ ಟಿ20 ವಿಶ್ವಕಪ್ ಗೆದ್ದು ಬೀಗಿದ ಭಾರತ

ಟಿ20 ಧುರಂಧರ್



ಅಹಮದಾಬಾದ್: ಬ್ಯಾಟಿಂಗ್ ಮಾಡುವಾಗ ಸಿಕ್ಸರ್‌ಗಳನ್ನು ಬಾರಿಸುತ್ತಾ, ಬೌಲಿಂಗ್ ಮಾಡುವಾಗ ವಿಕೆಟ್‌ಗಳನ್ನು ತೆಗೆಯುತ್ತಾ ಭಾರತ ತಂಡವು ವಿಶ್ವ ಕ್ರಿಕೆಟ್‌ನಲ್ಲಿ ತನಗೆ ತಾನೇ ಸಾಟಿ ಎಂಬ ವಿಷಯ ಗಟ್ಟಿಯಾಗಿ ಸ್ಪಷ್ಟಪಡಿಸಿದೆ. ಕೋಟ್ಯಾಂತರ ಅಭಿಮಾನಿಗಳ ಕನಸು ಮತ್ತೊಮ್ಮೆ ಈಡೇರಿದೆ. ಸೂರ್ಯಕುಮಾರ್ ಯಾದವ್ ನೇತೃತ್ವದಲ್ಲಿ ಭಾರತ ಮತ್ತೊಮ್ಮೆ ದೊಡ್ಡ ಸಾಧನೆಯೊಂದನ್ನು ಮಾಡಿದೆ. ಕಿವೀಸ್ ತಂಡವನ್ನು ಸೋಲಿಸಿರುವ ಭಾರತವು ಸತತ ಎರಡನೇ ಬಾರಿ ಟಿ20 ವಿಶ್ವಕಪ್ ಗೆದ್ದು ಬೀಗಿದೆ. ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದ ವಿಶ್ವದ ನಂಬರ್ 1 ತಂಡ ಭಾರತವು ಭಾನುವಾರದ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಿತು. ಬ್ಯಾಟಿಂಗ್ ಆಹ್ವಾನ ಪಡೆದು 255 ರನ್‌ಗಳ ದೊಡ್ಡ ಮೊತ್ತ ಬಾರಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡವನ್ನು 159ಕ್ಕೆ ಆಲೌಟ್ ಮಾಡಿ ವಿಶ್ವ ಚಾಂಪಿಯನ್ ಆಗಿ ಮೆರೆಯಿತು. ಸಂಜು ಸಾಮ್ಸನ್ ಹಾಗೂ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ಹಾಗೂ ಐತಿಹಾಸಿಕ ಜೊತೆಯಾಟದೊಂದಿಗೆ ಕಿವೀಸ್ ತಂಡಕ್ಕೆ ದುಸ್ವಪ್ನವಾದರು. ಬೂಮ್ರಾ ಮತ್ತೊಮ್ಮೆ ಗೆಲುವಿನ ರೂವಾರಿಯಾದರು. ಇಶಾನ್ ಕಿಶಾನ್ ಎರಡು ಅತ್ಯುತ್ತಮ ಕ್ಯಾಚ್‌ನೊಂದಿಗೆ ಮಿಂಚಿದರು. ಕಿವೀಸ್ ಪರ ಸೈಫರ್ಟ್ ಮಾತ್ರ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿದರು.

ಸಂಜು-ಕಿಶನ್ ಅಬ್ಬರ: ಭಾರತದ ಬ್ಯಾಟರ್‌ಗಳು ಕಿವೀಸ್ ಮೇಲೆ ಸವಾರಿ ನಡೆಸಿದರು. ಯಾರೊಬ್ಬ ಬ್ಯಾಟರ್ ಕೂಡ ಸೆಟ್ ಆಗುವ ಮುಲಾಜಿಗೆ ಬೀಳದೆ ಮೊದಲ ಎಸೆತದಿಂದ ದಂಡಿಸುತ್ತಾ ಬಂದರು. ಬ್ಯಾಟಿಂಗ್ ಬುಲಾವ್ ಪಡೆದ ಭಾರತ ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಅವರಿಂದ ಅಬ್ಬರದ ಆರಂಭ ಪಡೆಯಿತು. 98 ರನ್‌ಗಳ ಆರಂಭಿಕ ಜೊತೆಯಾಟದ ನಂತರ ಅಭಿಷೇಕ್ 52ಕ್ಕೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಕಿಶನ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಸಂಜು ಕೂಡ ಅದೇ ಆಟವಾಡಿದರು. ಕಿಶನ್ 54 ರನ್‌ಗೆ ವಿಕೆಟ್ ಒಪ್ಪಿಸಿದರೆ, ಸಂಜು 89 ರನ್‌ಗಳಿಸಿ ಮಿಂಚಿದರು. ಶಿವಂ ದುಬೆ ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು.

ಸ್ಯಾಮ್ಸನ್ ಆಟಕ್ಕೆ ಕಿವೀಸ್ ತತ್ತರ



89 ರನ್
46 ಎಸೆತ

ಸರಣಿ ಶ್ರೇಷ್ಠ: ಸಂಜು ಸ್ಯಾಮ್ಸನ್



54 ರನ್
25 ಎಸೆತ

ಯಾವ ತಂಡಕ್ಕೆ ಸಿಕ್ಕಿದ್ದೇನು?

ಭಾರತ: ಚಾಂಪಿಯನ್ಸ್
27.48 ಕೋಟಿ ರೂ.

ಕಿವೀಸ್: ರನ್ನರ್ಸ್ ಅಪ್
14.65 ಕೋಟಿ ರೂ.

2024ರಲ್ಲಿ ಟಿ20 ವಿಶ್ವಕಪ್
2025ರಲ್ಲಿ ಚಾಂಪಿಯನ್ಸ್ ಟ್ರೋಫಿ
2026ರಲ್ಲಿ ಟಿ20 ವಿಶ್ವಕಪ್

3
3 ವರ್ಷದಲ್ಲಿ ಭಾರತಕ್ಕೆ 3 ಐಸಿಸಿ ಟ್ರೋಫಿ

ಭಾರತದ ಐತಿಹಾಸಿಕ ಸಾಧನೆ

3 ಬಾರಿ ಟಿ20 ವಿಶ್ವಕಪ್ ಗೆದ್ದ ಮೊದಲ ತಂಡ

2007ರಲ್ಲಿ ಟಿ20 ವಿಶ್ವಕಪ್ ಉದ್ಘಾಟನಾ ಪಂದ್ಯಾವಳಿ ದ.ಆಫ್ರಿಕಾದಲ್ಲಿ ನಡೆದಿತ್ತು. ಅಲ್ಲಿಂದ ಇಲ್ಲಿಯವರೆಗೆ ಭಾರತ ನಾಲ್ಕನೇ ಬಾರಿ ಫೈನಲ್ ಆಡಿದೆ. ಇದರಲ್ಲಿ ಮೂರು ಬಾರಿ ಗೆದ್ದ ಏಕೈಕ ತಂಡ ಎಂಬ ಯಾರೂ ಮಾಡದ ಸಾಧನೆಗೈದು ಭಾರತ ಮೆರೆದಿದೆ. ಧೋನಿ ನಾಯಕತ್ವದಲ್ಲಿ ಮೊದಲ ಸೀಸನ್‌ನಲ್ಲೇ ಭಾರತ ವಿಶ್ವಕಪ್ ಮುಡಿಗೇರಿಸಿಕೊಂಡಿತ್ತು. 2014ರಲ್ಲಿ ಫೈನಲ್‌ಗೇರಿದರೂ ಶ್ರೀಲಂಕಾ ಎದುರು ಸೋತು ರನ್ನರ್-ಅಪ್ ಆಗಿತ್ತು. ಕಳೆದ ಬಾರಿ(2024) ವಿಂಡೀಸ್ ಹಾಗೂ ಅಮೆರಿಕದ ಜಂಟಿ ಆತಿಥ್ಯದಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ಕಪ್ ಗೆದ್ದು ಬೀಗಿತ್ತು. ಇದರೊಂದಿಗೆ ಎರಡು ಬಾರಿ ಟಿ20 ವಿಶ್ವಕಪ್ ಗೆದ್ದ ಮೂರನೇ ತಂಡ ಎನಿಸಿಕೊಂಡಿತ್ತು. ತವರಿನಲ್ಲೇ ನಡೆದ ಪಂದ್ಯಾವಳಿಯಲ್ಲಿ ಭಾರತ ಮತ್ತೊಮ್ಮೆ ಕಿರೀಟ ಮುಡಿಗೇರಿಸಿಕೊಂಡಿದೆ.

ಭಾರತ ಚಾಂಪಿಯನ್ ಪಟ್ಟಕ್ಕೇರಿದ ವರ್ಷ

2007


2024


ವಿಶ್ವಕಪ್ ಉಳಿಸಿಕೊಂಡ ಮೊದಲ ತಂಡ

ಭಾರತ 2024ರಲ್ಲಿ ಚಾಂಪಿಯನ್ ಆಗಿತ್ತು. 2026ರಲ್ಲೂ ಗೆದ್ದು ಸತತ ಎರಡನೇ ಬಾರಿ ವಿಶ್ವಕಪ್ ಗೆದ್ದಿರುವ ಭಾರತ ಯಾವ ತಂಡವೂ ಮಾಡದ ಇನ್ನೊಂದು ದಾಖಲೆ ಬರೆದಿದೆ. ಸತತ ಎರಡು ಟ್ರೋಫಿ ಗೆದ್ದಿದ್ದಲ್ಲದೆ, ಟಿ20 ವಿಶ್ವಕಪ್ ತನ್ನಲ್ಲೇ ಉಳಿಸಿಕೊಂಡ ಮೊದಲ ತಂಡ ಎನಿಸಿಕೊಂಡಿದೆ.



ಸ್ವದೇಶದಲ್ಲಿ ಗೆದ್ದ ಹೆಮ್ಮೆಯ ದೇಶ

ಹತ್ತಾರು ದೇಶಗಳು ಕೆಲವೊಮ್ಮೆ ಜಂಟಿಯಾಗಿ, ಕೆಲವೊಮ್ಮೆ ಸ್ವತಂತ್ರವಾಗಿ ಪಂದ್ಯಾವಳಿಗೆ ಆತಿಥ್ಯ ನೀಡಿವೆ. ಹೀಗಾದರೂ ಯಾವುದೇ ತಂಡ ಸ್ವಂತ ಮಣ್ಣಲ್ಲಿ ಚಾಂಪಿಯನ್‌ಗಳಾಗಿರಲಿಲ್ಲ. ಕೆಲವು ತಂಡಗಳು ಸೆಮಿಫೈನಲ್ ಗೇರಿದ್ದರೂ ಕಪ್ ಗೆದ್ದಿರಲಿಲ್ಲ. ಇದೀಗ ಭಾರತ ಶ್ರೀಲಂಕಾದೊಂದಿಗೆ ಜಂಟಿಯಾಗಿ ಆತಿಥ್ಯ ವಹಿಸಿದ್ದು, ಕಪ್ ಗೆಲ್ಲುವುದರೊಂದಿಗೆ ತವರಿನಲ್ಲಿ ಚಾಂಪಿಯನ್ ಆದ ಮೊದಲ ತಂಡ ಎನಿಸಿಕೊಂಡಿದೆ.

ಫೈನಲ್‌ನಲ್ಲಿ ಅತ್ಯಂತ ಅಧಿಕ ಸ್ಕೋರ್

ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತ ಅಚ್ಚಳಿಯದ ದಾಖಲೆಯೊಂದನ್ನು ಮಾಡಿದೆ. ಫೈನಲ್ ಪಂದ್ಯದಲ್ಲಿ ಬರೋಬ್ಬರಿ 255 ರನ್ ಗಳಿಸಿದೆ. ಇದು ಯಾವುದೇ ತಂಡ ಪ್ಲೇಆಫ್ ಅಥವಾ ಫೈನಲ್ ಪಂದ್ಯದಲ್ಲಿ ಗಳಿಸಿದ ಅತಿ ಹೆಚ್ಚು ರನ್ ಎಂಬ ದಾಖಲೆಯಾಗಿದೆ. ಇದಲ್ಲದೆ, ಟಿ20 ವಿಶ್ವಕಪ್ ಇತಿಹಾಸದಲ್ಲೇ ಎರಡನೇ ಅತಿ ಹೆಚ್ಚು ರನ್ ಆಗಿದೆ. ಸೆಮಿಫೈನಲ್‌ನಲ್ಲಿ ಮಾಡಿದ್ದ 253ರ ದಾಖಲೆಯನ್ನು ಮುರಿದು ಹಾಕಿದೆ.

ಅಹಮದಾಬಾದ್‌ನಲ್ಲಿ ಕೊನೆಗೂ ಗೆದ್ದ ಭಾರತ

ಅಹಮದಾಬಾದ್ ಕ್ರೀಡಾಂಗಣದಲ್ಲಿ ನಡೆದಿರುವ ಫೈನಲ್ ಪಂದ್ಯದಲ್ಲಿ ಭಾರತ ಕೊನೆಗೂ ಗೆಲುವು ಸಾಧಿಸಿದೆ. 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿದ್ದರೂ ಆಸ್ಟ್ರೇಲಿಯಾ ವಿರುದ್ಧ ಸೋತಿತ್ತು. ಸೂಪರ್-8 ಪಂದ್ಯದಲ್ಲಿ ದ.ಆಫ್ರಿಕಾ ತಂಡದ ವಿರುದ್ಧ ಸೋತಿತ್ತು. ಈ ಬೆನ್ನಲ್ಲೇ ಅಹಮದಾಬಾದ್ ಕ್ರೀಡಾಂಗಣದಲ್ಲಿ ಭಾರತಕ್ಕೆ ಸೋಲೆ ಗತಿ ಎಂಬಂತೆ ಬಿಂಬಿಸಲಾಗುತ್ತಿತ್ತು. ಆದರೆ ಭಾರತ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ಗೆದ್ದಿದೆ.

ಟ್ರೋಫಿ ತಂದಿಟ್ಟ ಧೋನಿ-ರೋಹಿತ್

ಹಾಲಿ ಚಾಂಪಿಯನ್ ಭಾರತ ತಂಡದ ನಾಯಕ



ರೋಹಿತ್ ಶರ್ಮಾ ಮತ್ತು ಮೊದಲ ಟಿ20 ವಿಶ್ವಕಪ್ ಪಂದ್ಯಾವಳಿಯ ವಿಜೇತ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಪಂದ್ಯಕ್ಕೂ ಮುನ್ನ ಟ್ರೋಫಿ ತಂದಿಟ್ಟರು. ಅಹಮದಾಬಾದ್ ಕ್ರೀಡಾಂಗಣದಲ್ಲಿ ಹಾಜರಿದ್ದ ಈ ಇಬ್ಬರೂ, ಪಂದ್ಯ ಪೂರ್ಣ ವೀಕ್ಷಿಸಿ ತಂಡಕ್ಕೆ ಹಾರೈಸಿದರು.

ಶಾ ಸೇರಿ ಗಣ್ಯರ ಸಾಕ್ಷಿ

ನರೇಂದ್ರ, ಮೋದಿ ಕ್ರೀಡಾಂಗಣದಲ್ಲಿ ನಡೆದ ಕೊನೆಯ ಪಂದ್ಯಕ್ಕೆ ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಭಾಗಿಯಾಗಿ ಪಂದ್ಯ ವೀಕ್ಷಿಸಿದರು. ಪಂದ್ಯಕ್ಕಾಗಿ ಹಲವಾರು ಗಣ್ಯರು ಬಂದಿದ್ದರು. ಐಸಿಸಿ ಅಧ್ಯಕ್ಷ ಜಯ್ ಶಾ, ಎಂ.ಎಸ್. ಧೋನಿ ಸೇರಿದಂತೆ ರಾಜಕಾರಣಿಗಳು, ಮಾಜಿ ಕ್ರಿಕೆಟಿಗರು, ಬಾಲಿವುಡ್ ತಾರೆಯರು ಸೇರಿದಂತೆ ಭಾಗಿಯಾಗಿದ್ದರು.

ಟಿ20 ವಿಶ್ವ ಸಮರ ಗೆದ್ದ ಭಾರತ

• ವಿವರ ಕ್ರೀಡಾಪುಟ

ಪಂದ್ಯಶ್ರೇಷ್ಠ: ಜಸ್‌ಪ್ರೀತ್ ಬೂಮ್ರಾ

ಬೂಮ್ರಾಗೆ 4 ವಿಕೆಟ್



ಭಾರತಕ್ಕೆ 8ನೇ ಐಸಿಸಿ ಟ್ರೋಫಿ

ಭಾರತದ ಒಟ್ಟು ಐಸಿಸಿ ಟ್ರೋಫಿಗಳ ಸಂಖ್ಯೆ ಮತ್ತಷ್ಟು ಹೆಚ್ಚಿದೆ. 1983ರಲ್ಲಿ ಆರಂಭವಾದ ಭಾರತ ಟ್ರೋಫಿ ಬೇಟೆ 8ಕ್ಕೇರಿದೆ. ಆಸ್ಟ್ರೇಲಿಯಾ ಈ ವರೆಗೂ ಹೆಚ್ಚು ಐಸಿಸಿ ಟೂರ್ನಿ ಗೆದ್ದ ತಂಡವಾಗಿದೆ 10 ಟ್ರೋಫಿಗಳೊಂದಿಗೆ. ಭಾರತದ ಸಂಖ್ಯೆ 8ಕ್ಕೇರಿದ್ದು ಭಾರತ ಎರಡನೇ ಸ್ಥಾನದಲ್ಲಿ ಭದ್ರವಾಗಿದ್ದಲ್ಲದೆ, ನಂಬರ್ 1 ಸ್ಥಾನಕ್ಕೆ ಇನ್ನೂ ಹತ್ತಿರವಾಗಿದೆ.

ಸ್ಕೋರ್

ಭಾರತ	ನ್ಯೂಜಿಲೆಂಡ್
255-5	159-10
20 ಓವರ್‌ಗಳಲ್ಲಿ	19 ಓವರ್‌ಗಳಲ್ಲಿ

ಟಿ20 ವಿಶ್ವಕಪ್ ಗೆದ್ದಿರುವ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗೆಲುವು ನಮ್ಮ ತಂಡದ ಪ್ರದರ್ಶನ, ಪಟ್ಟ ಶ್ರಮ ಮತ್ತು ಪ್ರತಿಯೊಬ್ಬ ಆಟಗಾರರ ಕೌಶಲವನ್ನು ಎತ್ತಿ ತೋರಿಸುತ್ತದೆ. ಈ ಗೆಲುವು ನಮ್ಮ ದೇಶಕ್ಕೆ ಹೆಮ್ಮೆಯಾಗಿದೆ.
■ ನರೇಂದ್ರ, ಮೋದಿ, ಪ್ರಧಾನ ಮಂತ್ರಿ



ಕಿರುಸುದ್ದಿ

ಪ್ರಶಸ್ತಿ ಪ್ರದಾನ ಇಂದು

ಧಾರವಾಡ: ಶ್ರೀ ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನದ ಸಹಯೋಗದಲ್ಲಿ ಉತ್ತರಾಧಿಮಠದ ದತ್ತಿ ಪ್ರಯುಕ್ತ ಶ್ರೀ ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ-2026 ಪ್ರದಾನ ಸಮಾರಂಭ ಮಾ.9ರ ಸಂಜೆ 6ಕ್ಕೆ ಕವಿಸಂನ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಜರುಗಲಿದೆ.

ಶ್ರೀ ಹರಿದಾಸರು ರಚಿಸಿದ ವಿನಾಯಕ ಹಾಡುಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮಂಡಳಿಗೆ ಈ ಪ್ರಶಸ್ತಿಯನ್ನು ನವದೆಹಲಿಯ ಅಖಿಲ ಭಾರತ ಬ್ರಾಹ್ಮಣ ಸಂಘಗಳ ಒಕ್ಕೂಟದ ರಾಷ್ಟ್ರೀಯ ಉಪಾಧ್ಯಕ್ಷ ಎನ್.ಆರ್.ಕುಲಕರ್ಣಿ ಪ್ರದಾನ ಮಾಡಲಿದ್ದಾರೆ. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದು, ಮನೋವೈದ್ಯ ಡಾ. ಆನಂದ ಪಾಂಡುರಂಗಿ ಪಾಲ್ಗೊಳ್ಳಲಿದ್ದು, ಪ್ರಾಧ್ಯಾಪಕಿ ಡಾ. ಕೃತಿಕಾ ಸತ್ಯಬೋಧ ಗುತ್ತಲ ಪ್ರಮಾಣಪತ್ರ ವಿತರಿಸಲಿದ್ದಾರೆ. ಇದಕ್ಕೂ ಮೊದಲು ಹಾಡುವಳ ಸ್ಪರ್ಧೆ ನಡೆಯಲಿದೆ. ಕೆ.ಆರ್.ದೇಸಾಯಿ ಸ್ಪರ್ಧೆಗೆ ಚಾಲನೆ ನೀಡಲಿದ್ದು, ಮಾಯಾ ಚಿಕ್ಕೆರೂರ, ಪದ್ಮಜಾ ಉಮರ್ಜಿ, ಶಹನಾಯಿ ವಾದಕ ನಟರಾಜ ಪಾಲ್ಗೊಳ್ಳವರು ಎಂದು ಪ್ರತಿಷ್ಠಾನದ ಅಧ್ಯಕ್ಷ ಗುತ್ತಲ ಪ್ರಕಟಣೆಗೆ ತಿಳಿಸಿದ್ದಾರೆ.

ಅಭಿವೃದ್ಧಿಗೆ ಬಜೆಟ್ ಸಹಕಾರಿ



ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 2026-27ನೇ ಸಾಲಿನ ರಾಜ್ಯ ಬಜೆಟ್ ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುವಂತಹ ಸರ್ವಸಾಮಾನ್ಯ ಜನರಿಗೆ ಅನುಕೂಲಕರವಾದ ಬಜೆಟ್ ಎಂದು ತಾಲೂಕಿನ ಶಿರಗುಪ್ಪಿ ಗ್ರಾಮದ ವಿಶ್ವಗುರು ಬಸವೇಶ್ವರ ಕನ್ನಡ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀದೇವಿ ನಾಯ್ಕರ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಶಿಕ್ಷಣ ಹಾಗೂ ಸಾಮಾಜಿಕ ಕಲ್ಯಾಣ ಕ್ಷೇತ್ರಗಳಿಗೆ ನೀಡಿರುವ ಹೆಚ್ಚಿನ ಪ್ರಾಮುಖ್ಯತೆ ಶ್ಲಾಘನೀಯ. ಬಜೆಟ್‌ನಲ್ಲಿ 800 ಕರ್ನಾಟಕ ಪಬ್ಲಿಕ್ ಶಾಲೆಗಳ ಘೋಷಣೆ ಮಾಡಿರುವುದು ಗ್ರಾಮೀಣ ಹಾಗೂ ನಗರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ನೆರವಾಗಲಿದೆ. ಹಾಗೆಯೇ 8ನೇಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ 0-1 ತಂತ್ರಜ್ಞಾನ ಯೋಜನೆ ಜಾರಿಗೊಳಿಸುವ ಮೂಲಕ ಸುಮಾರು 12.28 ಲಕ್ಷ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಆಧಾರಿತ ಶಿಕ್ಷಣದ ಅವಕಾಶ ದೊರೆಯಲಿದೆ ಎಂದು ಅವರು ಹೇಳಿದ್ದಾರೆ.

ನೇಮಕಾತಿಗೆ ಒತ್ತು



ಧಾರವಾಡ: ಬಜೆಟ್‌ನಲ್ಲಿ 15 ಸಾವಿರ ಶಾಲಾ ಶಿಕ್ಷಕರ ನೇಮಕ, 2000 ಬೋಧಕ, 8000 ಪೊಲೀಸ್ ಹುದ್ದೆ ಸೇರಿ 58 ಸಾವಿರ ಹುದ್ದೆಗಳ ಭರ್ತಿ ಘೋಷಿಸಲಾಗಿದೆ. ವಿದ್ಯಾರ್ಥಿ ಕ್ಯಾಂಟಿನ್, ಉನ್ನತ ಶಿಕ್ಷಣದ ಪರಿವರ್ತನೆಗೆ 22 ಸಾವಿರ ಕೋಟಿ ಅನುದಾನ ಹೀಗೆ ಶಿಕ್ಷಣ ಹಾಗೂ ಖಾಲಿ ಹುದ್ದೆಗಳ ನೇಮಕಾತಿಗೆ ಒತ್ತು ನೀಡಲಾಗಿದೆ ಎಂದು ಅರ್ಥಶಾಸ್ತ್ರ ವಿಭಾಗ ಕವಿವಿಯ ಪ್ರಾಧ್ಯಾಪಕ ಡಾ.ಬಿ.ಎಚ್. ನಾಗೂರ ಹೇಳಿದ್ದಾರೆ.

ಹಿರಿಯ ನಾಗರಿಕರ ಕಡೆಗಣನೆ




ಧಾರವಾಡ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ರಾಜ್ಯ ನಿವೃತ್ತ ನೌಕರರ ಹಾಗೂ ಹಿರಿಯ ನಾಗರಿಕರ ಕಡೆಗಣಿಸಲಾಗಿದೆ. ಉತ್ತಮ ಕಲಿಕೆ ಉಜ್ವಲ ಭವಿಷ್ಯ ಯೋಜನೆ ಅಡಿಯಲ್ಲಿ 800 ಶಾಲೆಗಳನ್ನು ಕೆಪಿಎಸ್ ಶಾಲಾಗಳಾಗಿ ಉನ್ನತೀಕರಿಸಲು 3900 ಕೋಟಿ ಮೀಸಲಿಟ್ಟಿರುವುದು. 8-12 ನೇ ತರಗತಿಯ 12.28 ಲಕ್ಷ ವಿದ್ಯಾರ್ಥಿಗಳಿಗಳಿಗೆ ತಂತ್ರಜ್ಞಾನದ ಮೂಲಕ ಸ್ವಯಂ ಕಲಿಕಾ ಡಿಜಿಟಲ್ ಸೌಲಭ್ಯ ಒದಗಿಸಿರುವುದು ಸ್ವಾಗತಾರ್ಹವಾಗಿದೆ ಎಂದು ನಿವೃತ್ತ ಶಿಕ್ಷಕ ಅಶೋಕ ಸಜ್ಜನ ಹೇಳಿದ್ದಾರೆ.

ಇಂದು ಸಭೆ



ಕುಂದಗೋಳ: ತಾಲೂಕಿನಲ್ಲಿ ಜೆಡಿಎಸ್ ಪಕ್ಷದ ಸಂಘಟನೆ ಬಲಪಡಿಸುವ ಉದ್ದೇಶದಿಂದ ಸಭೆಯನ್ನು ಮಾ.9ರಂದು ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ತಾಲೂಕು ಜೆಡಿಎಸ್ ಪಕ್ಷದ ತಾಲೂಕಾಧ್ಯಕ್ಷ ಶಂಕರಗೌಡ ದೊಡ್ಡಮನಿ ಹೇಳಿದರು.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು, ಸಭೆಯ ಅಧ್ಯಕ್ಷತೆಯನ್ನು ತಾಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷ ಶಂಕರಗೌಡ ದೊಡ್ಡಮನಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜೆಡಿಎಸ್ ಜಿಲ್ಲಾಧ್ಯಕ್ಷ ಗಂಗಾಧರಮಠ, ಮಾಜಿ ಸಚಿವರಾದ ಹನುಮಂತಪ್ಪ ಆಲ್ಕೋಡ್, ಕೆ.ಎನ್. ಗಡ್ಡಿ, ಜ್ಯೋತಿಪ್ರಕಾಶ ಮಿರ್ಜಿ, ಜಾಫರ್ ಕ್ಯಾಲ್ಕೊಂಡ್, ನಿರಂಜನಯ್ಯ ಮನಕಟ್ಟಿ ಮಠ, ಮಹಾಬಲೇಶ್ವರ ಮಾಸನಕಟ್ಟಿ, ದಾದಾಪೀರ್ ರಾಟಿಮನಿ,ಚಾಂದ್ ಕಾನವರ್, ನಿರ್ಮಲಾ ಹನಿಸಿ, ಅಲಿ ಸಂಸಮನಿ, ಬಸವರಾಜ ಹರವಿ, ಕಲಂದರಸಾಬ್ ಕಾಳ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ನವಲಗುಂದ: ಹಿಂದೂ-ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾಗಿರುವ ಯಮನೂರು ಸುಕ್ಷೇತ್ರಕ್ಕೆ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಭೇಟಿ ನೀಡಿ ಚಾಂಗದೇವ (ಹಜರತ್ ರಾಜಾಬಕ್ಷ್) ಅವರ ದರ್ಶನ ಪಡೆದರು.

ಹುಲಿಗೆಮ್ಮ ದೇವಿಯ ಶಿಲಾ ವಿಗ್ರಹ ಮೆರವಣಿಗೆ

ಅಳ್ನಾವರ: ಸಮೀಪದ ಹೊಸಲಿಂಗನಮಠ ಗ್ರಾಮದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಹುಲಿಗೆಮ್ಮ ದೇವಿಯ ನೂತನ ಶಿಲಾ ವಿಗ್ರಹವನ್ನು ಗ್ರಾಮದಲ್ಲಿ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ತರಲಾಯಿತು. ಬಂಡಾರ ಎರಚಿ ಸಂಭ್ರಮಿಸಲಾಯಿತು. ಮಾತೆ ರತ್ನವ್ವಾ ಆನಂದ ಹುಲಗನ್ನವರ ಸಮ್ಮುಖದಲ್ಲಿ ನೆರವೇರಿದ ಮೆರವಣಿಗೆಯಲ್ಲಿ ಗ್ರಾಮಸ್ಥರೆಲ್ಲರೂ ಬೇದಭಾವ ಮರೆತು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಉತ್ಸವಕ್ಕೆ ಮೆರಗು ತಂದರು. ಮಾತೆ ರತ್ನವ್ವ ಹುಲಗನ್ನವರ, ಲಿಂಗನಮಠ ಗ್ರಾಪಂ ಮಾಜಿ ಅಧ್ಯಕ್ಷ ಕಾಶೀಮ ಹಟ್ಟಿಹೋಳಿ, ಜಾತ್ರಾ ಸಮಿತಿ ಸದಸ್ಯರಾದ ಪಾಂಡುರಂಗ ಮೀಟಗಾರ, ಆನಂದ ಹುಲಗನ್ನವರ, ಬಸವರಾಜ ನಾಯಕ, ಬಸವರಾಜ ಪಾಟೀಲ, ಸಂಜು ಪಾಲಕಾರ, ರಮೇಶ ಮಾಟೊಳ್ಳಿ, ಶಿವಾನಂದ ಖೋತ, ಬಸವರಾಜ ತಳವಾರ, ಸತೀಶ ಕರಾಳೆ, ಮಂಜು ಬುದಪ್ಪನವರ, ಶೋಭಾ ಬೆಳಗಾವಿ, ಅನ್ನಪೂರ್ಣ ಬಾಗೇವಾಡಿ, ಗಿರಿಜಾ ಪಾಟೀಲ, ಪ್ರೇಮಾ ಬಾಗೇವಾಡಿ ಇತರರಿದ್ದರು. ಮಾ.9ರ ಬೆಳಗ್ಗೆ 8 ಗಂಟೆಗೆ ಗಣಪತಿ ಪೂಜೆ, ರಾತ್ರಿ ವಾಸ್ತುವ ದರ್ಶನ, ಹೋಮಗಳು ಹಾಗೂ ಬಲಿಹರಣಾದಿಗಳು, ಮಾ.10ರಂದು ಬೆಳಗ್ಗೆ 8 ಗಂಟೆಗೆ ವಿಗ್ರಹ ಪ್ರಾಣ ಪ್ರತಿಷ್ಠಾಪನೆ, ಅಂದು ಮಧ್ಯಾಹ್ನ 12 ಗಂಟೆಯಿಂದ ಉಡಿ ತುಂಬುವ ಕಾರ್ಯಕ್ರಮ ಹಾಗೂ ರಾತ್ರಿ 8 ಗಂಟೆಗೆ ಶ್ರೀ ಶಕ್ತಿ ಅಶೋಕ ಮೇತ್ರಿ ಭರತನಾಟ್ಯ ಹಾಗೂ ವಾಯುಪುತ್ರ ಮೆಲೋಡಿಸ್ ಕುರುಬಗಟ್ಟಿ ಕಲಾತಂಡದಿಂದ ರಸಮಂಜರಿ ಕಾರ್ಯಕ್ರಮ , ಮಾ.11ರಂದು ರಾತ್ರಿ 8 ಗಂಟೆಗೆ ಲಿಂಗನಮಠ ಗ್ರಾಮದ ಶ್ರೀ ನಂದೀಶ್ವರ ಗಜಾನನ ಭಜನಾ ಮಂಡಳ ವತಿಯಿಂದ ಭಜನೆ, ಮಾ.12 ರಂದು ರಾತ್ರಿ 8 ಗಂಟೆಗೆ ಲಿಂಗನಮಠ ಗ್ರಾಮದ ಶ್ರೀ ಚನ್ನಬಸವೇಶ್ವರ ಭಜನಾ ಮಂಡಳ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.



ಅಳ್ನಾವರ: ಸಮೀಪದ ಹೊಸಲಿಂಗನಮಠ ಗ್ರಾಮದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಹುಲಿಗೆಮ್ಮ ದೇವಿಯ ನೂತನ ಶಿಲಾ ವಿಗ್ರಹವನ್ನು ಗ್ರಾಮದಲ್ಲಿ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ತರಲಾಯಿತು.

ವಿಶ್ವ ಮಹಿಳಾ ದಿನಾಚರಣೆ | ಅರವಿಂದ ಏಗನಗೌಡರ ಅಭಿಮತ

ಮಹಿಳೆ ಪ್ರಗತಿಯ ಸಂಕೇತ



ಧಾರವಾಡ: ಮಹಿಳೆ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗದೆ, ಶಿಕ್ಷಣ ಹಾಗೂ ಆರ್ಥಿಕ ಸ್ವಾತಂತ್ರ್ಯದಿಂದ ಆಕಾಶಕ್ಕೆ ಏಣಿ ಹಾಕಿದ್ದು, ಮಹಿಳೆ ಪ್ರಗತಿಯ ಸಂಕೇತ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಅರವಿಂದ ಏಗನಗೌಡರ ಹೇಳಿದರು.

ನಗರದ ಗ್ರಾಮೀಣ ಬಿಇಒ ಭವನದಲ್ಲಿ ಭಾನುವಾರ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಅವರು ಉದ್ಘಾಟಿಸಿ, ಸರ್ಕಾರದ ಗ್ಯಾರಂಟಿ ಯೋಜನೆ ಮಹಿಳಾ ಸಬಲೀಕರಣದಲ್ಲೂ ಬಹುಮುಖ್ಯ ಪಾತ್ರ ವಹಿಸುವೆ ಎಂದರು.

ಗೃಹಲಕ್ಷ್ಮೀ ಯೋಜನೆಯ ಅಡಿಯಲ್ಲಿ ಪ್ರತಿ ಕುಟುಂಬದ ಯಜಮಾನಿಗೆ ನೀಡುವ ರೂ.2 ಸಾವಿರ ಗೌರವ ಧನ, ಉದ್ಯೋಗ ಮತ್ತು ಶಿಕ್ಷಣಕ್ಕೆ ಮುಕ್ತ ಸಂಚರಕ್ಕಾಗಿ ಬಸ್ ಪ್ರಯಾಣ ಉಚಿತ ಸೌಲಭ್ಯ ಮಹಿಳೆಯರ ಶ್ರಮಕ್ಕೆ ಸಿಕ್ಕ ಮನ್ನಣೆ ಎಂದರು.

ಹೆಣ್ಣೊಂದು ಕಲಿತರೆ, ಶಾಲೆಯೊಂದು ತೆರೆದಂತೆ ಎಂಬ ಮಾತು ಅಕ್ಷರಶಃ ನಿಜ. ಕಿತ್ತೂರು ಚೆನ್ನಮ್ಮ, ಒನಕೆ ಓಬವ್ವರಿಂದ ಹಿಡಿದು ಸುಧಾ ಮೂರ್ತಿವರೆಗೂ ಪ್ರತಿ ಮಹಿಳೆ ಯುವ ಪೀಳಿಗೆಗೆ ಸ್ಫೂರ್ತಿ. ಅವರ ಆದರ್ಶ ಪಾಲಿಸುವಂತೆ ಹೇಳಿದರು.

ತಾಪಂ ಇಒ ಗಂಗಾಧರ ಕಂದಕೂರ ಮಾತನಾಡಿ, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಸರ್ಕಾರದ ಗ್ಯಾರಂಟಿ ಯೋಜನೆ ಪೂರಕವಾಗಿವೆ. ಅರ್ಹ ಫಲಾನುಭವಿಗಳಿಗೆ ಯೋಜನೆ ಲಾಭ ತಲುಪಿಸುವಂತೆ ಅಧಿಕಾರಿಗಳಿಗೆ ಹೇಳಿದರು.

ಈ ವೇಳೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಸನ್ಮಾನಿಸಲಾಯಿತು. ಗ್ಯಾರಂಟಿ ಸಮಿತಿ ಸದಸ್ಯ ಚಂದ್ರಶೇಖರ ಕದಂ, ಸಿದ್ದಪ್ಪ ಅಗಸಿಮನಿ, ಪರಮೇಶ್ವರ ಕರಿಟ್ಟಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕುಟುಂಬದ ಅಭಿವೃದ್ಧಿಗೆ ಮುಂದಾಗಿ

ನವಲಗುಂದ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನವಲಗುಂದದ ಶ್ರೀ ನಾಗಲಿಂಗ ಸ್ವಾಮಿ ಮಠದಲ್ಲಿ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಪೂರ್ಣಿಮಾ ಜೋಶಿ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಧರ್ಮಸ್ಥಳ ಸಂಸ್ಥೆಯ ಮಾತೃಶ್ರೀ ಹೇಮಾವತಿ ವಿ ಹೆಗ್ಗಡೆ ಅಮ್ಮನವರ ಮಾರ್ಗದರ್ಶನದಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಕುಟುಂಬದ ಅಭಿವೃದ್ಧಿಗೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು. ಸಂಸ್ಥೆ ಯೋಜನಾಧಿಕಾರಿಗಳಾದ ದಿನೇಶ ಶೇರಿಗಾರ, ಸುಧಾ ಗಾಂವ್ಕರ, ರಿಯಾಜ್ ನಾಶಿಪುಡಿ, ಉಮಾ ಚವಡಿ, ಸುಜಾತ ಸೇರಿದಂತೆ ಇತರರಿದ್ದರು.

- ಕುಟುಂಬ, ಆರೋಗ್ಯ, ಮಕ್ಕಳ ಪಾಲನೆ, ಶೈಕ್ಷಣಿಕ ಜವಾಬ್ದಾರಿ ಬಗ್ಗೆ ಮಹಿಳೆಯರಿಗೆ ತಿಳಿಸಿದ ಶಿಕ್ಷಕಿ ವೇದವತಿ ದಂಡಗಿದಾಸರ
- ಮಹಿಳೆಯರಿಗೆ ಪ್ರಸ್ತುತ ಮಹಿಳಾ ಕಾನೂನುಗಳ ಕುರಿತು, ಸಾಮಾಜಿಕವಾಗಿ ಮಹಿಳೆಯರು ಹೇಗೆ ಪ್ರಗತಿಯನ್ನು ಸಾಧಿಸುವ ಕುರಿತು ವಿವರಣೆ ನೀಡಿದ ವಕೀಲೆ ಕೌಶಲ್ಯ ಪಾಟೀಲ



ಲಿಂಗ ತಾರತಮ್ಯ ಮುಕ್ತ ಸಮಾಜವಾಗಲಿ



ಅಳ್ನಾವರ: ಶಿಕ್ಷಣ ಮತ್ತು ಆರ್ಥಿಕ ಸ್ವಾತಂತ್ರ್ಯ ಮಹಿಳೆಯರ ನಿಜವಾದ ಸಬಲೀಕರಣಕ್ಕೆ ನಾಂದಿ ಹಾಡುತ್ತವೆ. ಈ ಮೂಲಕ ಲಿಂಗ ತಾರತಮ್ಯವಿಲ್ಲದ ಸಮಾಜ ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿನಾಯಕ ಕುರುಬರ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ತಾ.ಪಂ ಸಭಾಭವನದಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸುವ ಮುಖಾಂತರ ಮಹಿಳೆಯರ ಸ್ವಾವಲಂಬಿ ಬದುಕಿಗೆ ಮುಂದಾಗಿದ್ದು, ಅದರ ಜೊತೆಗೆ ಮಹಿಳೆಯರಿಗಾಗಿಯೇ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು ಪ್ರತಿಯೊಬ್ಬ ಮಹಿಳಾ ಫಲಾನುಭವಿಯು ಅವುಗಳ ಲಾಭವನ್ನು ಪಡೆದುಕೊಳ್ಳಬೇಕು. ಇಂದು ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆ ತನ್ನ ಛಾಪು ಮೂಡಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದ್ದು ಅವಳು ಮನೆಯನ್ನು ಬೆಳಗುವದರ ಜೊತೆಗೆ ಸಮಾಜದ ಶಕ್ತಿಯಾಗಿದ್ದು ಪ್ರತಿಯೊಬ್ಬ ಪುರುಷರ ಯಶಸ್ಸಿಗೆ ಕಾರಣಳಾಗಿದ್ದಾಳೆ ಎಂದರು.

ಕಾಂಗ್ರೆಸ್ ಮುಖಂಡ ಹಸನಅಲಿ ಶೇಖ ಮಾತನಾಡಿ, ಮಹಿಳೆಯನ್ನು ದೈವಿ ಮತ್ತು ಮಾತೃ ಸ್ವರೂಪದಲ್ಲಿ ಕಾಣುವ ಮನೋಭಾವನೆ ನಮ್ಮಲ್ಲಿದ್ದು ಅವಳಲ್ಲಿನ ತ್ಯಾಗ ಭಾವನೆ ಸಾಮಾಜಿಕ ಬದಲಾವಣೆಗೆ ಮುನ್ನುಡಿಯಾಗಿದೆ. ಕೌಟುಂಬಿಕ ಹೊಣೆಗಾರಿಕೆಯನ್ನು ಹೊತ್ತಿರುವ ಮಹಿಳೆಯರು ಆರ್ಥಿಕ ನಿರ್ವಹಣೆಯನ್ನು ಸಮತೋಲನದಲ್ಲಿ ಇಟ್ಟುಕೊಂಡು ತನ್ನಲ್ಲಿರುವ ಕೌಶಲ್ಯದಿಂದ ಬದುಕು ಸಾಗಿಸುವುದು ಎಲ್ಲರಿಗೂ ಮಾದರಿ ಎನಿಸಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕಿ ರಮಾ ಕತಕನಹಳ್ಳಿ ಮತ್ತು ಶಿಲ್ಪಾ ತರಗಾರ ಮಾತನಾಡಿ, ಇಲಾಖೆಯ ಯೋಜನೆ ಮತ್ತು ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಮಹಿಳೆಯರಿಗೆ ಅನುಕಂಪದ ಬದಲಾಗಿ ಅವಕಾಶ ನೀಡುವುದು ಅವಶ್ಯವಿದೆ ಎಂದರು. ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತಾ.ಪಂ. ಅಧಿಕಾರಿ ಪ್ರಕಾಶ ಹಾಲಮಠ, ಪ.ಪಂ ಮಾಜಿ ಸದಸ್ಯ ತಮೀಮ ತೇರಗಾಂವ, ಹಸನಅಲೀ ಶೇಖ, ರೇಖಾ ಕಲಘಟಗಿ, ಪುಷ್ಪಾ ಅನಂತಪೂರ, ಸತ್ತಾರ ಭಾತಖಂಡೆ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸ್ಥಳೀಯ ಸಂಘ-ಸಂಸ್ಥೆಯ ಸದಸ್ಯೆಯರು ಇದ್ದರು.

ಬದುಕಿಗೆ ಡಾ.ಅಂಬೇಡ್ಕರ್ ಆದರ್ಶ ದಾರಿದೀಪ

ಧಾರವಾಡ: ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ ಸಹಯೋಗದಲ್ಲಿ ನಗರದ ಬುದ್ಧ ರಕ್ಷಿಥ ಪ್ರೌಢ ಶಾಲೆ ಆವರಣದಲ್ಲಿ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆ ಜಾಗೃತಿಗಾಗಿ ಭೀಮ ಗಾಯನ ಕಾರ್ಯಕ್ರಮ ನಡೆಯಿತು.

ಉದ್ಘಾಟಿಸಿದ ಜಿಲ್ಲಾಧಿಕಾರಿ ಸ್ನೇಹಲ್ ರಾಯಮಾನೆ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ವಿಚಾರಗಳು, ಆದರ್ಶ ಬದುಕಿಗೆ ದಾರಿದೀಪ. ಸಂವಿಧಾನದ ಪಥದಲ್ಲಿ ಸರ್ವರೂ ಸಾಗುವ ಮೂಲಕ ದೇಶದ ಹಿತಕ್ಕಾಗಿ ಸರ್ವರೂ ಅನವರತ ಶ್ರಮಿಸುವಂತೆ ಹೇಳಿದರು.

ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆ ಶಿಸ್ತು, ಸಂಯಮ, ಸಂಸ್ಕೃತಿ ಹಾಗೂ ಸಂಸ್ಕಾರವೂ ಪಡೆಯಬೇಕು. ಇದರ ಮೂಲಕವೇ ನಾಡಿಗೆ ಉತ್ತಮ ಪ್ರಜೆಗಳಾಗಿ ಬಾಳುವ ಮೂಲಕ ಪಾಲಕರಿಗೆ ಕೀರ್ತಿ ತರುವಂತೆ ಹೇಳಿದರು.

ಬುದ್ಧ ರಕ್ಷಿಥ ಶಾಲೆ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಸಂತೋಷ ಜಕ್ಕಪ್ಪನವರ ಮಾತನಾಡಿ, ಭೀಮ ಗಾಯನ ಉತ್ತಮ ಕಾರ್ಯ. ಡಾ. ಅಂಬೇಡ್ಕರ್ ಸ್ಥಾಪಿಸಿದ ಶಾಲೆ ಹೆಮ್ಮರವಾಗಿ ಬೆಳೆದಿದೆ. ರಮಾಬಾಯಿ ಅವರ ಒಡವೆ ಮಾರಿ ಮಕ್ಕಳಿಗೆ ಊಟ ಹಾಕಿದ್ದ ಸ್ಮರಣೆ ಮಾಡಿದರು.

ಶಾಲೆ ಮುಖ್ಯೋಧ್ಯಾಪಕ ಬಸವರಾಜ ಹಲಗಿ ಮತ್ತು ಜಿಲ್ಲಾ ವಾರ್ತಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕ ಡಾ.ಸುರೇಶ ಹಿರೇಮಠ, ಡಾ.ಅಂಬೇಡ್ಕರ್ ಅವರ ವಿಚಾರ ಧಾರೆಗಳನ್ನು ಮನೆ-ಮನಕ್ಕೆ ತಲುಪಿಸುವ ಕೈಂಕರ್ಯ ನಡೆಯಬೇಕಿದೆ ಎಂದರು. ನಗರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘದ ಸದಸ್ಯರು ಹಾಗೂ ಕಲಾವಿದರು ಬಿ.ಆರ್.ಅಂಬೇಡ್ಕರ್ ವಿಚಾರಧಾರೆಗಳ ಕುರಿತು ಗಾಯನ ಪ್ರಸ್ತುತಪಡಿಸಿದರು. ಇದಕ್ಕೂ ಮೊದಲು ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಅನೇಕ ಅಧಿಕಾರಿಗಳು ಇದ್ದರು. ಜಿಪಂ ಸಿಇಒ ಭುವನೇಶ ಪಾಟೀಲ ಸಂವಿಧಾನ ಪೀಠಿಕೆ ಬೋಧಿಸಿದರು. ರಾಮಕೃಷ್ಣ ಸದಲಗಿ ಸ್ವಾಗತಿಸಿದರು. ಬಸವರಾಜ ಚಿಕ್ಕೂರ ನಿರೂಪಿಸಿದರು. ನಾಗಪ್ಪ ಮಾದರ ವಂದಿಸಿದರು.



ಆಧುನಿಕ ಶಿಕ್ಷಣದಲ್ಲಿ ಸಂಸ್ಕಾರ ಕಣ್ಮರೆ: ಮೋಕ್ಷಾತ್ಮಾನಂದ ಸ್ವಾಮೀಜಿ

ಧಾರವಾಡ: ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಅಲ್ಲದೇ ಆಧುನಿಕ ಶಿಕ್ಷಣದಲ್ಲಿ ಸಂಸ್ಕಾರವೂ ಕಣ್ಮರೆಯಾಗುತ್ತಿದೆ ಎಂದು ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ಮೋಕ್ಷಾತ್ಮಾನಂದ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ನಗರದ ಹೊರವಲಯದ ಗರಗ ರಸ್ತೆಯಲ್ಲಿನ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಹಮ್ಮಿಕೊಂಡ ಎಸ್ಸೆಸ್ಸೆಲ್ಸಿ-ಪಿಯುಸಿ ವಿದ್ಯಾರ್ಥಿಗಳ ಸಂಕಲ್ಪೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರ ಮರೆಯದಂತೆ ಹೇಳಿದರು. ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳು ಕೇವಲ ಶಿಕ್ಷಣ ನೀಡಿದರೆ ಸಾಲದು, ಮನುಷ್ಯತ್ವದ ಗುಣಗಳು ಮೇಳೈಸುವ ಸಂಸ್ಕೃತಿ ಮತ್ತು ಸಂಸ್ಕಾರವೂ ಬಿತ್ತಬೇಕು. ಅಂದಾಗ ಮಾತ್ರವೇ ಮಕ್ಕಳು ನಾಡಿನ ಸತ್ಪ್ರಜೆಗಳಾಗಿ ರೂಪಗೊಳ್ಳಲು ಸಾಧ್ಯವಿದೆ ಎಂದರು.



ಮನುಷ್ಯ ಸ್ವಾರ್ಥಿಯಾದರೆ, ಅವನು ಪ್ರಾಣಿಗಳಿಗೆ ಸಮಾನ. ನಿಸ್ವಾರ್ಥಿ ಆದಾಗಲೇ ಮನುಷ್ಯನಾಗುತ್ತಾನೆ. ಭಾರತೀಯ ಸಂಸ್ಕೃತಿಯು ಇನ್ನೊಬ್ಬರಿಗೆ ಅನುಕರಣೀಯ ಸಂಸ್ಕೃತಿಯಾಗಿದೆ. ಇಂತಹ ಸಂಸ್ಕೃತಿ ಉಳಿಸಿ, ಬೆಳೆಸಬೇಕು ಎಂದರು.

ಶಾಲಾ ಕಾರ್ಯದರ್ಶಿ ರಾಘವೇಂದ್ರ ಅಂಬೇಕರ್ ಅಧ್ಯಕ್ಷತೆ ವಹಿಸಿದ್ದರು. ರೇಖಾ ಅಂಬೇಕರ್, ಗುರುರಾಜ ಅಗಡಿ, ರವಿ ಪ್ರಕಾಶ, ಡಾ.ರಾಮಕೃಷ್ಣ, ಡಾ.ಶ್ರೀಕಾಂತ ಕೆ.ಎಸ್.,ಚನ್ನವೀರಯ್ಯ ಮೂಲಿಮನಿ, ಪದ್ಮಾವತಿ ಜೈನರ್ ಹಾಗೂ ಪಾಲಕರು ಇದ್ದರು. ವೇದಘೋಷ, ಭಗವದ್ಗೀತೆ ಪಠಣ, ಮಾತಾ-ಪಿತೃ ಪಾದಪೂಜೆ ನೆರವೇರಿದವು. ಶಾಲೆಯ ಪ್ರಾಚಾರ್ಯೆ ಡಾ.ಅನಿತಾ ರೈ ಮಕ್ಕಳಿಗೆ ಸಂಕಲ್ಪ ಬೋಧನೆ ಮಾಡಿದರು. ವಿನಾಯಕ ಭಟ್ ಸ್ವಾಗತಿಸಿದರು. ರಾಮಚಂದ್ರ ಭಟ್ಟ ನಿರೂಪಿಸಿದರು. ಗಿರಿಜಾ ಜಿ. ವಂದಿಸಿದರು.

ವಿದ್ಯಾರ್ಥಿಗಳ ಗುರಿ ಸಾಧನೆಗೆ ಆತ್ಮವಿಶ್ವಾಸ ಮುಖ್ಯ: ಅರಿಹಂತ ಪ್ರಸಾದ

ಧಾರವಾಡ: ಜನ್ಮಕೊಟ್ಟ ತಂದೆ-ತಾಯಿ, ವಿದ್ಯೆ ಕಲಿಸಿದ ಗುರು ಮತ್ತು ಜನ್ಮಭೂಮಿ ದೇವರಿಗೆ ಸಮಾನ. ವಿದ್ಯಾರ್ಥಿಗಳು ಗುರುಗಳು ತೋರಿದ ಮಾರ್ಗದಲ್ಲಿಯೇ ಸಾಗುವಂತೆ ಜನತಾ ಶಿಕ್ಷಣ ಸಮಿತಿ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಸಲಹೆ ನೀಡಿದರು.

ನಗರದ ವಿದ್ಯಾಗಿರಿಯ ಜೆಎಸ್ಸೆಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಗುರಿಯನ್ನು ಸಾಧಿಸಬೇಕು. ಕೃತಕ ಬುದ್ಧಿಮತ್ತೆ ಪ್ರಭಾವ ಹೆಚ್ಚಾಗಿದ್ದು, ಮಕ್ಕಳು ಶಿಸ್ತು, ಕೌಶಲ್ಯ ರೂಢಿಸಿಕೊಳ್ಳಬೇಕು. ಉತ್ತಮ ಶಿಕ್ಷಣ ಪಡೆದು, ಉನ್ನತ ಹಂತಕ್ಕೆ ಬೆಳೆಯುವಂತೆ ಹೇಳಿದರು.



ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಮಾತನಾಡಿ, ಜೆಎಸ್ಸೆಸ್ ಒಂದು ಶೈಕ್ಷಣಿಕ ಆಲದ ಮರ. ಇಲ್ಲಿ ಸಾಕಷ್ಟು ಕೋರ್ಸ್‌ಗಳಿವೆ. ಎಸ್ಸೆಸ್ಸೆಲ್ಸಿ ನಂತರ ಮುಂದೇನೆಂಬ ಭಯ ಬೇಡ. ಆಸಕ್ತ ವಿಷಯದಲ್ಲಿ ಶಿಕ್ಷಣ ಮುಂದುವರಿಸುವಂತೆ ತಿಳಿಸಿದರು.

ಶಾಲೆಯ ಮುಖ್ಯೋಧ್ಯಾಪಕಿ ಮೈನಾವತಿ ದಿವಟೆ, ವಿದ್ಯೆ ಎಂಬ ಎರಡಕ್ಷರ ಪ್ರತಿ ವ್ಯಕ್ತಿಯನ್ನೂ ಉನ್ನತ ಹಂತಕ್ಕೆ ಕೊಂಡೊಯ್ಯಲಿದೆ. ಹೀಗಾಗಿ ವಿದ್ಯಾರ್ಥಿಗಳು ಪ್ರಪಂಚದ ಅನ್ವೇಷಣೆಗೆ ಸನ್ನಾಧರಾಗಿ, ಭವಿಷ್ಯ ಉಜ್ವಲಗೊಳಿಸಿಕೊಳ್ಳುವಂತೆ ಸಲಹೆ ನೀಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು. ಶೀತಲ್ ಕುಂದರ್ ನಿರೂಪಿಸಿದರು. ಮಂಜುನಾಥ ದಾಸನಕೊಪ್ಪ ವಂದಿಸಿದರು.

ವ್ಯಾಪಾರಿಗಳ ಅಂಗಡಿ ಮುಂದೆ ಕಸ ಹಾಕಿದ ಪುರಸಭೆ!

ನವಲಗುಂದ: ಪಟ್ಟಣದ ಗಾಂಧಿ ಮಾರುಕಟ್ಟೆಯಲ್ಲಿರುವ ಬೀದಿ-ಬದಿ ವ್ಯಾಪಾರಸ್ಥರು ಸರಿಯಾಗಿ ಕಸವನ್ನು ವಿಲೇವಾರಿ ಮಾಡುವುದಿಲ್ಲ ಎಂದು ಅವರ ಅಂಗಡಿಯ ಮುಂದೆ ಪುರಸಭೆ ಅಧಿಕಾರಿಗಳು ಕಸ ಹಾಕಿದ್ದು, ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಫೆಬ್ರುವರಿ 21ರಂದು ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕರು ತಮ್ಮ ಪುರಸಭೆಯ ಸಿಬ್ಬಂದಿ ಮೂಲಕ ಟ್ರ್ಯಾಕ್ಟರ್‌ನಲ್ಲಿ ತ್ಯಾಜ್ಯ ತಂದು ಬೀದಿ-ಬದಿ ವ್ಯಾಪಾರಸ್ಥರ ಅಂಗಡಿಗಳ ಮುಂದೆ ಸುರಿದು ಅವರ ವ್ಯಾಪಾರಕ್ಕೆ ಅಡೆ-ತಡೆ ತಂದಿದ್ದಾರೆ. ಬಡ ವ್ಯಾಪಾರಿಗಳ ಬದುಕಿನ ಜೊತೆ ಚೆಲ್ಲಾಟವಾಡಿದ್ದಾರೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಗೌರವಯುತವಾಗಿ ಬದುಕುವ ಮತ್ತು ಶುಚಿಯಾದ ಪರಿಸರದಲ್ಲಿ ಕೆಲಸ ಮಾಡುವ ಹಕ್ಕಿದೆ. ವ್ಯಾಪಾರ ಮಾಡುವ ಸ್ಥಳದಲ್ಲಿ ಕಸ ಸುರಿಯುವುದು ಆರೋಗ್ಯದ ಹಕ್ಕಿನ ಉಲ್ಲಂಘನೆಯಾಗುತ್ತದೆ. ಬಡ ವ್ಯಾಪಾರಸ್ಥರ ಅಂಗಡಿಗಳ ಮುಂದೆ ಕಸ ಸುರಿಯುವ ಮೂಲಕ ದೈನಂದಿನ ವ್ಯಾಪಾರಕ್ಕೆ ಅಡ್ಡಿಪಡಿಸಲಾಗಿದೆ. ಉದ್ದೇಶಪೂರ್ವಕವಾಗಿ ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವುದರಿಂದ ಸ್ವಚ್ಛ ಪರಿಸರ ನೀಡಬೇಕಾದ ಅಧಿಕಾರಿಗಳೇ ಪರಿಸರ ಮಾಲಿನ್ಯ ಮಾಡಿದ್ದಾರೆ ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪುರಸಭೆ ಕಾರ್ಯಾಲಯದ ಕಿರಿಯ ಆರೋಗ್ಯ ನಿರೀಕ್ಷಕಿ ಸಾವಿತ್ರಿ ಮುಶ್ಯಪ್ಪನವರ ಅವರು ಪ್ರತಿಕ್ರಿಯೆ ಕೇಳಲು ದೂರವಾಣಿ ಮೂಲಕ ಕರೆ ಮಾಡಿದರೆ ಸ್ವೀಕರಿಸಲಿಲ್ಲ.



ಜಾಗೃತಿ ಉದ್ದೇಶ
ಬೀದಿ ವ್ಯಾಪಾರಸ್ಥರು ಹಸಿ ಕಸ ಒಣ ಕಸ ವಿಂಗಡಣೆ ಮಾಡಿ ಕೊಡದೆ ಇರುವ ಕಾರಣ ಮತ್ತು ಅವರಿಗೆ ಜಾಗೃತಿ ಬರಲಿ ಎಂದು ನಮ್ಮ ಸಿಬ್ಬಂದಿ ವ್ಯಾಪಾರ ಮಾಡುವ ಸ್ಥಳದಲ್ಲಿ ಕಸ ಸುರಿದಿದ್ದರು. ಈ ಕುರಿತು ಮೀಟಿಂಗ್ ಮಾಡಿ ಹೇಳಿದ್ದೇವೆ. ವ್ಯಾಪಾರಸ್ಥರು ಕಸ ವಿಂಗಡಣೆ ಮಾಡಿ ಕೊಡಲು ಒಪ್ಪಿ ಕೊಂಡಿದ್ದಾರೆ ಎಂದು ನವಲಗುಂದ ಪುರಸಭೆ ಕಾರ್ಯಾಲಯದ ಪ್ರಭಾರಿ ಮುಖ್ಯಾಧಿಕಾರಿ ಶರಣು ಪೂಜಾರ ತಿಳಿಸಿದ್ದಾರೆ.

> 2014ರ ಬೀದಿ ಬದಿ ವ್ಯಾಪಾರಿಗಳ ಕಾಯ್ದೆಯಡಿ ವ್ಯಾಪಾರಿಗಳಿಗೆ ರಕ್ಷಣೆ ಇದ್ದರೂ ಅಧಿಕಾರಿಗಳು ಅವರನ್ನು ಹೀನಾಯವಾಗಿ ನಡೆಸಿಕೊಂಡಿದ್ದಾರೆ. ಅವರು ವ್ಯಾಪಾರ ಮಾಡುವ ಸ್ಥಳದಲ್ಲಿಯೇ ಕಸ ಹಾಕಿ ಗಲೀಜು ಮಾಡಿದ್ದಾರೆ. ಇದು ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ 1964 ಮತ್ತು ನಾಗರಿಕ ಸೇವಾ ನಿಯಮಗಳ ಉಲ್ಲಂಘನೆಯಾಗುತ್ತದೆ.
> ■ **ಮಾಬುಸಾಬ ಯರಗುಪ್ಪಿ** ಸಮಾಜ ಸೇವಕ, ನವಲಗುಂದ

> ಕಸ ವಿಲೇವಾರಿ ಮಾಡುವುದು ಪುರಸಭೆ ಸಿಬ್ಬಂದಿ ಕರ್ತವ್ಯ. ಆದರೆ ಅದೇ ಅಧಿಕಾರಿಗಳು ಸಾರ್ವಜನಿಕ ಸ್ಥಳದಲ್ಲಿ ಕಸ ಹರಡಿರುವುದು ಅಧಿಕಾರದ ದುರುಪಯೋಗವಾಗಿದೆ. ಈ ಕುರಿತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮವಾಗಬೇಕು.
> ■ **ಮಲ್ಲಿಕಾರ್ಜುನಸ್ವಾಮಿ ಮಠಪತಿ,** ರೈತ ಮುಖಂಡ.

ಪ್ರತಿ ಮನೆಯಲ್ಲಿ ಒಬ್ಬ ಸೈನಿಕನಾಗಲಿ: ಬಸವರಾಜ ಗಣಿ

ಕುಂದಗೋಳ: ಯುವಕರು ದೇಶ ಸೇವೆಗಾಗಿ ಸೈನ್ಯ ಸೇರಬೇಕು. ಆ ನಿಟ್ಟಿನಲ್ಲಿ ಪಾಲಕರು ಪ್ರೋತ್ಸಾಹಿಸಬೇಕು. ದೇಶ ಸೇವೆಯು ಅತ್ಯಂತ ಪವಿತ್ರವಾದ ಕರ್ತವ್ಯವಾಗಿದೆ ಎಂದು ನಿವೃತ್ತ ಯೋಧ ಬಸವರಾಜ ಗಣಿ ಹೇಳಿದರು.

ತಾಲೂಕಿನ ಚಾಕಲಬ್ಬಿ ಗ್ರಾಮದಲ್ಲಿ ಗಡಿ ಭದ್ರತಾ ಪಡೆಯಲ್ಲಿ (ಬಿ.ಎಸ್.ಎಫ್) ದೀರ್ಘ 22 ವರ್ಷಗಳು ಸೇವೆ ಸಲ್ಲಿಸಿ ಸ್ವಗ್ರಾಮಕ್ಕೆ ಮರಳಿದ ಬಸವರಾಜ ಗಣಿ ಅವರಿಗೆ ಗ್ರಾಮಸ್ಥರು ಆಯೋಜಿಸಿದ್ದ ಅದ್ದೂರಿ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿ, ಮೊಬೈಲ್ ವ್ಯಾಮೋಹ ಬಿಟ್ಟು ಮುಂಜಾನೆ ಎದ್ದು ವ್ಯಾಯಾಮದ ಮೂಲಕ ದೇಹ ದಣಿಸಬೇಕು. ಸೈನ್ಯ ಸೇರುವ ಹಂಬಲದೊಂದಿಗೆ ಪ್ರತಿ ಮನೆಯಲ್ಲೂ ಒಬ್ಬ ಸೈನಿಕ ಸಿದ್ಧವಾಗಬೇಕು ಎಂದು ಆಶಿಸಿದರು.

ಪೊಲೀಸ್ ಅಧಿಕಾರಿ ನವೀನ ಜಕ್ಕಲಿ ಮಾತನಾಡಿ, ಸೈನಿಕ ವೃತ್ತಿ ಎನ್ನುವುದು ಕೇವಲ ಉದ್ಯೋಗವಲ್ಲ, ಅದು ಜೀವನದ ಮಹತ್ವದ ಧ್ಯೇಯವಾಗಿದೆ. ಕೆಲವರಿಗೆ ಮಾತ್ರ ಇಂತಹ ದೇಶ ಸೇವೆಯ ಭಾಗ್ಯ ದೊರೆಯುತ್ತದೆ. ತಮ್ಮ ತಾರುಣ್ಯವನ್ನೇ ದೇಶಕ್ಕಾಗಿ ತ್ಯಾಗ ಮಾಡುವ ಸೈನಿಕರನ್ನು ಸದಾ ಗೌರವಿಸಬೇಕು ಎಂದರು.



ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಕುಂದಗೋಳ ಶಿವಾನಂದ ಮಠದ ಶಿವಾನಂದ ಶ್ರೀಗಳು ಹಾಗೂ ಅಭಿನವ ಬಸವಣ್ಣಜ್ಜನವರು ಆಶೀರ್ವಚನ ನೀಡಿ, ಜನರು ಮಲಗುವ ಮುನ್ನ ಸೈನಿಕರನ್ನು ಹಾಗೂ ಊಟ ಮಾಡುವ ಮೊದಲು ರೈತರನ್ನು ನೆನೆಯಬೇಕು ಎಂದರು. ನಿವೃತ್ತ ಶಿಕ್ಷಕ ಎಸ್.ಪಿ. ಹಾನಗಲ್ ಪ್ರಾಸ್ತಾವಿಸಿದರು. ನಿವೃತ್ತ ಯೋಧ ಎಸ್.ಪಿ. ಪಾಟೀಲ ಹಾಗೂ ಒಲಿಂಪಿಕ್ ಪಟು ಅನನ್ಯಾ ಹಿರೇಮಠ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಯೋಧನ ತಂದೆ ಈರಪ್ಪ ಗಣಿ, ತಾಯಿ ಯಲ್ಲಮ್ಮ ಗಣಿ, ಪತ್ನಿ ಅನ್ನಪೂರ್ಣ, ಮಾಜಿ ಸೈನಿಕರಾದ ಯೋಗೀಶ ಹಿರೇಮಠ, ಎಚ್.ಬಿ. ಪಾಟೀಲ, ಸಂಜೀವ ಉಪಾಧ್ಯಾಯ, ಚಂದ್ರಶೇಖರ ಬಿಚಗತ್ತಿ, ಈಶ್ವರಗೌಡ ಹಿರೇಗೌಡ್ರ, ವಿ.ಎಸ್. ಮಸಾಲಿ, ಅಂಜುಮಾ ನದಾಫ ಸೇರಿದಂತೆ ಇತರರಿದ್ದರು. ಮಂಜುನಾಥ ಕಟಗಿ ಸ್ವಾಗತಿಸಿದರು. ಮಂಜುನಾಥ ಬಾರಕೇರ ಕಾರ್ಯಕ್ರಮ ನಿರೂಪಿಸಿದರು.

ವಿದ್ಯಾರ್ಥಿಗಳಿಗೆ ಗೌರವ

ಯೋಧ ಬಸವರಾಜ ಗಣಿ ಅವರು ಗ್ರಾಮದ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಬೆಳೆಸುವ ಸಲುವಾಗಿ ತಮಗೆ ಸನ್ಮಾನ ರೂಪದಲ್ಲಿ ಬಂದಿದ್ದ ಮಾಲೆಗಳನ್ನು ವಿದ್ಯಾರ್ಥಿಗಳಿಗೆ ಹಾಕಿ ಗೌರವಿಸಿದ್ದು ವಿಶೇಷವಾಗಿತ್ತು. 60ಕ್ಕೂ ಹೆಚ್ಚು ಯೋಧರು ಸೇರಿದಂತೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಯೋಧ ಬಸವರಾಜ ಗಣಿಯವರನ್ನು ಗ್ರಾಮದಲ್ಲಿ ಹೂ, ವಾದ್ಯಗಳೊಂದಿಗೆ ಗ್ರಾಮದಲ್ಲಿ ವಿಜೃಂಭಣೆಯಿಂದ ಮೇರವಣಿಗೆ ಮೂಲಕ ಸ್ವಾಗತ ಕೋರಿ ಗ್ರಾಮದ ತುಂಬ ಮೆರವಣಿಗೆ ಮಾಡಲಾಯಿತು.

ಹುಬ್ಬಳ್ಳಿ
ಸೋಮವಾರ, 9 ಮಾರ್ಚ್ 2026
ಸಂಪುಟ 15, ಸಂಚಿಕೆ 350, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಮಾ.19: ರಾಮ ಮಂದಿರಕ್ಕೆ ರಾಷ್ಟ್ರಪತಿ | ೦೭
ತೈಲದಷ್ಟೇ ನೀರಿನ ಮೂಲಗಳೂ ಗುರಿ | ೦೭
ಜೆಡಿಯು ಸೇರಿದ ಸಿಎಂ ನಿತೀಶ್ ಪುತ್ರ | ೦೭

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ವಿಶಾಖೆ

ದಿನದ ಮಾತು

ದೊರೆ ಕೊಟ್ಟ ನಿಲುವಂಗಿ ಬೆಲೆಬಾಳುವುದೇ ಇರಬಹುದು, ವಿಚಾರಿಸಿ ನೋಡಿದಲ್ಲಿ ನಮ್ಮ ಹರಕು ವಸ್ತ್ರವೇ ಅದಕ್ಕಿಂತ ಮೇಲು.

▲ಲೋಕೋಕ್ತಿ

ತರಕಾರಿ, ಆಹಾರ ವಿಷಮಯ; ಮನಸ್ಸು ಕಲುಷಿತ

ನೇರ ನೋಟ

•ದು.ಗು.ಲಕ್ಷ್ಮಣ

•ಪುಟ ೬

ಕಿರುಸುದ್ದಿ

ಶಾಲೆಯಲ್ಲೇ ವಿದ್ಯಾರ್ಥಿಗಳ ಮಾರಾಮಾರಿ: ಬಾಲಕ ಸಾವು

•**ಬಳ್ಳಾರಿ:** ನಗರದ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಮಧ್ಯೆ ನಡೆದ ಹಲ್ಲೆ ಪ್ರಕರಣದಲ್ಲಿ ಶಾಲೆಯ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ನಡೆದಿದೆ. ನಗರದ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಇತರೆ ವಿದ್ಯಾರ್ಥಿಗಳ ಮೇಲೆ ರಾಡ್ ಮೂಲಕ ಹಲ್ಲೆ ನಡೆಸಿದ್ದಾನೆ. ವಿದ್ಯಾರ್ಥಿಯೊಬ್ಬನಿಗೆ ಬಲವಾದ ಪೆಟ್ಟು ತಗುಲಿದ ಹಿನ್ನೆಲೆಯಲ್ಲಿ ಸ್ಥಳದಿಂದ ಪರಾರಿಯಾಗಿದ್ದಾನೆ. ನಂತರ ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಎಸ್ಪಿ ಡಾ.ಸುಮನ್ ಡಿ.ಪೆನ್ನಕರ್ ಭೇಟಿ ನೀಡಿ ಘಟನೆ ಕುರಿತು ಮಾಹಿತಿ ಪಡೆದರು. ➡ಪುಟ ೪


ಗ್ರಾಪಂ ಸದಸ್ಯೆ ಕುಟುಂಬಸ್ಥರ ಹಲ್ಲೆ: ನೊಂದ ರೈತ ಆತ್ಮಹತ್ಯೆ

•**ಹುಬ್ಬಳ್ಳಿ:** ಗ್ರಾಮ ಪಂಚಾಯಿತಿ ಸದಸ್ಯೆ ಹಾಗೂ ಅವರ ಕುಟುಂಬಸ್ಥರು ರೈತನ ಹಲ್ಲೆ ನಡೆಸಿ, ವೈಯಕ್ತಿಕ ನಿಂದನೆ ಮಾಡಿದ ಹಿನ್ನೆಲೆ ಆತ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಘಟನೆ ಶನಿವಾರ ತಾಲೂಕಿನ ಉಮಚಗಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿಂಗಪ್ಪ ಅಂಗಡಿ(48) ಮೃತಪಟ್ಟ ರೈತ. ಗ್ರಾಪಂ ಸದಸ್ಯೆ ಮಂಜುಳಾ ಹರಿಜನ, ಮುತ್ತಪ್ಪ ಹರಿಜನ, ವೆಂಕಪ್ಪ ದಾಸರ, ಯಲ್ಲಪ್ಪ ಹರಿಜನ, ಶಿವರಾಯಪ್ಪ ಹರಿಜನ, ಮಂಜುನಾಥ ಮೇಗಳಮನಿ, ಲಕ್ಷ್ಮವ್ವ ಮುತ್ತಣ್ಣವರ, ಪಾರ್ವತೆವ್ವ ಗೂಳಣ್ಣವರ, ಬಸವ್ವ ವಾಲಿ, ಪ್ರವೀಣ ನಾಗರಹಳ್ಳಿ ಎಂಬುವರ ವಿರುದ್ಧ ಮೃತನ ಪತ್ನಿ ರೇಣುಕಾ ಅಂಗಡಿ ದೂರು ನೀಡಿದ್ದಾರೆ. ➡ಪುಟ ೪

ಕುತೂಹಲ ಕೆರಳಿಸಿದ ಸ್ಪೀಕರ್ ಅವಿಶ್ವಾಸ! •ಪುಟ ೨
ಸಂವಿಧಾನದ ಆಶಯ ಜಾರಿಗೆ ತರಲು ಕೈ ಹಿಂದೇಟು •ಪುಟ ೫
ಉಪಚುನಾವಣೆ: ಕಾಂಗ್ರೆಸ್ ಉಸ್ತುವಾರಿ ಸಮಿತಿ ರಚನೆ •ಪುಟ ೫
ಶೇ.33 ಮೀಸಲಾತಿ ಬಗ್ಗೆ ಆತ್ಮತೃಪ್ತಿ ಇದೆ: ದೇವೇಗೌಡ •ಪುಟ ೫
ಟ್ರಂಪ್‌ಗಾಗಿ ದೇಶ ಗಿರವಿ: ಮಲ್ಲಿಕಾರ್ಜುನ ಖರ್ಗೆ •ಪುಟ ೫
ಅಡುಗೆ ಅನಿಲ ದರ ಹೆಚ್ಚಳಕ್ಕೆ ಕಿಡಿ •ಪುಟ ೫

ಸ್ಪೀಕರ್ ಅವಿಶ್ವಾಸ ನಿರ್ಣಯ: ಮರುಕಳಿಸಲಿದೆಯೇ ಇತಿಹಾಸ?

▸ಸುಪ್ರೀತಾ ಹೆಬ್ಬಾರ್/ಗೋವಿಂದ ಎನ್.ಎಸ್.



ಲೋಕಸಭೆಯ ಬಜೆಟ್ 2026-27ರ ಅಧಿವೇಶನದ ಮೊದಲ ಭಾಗದಲ್ಲಿ ವಿಪಕ್ಷಗಳು ಹಚ್ಚಿದ್ದ ಅವಿಶ್ವಾಸ ನಿರ್ಣಯ ಮಂಡನೆಯ ಚಿಂಗಾರಿ ಮಾ.9ರಿಂದ ಆರಂಭವಾಗಲಿರುವ ಎರಡನೇ ಭಾಗದಲ್ಲಿ ದೊಡ್ಡ ಕಿಚ್ಚಿನ ರೂಪ ಪಡೆದುಕೊಳ್ಳುವ ಲಕ್ಷಣ ಕಾಣಿಸುತ್ತಿದೆ. ಸೋಮವಾರದಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ಸದನ ನಡೆಸಬೇಕಾದ ಸ್ಪೀಕರ್ ಅವರನ್ನೇ ಹೊರಗಿಡುವ ಪ್ರಯತ್ನ ನಡೆದಿದೆ. ಸ್ಪೀಕರ್ ಓಂ ಬಿರ್ಲಾ ಅವರು ಸಾಮಾನ್ಯ ಸದಸ್ಯರಂತೆ ಕುಳಿತು ಅವಿಶ್ವಾಸ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂಬಂಧ ಆಡಳಿತ ಪಕ್ಷ ಹಾಗೂ ವಿಪಕ್ಷಗಳು ತಮ್ಮ ಸದಸ್ಯರಿಗೆ ವಿಪ್ ಜಾರಿ ಮಾಡಿರುವುದು ಪರಿಸ್ಥಿತಿಯ ಗಂಭೀರತೆ ಸೂಚಿಸುತ್ತಿದೆ.

ಕಲಾಪದಲ್ಲಿ ಬಿರ್ಲಾ ಅವರ ಕಾರ್ಯವೈಖರಿ ಕುರಿತು 2-3 ದಿನ ಗಂಭೀರ ಚರ್ಚೆಯಾಗುವ ನಿರೀಕ್ಷೆಯಿದೆ. ಈ ನಡುವೆ, ಈವರೆಗೆ ಈ ವಿಷಯದಲ್ಲಿ ಅಂತರ ಕಾಯ್ದುಕೊಂಡಿದ್ದ ಇಂಡಿಯಾ ಮೈತ್ರಿಕೂಟದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಕೂಡ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಚರ್ಚೆಯ ನಂತರ ಮತ ವಿಭಜನೆಯ ಮೂಲಕ ಮತದಾನ ನಡೆದಲ್ಲಿ, ಪಕ್ಷದ ಸದಸ್ಯರ ಬಲಾಬಲ ನಿರ್ಣಾಯಕ ಪಾತ್ರ ವಹಿಸಲಿದೆ.

ಫೆಬ್ರವರಿಯ ಅಧಿವೇಶನದಲ್ಲಿ ಸ್ಪೀಕರ್ ಓಂ ಬಿರ್ಲಾ ಮೇಲೆ ಅವಿಶ್ವಾಸ ವ್ಯಕ್ತಪಡಿಸಿದ್ದ ವಿಪಕ್ಷಗಳು ಮುಖ್ಯವಾಗಿ ಕಾಂಗ್ರೆಸ್ ನಾಯಕರು, ಅವರ ಪದಚ್ಯುತಿಗೆ ಆಗ್ರಹಿಸಿ ನಿಲುವಳಿ ಮಂಡಿಸಿದ್ದರು. ಇದಕ್ಕೆ ವಿಪಕ್ಷಗಳ 118 ಮಂದಿ ಸಹಿ ಹಾಕಿದ್ದಾರೆ. ಈಗ ಅದು ಚರ್ಚೆಗೆ ಬಂದಿರುವ ಹಿನ್ನೆಲೆಯಲ್ಲಿ ಎನ್‌ಡಿಎ ತಮ್ಮ ಸ್ಪೀಕರ್ ಅನ್ನು ಸಮರ್ಥಿಸಿಕೊಳ್ಳಬೇಕಿದೆ.

ಇನ್ನೊಂದೆಡೆ, ಓಂ ಬಿರ್ಲಾ ಕೂಡ ತಮ್ಮ ನಡೆ ನುಡಿಗಳಿಗೆ ಸಮರ್ಥನೆ ನೀಡಬೇಕಿದೆ. ಬಜೆಟ್ ಅಧಿವೇಶನದಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಕುರಿತು ಮಾತನಾಡಲು ಅವಕಾಶ ನಿರಾಕರಿಸಿದ್ದು, ಮತ್ತು ಎಂಟು ಸದಸ್ಯರನ್ನು ಅಶಿಸ್ತಿನ ಆರೋಪದ ಮೇಲೆ ಅಮಾನತು ಮಾಡಿರುವುದನ್ನೇ ಆಧಾರವಾಗಿರಿಸಿಕೊಂಡು ವಿಪಕ್ಷಗಳು ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸಿವೆ. ಸದನದಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕಾದ ಸ್ಪೀಕರ್, ಬಹಿರಂಗವಾಗಿಯೇ ಆಡಳಿತ ಪಕ್ಷದ ಪರವಾಗಿ ನಡೆದುಕೊಳ್ಳುತ್ತಿದ್ದಾರೆ, ವಿಪಕ್ಷಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬುದು ಅವರ ಪ್ರಮುಖ ಆರೋಪಗಳಾಗಿವೆ.

ಲೋಕಸಭಾ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗುತ್ತಿರುವುದು ಇದೇ ಮೊದಲೇನಲ್ಲ, ಈ ಮೊದಲು ಮೂರು ಬಾರಿ ಸ್ಪೀಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆಯಾಗಿತ್ತು. 1954ರ ಡಿಸೆಂಬರ್ 18ರಂದು ಮೊದಲ ಬಾರಿಗೆ ಸ್ಪೀಕರ್ ಜಿ.ವಿ. ಮಾಲ್ವಂಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಪ್ರತಿಪಕ್ಷಗಳು ಪಕ್ಷಪಾತ ಧೋರಣೆ, ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡದ ಆರೋಪ ಹೊರಿಸಿದ್ದರು. ➡ಪುಟ ೪

ಇರಾನ್ ರಾಜಧಾನಿಯಲ್ಲಿ ತೈಲಮಿಶ್ರಿತ ಕಪ್ಪುನೀರಿನ ಮಳೆ
ಟೆಹ್ರಾನ್ ವಿಷದ ಮಳೆ!

•**ಟೆಹ್ರಾನ್:** ಇಸ್ರೇಲ್ ನಡೆಸಿದ ವಾಯುದಾಳಿಗಳ ಪರಿಣಾಮವಾಗಿ ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಭಾನುವಾರ ತೈಲಮಿಶ್ರಿತ ಕಪ್ಪುನೀರಿನ ಮಳೆಯಂತಹ ಅಪರೂಪದ ಪರಿಸ್ಥಿತಿ ನಿರ್ಮಾಣವಾಗಿದೆ. ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿನ ತೈಲ ಉತ್ಪಾದನಾ ಘಟಕಗಳ ಮೇಲೆ ಇಸ್ರೇಲ್ ನಡೆಸಿದ ದಾಳಿ ನಂತರ ನಗರದ ಮೇಲೆ ಕಪ್ಪು ಮೋಡಗಳು ಕವಿದು ತೈಲದಂತಹ ಪದಾರ್ಥಗಳೊಂದಿಗೆ ಮಳೆ ಸುರಿದಿರುವುದಾಗಿ ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ.



ಶನಿವಾರ ಮಧ್ಯರಾತ್ರಿ ಇಸ್ರೇಲ್ ಪಡೆಗಳು ಟೆಹ್ರಾನ್‌ನ ತೈಲ ಶುದ್ಧೀಕರಣ ಘಟಕಗಳು ಹಾಗೂ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದವು. ಈ ದಾಳಿಯಿಂದ ತೈಲ ಸಂಗ್ರಹಣಾ ಕೇಂದ್ರಗಳಲ್ಲಿ ಉಂಟಾದ ಬೆಂಕಿ ಮತ್ತು ಹೊಗೆ ವಾತಾವರಣಕ್ಕೆ ಕಪ್ಪುಮೋಡಗಳು ರೂಪುಗೊಂಡು ಬಳಿಕ ಮಳೆ ಸುರಿದಿರುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. ಮಳೆ ನೀರು ಕಪ್ಪು ಬಣ್ಣದಿಂದ ಕೂಡಿದ್ದು, ತೈಲಮಿಶ್ರಿತವಾಗಿತ್ತೆಂದು ಸಿಎನ್‌ಎನ್ ವರದಿ ಮಾಡಿದೆ. ಈ ಕುರಿತು ಇರಾನ್‌ನ ರೆಡ್ ಕ್ರೆಸೆಂಟ್ ಸೊಸೈಟಿ ಎಚ್ಚರಿಕೆ ನೀಡಿದ್ದು, ಮಳೆಯ ನೀರಲ್ಲಿ ವಿಷಕಾರಿ ಹೈಡ್ರೋಕಾರ್ಬನ್ ಸಂಯುಕ್ತಗಳು, ಗಂಧಕ ಮತ್ತು ನೈಟ್ರೋಜನ್ ಆಕ್ಸೈಡ್‌ಗಳು ಮಿಶ್ರಣವಾಗಿರುವ ಸಾಧ್ಯತೆ ಇದೆ ಎಂದು ಹೇಳಿದೆ. ಇಂತಹ ರಾಸಾಯನಿಕಗಳು ಆಮ್ಲ ಮಳೆ ಉಂಟುಮಾಡುವ ಸಂಭವವಿದ್ದು, ಇದರಿಂದ ಚರ್ಮ ಹಾಗೂ ಶ್ವಾಸಕೋಶ ಸಮಸ್ಯೆಗಳು ಉಂಟಾಗಬಹುದು ಎಂದು ವೈದ್ಯರು ಎಚ್ಚರಿಸಿದ್ದಾರೆ. ಮಳೆ ವೇಳೆ ಮನೆಯಿಂದ ಹೊರಬರದಂತೆ ಜನರಿಗೆ ಸೂಚಿಸಲಾಗಿದೆ.



ಇರಾನ್ ಮೇಲೆ ಪತಿದಾಳಿ ಸುಳ್ಳು ಸುದ್ದಿ: ಯುಎಇ ಸ್ಪಷ್ಟನೆ •ಪುಟ ೪

ಇಸ್ರೇಲ್ ದಾಳಿಗೆ ಇರಾನ್ ತತ್ತರ

ಭಾನುವಾರವೂ ಇರಾನ್‌ನ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದ್ದು, ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಆಗಸವು ಸಂಪೂರ್ಣ ದಟ್ಟವಾದ ಕಪ್ಪು ಹೊಗೆಯಿಂದ ಆವೃತವಾಗಿದೆ. ಇದಲ್ಲದೆ, ಟೆಹ್ರಾನ್ ಸೇರಿ ಇರಾನ್ ನಗರಗಳ ಮೂಲಸೌಕರ್ಯ ವ್ಯವಸ್ಥೆಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದೆ. ➡ಪುಟ ೪

ನೆರೆ ರಾಷ್ಟ್ರಗಳ ಮೇಲೆ ಹೊಸ ದಾಳಿ!

ಬಹ್ರೈನ್, ಕುವೈತ್, ಯುಎಇ ಮತ್ತು ಇತರ ನೆರೆಯ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದ ಇರಾನ್ ಅಲ್ಲಿನ ಹೋಟೆಲ್, ವಸತಿ ಕಟ್ಟಡಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ದಾಳಿ ನಡೆಸಿದೆ. ಇರಾನ್ ದಾಳಿ ವೇಳೆ ಕ್ಷಿಪಣಿ ಅವಶೇಷ ಬಿದ್ದಿದ್ದರಿಂದ ದುಬೈನ ವಸತಿ ಕಟ್ಟಡವೊಂದು ನಾಶವಾಗಿದೆ. ಭಾನುವಾರ 16 ಖಂಡಾಂತರ ಕ್ಷಿಪಣಿಗಳು ಮತ್ತು 117 ಡ್ರೋನ್‌ಗಳಿಂದ ಇರಾನ್ ಹೊಸ ದಾಳಿ ನಡೆಸಿದೆಯೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಕ್ಷಣಾ ಸಚಿವಾಲಯ ಹೇಳಿದೆ. ➡ಪುಟ ೪

ರಾಷ್ಟ್ರಪತಿ ಭೇಟಿ ವೇಳೆ ಶಿಷ್ಟಾಚಾರ ಉಲ್ಲಂಘನೆ
ಪ.ಬಂಗಾಳದ ವಿವರಣೆ ಕೇಳಿದ ಕೇಂದ್ರ ಸರ್ಕಾರ

•**ಹೊಸದಿಲ್ಲಿ:** ಪಶ್ಚಿಮ ಬಂಗಾಳಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ನೀಡಿದ್ದ ಸಂದರ್ಭದಲ್ಲಿ ಬ್ಲೂ ಬುಕ್ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ರಾಜ್ಯ ಸರ್ಕಾರಕ್ಕೆ ವಿವರವಾದ ವರದಿ ನೀಡುವಂತೆ ಕೇಳಿದೆ.

ಶನಿವಾರ ನಡೆದ ಕಾರ್ಯಕ್ರಮದಲ್ಲಿ ಭದ್ರತೆ ಮತ್ತು ಆತಿಥ್ಯಕ್ಕೆ ಸಂಬಂಧಿಸಿದಂತೆ ಗಂಭೀರ ಲೋಪಗಳು ಕಂಡುಬಂದಿವೆ ಎಂದು ವರದಿಯಾಗಿದೆ. ರಾಷ್ಟ್ರಪತಿಗಳನ್ನು ಸಿಲಿಗುರಿ ಮೇಯರ್ ಬರಮಾಡಿಕೊಂಡಿದ್ದು, ನಿಯಮದಂತೆ ಇರಬೇಕಾಗಿದ್ದ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರ ಅನುಪಸ್ಥಿತಿಯನ್ನು ಮೂಲಗಳು ಉಲ್ಲೇಖಿಸಿವೆ. ಅಲ್ಲದೆ, ರಾಷ್ಟ್ರಪತಿಗಳಿಗಾಗಿ ಸಿದ್ಧಪಡಿಸಲಾಗಿದ್ದ ಶೌಚಾಲಯದಲ್ಲಿ ನೀರಿನ ಕೊರತೆ ಮತ್ತು ಅಧಿಕೃತ ಪ್ರಯಾಣದ ಮಾರ್ಗದಲ್ಲಿ ಕಸದ ರಾಶಿ ಕಂಡುಬಂದಿದ್ದರ ಬಗ್ಗೆಯೂ ರಾಜ್ಯ ಸರ್ಕಾರವನ್ನು ಪ್ರಶ್ನಿಸಲಾಗಿದೆ. ➡ಪುಟ ೪



ಪ್ರಧಾನಿ ಮೋದಿ ಕಿಡಿ

ಪಶ್ಚಿಮ ಬಂಗಾಳದ ಭೇಟಿಯ ಸಂದರ್ಭದಲ್ಲಿ ರಾಷ್ಟ್ರಪತಿ ಮುರ್ಮು ಅವರಿಗೆ ಅವಮಾನ ಮಾಡಲಾಗಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ಮೋದಿ ಅವರು, ಇದು ಅತ್ಯಂತ ನಾಚಿಕೆಗೇಡಿನ ಮತ್ತು ಆಘಾತಕಾರಿ ಘಟನೆ ಎಂದು ಕಿಡಿಕಾರಿದರು. ತೃಣಮೂಲ ಕಾಂಗ್ರೆಸ್ ಆಡಳಿತವು ನಿಜವಾಗಿಯೂ ಎಲ್ಲಾ ಮಿತಿಗಳನ್ನು ಮೀರಿದೆ ಎಂದು ಅವರು ಟೀಕಿಸಿದರು. ಆಂಧ್ರಪ್ರದೇಶದ ಸಿಎಂ ಎನ್. ಚಂದ್ರಬಾಬು ನಾಯ್ಡು ಮತ್ತು ಒಡಿಶಾದ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಕೂಡ ಈ ಶಿಷ್ಟಾಚಾರ ಉಲ್ಲಂಘನೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಮಮತಾ ಸಮರ್ಥನೆ

ಶಿಷ್ಟಾಚಾರ ಉಲ್ಲಂಘನೆಯ ಆರೋಪಗಳನ್ನು ಸಿಎಂ ಮಮತಾ ಬ್ಯಾನರ್ಜಿ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಎಲ್ಲ ರೀತಿಯ ನಿರ್ವಹಣಾ ಲೋಪಗಳಿಗೆ ಖಾಸಗಿ ಸಂಘಟಕರು ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವೇ ಹೊಣೆ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ. ಸ್ಥಳದ ಆಯ್ಕೆಯ ವಿಷಯದಲ್ಲಿ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ ಎಂದು ಅವರು ತಿಳಿಸಿದ್ದಾರೆ. ಅಲ್ಲದೆ, ತಮ್ಮ ಸರ್ಕಾರ ರಾಷ್ಟ್ರಪತಿಗಳ ಹುದ್ದೆಗೆ ಪೂರ್ಣ ಗೌರವ ನೀಡುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಚಿತ್ತಾಪುರ: ₹1,069 ಕೋಟಿ ಕಾಮಗಾರಿಗೆ ಚಾಲನೆ
400 ಕೆರೆಗಳ ತುಂಬಿಸುವ ಯೋಜನೆ ಜಾರಿ: ಡಿಸಿಎಂ



ಚುನಾವಣಾ ಪೂರ್ವ ನೀಡಿದ ವಾಗ್ದಾನದಂತೆ ಗ್ಯಾರಂಟಿ ಯೋಜನೆಗಳ ಜತೆಗೆ ಅಭಿವೃದ್ಧಿ ಕೆಲಸವನ್ನೂ ಮಾಡುತ್ತೇವೆ.
■ಪ್ರಿಯಾಂಕ್ ಖರ್ಗೆ, ಉಸ್ತುವಾರಿ ಸಚಿವ, ಕಲಬುರಗಿ

•**ಕಲಬುರಗಿ:** ರಾಜ್ಯದಲ್ಲಿ ಈಗಾಗಲೇ ಪಂಚ ಗ್ಯಾರಂಟಿ ಯೋಜನೆಗಳ ಜಾರಿಯಿಂದ ರಾಜ್ಯದ ಜನರು ನೆಮ್ಮದಿ ಜೀವನ ನಡೆಸುತ್ತಿದ್ದು, ಇದರ ಮುಂದುವರಿದ ಭಾಗವಾಗಿ ಅಂತರ್ಜಲ ಹೆಚ್ಚಿಸುವ ನಿಟ್ಟಿನಲ್ಲಿ 400ಕ್ಕೂ ಹೆಚ್ಚಿನ ಕೆರೆ ತುಂಬಿಸುವ ನೀರಾವರಿ ಗ್ಯಾರಂಟಿ ಯೋಜನೆ ಕೈಗೆತ್ತಿಕೊಂಡಿದ್ದೇವೆ ಎಂದು ರಾಜ್ಯ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಚಿತ್ತಾಪುರದಲ್ಲಿ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಇವುಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಚಿತ್ತಾಪುರ ವ್ಯಾಪ್ತಿಯಲ್ಲಿನ ವಿವಿಧ ಇಲಾಖೆಗಳ 1,069.41 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟಿಸಿ ಮಾತನಾಡಿದ ಅವರು, ಚಿತ್ತಾಪುರದಲ್ಲಿಯೇ 365 ಕೋಟಿ ರೂ.ಮೊತ್ತದ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಲಾಗಿದೆ ಎಂದರು. ➡ಪುಟ ೪

ಮಹಿಳಾ ಸಿಬ್ಬಂದಿಯಿಂದಲೇ ವಂದೇ ಭಾರತ್ ನಿರ್ವಹಣೆ

•**ಬೆಂಗಳೂರು:** ಅಂತಾರಾಷ್ಟ್ರೀಯ ಮಹಿಳಾ ದಿನ ಹಿನ್ನೆಲೆಯಲ್ಲಿ ಭಾನುವಾರ ವಂದೇ ಭಾರತ್ ಎಕ್ಸ್‌ಪ್ರೆಸ್‌ನ್ನು ನೈಋತ್ಯ ರೈಲ್ವೆ ಬೆಂಗಳೂರು ವಿಭಾಗದ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದರು. ರೈಲು ಸಂಖ್ಯೆ 20607 ಡಾ.ಎಂ.ಜಿ.ಆರ್. ಚೆನ್ನೈ ಸೆಂಟ್ರಲ್- ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್‌ನ್ನು ಬೆಂಗಳೂರು ಮತ್ತು ಮೈಸೂರು ನಡುವೆ ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದರು. ಲೋಕೋ ಪೈಲಟ್ ಬಲ್ಲ ಶಿವಪಾರ್ವತಿ, ಸಹಾಯಕ ಲೋಕೋ ಪೈಲಟ್ ಅಶ್ವತಿ ಎಸ್. ನಾಯರ್, ರೈಲು ವ್ಯವಸ್ಥಾಪಕಿ ಪ್ರಿಯದರ್ಶಿನಿ ಗಾರ್ಡ್ ಆಗಿ ಕಾರ್ಯ ನಿರ್ವಹಿಸಿದರು. ಬೆಂಗಳೂರು ವಿಭಾಗದ ಹಿರಿಯ ವಿಭಾಗೀಯ ಪರಿಚಾಲನಾ ವ್ಯವಸ್ಥಾಪಕಿ ಪ್ರಿಯಾ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ, ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕಿ ನಿವೇದಿತಾ ಬಾಲರಡ್ಡಿ ಮತ್ತು ವಿಭಾಗೀಯ ವಿದ್ಯುತ್ ಇಂಜಿನಿಯರ್ ಅಖಿಲ್ ಮಟ್ಟುರವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಈ ರೈಲಿಗೆ ನಿಶಾನೆ ತೋರಿದರು. ➡ಪುಟ ೪



ನೇಪಾಳ ಮುಂದಿನ ಪ್ರಧಾನಿ ಬಾಲೇನ್?

•**ಕಠ್ಮಂಡು:** ಯುವ ರ್‍ಯಾಪರ್‌ನಿಂದ ರಾಜಕಾರಣಿಯಾದ ಬಾಲೇಂದ್ರ ಶಾ ಬಾಲೇನ್ ಅವರ ರಾಷ್ಟ್ರೀಯ ಸ್ವತಂತ್ರ ಪಕ್ಷ(ಆರ್‌ಎಸ್‌ಪಿ) ಸಾಮಾನ್ಯ ಚುನಾವಣೆಯಲ್ಲಿ ಐತಿಹಾಸಿಕ ಜಯದತ್ತ ಸಾಗುತ್ತಿದೆ. ಹಳೆಯ ಪರಂಪರಾಗತ ರಾಜಕೀಯ ಪಕ್ಷಗಳು ಸಾರ್ವತ್ರಿಕ ಚುನಾವಣೆಯಲ್ಲಿ ಭಾರೀ ಸೋಲು ಕಂಡಿವೆ.



•ವಿವರ ಪುಟ ೭

ವ್ಯಾಪಾರಿಗಳಿಗೆ ಗುರುತಿನ ಚೀಟಿ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಕ್ಯೂ-ಆರ್ ಕೋಡ್ ಒಳಗೊಂಡ ಗುರುತಿನ ಚೀಟಿಯನ್ನು ತಿಂಗಳಾಂತ್ಯದೊಳಗಾಗಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.


ಜಿಬಿಎ ವ್ಯಾಪ್ತಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಂದು ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಬೀದಿ ಬದಿ ವ್ಯಾಪಾರಿಗಳಿಗೆ ಸಂಪೂರ್ಣ ಮಾಹಿತಿ ಒಳಗೊಂಡ ಗುರುತಿನ ಚೀಟಿಯನ್ನು ಮುದ್ರಿಸಿ ವಿತರಣೆ ಮಾಡಬೇಕು. ಈ ಸಂಬಂಧ ಮತದಾರರ ಗುರುತಿನ ಚೀಟಿ ಮಾದರಿಯಲ್ಲಿ ಗುರುತಿನ ಚೀಟಿಯನ್ನು ಮುದ್ರಿಸಿ ಅವಶ್ಯಕ ಮಾಹಿತಿಯನ್ನು ಗುರುತಿನ ಚೀಟಿಯಲ್ಲಿ ನೀಡಬೇಕು. ಉಳಿದ ಸಂಪೂರ್ಣ ಮಾಹಿತಿಯನ್ನು ಕ್ಯೂ-ಆರ್ ಕೋಡ್‌ನಲ್ಲಿ ಲಭ್ಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಬೀದಿ ವ್ಯಾಪಾರಿಗಳಿಗೆ ಹೊಸದಾಗಿ ನೀಡುವ ಗುರುತಿನ ಚೀಟಿಯಲ್ಲಿ ಯಾವುದೇ ಲೋಪದೋಷಗಳಿರದಂತೆ ನೋಡಿಕೊಳ್ಳಬೇಕು. ಎಲ್ಲಾ 5 ನಗರ ಪಾಲಿಕೆಗಳಲ್ಲಿ ಒಂದೇ ಮಾದರಿಯ ಗುರುತಿನ ಚೀಟಿಯನ್ನು ಮುದ್ರಿಸಿ ಮಾರ್ಚ್ ತಿಂಗಳಾಂತ್ಯದೊಳಗಾಗಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಒಂಟಿ ಮನೆಗಳಿಗೆ ಅನುದಾನ ಒದಗಿಸಿ

ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ ಒಂಟಿ ಮನೆ ಯೋಜನೆಗೆ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಕೂಡಲೇ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಬೇಕು. ತಿಂಗಳಾಂತ್ಯದೊಳಗಾಗಿ ಆಯ್ಕೆಯಾದ ಎಲ್ಲರಿಗೂ ಕಾರ್ಯಾದೇಶ ನೀಡಿ ಕೆಲಸ ಪ್ರಾರಂಭಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಮ ಬಾಣ



ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜು

ಬೆಂಗಳೂರು: ರಾಜ್ಯ ಸರ್ಕಾರದ 2026-27ನೇ ಸಾಲಿನ ಬಜೆಟ್‌ಗೆ ನಿರಾಸೆ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು ಸರ್ಕಾರದ ಮೇಲೆ ಮುಗಿಬೀಳಲಿದ್ದು, ಸೋಮವಾರದಿಂದ ಬಜೆಟ್ ಕಲಾಪದಲ್ಲಿ ಬಜೆಟ್‌ನ ಲೋಪ ದೋಷಗಳ ಬಗ್ಗೆ ಗಮನ ಸೆಳೆಯಲು ಸಿದ್ಧತೆ ನಡೆಸಿವೆ.

ಸಾಕಷ್ಟು ನಿರೀಕ್ಷೆ ಮೂಡಿಸಿದ್ದ ಮುಖ್ಯಮಂತ್ರಿಗಳ ಐತಿಹಾಸಿಕ 17ನೇ ಬಜೆಟ್‌ನಲ್ಲಿ ಹೊಸ ಯೋಜನೆಗಳ ಘೋಷಣೆ ಇಲ್ಲ, ಒಂದು ಸಮುದಾಯವನ್ನು ಓಲೈಸಲು ಸಾಕಷ್ಟು ಅನುದಾನ ನೀಡಲಾಗಿದೆ ಎಂದಿರುವ ವಿಪಕ್ಷಗಳು ಜಂಟಿಯಾಗಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜುಗೊಂಡಿವೆ. ಬಜೆಟ್ ಕುರಿತ ಚರ್ಚೆಯಲ್ಲಿ ಸರ್ಕಾರ ಮತ್ತು ವಿಪಕ್ಷಗಳ ನಡುವೆ ಗದ್ದಲ ಉಂಟಾಗುವುದು ನಿಶ್ಚಿತವಾಗಿದ್ದು, ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಸಚಿವರು ಮತ್ತು ಶಾಸಕರೂ ಕೂಡಾ ಸಿದ್ಧರಾಗಿದ್ದು, ಸುದೀರ್ಘ ದಿನಗಳ ಬಜೆಟ್ ಕಲಾಪವು ಜಟಾಪಟಿಗೆ ಸಾಕ್ಷಿಯಾಗಲಿದೆ.

ಮಾಗಡಿ ತಹಸೀಲ್ದಾರ್ ಮೇಲೆ ಹಲ್ಲೆಗೆ ಯತ್ನ

ಮಾಗಡಿ: ತಹಸೀಲ್ದಾರ್ ಶರತ್ ಕುಮಾರ್ ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆದು ತಹಶೀಲ್ದಾರ್ ಮೇಲೆ ಹಲ್ಲೆ ಯತ್ನ ಹಿನ್ನೆಲೆಯಲ್ಲಿ ಮಾಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶುಕ್ರವಾರ ತಾಲೂಕು ಕಚೇರಿ ಆವರಣದಲ್ಲಿ ಹರ್ತಿ ಮಾರಮ್ಮ ದೇವಾಲಯದ ಅರ್ಚಕರ ವ್ಯಾಜ್ಯ ತಹಶೀಲ್ದಾರ್ ಕೋರ್ಟ್ ನಲ್ಲಿ ನಡೆಯುವ ಸಂದರ್ಭದಲ್ಲಿ ಗ್ರಾಮಸ್ಥರಾದ ಸಿದ್ದೇಶ್, ಹೊನ್ನರಾಜು ಸಂಗಡಿಗರ ಜತೆ ದೇವಸ್ಥಾನದ ಜಾಗದ ವಿಚಾರವಾಗಿ ಗ್ರಾಮಸ್ಥರು ಮತ್ತು ತಹಶೀಲ್ದಾರ್ ನಡುವೆ ಮಾತಿನ ಚಕಮಕಿ ನಡೆದಿದೆ. ತಹಶೀಲ್ದಾರ್ ಶರತ್ ಕುಮಾರ್ ವಿರುದ್ಧ ಗ್ರಾಮಸ್ಥರ ವಾಗ್ದಾಳಿ ನಡೆಸಿ ಹಲ್ಲೆ ನಡೆಸುವ ಹಂತಕ್ಕೂ ಮುಂದಾದರು. ಗಾಬರಿಗೊಂಡ ತಹಶೀಲ್ದಾರ್ ಅವರು ಕೂಡಲೇ ಪೊಲೀಸರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಇದು ಸಾಲ ಗ್ಯಾರಂಟಿ ಬಜೆಟ್ ಆಗಿದೆ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್

-ಸಾಲ ಮಾಡಿ ತುಪ್ಪ ತಿನ್ನು, ಜಾಲಿ ಮಾಡಿ ಖಾಲಿ ಮಾಡಿಯಾದ ಮೇಲೆ ಮಣ್ಣು ತಿನ್ನು!

ದಿನ ಭವಿಷ್ಯ

ಮೇಷ ಸಂಧಾನದ ದಾರಿಯಿಂದ ನೀವು ಕಾರ್ಯ ಸಾಧಿಸಬಲ್ಲಿರಿ. ಹಾಗಾಗಿ ಸಂಘರ್ಷದ ದಾರಿ ಏಕೆ? ವಿವೇಕದಿಂದ ಹೆಜ್ಜೆ ಇಡುವುದೊಳಿತು.

ವೃಷಭ ನೀವು ಮುಚ್ಚಿಟ್ಟ ವಿಷಯವೊಂದು ಬಹಿರಂಗವಾದೀತು. ಪರಿಣಾಮ ಎದುರಿಸಲು ಸಜ್ಜಾಗಿ. ವಿದ್ಯಾರ್ಥಿಗಳಿಗೆ ತುಸು ಕಠಿಣ ಹಾದಿ.

ಮಿಥುನ ಆರೋಗ್ಯ ಸ್ಥಿರ. ಪ್ರಮುಖ ಕಾರ್ಯಕ್ಕೆ ಗಮನ ಕೊಡಲು ಇದರಿಂದ ಸಹಕಾರಿ. ಕಟು ಮಾತು ಮನೆಯಲ್ಲಿ ಸಂಬಂಧ ಕೆಡಿಸಬಹುದು.

ಕಟಕ ಇತ್ತೀಚಿನ ಸಮಸ್ಯೆ ಪರಿಹಾರ. ಅದರಿಂದ ನಿರಾಳತೆ. ಕೆಲವರ ಜತೆ ವ್ಯವಹಾರದಲ್ಲಿ ಎಚ್ಚರವಿರಲಿ. ಜಗಳ, ನಷ್ಟ ಉಂಟಾದೀತು.

ಸಿಂಹ ನೀವು ಹಿಡಿದ ದಾರಿ ಖಚಿತವಾಗಿರಲಿ. ಗೊಂದಲ ಬೇಡ. ಕೋಪ ನಿಮ್ಮ ಕೆಲಸ ಕೆಡಿಸದಂತೆ ಎಚ್ಚರ ವಹಿಸಿ. ತಾಳ್ಮೆಯ ವರ್ತನೆ ಅಗತ್ಯ.

ಕನ್ಯಾ ಇಂದು ಚಿಂತಿಸುವ ಪ್ರಮೇಯ ಉದ್ಭವಿಸದು. ಎಲ್ಲವೂ ನಿರಾಳ. ವೃತ್ತಿ ಕಾರ್ಯ ಸುಲಲಿತ. ಆಪ್ತರ ಸಾಧನೆ ಸಂತೋಷ ತರಲಿದೆ. ಧನಪ್ರಾಪ್ತಿ.

ತುಲಾ ವ್ಯವಹಾರದಲ್ಲಿ ಹೊಸ ಅವಕಾಶ ವ್ಯರ್ಥ ಮಾಡಬೇಡಿ. ಉದ್ಯಮ ಒತ್ತಡ ಹೆಚ್ಚಳ. ಆರೋಗ್ಯ ಕಡೆಗಣಿಸಬೇಡಿ. ದೇಹ, ಮನಸ್ಸಿಗೆ ವಿರಾಮ ನೀಡಿ.

ವೃಶ್ಚಿಕ ಆರೋಗ್ಯಕ್ಕೆ ಗಮನ ಕೊಡಿ. ಸಂಗಾತಿ ಜತೆ ಕಲಹ ನಡೆದೀತು. ವೃತ್ತಿಯಲ್ಲಿ ಏರುಪೇರು ಸಂಭವ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಯಶಸ್ಸು.

ಧನು ಆರಾಮದ ಬದುಕಿಗೆ ಧಕ್ಕೆ ಒದಗುವ ಪ್ರಸಂಗ ಉಂಟಾದೀತು. ದಿನವಿಡೀ ಓಡಾಟ ನಡೆಸುವ ಪರಿಸ್ಥಿತಿ. ಆಗದವರನ್ನು ಓಲೈಸಲು ಹೋಗಬೇಡಿ.

ಮಕರ ನಿಮ್ಮ ಗುರಿಸಾಧನೆಗೆ ಅಡ್ಡಿಗಳು ಒದಗಬಹುದು. ಅನವಶ್ಯ ಮಾತು ಕಡಿಮೆಗೊಳಿಸಿ. ವೃತ್ತಿ ಸಂಬಂಧಿ ಪ್ರಯಾಣ. ವಿದ್ಯಾರ್ಥಿಗಳಿಗೆ ಯಶ.

ಕುಂಭ ಹಳೆಯ ಸಮಸ್ಯೆ ಮತ್ತೆ ಕಾಡಬಹುದು. ಪರಿಹಾರದ ಪ್ರಯತ್ನಕ್ಕೆ ಕೆಲವರ ಅಡ್ಡಿ. ಅನವಶ್ಯ ಖರ್ಚು ತಗ್ಗಿಸಿ. ಕೌಟುಂಬಿಕ ಸಹಕಾರ.

ಮೀನ ದುಬಾರಿ ವಸ್ತು ಖರೀದಿಯ ಅವಕಾಶ. ವ್ಯವಹಾರದಲ್ಲಿ ಉನ್ನತಿ. ಆದರೂ ಮಾನಸಿಕ ಒತ್ತಡ ನಿವಾರಣೆಯಾಗದು. ಕೌಟುಂಬಿಕ ಉದ್ವಿಗ್ನತೆ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 3,7,2,6

ಹಿಂದಿನ ಆಪ್ ಸರಕಾರದ ಕೆಲಸ ಕಡಿಮೆ: ನರೇಂದ್ರ ಮೋದಿ

ದಿಲ್ಲಿಯ ಸಮಗ್ರ ಅಭಿವೃದ್ಧಿ

ಹೊಸದಿಲ್ಲಿ: ವರ್ಷದ ಹಿಂದೆ ಬಿಜೆಪಿ ಸರಕಾರ ಅಧಿಕಾರ ಸೂತ್ರ ಹಿಡಿದ ನಂತರ, ದಿಲ್ಲಿಯಲ್ಲಿ ಸಮಗ್ರ ಅಭಿವೃದ್ಧಿಯ ಗತಿಯು ತುಂಬು ವಿಸ್ತೃತಗೊಂಡಿದೆ ಎಂದು ಹೆಮ್ಮೆ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಹಿಂದಿನ ಆಪ್ ಸರಕಾರದ ಕಡಿಮೆ ಕೆಲಸ ಮತ್ತು ಹೆಚ್ಚು ನೆಪಗಳಿಗೆ ಆವಕಾಶದ ನೀತಿಯಿಂದಾಗಿ ಅಭಿವೃದ್ಧಿ ಕಾರ್ಯಗಳು ವಸ್ತುಶ: ಸ್ಥಗಿತಗೊಂಡಿದ್ದವು ಮತ್ತು ಯೋಜನೆಗಳು ಕಡತಗಳಲ್ಲೇ ಸತ್ತು ಹೋಗಿದ್ದವು ಎಂದು ಆರೋಪಿಸಿದ್ದಾರೆ.

ಭಾರತದ ಅಸ್ಮಿತೆ ದಿಲ್ಲಿ: ದಿಲ್ಲಿಯು ಕೇವಲ ದೇಶದ ರಾಜಧಾನಿ ಮಾತ್ರವಲ್ಲ, ಭಾರತದ ಅಸ್ಮಿತೆ ಕೂಡ. ಭಾರತಾಂಬೆಯ ಶಕ್ತಿಯ ಲಾಂಛನವೂ ಆಗಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು. ಎರಡು ಹೊಸ ಮೆಟ್ರೊ ಕಾರಿಡಾರ್‌ಗಳ ಸಹಿತ 33,500ಕೋಟಿ ರೂ.ಮೊತ್ತದ ಯೋಜನೆಗಳ ಉದ್ಘಾಟನೆ, ಲೋಕಾರ್ಪಣೆ ಬಳಿಕ ಬುರಾರಿ ಗ್ರೌಂಡ್‌ನಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಜನಸ್ತೋಮವನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿದರು.

ಮಾತೆಯರು ಗಂಟೆಗಟ್ಟಲೆ ಬಸ್ಸಿಗೆ ಕಾಯಬೇಕಿಲ್ಲ: ದಿಲ್ಲಿಯಲ್ಲಿ ಸಾರಿಗೆ ವ್ಯವಸ್ಥೆಏನೇನೂಸರಿಯಿಲ್ಲಎಂದುಟೀಕಿಸುವಕಾಲವೊಂದಿತ್ತು.ನಗರದಒಂದೆಡೆಯಿಂದ ಇನ್ನೊಂದೆಡೆಗೆ ತಲುಪಲು ಹಲವು ತಾಸು ಗಳು ಬೇಕಾಗುತ್ತಿತ್ತು. ಮಹಿಳೆಯರು ಬಸ್ ಅಥವಾ ಆಟೋಗಳಿಗಾಗಿ ಬಸ್‌ಸ್ಟಾಪ್‌ಗಳಲ್ಲಿ ಗಂಟೆಗಟ್ಟಲೆ ಕಾದು ಸುಸ್ತಾಗುವ ಪ್ರಮೇಯ ಮಾಮೂಲಾಗಿತ್ತು. ಆದರೆ ಇಂದು ದಿಲ್ಲಿಯಲ್ಲಿ ಸನ್ನಿವೇಶ ಕ್ಷಿಪ್ರಗತಿಯಿಂದ ಬದಲಾಗುತ್ತಿದೆ. ಕೆಲ ದಿನಗಳ ಹಿಂದಷ್ಟೆ ನಮೋ ಭಾರತ್ ರೈಲಿನ ಮುಖೇನ ದಿಲ್ಲಿಯನ್ನು ಪಶ್ಚಿಮ ಉತ್ತರಪ್ರದೇಶದೊಂದಿಗೆ ಜೋಡಿಸಲಾಗಿದೆ. ತನ್ಮೂಲಕ ಎರಡು ವಲಯಗಳ ನಡುವಣ ಪಯಣ ಸುಗಮವಾಗಿದೆ.

ದಿಲ್ಲಿ ಮೆಟ್ರೋ ಜಾಲವೀಗ 375ಕಿಮೀ ಮೀರಿ ವಿಸ್ತೃತಗೊಂಡಿದೆ. ತನ್ಮೂಲಕ ಸಂಪರ್ಕ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ ಮತ್ತು ಜನರಿಗೂ ಪಯಣವು ತುಂಬು ಸುಗಮವಾಗಿದೆ. ಜಗತ್ತಿನ ಯಾರೇ ಯಾವುದೇ ಕ್ಷಣ ಭಾರತದ ಬಗ್ಗೆ ಚಿಂತನೆ ಮಾಡುವಾಗ ದಿಲ್ಲಿಯ ಬಗ್ಗೆ ಮನಸ್ಸಲ್ಲಿ ಕಲ್ಪನೆ ಮೂಡೇ ಮೂಡುತ್ತೆ. ಯಾಕೆಂದರೆ ದಿಲ್ಲಿಯು ಭಾರತದ ರಾಜಧಾನಿ ಮಾತ್ರವಲ್ಲ, ಭಾರತದ ಅಸ್ಮಿತೆ, ರಾಷ್ಟ್ರದ ಶಕ್ತಿ ಸಾಮರ್ಥ್ಯ ಕೂಡ ಎಂದು ಪ್ರಧಾನಿ ಮೋದಿ ವರ್ಣಿಸಿದರು.



10ವರ್ಷ ಅಭಿವೃದ್ಧಿ ಮೂಲೆಗುಂಪು ಮಾಡಿತ್ತು

ಹಿಂದಿನ ಆಪ್‌ದಾ (ಗಂಡಾಂತರ) ಸರಕಾರ 10ವರ್ಷಗಳ ಕಾಲ ಅಭಿವೃದ್ಧಿ ಕಾರ್ಯಗಳನ್ನು ಸ್ತಬ್ಧಗೊಳಿಸಿಬಿಟ್ಟಿತ್ತು. ಕಡಿಮೆ ಕೆಲಸ ಮಾಡುವುದು ಮತ್ತು ಹೆಚ್ಚು ಎಕ್ಸ್‌ಕ್ಯೂಸ್‌ಗಳಿಗೆ ಆಪ್‌ದಾ ಸರಕಾರ ಮಣೆ ಹಾಕಿತ್ತು. ಹಾಗಾಗಿ ಯೋಜನೆಗಳ್ಯಾವುದೂ ಕಾರ್ಯಗತಗೊಳ್ಳಲೇ ಇಲ್ಲ. ಎಲ್ಲವೂ ಕಡತಗಳೊಳಗೆ ಸಾಯುತ್ತಿದ್ದವು. ಆದರೆ ಇಂದು ಯಾವುದೇ ಯೋಜನೆಗಳು ಕಡತಗಳಿಗೆ ಸೀಮಿತವಾಗಿಲ್ಲ, ಬದಲಾಗಿ ವಸ್ತುನಿಷ್ಠವಾಗಿ ಅತಿವೇಗವಾಗಿ ಅನುಷ್ಠಾನಗೊಳ್ಳುತ್ತಿವೆ. ಇಂದೀಗ ದಿಲ್ಲಿಯ ಸವಾಲುಗಳ ಬಗೆಹರಿಸಲು ನಮ್ಮ ಸರಕಾರ ಶರವೇಗದಲ್ಲಿ ಕಾರ್ಯತತ್ಪರವಾಗಿದೆ ಎಂದು ಗಮನ ಸೆಳೆದರು. ಜನರಲ್ ಪೂಲ್ ರೆಸಿಡೆನ್ಶಿಯಲ್ ಅಕೊಮೊಡೇಶನ್ (ಜಿಪಿಆರ್‌ಎ) ರಿ ಡೆವಲಪ್‌ಮೆಂಟ್ ಪ್ಲ್ಯಾನ್‌ನಡಿ ಸುಮಾರು 15,200ಕೋಟಿ ರೂ.ಮೊತ್ತದ ಯೋಜನೆಗಳಿಗೆ ಪ್ರಧಾನಿ ಮೋದಿ ಶಿಲಾನ್ಯಾಸಗೈದರು.ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರಲಾಲ್ ಖಟ್ಟರ್ ಮೋದಿ ಜತೆಗಿದ್ದರು.

ಇಡೀ ದೇಶದ ಪ್ರತಿಷ್ಠೆಯ ವಿಚಾರ

ದಿಲ್ಲಿಯ ಅಭಿವೃದ್ಧಿಯೆಂದರೆ ಬರೇ ಒಂದು ನಗರದ ಅಭಿವೃದ್ಧಿಯಲ್ಲ, ಇಡೀ ರಾಷ್ಟ್ರದ ಪ್ರತಿಷ್ಠೆಯ ವಿಚಾರವಾಗಿದೆ. ನೀವು ಯಾವ ಹೊಸ ಭರವಸೆ ಮತ್ತು ಸಂಕಲ್ಪದೊಂದಿಗೆ ವರ್ಷದ ಹಿಂದೆ ಬಿಜೆಪಿ ಸರಕಾರ ರಚಿಸಿದಿರೋ ಆ ಸಂಕಲ್ಪ, ಭರವಸೆಗಳಿಂದು ಸಾಕಾರಗೊಳ್ಳುತ್ತಿದೆ. ದಿಲ್ಲಿಯಲ್ಲಿ ನಡೆದಿರೋ ಅಬಾಧಿತ ಅಭಿವೃದ್ಧಿ ಪ್ರಕ್ರಿಯೆಗಳಿಗಾಗಿ ದಿಲ್ಲಿಯ ಎಲ್ಲಾ ಜನರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆಂದು ಹೇಳಿದರು.

ಬ್ಲ್ಯಾಕ್ ಸ್ಪಾಟ್ ಗುರುತಿಸಿ ಸ್ವಚ್ಛತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಬ್ಲ್ಯಾಕ್ ಸ್ಪಾಟ್ ಸ್ಥಳ ಗುರುತಿಸಿ ಅವುಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ನಿಯಮಿತ ಸ್ವಚ್ಛತಾ ಕಾರ್ಯಗಳ ಜತೆಗೆ ವಿಶೇಷ ಸ್ವಚ್ಛತಾ ಕಾರ್ಯಾಚರಣೆಯನ್ನು ಯೋಜಿತ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ನಗರವನ್ನು ಸ್ವಚ್ಛ ಹಾಗೂ ಆರೋಗ್ಯಕರವಾಗಿಡುವ ಉದ್ದೇಶದಿಂದ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳ ವಿವಿಧ ಪ್ರಮುಖ ಸ್ಥಳದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ ಹಾಗೂ ಬ್ಲ್ಯಾಕ್ ಸ್ಪಾಟ್ ತೆರವು ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬ್ಲ್ಯಾಕ್ ಸ್ಪಾಟ್ ಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನಾ ಅಭಿಯಾನ ವನ್ನು ಮತ್ತಷ್ಟು ಬಲಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಅವರ ಮಾರ್ಗ ದರ್ಶನದಲ್ಲಿ ನಡೆದ ಈ ಸ್ವಚ್ಛತೆ ಕಾರ್ಯದಲ್ಲಿ ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ, ಶಿವಾಜಿನಗರ, ಸಿ.ವಿ. ರಾಮನ್ ನಗರ ವಿಧಾನಸಭ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ನಡೆಸಲಾಯಿತು. ಒಟ್ಟು 8.45 ಕಿ.ಮೀ ವ್ಯಾಪ್ತಿಯಲ್ಲಿ ನಡೆದ ಈ ಅಭಿಯಾನದಲ್ಲಿ 8 ಜೆಸಿಬಿಗಳು ಹಾಗೂ 40 ಟ್ರ್ಯಾಕ್ಟರ್‌ಗಳ ಸಹಾಯದಿಂದ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 51 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

- 8.45 ಕಿ.ಮೀ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾರ್ಯಾಚರಣೆ
- 21 ಬ್ಲ್ಯಾಕ್ ಸ್ಪಾಟ್‌ಗಳ ತೆರವು
- 8 ಜೆಸಿಬಿಗಳು ಹಾಗೂ 40 ಟ್ರ್ಯಾಕ್ಟರ್‌ಗಳ ಸಹಾಯದಿಂದ, 51 ಲೋಡ್ ತ್ಯಾಜ್ಯ ತೆರವು



- ಒಟ್ಟು 203 ಪೌರಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿ ಭಾಗಿ

ಶಾಲೆಯಲ್ಲೇ ವಿದ್ಯಾರ್ಥಿಗಳ ಮಾರಾಮಾರಿ: ಬಾಲಕ ಸಾವು

ನಂತರ ಮಾತನಾಡಿ, ನಗರದ ಖಾಸಗಿ ಶಾಲೆಯ ವಿದ್ಯಾರ್ಥಿಯೊಬ್ಬ ರಾಡ್ ಬಳಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾನೆ. ಈ ವೇಳೆ, ವಿದ್ಯಾರ್ಥಿಯೊಬ್ಬನಿಗೆ ಗಂಭೀರ ಗಾಯಗಳಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಮೃತ ಬಾಲಕನ ತಂದೆ ನೀಡಿದ ದೂರು ಆಧರಿಸಿ, ವಿದ್ಯಾರ್ಥಿ ವಿರುದ್ಧ ಹಾಗೂ ಖಾಸಗಿ ಶಾಲೆಯ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸದ್ಯ ಹಲ್ಲೆ ನಡೆಸಿದ ವಿದ್ಯಾರ್ಥಿ ತಲೆಮರೆಸಿಕೊಂಡಿದ್ದು, ಪತ್ತೆಗಾಗಿ ಪ್ರತ್ಯೇಕ ತಂಡ ರಚಿಸಲಾಗಿದೆ. ಈ ಘಟನೆಯಲ್ಲಿ ಭಾಗಿಯಾದ ಎಲ್ಲರೂ ಅಪ್ರಾಪ್ತರೆ ಎಂದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ತಿಳಿಸಿದ್ದಾರೆ. ಈಗಾಗಲೇ ಘಟನೆ ಕುರಿತು ಬಳ್ಳಾರಿ ವಲಯದ ಐಜಿಪಿ ಅವರೊಂದಿಗೆ ಮಾತನಾಡಿ, ಮಾಹಿತಿ ಪಡೆದಿರುವೆ ಹಾಗೂ ಡಿಸಿಪಿಒ ಅವರಿಂದ ವರದಿ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಸಿಬ್ಬಂದಿಯಿಂದಲೇ ವಂದೇ ಭಾರತ್ ನಿರ್ವಹಣೆ

ಈ ವೇಳೆ ರೈಲ್ವೆ ಅಧಿಕಾರಿಗಳು ಮತ್ತು ಮಹಿಳಾ ಪ್ರಯಾಣಿಕರಿಗೆ ಗುಲಾಬಿ ಹೂಗಳನ್ನು ನೀಡಿ ಶುಭಾಶಯ ಕೋರಲಾಯಿತು. ಕಳೆದ ವರ್ಷ ಕೆಎಸ್ಆರ್ ಬೆಂಗಳೂರು-ಮೈಸೂರು ಮಾಲ್ಗುಡಿ ಎಕ್ಸ್‌ಪ್ರೆಸ್‌ನ್ನು ಮಹಿಳಾ ಸಿಬ್ಬಂದಿಯೇ ನಿರ್ವಹಿಸಿದ್ದರು.



400 ಕೆರೆಗಳ ತುಂಬಿಸುವ ಯೋಜನೆ ಜಾರಿ: ಡಿಸಿಎಂ

ಚುನಾವಣಾ ಪೂರ್ವ ನೀಡಿದ ಭರವಸೆಯಂತೆ ಪ್ರತಿ ವರ್ಷ ರೂ. 52,000 ಕೋಟಿಗೂ ಅಧಿಕ ಮೊತ್ತ ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಖರ್ಚು ಮಾಡುತ್ತಿದೆ. ಅಭಿವೃದ್ಧಿ ಕಾರ್ಯ ನಿಂತಿಲ್ಲ. ಚಿತ್ತಾಪುರ ಕ್ಷೇತ್ರದಲ್ಲಿಯೆ ಕಳೆದ ಎರಡೂವರೆ ವರ್ಷದಲ್ಲಿ 2,000 ಕೋಟಿ ರೂ. ಅನುದಾನ ನೀಡಿದ್ದೇವೆ ಎಂದರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕೊಲ್ಲಿ ರಾಷ್ಟ್ರಗಳ ಮಧ್ಯೆ ಯುದ್ಧ ನಡೆಯುತ್ತಿದೆ. ಯುದ್ಧದಿಂದ ಯಾರಿಗೂ ಒಳ್ಳೆಯದಾಗಲ್ಲ. ಬದಲಾಗಿ ಅಭಿವೃದ್ಧಿಗೆ ಮಾರಕವಾಗಲಿದೆ. ಹಿಂದಿಗಿಂತಲೂ ಇಂದು ವಿಶ್ವ ಶಾಂತಿಗೆ ಮಹಾತ್ಮ ಗಾಂಧಿ ಅವರ ಅಹಿಂಸೆ ತತ್ವ ಅಗತ್ಯವಿದೆ ಎಂದು ಹೇಳಿದರು.

ದೇಶದ ಕೃಷಿ ಉತ್ಪನ್ನಗಳಾದ ತೊಗರಿ, ಅಕ್ಕಿ, ಹೆಸರು, ಉದ್ದು ರಫ್ತಿಗೆ ಅಮೆರಿಕ ಹೇರುತ್ತಿರುವ ತೆರಿಗೆ ಕಡಿಮೆಗೊಳಿಸುತಿಲ್ಲವೇಕೆ ಎಂದು ಪ್ರಶ್ನಿಸಿದ ಅವರು, ಭಾರತದ ಶೇ.65ರಷ್ಟು ಜನ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ. ಹೀಗಾಗಿ ಇಲ್ಲಿನ ಕೃಷಿ ಉತ್ಪನ್ನ ಅಮೆರಿಕಾಗೆ ರಫ್ತು ಮಾಡಿದರೆ ರೈತರಿಗೆ ಅನುಕೂಲವಾಗಲಿದೆ. ಅದು ಬಿಟ್ಟು ಅಲ್ಲಿ ಶೇ.3ರಷ್ಟು ರೈತರು ಬೆಳೆಯುವ ಕೃಷಿ ಉತ್ಪನ್ನ ಖರೀದಿ ಮಾಡಿದರೆ ಇಲ್ಲಿನ ರೈತರಿಗೆ ನ್ಯಾಯ ನೀಡಲು ಸಾಧ್ಯವೆ ಎಂದರು. ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ, ಶರಣಬಸಪ್ಪ ದರ್ಶನಾಪುರ, ಶಾಸಕರಾದ ಕನೀಜ್ ಫಾತೀಮಾ, ಬಾಬುರಾವ ಚಿಂಚನಸೂರು, ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರ, ಜಗದೇವ ಗುತ್ತೇದಾರ್, ತಿಮ್ಮಣ್ಣಪ್ಪ ಕಮಕನೂರ, ದೇವಿಂದ್ರಪ್ಪ ಮರತೂರು, ಅರುಣಕುಮಾರ್ ಎಂ.ವೈ. ಪಾಟೀಲ, ಅಬ್ದುಲ್ ರಶೀದ, ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಪ್ರವೀಣ ಪಾಟೀಲ ಹರವಾಳ, ಚಂದ್ರಿಕಾ ಪರಮೇಶ್ವರ್, ಮಜಹರ್ ಆಲಂಖಾನ್, ರೇವುನಾಯಕ ಬೆಳಮಗಿ, ಡಿಸಿ ಫೌಜಿಯಾ ತರನ್ನುಮ್ ಅಧಿಕಾರಿಗಳಾದ ಪಂಡ್ವೆ ರಾಹುಲ್, ಎಸ್.ಪಿ.ಅಡ್ಡೂರು ಶ್ರೀನಿವಾಸುಲು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಹೆಚ್ಚುವರಿ ಎಸ್.ಪಿ ಮಹೇಶ ಮೇಘಣ್ಣನವರ್ ಸೇರಿದಂತೆ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ರಾಪಂ ಸದಸ್ಯೆ ಕುಟುಂಬಸ್ಥರಿಂದ ಹಲ್ಲೆ: ನೊಂದ ರೈತ ಆತ್ಮಹತ್ಯೆ

ಮನೆಯ ಮುಂದೆ ಜಲಜೀವನ ಮಿಷನ್ ಯೋಜನೆಯಲ್ಲಿ ಕಾಮಗಾರಿ ಸಲುವಾಗಿ ತಗ್ಗು ತೆಗೆದು ತಿಂಗಳು ಕಳೆದಿದ್ದು, ಇನ್ನೂ ಮುಚ್ಚಿಲ್ಲ. ಇದರಿಂದ ದನ-ಕರು ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎಂದು ರೈತ ನಿಂಗಪ್ಪ ಅವರು ಗ್ರಾಮ ಪಂಚಾಯತಿ ಸದಸ್ಯೆ ಎದುರು ನೋವು ತೋಡಿಕೊಂಡಿದ್ದಾರೆ. ಸದಸ್ಯೆ ಕೋಪಗೊಂಡು ನಿಂಗಪ್ಪ ಅವರನ್ನು ನಿಂದಿಸಿದ್ದಲ್ಲದೆ ಸದಸ್ಯೆ ಹಾಗೂ ಕುಟುಂಬಸ್ಥರು ಹಲ್ಲೆ ನಡೆಸಿ, ಜಾತಿನಿಂದನೆ ಪ್ರಕರಣ ದಾಖಲಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ.

ಇದರಿಂದ ಮನನೊಂದ ರೈತ ನಿಂಗಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ.ಬಂಗಾಳದ ವಿವರಣೆ ಕೇಳಿದ ಕೇಂದ್ರ ಸರ್ಕಾರ

ಸ್ಥಳ ಬದಲಾವಣೆ: ಬಿಧಾ ನಗರದಿಂದ ಘೋಷಾಯಿಪುರಕ್ಕೆ ಬುಡಕಟ್ಟು ಸಮುದಾಯದ ಕಾರ್ಯಕ್ರಮವನ್ನು ಕೊನೆಯ ಕ್ಷಣದಲ್ಲಿ ಸ್ಥಳಾಂತರಿಸಿದ ಬಗ್ಗೆ ರಾಷ್ಟ್ರಪತಿ ಮುರ್ಮು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಬದಲಾವಣೆಯಿಂದಾಗಿ ಕಾರ್ಯಕ್ರಮದಲ್ಲಿ ಜನರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, ಇದನ್ನು ಬುಡಕಟ್ಟು ಜನಾಂಗದ ಕಲ್ಯಾಣಕ್ಕೆ ಅಡ್ಡಿಪಡಿಸುವ ಕ್ರಮ ಎಂದು ರಾಷ್ಟ್ರಪತಿ ದೂರಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸಿರುವುದು ಸಂವಿಧಾನಕ್ಕೆ ಮಾಡಿದ ಅಪಮಾನಕ್ಕಿಂತ ಕಡಿಮೆಯೇನಲ್ಲ. ನಮ್ಮ ಸಾಂವಿಧಾನಿಕ ಚೌಕಟ್ಟನ್ನು ರಕ್ಷಿಸುವ ಸಂಸ್ಥೆಯ ಘನತೆ ಎತ್ತಿಹಿಡಿಯುವುದು ಪಕ್ಷಾತೀತವಾಗಿ ಪ್ರತಿ ಸರ್ಕಾರದ ಜವಾಬ್ದಾರಿಯಾಗಿದೆ.

■ ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಸ್ಪೀಕರ್ ಅವಿಶ್ವಾಸ ನಿರ್ಣಯ: ಮರುಕಳಿಸಲಿದೆಯೇ ಇತಿಹಾಸ?

1966ರಲ್ಲಿ ಸ್ಪೀಕರ್ ಆಗಿದ್ದ ಹುಕ್ಕುಂ ಸಿಂಗ್ ಅವರ ವಿರುದ್ಧ ಪ್ರಧಾನ ಮಂತ್ರಿ, ಇತರ ಸಚಿವರು, ಹಿರಿಯ ಕಾಂಗ್ರೆಸ್ ನಾಯಕರು ಮತ್ತು ಹಿರಿಯ ಸರ್ಕಾರಿ ಅಧಿಕಾರಿಗಳಿಗೆ ಮುಜುಗರ ಉಂಟುಮಾಡುವಂತಹ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡದ ಪಕ್ಷಪಾತಿ ಧೋರಣೆ ಮತ್ತು ಹುದ್ದೆಯ ದುರುಪಯೋಗದ ಆರೋಪ ಹೊರಿಸಲಾಗಿತ್ತು. 1987ರ ಏಪ್ರಿಲ್ 15ರಂದು ಸ್ಪೀಕರ್ ಬಲರಾಮ್ ಜಾಕರ್ ವಿರುದ್ಧ ಗೊತ್ತುವಳಿ ನಿರ್ಣಯಗಳ ಮೂಲಕ ಪ್ರಮುಖ ಸಾಂವಿಧಾನಿಕ, ನಿಯಮಬದ್ಧ ಮತ್ತು ಜ್ವಲಂತ ಸಮಸ್ಯೆಗಳನ್ನು ಕೇಳಲು ಅವಕಾಶ ಕಲ್ಪಿಸದ ಆರೋಪ ಹೊರಿಸಲಾಗಿತ್ತು. ಆದರೆ, ಈ ಯಾವುದೇ ನಿರ್ಣಯಗಳು ಕನಿಷ್ಠ 50 ಸಂಸದರ ಸಹಮತ ಕೂಡ ಪಡೆಯಲು ವಿಫಲವಾದ್ದರಿಂದ, ಅವಿಶ್ವಾಸ ನಿರ್ಣಯಗಳನ್ನು ಕೈಬಿಡಲಾಗಿತ್ತು. ಈ ಮೇಲಿನ ಪ್ರಕರಣಗಳಲ್ಲಿ ವಿಪಕ್ಷ ಸ್ಥಾನದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಇದ್ದವು ಎಂಬುದು ಗಮನಿಸಬೇಕಾದ ವಿಷಯ.

ಆದರೆ, 2024ರಲ್ಲಿ ರಾಜ್ಯಸಭೆ ಕೂಡ ಮೊದಲ ಬಾರಿಗೆ ಇಂತಹದೊಂದು ಬೆಳವಣಿಗೆಗೆ ಸಾಕ್ಷಿಯಾಯಿತು. 2024ರ ಡಿಸೆಂಬರ್‌ನಲ್ಲಿ ಸಭಾಪತಿ ಜಗದೀಪ್ ಧನ್ಕರ್ ವಿರುದ್ಧ ಪಕ್ಷಪಾತ ಧೋರಣೆ, ನಿಯಮಗಳ ಉಲ್ಲಂಘನೆ ಆರೋಪದ ಅಡಿಯಲ್ಲಿ ಪ್ರತಿಪಕ್ಷಗಳು ಸಂವಿಧಾನದ ಪರಿಚ್ಛೇದ 67 (ಬಿ)ರಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದವು. ಇದಕ್ಕೆ 60ಕ್ಕೂ ಹೆಚ್ಚು ಸದಸ್ಯರು ಸಹಿ ಹಾಕಿದ್ದರು. ಆದರೆ, ಇದು 14 ದಿನಗಳ ನೋಟಿಸ್‌ನ ನಿಯಮ ಪಾಲನೆಯಾಗದ ಹಿನ್ನೆಲೆಯಲ್ಲಿ 2024ರ ಡಿಸೆಂಬರ್ 19ರಂದು ತಿರಸ್ಕೃತಗೊಂಡಿತು. ಇದಕ್ಕೂ ಮೊದಲು 2020ರ ಸೆಪ್ಟೆಂಬರ್‌ನಲ್ಲಿ ಅಂದಿನ ಸಭಾಪತಿ ಹರಿವಂಶ ನಾರಾಯಣ ಸಿಂಗ್ ವಿರುದ್ಧ ವಿಪಕ್ಷಗಳು ಅವಿಶ್ವಾಸ ನಿರ್ಣಯ ಸಲ್ಲಿಸಿದ್ದವಾದರೂ, ಅದು ಚರ್ಚೆಗೆ ಬರಲಿಲ್ಲ.

ಈಗ ವಿವಾದದ ಕೇಂದ್ರಬಿಂದುವಾಗಿರುವ ಸ್ಪೀಕರ್ ಓಂ ಬಿರ್ಲಾ ಅವರು ಹಂತಹಂತವಾಗಿ ರಾಜಕೀಯವಾಗಿ ಏಳಿಗೆ ಕಂಡವರು. ರಾಜಸ್ಥಾನದ ಕೋಟಾ ಕ್ಷೇತ್ರದಿಂದ 2014ರಲ್ಲಿ ಲೋಕಸಭೆಗೆ ಆಯ್ಕೆಯಾಗಿ ಬಂದ ಇವರು, 2019ರಲ್ಲಿ ಮೊದಲ ಬಾರಿಗೆ ಸ್ಪೀಕರ್ ಹುದ್ದೆ ಅಲಂಕರಿಸಿದ್ದರು. 2024ರಲ್ಲಿ ಎರಡನೇ ಬಾರಿಗೆ ಸ್ಪೀಕರ್ ಆಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿರ್ಲಾ ಅವರನ್ನು ಅಭಿನಂದಿಸಿ ಕೋಟಾದಲ್ಲಿ ಅವರು ಮಾಡಿದ ಸಮಾಜ ಸೇವೆಯನ್ನು ಶ್ಲಾಘಿಸಿದ್ದರು. ಆರೋಗ್ಯ ಮತ್ತು ಕ್ರೀಡೆಗೆ ಅವರು ನೀಡಿದ್ದ ಪ್ರೋತ್ಸಾಹವನ್ನು ಸ್ಮರಿಸಿದ್ದರು.

ಹಳೆಯ ಸಂಸತ್ ಭವನದಿಂದ ಹೊಸ ಸಂಸತ್ ಭವನಕ್ಕೆ ಸದನ ಸ್ಥಳಾಂತರಗೊಂಡ ನಂತರ ಮೊದಲ ಸ್ಪೀಕರ್ ಹುದ್ದೆಯಲ್ಲಿ ಕೂಡ ಬಿರ್ಲಾ ಅವರೇ ವಿರಾಜಮಾನರಾಗಿದ್ದರು. ಹಸನ್ಮುಖಿಯಾಗಿ ಸದನ ನಡೆಸುವುದರ ಜತೆಗೆ, ಅಗತ್ಯ ಬಿದ್ದಾಗ ಕಠಿಣ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಕೂಡ ಬಿರ್ಲಾ ಅವರು ಹಿಂದೆ ಬೀಳಲಿಲ್ಲ. ಸದನದಲ್ಲಿ ಸದಸ್ಯರ ಅಶಿಸ್ತಿನ ವರ್ತನೆಗಳನ್ನು ಖಂಡಿಸುತ್ತಿದ್ದರು. ಪ್ರಶ್ನೋತ್ತರ ಅವಧಿಯಲ್ಲಿ ಉತ್ತರ ನೀಡುವಲ್ಲಿ ತಡವರಿಸಿದ ಸಚಿವರ ಕಿವಿ ಹಿಂಡಲು ಕೂಡ ಅವರು ಮುಲಾಜು ನೋಡಲಿಲ್ಲ.

ಹೊಸ ಸಂಸತ್ ಭವನವನ್ನು ಡಿಜಿಟಲೀಕರಣಗೊಳಿಸಿದ, ಸಂಸದರ ಹಾಜರಾತಿಗಳನ್ನು ಕಡ್ಡಾಯಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸದನದ ಕಲಾಪಗಳಲ್ಲಿ ಸಂವಿಧಾನದ 8ನೇ ಪರಿಚ್ಛೇದದಲ್ಲಿನ ಎಲ್ಲಾ 22 ಭಾಷೆಗಳಲ್ಲಿ ಲಭ್ಯವಾಗಿಸಿದ ಮತ್ತು ಯಾವುದೇ ಸದಸ್ಯರು ಪೂರ್ವ ನೋಟಿಸ್ ನೀಡದೆ ತಮ್ಮ ಮಾತೃಭಾಷೆಯಲ್ಲಿ ಮುಕ್ತವಾಗಿ ಮಾತನಾಡಲು ಅವಕಾಶ ಕಲ್ಪಿಸಿದ ಕೀರ್ತಿಯೂ ಇವರಿಗೇ ಸಲ್ಲಬೇಕು. ಇವರು ಅಂತಾರಾಷ್ಟ್ರೀಯ ಸ್ಪೀಕರ್ ಸಮಾವೇಶದ ಸಾರಥ್ಯ ಕೂಡ ವಹಿಸಿದ್ದರು.

18ನೇ ಲೋಕಸಭೆಯ ಸ್ಪೀಕರ್ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರೋಟೆಮ್(ಹಂಗಾಮಿ) ಸ್ಪೀಕರ್ ಆಗಿ ಮತದಾನ ಪ್ರಕ್ರಿಯೆ ನಿರ್ವಹಿಸಿದ ಸಂಸದ ಬರ್ತೃಹರಿ ಮಹತಾಬ್ ಅವರು ಓಂ ಬಿರ್ಲಾ ಅವರಿಗೆ ಸ್ಥಾನ ಬಿಟ್ಟುಕೊಡುವ ವೇಳೆ ನಿಮ್ಮ ಪೀಠ ನೀವು ಸಂಭಾಳಿಸಿ ಎಂದು ಸೂಚ್ಯವಾಗಿ ಹೇಳಿದ್ದರು. ಈಗ ವಾಸ್ತವದಲ್ಲಿ ಸ್ಪೀಕರ್ ತಮ್ಮ ಪೀಠವನ್ನು ಸಂಭಾಳಿಸಿಕೊಳ್ಳಬಲ್ಲರೇ ಎಂಬುದಕ್ಕೆ ಒಂದೆರಡು ದಿನಗಳಲ್ಲಿ ಉತ್ತರ ದೊರೆಯಲಿದೆ. ಇತಿಹಾಸದ ಪುಟಗಳನ್ನು ಗಮನಿಸಿದಾಗ, ಮಹತ್ತರ ಬದಲಾವಣೆಗಳನ್ನು ನಿರೀಕ್ಷಿಸುವುದು ಕಷ್ಟವಾಗಿದೆ.

ನೆರೆ ರಾಷ್ಟ್ರಗಳ ಮೇಲೆ ಹೊಸ ದಾಳಿ!

ಇರಾನ್ ಕಳುಹಿಸಿದ 16 ಖಂಡಾಂತರ ಕ್ಷಿಪಣಿ ಗಳನ್ನು ಹೊಡೆದುರುಳಿಸಿದ್ದು, 17ನೇ ಕ್ಷಿಪಣಿ ಗುರಿ ತಪ್ಪಿ ಸಮುದ್ರಕ್ಕೆ ಬಿದ್ದಿದೆ. ಬಹುತೇಕ ಎಲ್ಲಾ ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಆದರೆ 4 ಡ್ರೋನ್‌ಗಳು ಮಾತ್ರ ಯುಎಇ ಗಡಿಯೊಳಗೆ ಬಂದು ಬಿದ್ದಿವೆಯೆಂದು ಸಚಿವಾಲಯ ತಿಳಿಸಿದೆ. ಕುವೈತ್ ವಿಮಾನ ನಿಲ್ದಾಣದ ಇಂಧನ ಟ್ಯಾಂಕ್‌ಗಳು ಮತ್ತು ಬಹ್ರೈನ್‌ನ ನೀರು ಶುದ್ಧೀಕರಣ ಘಟಕಗಳಿಗೆ ಹಾನಿಯಾಗಿದೆ. ಇರಾಕ್‌ನ ಬಾಗ್ದಾದ್‌ನಲ್ಲಿ ಭಾರೀ ಸ್ಫೋಟದ ಸದ್ದು ಆತಂಕ ಹೆಚ್ಚಿಸಿದೆ.

ಟ್ರಂಪ್‌ಗೆ ನೆತನ್ಯಾಹು ಕೃತಜ್ಞತೆ

ಇರಾನ್ ವಾಯು ಪ್ರದೇಶದಲ್ಲಿ ಇಸ್ರೇಲ್ ಮತ್ತು ಅಮೆರಿಕ ವಾಯುಪಡೆಗಳು ಸಂಪೂರ್ಣ ಪ್ರಾಬಲ್ಯ ಮೆರೆದಿವೆ. ಈ ಸಂದರ್ಭ ನನ್ನ ಆತ್ಮೀಯ ಮಿತ್ರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಇರಾನ್ ಮೇಲೆ ಪ್ರತಿದಾಳಿ ಸುಳ್ಳು ಸುದ್ದಿ: ಯುಎಇ

ಭಾನುವಾರ ಇರಾನ್ ನಡೆಸಿದ ದಾಳಿಗೆ ಪ್ರತಿದಾಳಿ ನಡೆಸಿರು ವುದನ್ನು ಯುಎಇ ನಿರಾಕರಿಸಿದೆ. ನಾವೇನಾದರೂ ದಾಳಿ ನಡೆಸಿದರೆ ಅದನ್ನು ಘೋಷಿಸುವ ಧೈರ್ಯ ನಮಗಿದೆ. ನಾವು ಇರಾನ್ ಮೇಲೆ ಪ್ರತಿದಾಳಿ ನಡೆಸಿಲ್ಲ. ಇದು ಸುಳ್ಳು ಸುದ್ದಿ ಎಂದು ಯುಎಇ ರಕ್ಷಣಾ ಸಮಿತಿ ಕಾರ್ಯದರ್ಶಿ ಡಾ.ಅಲಿ ರಶೀದ್ ಅಲಿ ನುಐಮಿ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಖಮೇನಿ ಪುತ್ರ ಹೊಸ ನಾಯಕ?

ಇರಾನ್ ತನ್ನ ಹೊಸ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡಿದ್ದು, ಹೆಸರನ್ನು ಘೋಷಿಸದೆ ಗೌಪ್ಯತೆ ಕಾಪಾಡಿಕೊಂಡಿದೆ. ಕೆಲವು ಮೂಲಗಳ ಪ್ರಕಾರ, ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿ ಅವರನ್ನೇ ಹೊಸ ಸರ್ವೋಚ್ಚ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ. ಹೊಸ ನಾಯಕನ ಹತ್ಯೆ ಮಾಡುವುದಾಗಿ ಇಸ್ರೇಲ್ ಮತ್ತು ಅಮೆರಿಕ ಶಪಥಗೈದಿವೆ. ಹೊಸ ನಾಯಕ ಯಾರಾಗ್ತಾರೆಂದು ಯಾರಿಗೂ ಗೊತ್ತಿಲ್ಲ ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹೇಳಿದ್ದಾರೆ.

ಇಸ್ರೇಲ್ ದಾಳಿಗೆ ಇರಾನ್ ತತ್ತರ

ಇಸ್ರೇಲ್ ತೈಲ ಮತ್ತು ಅನಿಲ ಉದ್ಯಮವನ್ನು ಗುರಿಯಾಗಿಸಿ ದಾಳಿ ಮಾಡುವ ಇಚ್ಛೆ ನಮಗಿಲ್ಲವೆಂದು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಹೇಳಿದ್ದಾರೆ. ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ದಾಳಿಗೆ ಯುಎಇ ಹಡಗಿಗೆ ಹಾನಿಯಾಗಿದ್ದು, 3 ಇಂಡೋನೇಷ್ಯಾ ಕ್ರೂ ಸದಸ್ಯರು ಕಾಣೆಯಾಗಿದ್ದಾರೆ ಎಂದು ವರದಿ ತಿಳಿಸಿದೆ.

ರಾಜ್ಯ ಕಲಾಶ್ರೀ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2025-26ನೇ ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಗೌರವ ಪ್ರಶಸ್ತಿಗೆ ದಕ್ಷಿಣ ಕನ್ನಡದ ಗಮಕಿ ಮಧೂರು ಮೋಹನ ಕಲ್ಲೂರಾಯ ಹಾಗೂ ಹಾಸನದ ಕಥಾ ಕೀರ್ತನ ಕಲಾವಿದ ಲೋಕೇಶ್ ದಾಸ್ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ್ ಹಾಗೂ ರಿಜಿಸ್ಟ್ರಾರ್ ಎನ್. ನರೇಂದ್ರಬಾಬು ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ವಿವಿಧ ವಿಭಾಗಗಳಿಂದ 15 ಕಲಾವಿದರು ಹಾಗೂ ಒಂದು ಸಂಸ್ಥೆಯನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿಯು ತಲಾ 50 ಸಾವಿರ ರೂ. ಹಾಗೂ ವಾರ್ಷಿಕ ಪ್ರಶಸ್ತಿ ತಲಾ 25 ಸಾವಿರ ರೂ.ನಗದು ಬಹುಮಾನ ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿ: ಕರ್ನಾಟಕ ಸಂಗೀತ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ. ವೆಂಕಟರಾಯ್(ಡೋಲ್), ಕೋಲಾರದ ಎ.ವಿ.ವಿಶ್ವನಾಥ (ಹಾರ್ಮೋನಿಯಂ), ಮೈಸೂರಿನ ಹಂಸಿನಿ ನಾಗೇಂದ್ರ (ಗಾಯನ), ದಕ್ಷಿಣ ಕನ್ನಡದ ನಾಗೇಶ್ ಎ. ಬಪ್ಪನಾಡು (ನಾದಸ್ವರ), ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಧಾರವಾಡದ ಮೃತ್ಯುಂಜಯ ಶೆಟ್ಟರ್ (ಗಾಯನ), ಬಾಗಲಕೋಟೆಯ ರವೀಂದ್ರ ಸೊರಗಾವಿ (ಗಾಯನ), ಗದಗದ ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನೀಯಂ) ಹಾಗೂ ಬೀದರ್‌ನ ವಿಠಲ್ ಸಿದ್ದಪ್ಪ ಪೂಜಾರಿ (ತಬಲಾ) ಅವರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ನೃತ್ಯ ವಿಭಾಗದಲ್ಲಿ ಬಳ್ಳಾರಿಯ ಜಿಲಾನಿ ಭಾಷಾ (ಕೂಚಿಪುಡಿ), ಚಿತ್ರದುರ್ಗದ ಶಿವಪ್ರಕಾಶ (ಭರತನಾಟ್ಯ), ಧಾರವಾಡದ ನಾಗರತ್ನ ಹಡಗಲಿ (ಭರತನಾಟ್ಯ), ಸುಗಮ ಸಂಗೀತ ವಿಭಾಗದಲ್ಲಿ ಕೋಲಾರದ ಶ್ರೀಧರ್ ಅಯ್ಯರ್, ಕಥಾಕೀರ್ತನ ವಿಭಾಗದಲ್ಲಿ ಬೆಂಗಳೂರಿನ ಪಿ. ರಾಮಯ್ಯ (ತಬಲಾ), ಗಮಕ ವಿಭಾಗದಲ್ಲಿ ಧಾರವಾಡದ ವಿಶ್ವನಾಥ ಕುಲಕರ್ಣಿ (ವಾಚನ), ವಾದ್ಯ ತಯಾರಿಕೆಯಲ್ಲಿ ಬೆಂಗಳೂರಿನ ಕೃಷ್ಣಮೂರ್ತಿ ಅವರನ್ನು ಹಾಗೂ ಸಂಘ ಸಂಸ್ಥೆ ವಿಭಾಗದಲ್ಲಿ ಕೊಪ್ಪಳದ ಗಂಗಾವತಿಯ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯವನ್ನು ಆಯ್ಕೆ ಮಾಡಲಾಗಿದೆ.



ಕಲಬುರಗಿಯ ಐತಿಹಾಸಿಕ ಶ್ರೀಶರಣಬಸವೇಶ್ವರರ 204ನೇ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ರಥೋತ್ಸವ ಅದ್ಧೂರಿಯಾಗಿ ನಡೆಯಿತು.

ಅಡುಗೆ ಅನಿಲದ ಬೆಲೆ ಏರಿಕೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿ

ಬೆಂಗಳೂರು: ಮಹಿಳಾ ದಿನಾಚರಣೆಯ ದಿನವೇ ದೇಶದ ಮಹಿಳೆಯರಿಗೆ ಕೇಂದ್ರದ ಬಿಜೆಪಿ ಸರ್ಕಾರ ಅಡುಗೆ ಅನಿಲದ ಬೆಲೆ ಏರಿಕೆ ಎಂಬ ಉಡುಗೊರೆ ನೀಡಿದೆ. ಕೇಂದ್ರದ ಈ ಕ್ರಮ ಅತ್ಯಂತ ದುಃಖಕರ ಹಾಗೂ ಖಂಡನೀಯವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿಕಾರಿದ್ದಾರೆ.



ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ ಏಕಾಏಕಿ 60 ರೂ. ಹೆಚ್ಚಳ ಮಾಡಲಾಗಿದ್ದು, ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯಲ್ಲಿ 115 ರೂ. ಏರಿಕೆ ಮಾಡಲಾಗಿದೆ. ಕಳೆದ 11 ತಿಂಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಬೆಲೆ ಒಟ್ಟು 110 ರೂ. ಹೆಚ್ಚಳ ಮಾಡಿರುವುದು ಮಧ್ಯಮ ವರ್ಗ ಮತ್ತು ಬಡ ಕುಟುಂಬಗಳ ಮೇಲೆ ಭಾರೀ ಹೊರೆ ಹಾಕಿದಂತಾಗಿದೆ ಎಂದು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಡುಗೆ ಅನಿಲವು ಪ್ರತಿಯೊಂದು ಮನೆಯ ಅಗತ್ಯ ವಸ್ತುವಾಗಿದೆ. ಮನೆಗಳನ್ನು ನಡೆಸುವ ಮಹಿಳೆಯರ ಬದುಕಿನೊಂದಿಗೆ ನೇರವಾಗಿ ಸಂಬಂಧ ಹೊಂದಿರುವ ಈ ಅಗತ್ಯ ವಸ್ತುವಿನ ಬೆಲೆ ಹೆಚ್ಚಿಸುವುದು ಮಹಿಳೆಯರ ಮೇಲೆ ಮತ್ತಷ್ಟು ಆರ್ಥಿಕ ಒತ್ತಡ ತರುವ ಕ್ರಮವಾಗಿದೆ. ಮಹಿಳಾ ಸಬಲೀಕರಣದ ಬಗ್ಗೆ ಮಾತಾಡುವ ಕೇಂದ್ರ ಸರ್ಕಾರ ಮಹಿಳಾ ದಿನದಂದೇ ಇಂತಹ ನಿರ್ಧಾರ ಕೈಗೊಂಡಿರುವುದು ಅತ್ಯಂತ ವಿಷಾದಕರ ಎಂದು ಹೆಬ್ಬಾಳಕರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವ ಬಿಜೆಪಿ ನಾಯಕರು ಈಗ ಏನು ಹೇಳುತ್ತಾರೆ? ಕೇಂದ್ರ ಸರ್ಕಾರದ ಈ ಬೆಲೆ ಏರಿಕೆಯನ್ನು ಅವರು ಸಮರ್ಥಿಸಿಕೊಳ್ಳುತ್ತಾರೆಯೇ? ಅಥವಾ ಬಡವರ ಮತ್ತು ಮಹಿಳೆಯರ ಪರವಾಗಿ ಧ್ವನಿ ಎತ್ತುತ್ತಾರೆಯೇ? ಎಂದು ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರವು ತಕ್ಷಣವೇ ಈ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆದು ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ ಉಂಟಾಗಿರುವ ಆರ್ಥಿಕ ಭಾರವನ್ನು ಕಡಿಮೆ ಮಾಡಬೇಕು ಎಂದು ಸಚಿವರು ಆಗ್ರಹಿಸಿದ್ದಾರೆ.

ಕಿರುಸುದ್ದಿ

ಬಜೆಟ್‌ನಿಂದ ಮಕ್ಕಳ ಮೇಲೂ ಸಾಲ: ಶ್ರೀರಾಮುಲು

ಚಿತ್ರದುರ್ಗ: ಸಿದ್ದರಾಮಯ್ಯ ಅವರಿಂದ ಸಾಲದ ಮೂಟೆಯ ಬಜೆಟ್ ಮಂಡನೆ ಆಗಿದೆ. ಇದರಿಂದ ಹುಟ್ಟುವ ಮಕ್ಕಳ ಮೇಲೂ ಸಾಲ ಹೊರಿಸುವ ಕೆಲಸವಾಗಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಸರ್ಕಾರದ ಖಜಾನೆ ಖಾಲಿ ಆಗಿದೆ. ಐವತ್ತು ಸಾವಿರ ಹುದ್ದೆ ನೇಮಕಾತಿ ಕೇವಲ ಕುಂಟು ನೆಪವಾಗಿದೆ. ಸಿದ್ದರಾಮಯ್ಯ ಸಾಲದ ಬಜೆಟ್ ನೋಡಿದರೆ ಡಿ.ಕೆ. ಶಿವಕುಮಾರ್ ಸಿಎಂ ಆಗಲ್ಲ, ರಾಜ್ಯ ದಿವಾಳಿಯಾದ ವೇಳೆ ಡಿ.ಕೆ. ಶಿವಕುಮಾರ್ ಸಿಎಂ ಆಗಿ ಏನು ಮಾಡುತ್ತಾರೆ. ಹೀಗಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಸ್ಥಾನದಿಂದ ಹಿಂದೆ ಸರಿಯುತ್ತಾರೆ ಎಂದು ಭವಿಷ್ಯ ನುಡಿದರು. ಬಸವರಾಜ ಬೊಮ್ಮಾಯಿರವರ ಆಡಳಿತದಲ್ಲಿ ಎಸ್‌ಸಿ., ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ್ದರು. ಒಟ್ಟು ಶೇ.50 ರಷ್ಟಿದ್ದ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸಲಾಯಿತು. ಕಾಂಗ್ರೆಸ್ ಆಡಳಿತದಲ್ಲಿ ಶೇ.50 ಮೀಸಲಾತಿ ನೀಡುವ ಕೆಲಸ ಆಗಿದೆ. ಜನಸಂಖ್ಯೆ ಆಧಾರದ ಮೀಸಲಾತಿ ಪಡೆಯುವುದು ನಮ್ಮ ಹಕ್ಕು. ನಾಗಮೋಹನದಾಸ್ ವರದಿ ಜಾರಿಗೆ ಕ್ರಮ ಕೈಗೊಂಡಿದ್ದೆವು. ಕಾಂಗ್ರೆಸ್ ಸರ್ಕಾರ ಮೀಸಲಾತಿ ಕಸಿಯುವ ದಲಿತ ವಿರೋಧದ ವಿರುದ್ಧ ಉಗ್ರ ಹೋರಾಟ ಮಾಡುವ ನಿಟ್ಟಿನಲ್ಲಿ ತೀರ್ಮಾನಿಸಲಾಗಿದೆ ಎಂದರು.

ವಿದ್ಯಾರ್ಥಿಗಳ ನಡುವೆ ಮಾರಾಮಾರಿ: ಬಾಲಕ ಸಾವು

ಬಳ್ಳಾರಿ: ನಗರದ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಮಧ್ಯೆ ನಡೆದ ಹಲ್ಲೆ ಪ್ರಕರಣದಲ್ಲಿ ಶಾಲೆಯ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ನಡೆದಿದೆ. ನಗರದ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಇತರೆ ವಿದ್ಯಾರ್ಥಿಗಳ ಮೇಲೆ ರಾಡ್ ಮೂಲಕ ಹಲ್ಲೆ ನಡೆಸಿದ್ದಾನೆ. ವಿದ್ಯಾರ್ಥಿಯೊಬ್ಬನಿಗೆ ಬಲವಾದ ಪೆಟ್ಟು ತಗುಲಿದ ಹಿನ್ನೆಲೆಯಲ್ಲಿ ಸ್ಥಳದಿಂದ ಪರಾರಿಯಾಗಿದ್ದಾನೆ. ನಂತರ ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಕೂಡಲೇ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ಭೇಟಿ ನೀಡಿ ಪರಿಶೀಲಿಸಿ ಘಟನೆ ಕುರಿತು ಮಾಹಿತಿ ಪಡೆದರು. ನಂತರ ಮಾತನಾಡಿ, ನಗರದ ಖಾಸಗಿ ಶಾಲೆಯ ವಿದ್ಯಾರ್ಥಿಯೊಬ್ಬ ರಾಡ್ ಬಳಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾನೆ, ಇದರಲ್ಲಿ ವಿದ್ಯಾರ್ಥಿಯೊಬ್ಬರಿಗೆ ಗಂಭೀರ ಗಾಯಗಳಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಮೃತ ಬಾಲಕನ ತಂದೆ ನೀಡಿದ ದೂರು ಆಧರಿಸಿ, ವಿದ್ಯಾರ್ಥಿ ವಿರುದ್ಧ ಹಾಗೂ ಖಾಸಗಿ ಶಾಲೆಯ ಆಡಳಿತ ಮಂಡಳಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸದ್ಯ ವಿದ್ಯಾರ್ಥಿ ತಲೆಮರೆಸಿಕೊಂಡಿದ್ದು, ಪತ್ತೆಗಾಗಿ ಪ್ರತ್ಯೇಕ ತಂಡ ರಚಿಸಲಾಗಿದೆ. ಎಲ್ಲರೂ ಅಪ್ರಾಪ್ತರೆ ಎಂದರು. ಘಟನೆಯಲ್ಲಿ ಮೃತಪಟ್ಟ ಬಾಲಕನ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಆಸ್ಪತ್ರೆಗೆ ಕುಟುಂಬಸ್ಥರು ಭೇಟಿ ನೀಡಿದರು. ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಅವರು ತಿಳಿಸಿದ್ದಾರೆ. ಈಗಾಗಲೇ ಘಟನೆ ಕುರಿತು ಬಳ್ಳಾರಿ ವಲಯದ ಐಜಿಪಿ ಅವರೊಂದಿಗೆ ಮಾತನಾಡಿ, ಮಾಹಿತಿ ಪಡೆದಿರುವೆ ಹಾಗೂ ಡಿಸಿಪಿಒ ಅವರಿಂದ ವರದಿ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

ಟ್ರಂಪ್‌ಗಾಗಿ ದೇಶ ಗಿರವಿ

ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ವಿದೇಶಾಂಗನೀತಿಯಿಂದಾಗಿ ದೇಶಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟ ಹೆಸರು ತರುತ್ತಿದ್ದಾರೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ರೂ.1069 ಕೋಟಿ ವೆಚ್ಚದ ಕಾಮಗಾರಿಗಳ ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿ, ಟ್ರಂಪ್ ಒಬ್ಬ ಡಿಕ್ಟೇಟರ್, ಮೋದಿ ಅವರು ಗುಲಾಮರಂತೆ ನಡೆದುಕೊಳ್ಳುತ್ತಿದ್ದಾರೆ. ರಷ್ಯಾದಿಂದ ಈಗ ಒಂದು ತಿಂಗಳ ಮಾತ್ರ ತೈಲ ಖರೀದಿಗೆ ಅಮೆರಿಕ ಅನುಮತಿ ನೀಡಿದೆ. ಅಮೆರಿಕದವರು ಹೇಳಿದಂತೆ ಮೋದಿ ಕೇಳುತ್ತಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ನಮ್ಮ ದೇಶವನ್ನು ಗಿರಿವಿ ಇಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತ ದೇಶದ 65% ರೈತರು ಕೃಷಿ ಅವಲಂಬಿತರಾಗಿದ್ದರೆ ಅಮೆರಿಕಾದಲ್ಲಿ 3% ಅವಲಂಬಿತರಾಗಿದ್ದಾರೆ. ನಮ್ಮ ದೇಶದ ಉತ್ಪನ್ನಗಳಿಗೆ ಅಮೆರಿಕಾದಲ್ಲಿ ಟ್ಯಾಕ್ಸ್ ಇಲ್ಲ, ಆದರೆ, ಅಮೆರಿಕಾದ ಉತ್ಪನ್ನಗಳ ಮೇಲೆ ಮನಬಂದಂತೆ ಟ್ಯಾಕ್ಸ್ ಹಾಕಲಾಗುತ್ತಿದೆ. ಟ್ರಂಪ್ ನನ್ನ ಸ್ನೇಹಿತ ಎನ್ನುತ್ತಾರೆ. ಆದರೆ, ರಷ್ಯಾದಿಂದ ತೈಲ ಖರೀದಿ ಮಾಡದರೆ ನಿಮ್ಮ ಮೇಲೆ ಟ್ಯಾಕ್ಸ್ ಹಾಕುತ್ತೇನೆ ಟ್ರಂಪ್ ಹೇಳುತ್ತಾರೆ. ಟ್ರಂಪ್ ಜೊತೆ ದಿನಾಲೂ ಮಾತನಾಡುತ್ತಿರುವುದಾಗಿ ಮೋದಿ ಹೇಳುತ್ತಾರೆ. ಟ್ಯಾಕ್ಸ್ ಹಾಕುವ ಬಗ್ಗೆನೆ ಮಾತನಾಡುತ್ತಾರ? ಎಪ್ಸ್ಟಿನ್ ಫೈಲ್‌ನಲ್ಲಿ ಯಾರು ಯಾರು ಎಲ್ಲಿ ಹೋಗಿದ್ದರು ಎನ್ನುವ ಮಾಹಿತಿ ಇದೆ ಎನ್ನಲಾಗುತ್ತಿದೆ. ಅದನ್ನು



ಇಟ್ಟುಕೊಂಡೆ ಟ್ರಂಪ್ ಮೋದಿಗೆ ಹೆದರಿಸುತ್ತಿದ್ದಾರೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಕಲಬುರಗಿ ಜಿಲ್ಲೆಗೆ ನೀಡಲಾಗಿದೆ. ಸುಮಾರು 2000 ಮನೆಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹಂಚಿಕೆ ಮಾಡಲಾಗಿದೆ. 365 ಕೋಟಿ ರೂ.ವೆಚ್ಚದಲ್ಲಿ ಬೆಣ್ಣೆತೊರ ಜಲಾಶಯಕ್ಕೆ ಕಾಗಿಣಾ ಮತ್ತು ಭೀಮಾ ನದಿ ಸಂಗಮದಿಂದ ನೀರು ತುಂಬಿಸಲಾಗುತ್ತಿದೆ. ಐದು ಗ್ಯಾರಂಟಿಗಳ ಜೊತೆಗೆ ಭೂ ಗ್ಯಾರಂಟಿ ನೀಡಿ ಬಡವರ ಮನೆ ಬೆಳಕಾಗಿದ್ದೇವೆ ಎಂದರು.

ಶಿಕ್ಷಣ ಇಲಾಖೆ ಅಡಿಯಲ್ಲಿ ರಾಜ್ಯದಲ್ಲಿ 2000 ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನ ಮಾಡಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 330 ಶಾಲೆಗಳನ್ನು ಸ್ಥಾಪಿಸಲಾಗುತ್ತದೆ. ಜೊತೆಗೆ 2.50 ಲಕ್ಷ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲಾಗುವುದು. ಸದ್ಯ 56,000ಕ್ಕೂ ಅಧಿಕ ಖಾಲಿ ಹುದ್ದೆ ತುಂಬಲು ಈಗಾಗಲೇ ಕ್ರಮವಹಿಸಲಾಗಿದೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸಚಿವ ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪುರ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಅಧ್ಯಕ್ಷ ಬಾಬುರಾವ್ ಚಿಂಚನಸೂರ್, ಶಾಸಕರಾದ ಚನ್ನಾರೆಡ್ಡಿ, ಎಂ.ವೈ. ಪಾಟೀಲ, ಅಲ್ಲಮ್ಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ ಪಾಟೀಲ, ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ ಮತ್ತಿತರರ ಮುಖಂಡರು ಉಪಸ್ಥಿತರಿದ್ದರು.

> **ನಾನ್ ಅಲೈನ್‌ಮೆಂಟ್ ಒಪ್ಪಂದ**
>
> ಮಧ್ಯಪ್ರಾಚ್ಯನಲ್ಲಿ ನಡೆಯುತ್ತಿರುವ ಯುದ್ಧದ ಬಗ್ಗೆ ಪ್ರಸ್ತಾಪಿಸಿದ ಮಲ್ಲಿಕಾರ್ಜುನ ಖರ್ಗೆ, ಜವಾಹರ್ ಲಾಲ್ ನೆಹರು ಪ್ರಧಾನಿಯಾಗಿದ್ದಾಗ ನಾನ್ ಅಲೈನ್‌ಮೆಂಟ್ ಒಪ್ಪಂದ ಮಾಡಿಕೊಂಡಿದ್ದರಿಂದ ಅದು ವಿಶ್ವಶಾಂತಿಗೆ ಕಾರಣವಾಗಿತ್ತು. ಆದರೆ, ಮೋದಿ ಈಗ ಮಾಡುತ್ತಿರುವುದೇನು? ಮೋದಿ ಇಸ್ರೇಲ್‌ಗೆ ಹೋಗಿ ಬಂದ ನಂತರ ಅದು ಇರಾನ್ ಮೇಲೆ ಬಾಂಬ್ ಹಾಕಿತು. ದೇಶದ ಮುಖ್ಯಸ್ಥ ಖಮೇನಿಯನ್ನು ಅಮೆರಿಕದವರು ಹತ್ಯೆ ಮಾಡಿದರು. ಒಂದು ದೇಶದ ಮುಖ್ಯಸ್ಥನನ್ನು ಹತ್ಯೆ ಮಾಡಿದರೆ ಆ ದೇಶ ಶಾಂತಿಯಿಂದ ಇರುತ್ತದಯೇ? ಎಂದು ಪ್ರಶ್ನಿಸಿದರು.

ಕ್ವಾಂಟಮ್ ಅನುಷ್ಠಾನಕ್ಕೆ ₹10 ಕೋಟಿ ಮೀಸಲು

> ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ಒತ್ತು: ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಆಯವ್ಯಯದಲ್ಲಿ ಕ್ವಾಂಟಮ್ ರೋಡ್ ಮ್ಯಾಪ್‌ನ ಅನುಷ್ಠಾನಕ್ಕೆ 10 ಕೋಟಿ ರೂ.ಗಳನ್ನು ಘೋಷಿಸಿರುವುದು ರಾಜ್ಯ ವನ್ನು ಕ್ವಾಂಟಮ್ ಕ್ಷೇತ್ರದ ಕೇಂದ್ರಬಿಂದುವನ್ನಾಗಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ತಿಳಿಸಿದ್ದಾರೆ.



ಕ್ವಾಂಟಮ್ ವಲಯದಲ್ಲಿ ಕರ್ನಾಟಕವು ಜಾಗತಿಕ ಶಕ್ತಿಯಾಗಿ ಹೊರಹೊಮ್ಮಲು ಸಜ್ಜಾಗಿದೆ. ಬೆಂಗಳೂರು ಕ್ವಾಂಟಮ್ ಶೃಂಗಸಭೆಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ 1,000 ಕೋಟಿ ರೂ. ಹೂಡಿಕೆ ಮಾಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದರು. ಈ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ, ಕರ್ನಾಟಕ ಕ್ವಾಂಟಮ್ ರೋಡ್‌ಮ್ಯಾಪ್‌ನ ಮೊದಲ ಹಂತದ ಅನುಷ್ಠಾನಕ್ಕೆ ಸರ್ಕಾರವು 10 ಕೋಟಿ ರೂ. ಅನುದಾನ ಒದಗಿಸಿದೆ. ಮುಂದಿನ ಐದು ವರ್ಷಗಳಲ್ಲಿ ಈ ಭವಿಷ್ಯದ ವಲಯವನ್ನು ಮುನ್ನಡೆಸಲು ಅಗತ್ಯವಿರುವ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವತ್ತ ಈ ರೋಡ್ ಮ್ಯಾಪ್ ಗಮನ ಹರಿಸಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೆಂಗಳೂರು ನಗರವು ಈಗಾಗಲೇ ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ನವೋದ್ಯಮಗಳ ಬಲಿಷ್ಠ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಅಗತ್ಯ ಮೂಲಸೌಕರ್ಯ ಮತ್ತು ನೀತಿ ರೂಪಿಸುವ ಮೂಲಕ 2035ರ ವೇಳೆಗೆ ಶೇ. 20ರಷ್ಟು ಜಾಗತಿಕ ಮಾರುಕಟ್ಟೆ ಪಾಲನ್ನು ಸಾಧಿಸುವ ರಾಜ್ಯ ಸರ್ಕಾರದ ದೃಷ್ಟಿಕೋನಕ್ಕೆ ಈ ಬದ್ಧತೆಯು ಮತ್ತಷ್ಟು ಬಲ ತುಂಬಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕ್ವಾಂಟಮ್ ಸಿಟಿ ನಿರ್ಮಾಣಕ್ಕಾಗಿ ಹೆಸರಘಟ್ಟದಲ್ಲಿ ಈಗಾಗಲೇ ಭೂಮಿಯನ್ನು ಸರ್ಕಾರ ಮಂಜೂರು ಮಾಡಿದೆ. ಐಐಎಸ್‌ಸಿಯಂತಹ ವಿಶ್ವದರ್ಜೆಯ ಸಂಸ್ಥೆಗಳು, ಸುಧಾರಿತ ಕ್ವಾಂಟಮ್ ಕಂಪ್ಯೂಟರ್‌ಗಳ ಲಭ್ಯತೆ ಮತ್ತು ನಮ್ಮ ರಾಜ್ಯದ ತಾಂತ್ರಿಕ ಮಾನವ ಸಂಪನ್ಮೂಲದಿಂದಾಗಿ, ಕರ್ನಾಟಕವು ಕ್ವಾಂಟಮ್ ತಂತ್ರಜ್ಞಾನದಲ್ಲಿ ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾಗಲಿದೆ. ನಾವು ಜಗತ್ತನ್ನೇ ಮುನ್ನಡೆಸುವ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತಿದ್ದೇವೆ ಎಂದರು.

ಕಾಂಗ್ರೆಸ್ ಉಸ್ತುವಾರಿ ಸಮಿತಿ ರಚನೆ

ಬೆಂಗಳೂರು: ಶಾಸಕರಾದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ ಮೇಟಿ ಅವರ ನಿಧನದಿಂದ ತೆರವಾಗಿರುವ ದಾವಣಗೆರೆ ಹಾಗೂ ಬಾಗಲಕೋಟೆ ವಿಧಾನಸಭೆ ಉಪಚುನಾವಣೆಗೆ ಕಾಂಗ್ರೆಸ್ ತಯಾರಿ ಆರಂಭಿಸಿದ್ದು, ಈ 2 ಕ್ಷೇತ್ರಗಳಿಗೆ ಪ್ರತ್ಯೇಕ ಉಸ್ತುವಾರಿ ಸಮಿತಿಯನ್ನು ರಚಿಸಿದೆ.

ದಾವಣಗೆರೆ ಹಾಗೂ ಬಾಗಲಕೋಟೆ ಎರಡು ಕ್ಷೇತ್ರ ಕಾಂಗ್ರೆಸ್‌ನ ಕ್ಷೇತ್ರಗಳಾಗಿರು ವುದರಿಂದ ಉಪಚುನಾವಣೆಯಲ್ಲೂ ಗೆಲ್ಲವು ಮೂಲಕ ಕ್ಷೇತ್ರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾಂಗ್ರೆಸ್ ತಂತ್ರ ರೂಪಿಸಿದ್ದು, ಸಮಿತಿಯಲ್ಲಿ 18 ಸಚಿವರು, ಮಾಜಿ ಸಚಿವರು ಸೇರಿದಂತೆ ಹಾಲಿ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಿದ್ದಾರೆ. ಸಮಿತಿಯು ಈ ಕ್ಷೇತ್ರದಲ್ಲಿ ನಮ್ಮ ಪಕ್ಷದ ಸಂಭಾವ್ಯ ಅಭ್ಯರ್ಥಿಯನ್ನು ಕೆಪಿಸಿಸಿಗೆ ಶಿಫಾರಸು ಮಾಡಲು ಹಾಗೂ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸ್ಥಳೀಯ ನಾಯಕರು, ಪಕ್ಷದ ಪದಾಧಿಕಾರಿಗಳು ಹಾಗೂ ಇತರರೊಂದಿಗೆ ಸಮಾಲೋಚನೆ ನಡೆಸಿ ತಕ್ಷಣ ಕೆಪಿಸಿಸಿಗೆ ವರದಿ ಸಲ್ಲಿಸಲು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶಿಸಿದ್ದಾರೆ.

ಅಪಘಾತ: ನ್ಯಾಯಾಧೀಶರಿಗೆ ಪೆಟ್ಟು

ದಾಬಸ್ ಪೇಟೆ: ಕಲಬುರ್ಗಿ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ಪ್ರಯಾಣಿಸುತ್ತಿದ್ದ ಕಾರು ಅಪಘಾತ ಸಂಭವಿಸಿ, ನ್ಯಾಯಾಧೀಶರು, ಬೆಂಗಾವಲು ಪೊಲೀಸ್ ಸಿಬ್ಬಂದಿಗೆ ಸಣ್ಣಪುಟ್ಟ ಗಾಯವಾಗಿದ್ದು ಪ್ರಾಣಾಪಾಯದಿಂದ ಪಾರಾದ ಘಟನೆ ರಾಯರಪಾಳ್ಯ ಬಳಿ ನಡೆದಿದೆ.

ನ್ಯಾಯಮೂರ್ತಿ ಜಿ ಬಸವರಾಜು ಅವರು ಕಲಬುರ್ಗಿ ನಗರಕ್ಕೆ ಹೋಗುತ್ತಿದ್ದಾಗ ರಸ್ತೆ ಬದಿಯಲ್ಲಿರುವ ಸಿಮೆಂಟ್ ವಾಲ್‌ಗೆ ಕಾರು ಡಿಕ್ಕಿಯಾಗಿ ಉರುಳಿ ಬಿದ್ದಿದೆ. ಹಿಂಬಾಲಿಸುತ್ತಿದ್ದ ಪೊಲೀಸ್ ಬೆಂಗಾವಲು ಪಡೆ ವಾಹನ ನ್ಯಾಯಾಧೀಶರಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ನ್ಯಾಯಾಧೀಶರು ಮತ್ತು ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯವಾಗಿವೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಳಿಕ ಕಲಬುರ್ಗಿಗೆ ತೆರಳಿದ್ದಾರೆ. ಎಸ್ಕಾರ್ಟ್ ಕಾರಿನ ಚಾಲಕನಿಗೆ ತೀವ್ರವಾಗಿ ಗಾಯಗೊಂಡಿದ್ದಾರೆ. ಇತರೆ ಪೊಲೀಸರಿಗೂ ಗಾಯವಾಗಿರುವುದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ . ಸ್ಥಳಕ್ಕೆ ನೆಲಮಂಗಲ ಸಂಚಾರಿ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲಿಸಿ ದೂರು ದಾಖಲಿಸಿಕೊಂಡಿದ್ದಾರೆಂದು ಸಂಚಾರಿ ವೃತ್ತ ನಿರೀಕ್ಷಕ ರವಿ ತಿಳಿಸಿದ್ದಾರೆ.

ಶೇ.33 ಮೀಸಲಾತಿ ಆತ್ಮತೃಪ್ತಿ ಇದೆ: ದೇವೇಗೌಡ



ಬೆಂಗಳೂರು: ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಶೇ.33 ರಷ್ಟು ಮಹಿಳಾ ಮೀಸಲಾತಿ ಕೊಟ್ಟಿದ್ದು ನಾವು. ಶೇ.33 ರಷ್ಟು ಮಹಿಳಾ ಮೀಸಲಾತಿ ಕೊಡಲು ತೀರ್ಮಾನ ಮಾಡಿದ್ದು ನಾವು. ಇವತ್ತು ಅದೆಲ್ಲವೂ ಜಾರಿಗೆ ಬರುತ್ತಿದೆ. ಈ ಬಗ್ಗೆ ನನಗೆ ಆತ್ಮತೃಪ್ತಿ ಇದೆ ಎಂದು ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಹೇಳಿದರು.

ನಗರದ ಡಾ. ಬಾಬು ಜಗಜೀವನ ರಾಮ್ ಭವನದಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಷ್ಟೊಂದು ಮಹಿಳೆಯರಿಗೆ ಟಿಕೆಟ್ ದೊರೆಯುತ್ತದೆ. ಇದಕ್ಕಾಗಿ ನಾನು ಶ್ರಮಿಸಿದೆ. ಮೋದಿ ಅವರು ಅದಕ್ಕೆ ಅಂತಿಮ ಸ್ವರೂಪ ಕೊಟ್ಟರು ಎಂದು ಮೆಚ್ಚುಗೆ ಸೂಚಿಸಿದರು. ಮುಂದಿನ ವಿಧಾನಸಭೆ, ಲೋಕಸಭೆಗೆ ಬಹುಶಃ ಮಹಿಳಾ ಮೀಸಲಾತಿ ಬರಬಹುದು. ಕ್ಷೇತ್ರ ಪುನರ್ ವಿಂಗಡನೆ ಸುಗಮವಾಗಿ ನಡೆದರೆ, ಶೇ.33 ರಷ್ಟು ಮೀಸಲಾತಿ ಬರುತ್ತದೆ. 75 ರಿಂದ 80 ಜನ ಮಹಿಳೆಯರು ವಿಧಾನಸಭೆಗೆ ಸ್ಪರ್ಧಿಸಬೇಕಾಗುತ್ತದೆ ಎಂದು ಹೇಳಿದರು.

ಜಿಬಿಎ ಮೀಸಲಾತಿ ಪಟ್ಟಿ ಅಂತಿಮವಾಗಿ ಪ್ರಕಟವಾಗಿದೆ. ಮುಂಬರುವ ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಹೆಚ್ಚು ಮಹಿಳೆಯರು ಸ್ಪರ್ಧೆ ಮಾಡಬೇಕು. ಜಿಬಿಎನಲ್ಲಿ 369 ವಾರ್ಡುಗಳಲ್ಲಿ ಜೆಡಿಎಸ್ ಗೆ ಎಷ್ಟು ವಾರ್ಡ್ ಗಳಲ್ಲಿ ಸ್ಪರ್ಧಿಸುವ ಶಕ್ತಿ ಇದೆ ಎಂಬುದನ್ನು ಗಮನಿಸಿ, ಬಳಿಕ ಮಹಿಯರಿಗೆ ಎಷ್ಟು ಜನರಿಗೆ ಅವಕಾಶ ನೀಡಬಹುದು ಎಂದು ತೀರ್ಮಾನ ಮಾಡಿ. ಅದಷ್ಟು ಹೆಚ್ಚು ಪ್ರಮಾಣದಲ್ಲಿ ಮಹಿಳೆಯರು ಸ್ಪರ್ಧೆ ಮಾಡಬೇಕು. ಆಗ ಮಾತ್ರ ಮಹಿಳಾ ಮೀಸಲುಗೆ ಅರ್ಥ ಬರುತ್ತದೆ ಎಂದು ಅವರು ಒತ್ತಿ ಹೇಳಿದರು.

> ಶೇ.33 ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಬಂದರೆ, ವಿಧಾನಸಭೆಯಲ್ಲಿ 75 ಜನ ಮಹಿಳೆಯರೇ ಶಾಸಕಿಯರು ಇರುತ್ತಾರೆ. ಎಲ್ಲ ಪಕ್ಷಗಳ ಮಹಿಳೆಯರು ಮನಸ್ಸು ಮಾಡಿದರೆ ಮಹಿಳಾ ಮುಖ್ಯಮಂತ್ರಿಯೇ ಆಗಬಹುದು. ಅಂಥ ಅವಕಾಶ ಮೀಸಲಾತಿಯಿಂದ ಸಾಧ್ಯವಾಗುತ್ತದೆ.
> ■ ಎಚ್.ಡಿ ಕುಮಾರಸ್ವಾಮಿ, ಕೇಂದ್ರ ಸಚಿವ

> ಮಹಿಳೆಯರಿಗೆ ಮೀಸಲಾತಿ ಜೆಡಿಎಸ್ ತೀರ್ಮಾನ
>
> ಜಿಬಿಎನಲ್ಲಿ 369 ವಾರ್ಡುಗಳಲ್ಲಿ ಜೆಡಿಎಸ್ ಸ್ಪರ್ಧೆ

ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಜೆಡಿಎಸ್ ಜಿಬಿಎ ಅಧ್ಯಕ್ಷ ಎಚ್.ಎಂ ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಜವರಾಯಿ ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಮುಂತಾದವರು ಹಾಜರಿದ್ದರು.

ಎಸ್‌ಸಿ, ಎಸ್‌ಟಿ ಜನಪ್ರತಿನಿಧಿಗಳು ರಾಜೀನಾಮೆ ನೀಡಿಲಿ: ಗೋವಿಂದ ಕಾರಜೋಳ

ಸಂವಿಧಾನದ ಆಶಯ ಜಾರಿಗೆ ತರಲು ಕೈ ಹಿಂದೇಟು

ಚಿತ್ರದುರ್ಗ: ಕಾಂಗ್ರೆಸ್ ಪಕ್ಷದಲ್ಲಿರುವ ಎಸ್‌ಸಿ, ಎಸ್‌ಟಿ ಜನಪ್ರತಿನಿಧಿಗಳಿಗೆ ಸ್ವಾಭಿಮಾನ, ಮಾನ, ಮರ್ಯಾದೆ ಇದ್ದಲ್ಲಿ ರಾಜೀನಾಮೆ ಬಿಸಾಕಿ ಹೊರಬರಲಿ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ರಾಜ್ಯ ಸರ್ಕಾರದ ಮೀಸಲಾತಿ ಅನ್ಯಾಯದ ನೀತಿ ವಿರುದ್ಧ ಬೃಹತ್ ಜನಾಂದೋಲನ ಕುರಿತು ಚಿತ್ರದುರ್ಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ಕೇವಲ ವೋಟ್‌ಬ್ಯಾಂಕ್ ಮಾಡಿಕೊಂಡಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮಾತೆತ್ತಿದರೆ ಅಂಬೇಡ್ಕರ್, ಸಂವಿಧಾನ ಎಂದು ಹೇಳುತ್ತಾರೆ. ಆದರೆ ಅವರು ನೀಡಿದ ಸಂವಿಧಾನದ ಆಶಯಗಳನ್ನು ಜಾರಿ ತರುವಲ್ಲಿ ಹಿಂದೇಟು ಹಾಕುತ್ತಾರೆ ಎಂದರು. ಕೊಳ್ಳೆಗಾಲದ ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿದೆ. ಯಾವ ನ್ಯಾಯಾಲಯ ಈ ಕುರಿತು ಪ್ರಶ್ನೆ ಮಾಡಿಲ್ಲ, ಮೀಸಲಾತಿ ಶೇಕಡಾ 50 ಮೀರಿದ ಬಗ್ಗೆ ವಿವರಣೆ ಕೇಳಿದೆ. ಆದರೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಮಾಜಿ ಸಚಿವ ಶಿವನಗೌಡ ನಾಯಕ ಮಾತನಾಡಿ, ಮೀಸಲಾತಿ ಹೆಚ್ಚಳ ಮಾಡುವುದಾಗಿ ರಾಜ್ಯಪಾಲರ ಅಂಕಿತ ಪಡೆಯುತ್ತಾರೆ. ಬಳಿಕ ಅದೇ ದಿನ ಮೀಸಲಾತಿ ಹೆಚ್ಚಳ ಮಾಡದಿರಲು ತೀರ್ಮಾನ ಕೈಗೊಳ್ಳುತ್ತಾರೆ. ದಲಿತ ಸಚಿವರೇ ದಲಿತರಿಗೆ ವೈರಿಗಳಾಗಿದ್ದಾರೆ ಎಂದರು.

ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, ಕಾಂಗ್ರೆಸ್ ಸರ್ಕಾರ ಶೋಷಿತರಿಗೆ ದ್ರೋಹ ಮಾಡಿದೆ. ಬಿಜೆಪಿ ನೀಡಿದ ಮೀಸಲಾತಿ ಕಸಿಯುವ ಕೆಲಸ ಮಾಡುತ್ತಿದೆ ಎಂದರು. ಮಾಜಿ ಸಚಿವ ರಾಜುಗೌಡ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಮೀಸಲಾತಿ ತೆಗೆಯುತ್ತಾರೆ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡುತ್ತಿದ್ದರು. ಈಗ ಅವರೇ ಮೀಸಲಾತಿ ಕಡಿತ ಮಾಡುತ್ತಿದ್ದಾರೆ. ಈಗ ಕಾಂಗ್ರೆಸ್‌ನಲ್ಲಿರುವ 14 ಜನ ಎಸ್‌ಟಿ ಶಾಸಕರು ಒಬ್ಬರೂ ಚಕಾರವೆತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದರು. ಮಾಜಿ ಸಂಸದ ಡಾ.ಉಮೇಶ್ ಜಾದವ್, ಮಾಜಿ ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ, ಶಾಸಕ ಡಾ.ಎಂ.ಚಂದ್ರಪ್ಪ ಇದ್ದರು.

> **ಶೋಷಿತರಿಗೆ ನಿರಂತರ ವಂಚನೆ**
>
> ಕಾಂಗ್ರೆಸ್ ಸರ್ಕಾರ ಶೋಷಿತರಿಗೆ ನಿರಂತರ ವಂಚನೆ ಮಾಡುತ್ತಿದೆ. ಇದನ್ನು ವಿರೋಧಿಸಿ ಮಾ.22 ರಂದು ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಆರಂಭಿಸಲಾಗುವುದು. ಸರ್ಕಾರದ ಮೇಲೆ ಒತ್ತಡ ಹಾಕಲು ವಿಧಾನಸೌಧ ಮುತ್ತಿಗೆ ಹಾಕಲಾಗುವುದು ಎಂದು ಮಾಜಿ ಶಾಸಕ ಪಿ.ರಾಜೀವ್ ಆರೋಪಿಸಿದರು.

ಬಜೆಟ್ ಕುರಿತು ಶಾಸಕರಿಗೆ ಶಿಬಿರ

ಬೆಂಗಳೂರು: ವಿಧಾನಸಭೆ ಸಚಿವಾಲಯದ ವತಿಯಿಂದ ಶಾಸಕರಿಗೆ ಬಜೆಟ್ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ, ಆಯವ್ಯಯ ರಾಜಸ್ವಗಳ ಸಂಗ್ರಹಣೆ, ಅನುದಾನಗಳ ವರ್ಗೀಕರಣ ಮತ್ತು ಹಂಚಿಕೆ ಹಾಗೂ ಆಯವ್ಯ ಅನುದಾನಗಳ ಬಳಕೆ ಮತ್ತು ನಿರ್ವಹಣೆ ಕುರಿತು ತರಬೇತಿ ಶಿಬಿರ ಹಮ್ಮಿಕೊಳ್ಳಾಗಿದೆ.

ಸೋಮವಾರ ಸಂಜೆ 5 ಗಂಟೆಗೆ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿರುವ ಶಿಬಿರದಲ್ಲಿ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತರಬೇತಿ ನೀಡಲಿದ್ದು, 17 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿಗಳು ಹಣಕಾಸಿನ ಕುರಿತಾದ ಶಾಸಕರ ಪ್ರಶ್ನೆಗಳಿಗೆ ಉತ್ತರ ನೀಡಲಿದ್ದಾರೆ. ಈ ಶಿಬಿರದಲ್ಲಿ ಎಲ್ಲಾ ಪಕ್ಷದ ಶಾಸಕರಿಗೆ ಭಾಗವಹಿಸಸಲು ಆಹ್ವಾನ ನೀಡಲಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮೊದಲ ಬಾರಿಗೆ ಆಯ್ಕೆಯಾಗಿದ್ದ ಶಾಸಕರಿಗೆ ತಮ್ಮ ಕಾರ್ಯವೈಖರಿ, ಶಿಷ್ಟಚಾರ, ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಬಗ್ಗೆ ಶಿಬಿರ ಆಯೋಜಿಸಿದ್ದ ವಿಧಾನಸಭೆಯ ಸಮಾಧ್ಯಕ್ಷರು ಇದೀಗ ಮತ್ತೊಂದು ವಿಶೇಷ ಶಿಬಿರ ಹಮ್ಮಿಕೊಂಡಿದ್ದಾರೆ. ಈ ಶಿಬಿರದಲ್ಲಿ ಶಾಸಕರು ಈ ಬಗ್ಗೆ ಯಾವುದೇ ರೀತಿಯ ಸಂಶಯ, ಅನುಮಾನಗಳನ್ನು ಪರಿಹರಿಸಿಕೊಳ್ಳಬಹುದು.



> ಶಿಬಿರದಲ್ಲಿ ಎಲ್ಲಾ ಪಕ್ಷದ ಶಾಸಕರಿಗೆ ಆಹ್ವಾನ
>
> ಬಜೆಟ್ ಭಾಷಣದ ಚರ್ಚೆಗೆ ಅವಕಾಶ ಇಲ್ಲ

ಇದು ಬಜೆಟ್ ಭಾಷಣದ ಚರ್ಚೆ ಅಲ್ಲ, ಇಂದಿನ ಶಾಸಕರು ಮುಂದೆ ಹಣಕಾಸು ಸಚಿವರೂ ಆಗಬಹುದು, ಹಾಗಾಗಿ ಕರೆಲ್ಲರಿಗೂ ಹಣಕಾಸಿನ ನಿರ್ವಹಣೆ ಕುರಿತಂತೆ ಮಾಹಿತಿಯನ್ನು ಒದಗಿಸುವ ಉದ್ದೇಶ ಈ ಕಾರ್ಯಾಗಾರದ್ದಾಗಿದೆ. ಇಂತಹ ಕಾರ್ಯಾಗಾರ ಇದೇ ಮೊದಲ ಬಾರಿಗೆ ನಡೆಸಲಾಗುತ್ತಿದೆ ಸಭಾಧ್ಯಕ್ಷ ಯು.ಟಿ ಖಾದರ್ ತಿಳಿಸಿದ್ದಾರೆ.

ಸಂಪಾದಕೀಯ

ತಾರ್ಕಿಕ ಅಂತ್ಯದತ್ತ ಇರಾನ್ ಯುದ್ಧ?

ಮಧ್ಯಪ್ರಾಚ್ಯದ ಕದನಗಳಿಗೆ ಆರಂಭವೂ ಇಲ್ಲ, ಅಂತ್ಯವೂ ಇಲ್ಲ, ಮಧ್ಯಪ್ರಾಚ್ಯದಲ್ಲಿ ಯಾರೂ ಶತ್ರುಗಳಲ್ಲ, ಮಿತ್ರರಲ್ಲ. ಅರಬ್ ಒಕ್ಕೂಟವೆಂಬುದು 80ರ ದಶಕದಲ್ಲೇ ಮುಗಿದುಹೋದ ಅಧ್ಯಾಯ, ಈಗದಕ್ಕೆ ಯಾವ ಮಹತ್ತ್ವವೂ ಇಲ್ಲ. ಮಧ್ಯಪ್ರಾಚ್ಯದ ರಾಜಕೀಯ ಅಸ್ಥಿರತೆ ಮತ್ತು ಯುದ್ಧಗಳು ಹಿಂದಿನಂತೆ ಜಗತ್ತಿನ ಮೇಲೆ ಪರಿಣಾಮ ಬೀರಲಾರವು–ಇಂಥ ಮಾತುಗಳು ಕೆಲವು ದಶಕಗಳಿಂದ ಜಗತ್ತಿನಾದ್ಯಂತ ಕೇಳಿಬರುತ್ತಿದ್ದವು. ಮಧ್ಯಪ್ರಾಚ್ಯದಲ್ಲಿ ಯಾವಾಗ ಯುದ್ಧ ಆರಂಭವಾಗುತ್ತವೆ, ಯಾವಾಗ ನಿಲ್ಲುತ್ತವೆ ಎಂಬುದು ಜಗತ್ತಿನ ಲೆಕ್ಕಕ್ಕೆ ಸಿಗದಷ್ಟು ಘಟನೆಗಳು ನಡೆದಿರುವುದು ಮತ್ತು ಬಹುತೇಕ ಎಲ್ಲಾ ಅರಬ್ ರಾಷ್ಟ್ರಗಳಲ್ಲಿ ಹಲವು ಬಾರಿ ಕ್ರಾಂತಿಗಳು ನಡೆದು, ಅವು ಯಶಸ್ವಿಯಾಗಿವೆ ಎನ್ನುವಷ್ಟರಲ್ಲಿ ಕ್ರಾಂತಿ ನೆಲಕಚ್ಚಿ ಮತ್ತೊಂದು ಸ್ವರೂಪಕ್ಕೆ ಹೊರಳಿಕೊಂಡಿದ್ದು, ಅರಬ್ ರಾಷ್ಟ್ರಗಳ ನಾಯಕರು ತಮಗೆ ಸಂಬಂಧಿಸದ ಬೆಳವಣಿಗೆಗಳತ್ತ ಮೂಗು ತೂರಿಸುವುದು ಹಾಗೂ ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ತೈಲಕ್ಕಾಗಿ ಪರ್ಯಾಯ



ವ್ಯವಸ್ಥೆಯನ್ನು ಮಾಡಿಕೊಂಡಿರುವುದರಿಂದ ಜಗತ್ತಿನ ಚಿಂತಕರು ಇಂಥ ನಿಲುವಿಗೆ ಬಂದಿರುವುದರಲ್ಲಿ ಸತ್ಯಾಂಶಗಳಿತ್ತು. ಆದರೆ ಪ್ರಸ್ತುತ ನಡೆಯುತ್ತಿರುವ ಯುದ್ಧ ತಾರ್ಕಿಕ ಅಂತ್ಯ ಕಾಣುವವರೆಗೆ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಜಗತ್ತಿನ ತೈಲ ಪೂರೈಕೆಯ ಮೇಲೆ ಹೇಳಿಕೊಳ್ಳುವ ಪರಿಣಾಮವನ್ನೇನೂ ಬೀರದಿದ್ದರೂ ಸ್ವಲ್ಪ ಅಲ್ಲಾಡಿಸಿದ್ದಂತೂ ಸತ್ಯ. ಜೊತೆಗೆ ಇದುವರೆಗೆ ನಡೆದ ಎಲ್ಲಾ ಬೆಳವಣಿಗೆಗಳು ಒಂದು ತೂಕದ್ದಾದರೆ ಈ ಬಾರಿ ನಿರ್ಣಾಯಕ ಎಂಬಂತೆ ಅಮೆರಿಕಾ ಹಾಗು ಇಸ್ರೇಲ್ ನಡೆದುಕೊಳ್ಳುತ್ತಿರುವುದು ಜಗತ್ತಿನ ಯುದ್ಧೇತಿಹಾಸಕ್ಕೆ ಹೊಸ ವ್ಯಾಖ್ಯಾನವನ್ನು ಬರೆದಿವೆ.

ಯುದ್ಧದಲ್ಲಿ ಪ್ರಬಲರು ಮಾತ್ರ ಯಶಸ್ಸನ್ನು ಸಾಧಿಸಬಲ್ಲರು. ಇರಾನ್ ಎಷ್ಟೇ ಬಡಾಯಿ ಕೊಚ್ಚಿಕೊಂಡರೂ ಯುದ್ಧ ಆರಂಭವಾದಂದಿನಿಂದಲೇ ಅದು ಚಡಪಡಿಸುತ್ತಿದೆ. ಅಮೆರಿಕಾ ಮತ್ತು ಇಸ್ರೇಲಿಗೆ ಯುದ್ಧವನ್ನು ಮಾಡುವುದರ ಜೊತೆಗೆ ಅದನ್ನು ದಕ್ಕಿಸಿಕೊಳ್ಳುವುದು ತಿಳಿದಿದೆ. ಆ ಶಕ್ತಿಯೂ ಇದೆ. ಆದರೆ ಇರಾನ್ ಇಂದು ಯಾರನ್ನೂ ನಂಬುವ ಪರಿಸ್ಥಿತಿಯಲ್ಲಿಲ್ಲ. ಯಾರೂ ಇರಾನಿಗೆ ಬಹಿರಂಗ ಬೆಂಬಲ ಕೊಡುವ ಧೈರ್ಯವನ್ನೂ ಮಾಡುತಿಲ್ಲ. ಒಂದು ಕಾಲದಲ್ಲಿ ಇರಾನನ್ನು ನೆಚ್ಚಿಕೊಂಡು ಅದರ ಸಂಗದಲ್ಲಿದ್ದವರೇ ಇಂದು ಅದಕ್ಕೆ ಶತ್ರುಗಳಾಗಿದ್ದಾರೆ. ಆದಕ್ಕಾಗಿ ಈಗ ಇರಾನ್ ಮತ್ತು ಜಗತ್ತಿನಾದ್ಯಂತ ಇರುವ ಅವರ ಅಭಿಮಾನಿಗಳು ತಮ್ಮ ಎಂದಿನ ಚಾಳಿಗೆ ಬಿದ್ದಿದ್ದಾರೆ. ಅಮೆರಿಕಾ ಮತ್ತು ಇಸ್ರೇಲ್ ಸೇನೆ ಮಕ್ಕಳನ್ನು ಕೊಲ್ಲುತ್ತಿದೆ, ಮಾನವಹಕ್ಕುಗಳನ್ನು ಬಲಿಕೊಡುತ್ತಿದೆ ಎಂದು ಆಲಾಪಿಸುತ್ತಿದೆ. ಭಾರತದಲ್ಲಿ ಮಾಧ್ಯಮಗಳು ಇಂಥ ಸುದ್ದಿಗಳಿಗೆ ಅತಿಯಾದ ಮಹತ್ತ್ವವನ್ನು ಕೊಡುತ್ತಿರುವ ಹಿಂದೆ ಇರಾನ್ ಪ್ರೇರಿತವಾದ ಹಿತಾಸಕ್ತಿಯಿದೆ. ಖಮೇನಿಯ ಸಹಾಯದಿಂದ ಹಿಜ್ಬುಲ್ಲಾ, ಹಮಾಸ್ ಇಸ್ರೇಲ್ ಮೇಲೆ ಯಾವ ಸ್ವರೂಪದ ದಾಳಿಯನ್ನು ಮಾಡುತ್ತಿತ್ತು? ಪ್ಯಾಲೆಸ್ಟೀನ್ ಸೋಲಿನ ಅಂಚಿಗೆ ತಲುಪುವ ಹೊತ್ತಲ್ಲೆಲ್ಲಾ ಜಗತ್ತಿನ ಗಮನ ಸೆಳೆಯಲು ಇಂಥದ್ದೇ ತಂತ್ರದ ಮೊರೆಹೋಗುತ್ತಿದ್ದರು ಎಂಬುದಿಲ್ಲಿ ಉಲ್ಲೇಖಾರ್ಹ. ಇರಾನಿಗೆ ಬೆಂಬಲವನ್ನು ಸೂಚಿಸಲು ಇಂಥ ಅರ್ಧಸತ್ಯವನ್ನು ಬಿಂಬಿಸಲಾಗುತ್ತಿದೆ. ಈ ಬಾರಿ ಅಮೆರಿಕಾ ಮತ್ತು ಇಸ್ರೇಲ್ ಅದಕ್ಕೆ ಬಲಿಯಾಗಲಾರೆ ಎಂಬಂತೆ ನಡೆದುಕೊಂಡಿದೆ. ಹಾಗಾಗಿ ಯುದ್ಧ ತಾರ್ಕಿಕ ಅಂತ್ಯದತ್ತ ಸಾಗುತ್ತಿದೆ ಎಂದು ಅಂದಾಜಿಸಬಹುದು.

ತರಕಾರಿ, ಆಹಾರ ವಿಷಮಯ; ಮನಸ್ಸು ಕಲುಷಿತ

ಈಗ ಎಲ್ಲರೂ ವಿಷಕನ್ಯೆಯರೇ! ಎಲ್ಲರೂ ವಿಷ ಪುರುಷರೇ! ತರಕಾರಿ, ಮಾಂಸ, ಹಣ್ಣು, ಹಾಲಿನ ಮೂಲಕ ವಿಷ ಸೇವಿಸದವರೇ ಈಗ ಬಹುಶಃ ಇರಲಿಕ್ಕಿಲ್ಲ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಕೆಲವು ದಿನಗಳ ಹಿಂದೆ ಪ್ರಮುಖ ಮಾಧ್ಯಮಗಳಲ್ಲಿ ಪ್ರಕಟವಾದ ಪ್ರತಿಯೊಬ್ಬರಿಗೂ ಸಂಬಂಧಿಸಿದ ಒಂದು ಆಘಾತಕಾರಿ ಸುದ್ದಿ ಅದೆಷ್ಟು ಜನರನ್ನು ಬಡಿದೆಬ್ಬಿಸಿತೋ, ಇನ್ನು ಅದೆಷ್ಟು ಜನರ ಅರಿವಿಗೇ ಬಾರದೆ ಮರೆಯಾಯಿತೋ ಗೊತ್ತಿಲ್ಲ. ಆದರೆ ಎಲ್ಲರೂ ತಲ್ಲಣಗೊಳ್ಳುವಂತಹ ಸುದ್ದಿ ಅದಾಗಿತ್ತು. ಆ ಸುದ್ದಿಯೇನೆಂದರೆ ಬೆಂಗಳೂರು ನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ತರಕಾರಿಗಳಲ್ಲಿ ಅಪಾಯಕಾರಿ ಸೀಸದ ಅಂಶ ಮತ್ತು ಕ್ರಿಮಿನಾಶಕಗಳ ಅಂಶಗಳು ಕಂಡು ಬಂದಿದ್ದು ಇಂತಹ ತರಕಾರಿಗಳನ್ನು ಸೇವಿಸಿದರೆ ಕಿಡ್ನಿ ಹಾಗೂ ಮಿದುಳು ಕಾಯಿಲೆ ಬರಲಿದೆ ಎಂದು ಕೂಡ ವರದಿ ತಿಳಿಸಿತ್ತು.

ಇದನ್ನು ಯಾರೋ ಪರಿಸರ ತಜ್ಞರೋ ಆಹಾರ ತಜ್ಞರೋ ತಮ್ಮ ಪ್ರಚಾರದ ತೆವಲು ತೀರಿಸಿಕೊಳ್ಳಲು ಹೇಳಿದ್ದಾಗಿರಲಿಲ್ಲ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಪರೀಕ್ಷೆ ನಡೆಸಿದ ಬಳಿಕ ಪತ್ತೆಯಾದ ಸತ್ಯಾಂಶ ಇದಾಗಿತ್ತು. ಎನ್‌ಜಿಟಿ ನಿರ್ದೇಶನದಂತೆ ತರಕಾರಿಗಳ ಪರೀಕ್ಷೆ ನಡೆಸಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಐವರು ತಜ್ಞರ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯ ಸದಸ್ಯರು ಬೆಂಗಳೂರಿನ ನಗರ, ನೆಲಮಂಗಲ, ಚಿಕ್ಕಬಳ್ಳಾಪುರದ ವಿವಿಧ ಎಪಿಎಂಸಿಗಳು, ಹಾಪ್‌ಕಾಮ್ಸ್‌ಗಳು, ತರಕಾರಿ ಬೆಳೆಯುವ ಪ್ರದೇಶದಿಂದ 72 ಮಾದರಿಯ ತರಕಾರಿಗಳನ್ನು ಸಂಗ್ರಹಿಸಿ, ಜೊತೆಗೆ ಪರೀಕ್ಷೆಯ ಭಾಗವಾಗಿ ಹೊಲಗಳಲ್ಲಿನ ಮಣ್ಣು ಮತ್ತು ಬೆಳೆಗಳಿಗೆ ಬಳಸುವ ಸಂಸ್ಕರಿಸಿದ ನೀರು, ಅಂತರ್ಜಲ ಕೂಡ ಸಂಗ್ರಹಿಸಿ ಎಫ್‌ಎಸ್‌ಎಸ್‌ಐ ಅನುಮೋದಿತ ಪ್ರಯೋಗಾಲಯಗಳಲ್ಲಿ ಪರೀಕ್ಷೆ ನಡೆಸಿದರು. ಆಗ ಕಂಡುಬಂದಿದ್ದು – ಬದನೆಕಾಯಿ, ಸೋರೆಕಾಯಿ, ತೊಂಡೆ ಕಾಯಿ, ಬೀನ್ಸ್, ಕ್ಯಾಬೇಜ್, ಹಾಗಲಕಾಯಿ, ಬೀಟ್‌ರೂಟ್, ಬಜ್ಜಿ ಮೆಣಸಿನ ಕಾಯಿ ಸೇರಿದಂತೆ ಅನೇಕ ತರಕಾರಿಗಳಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಐ) ನಿಗದಿಪಡಿಸಿದ ಮಾನದಂಡಗಳನ್ನು ಮೀರಿ ಹಾನಿಕಾರಕ ಲೋಹಗಳು ಪತ್ತೆಯಾಗಿರುವುದು.

72 ಮಾದರಿಗಳಲ್ಲಿ 53 ಮಾದರಿಗಳನ್ನು ರಾಜಾಜಿನಗರ, ನೆಲಮಂಗಲ, ಕೋಲಾರ ಮಾರುಕಟ್ಟೆಗಳಿಂದ, ಉಳಿದ ಮಾದರಿಗಳನ್ನು ನೆಲಮಂಗಲ, ಚಿಕ್ಕಬಳ್ಳಾಪುರ ಹೊಲಗಳಿಂದ ಸಂಗ್ರಹಿಸಲಾಗಿತ್ತು. 72ರ ಪೈಕಿ 19ರಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸೀಸದ ಅಂಶ ಪತ್ತೆಯಾಗಿದೆ.

ತಮಾಷೆಯೆಂದರೆ ಸಾವಯವ ತರಕಾರಿ ಎಂದು ಮಾರಾಟ ಮಾಡಲಾಗುತ್ತಿದ್ದ ಒಂದು ಕೆಜಿ ಬದನೆಕಾಯಿಯಲ್ಲಿ 1.953 ಮಿ.ಗ್ರಾಂ ಸೀಸ ಪತ್ತೆಯಾಗಿದೆ. ಇದು ಎಫ್‌ಎಸ್‌ಎಸ್ ಐ ನಿಗದಿಪಡಿಸಿದ್ದಕ್ಕಿಂತ 20 ಪಟ್ಟು ಹೆಚ್ಚು! ತೊಂಡೆಕಾಯಿಯಲ್ಲಿ 18 ಪಟ್ಟು ಹೆಚ್ಚು, ಬೀನ್ಸ್‌ನಲ್ಲಿ 9 ಪಟ್ಟು ಅಧಿಕ ಸೀಸ ಕಂಡು ಬಂದಿದೆ. ಹಸಿರೆಲೆಗಳು ಹಾಗೂ ಕ್ಯಾಬೇಜ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತ 5 ಪಟ್ಟು ಹೆಚ್ಚು ಸೀಸ, ಸೌತೆಕಾಯಿ, ದಪ್ಪ ಮೆಣಸಿನಕಾಯಿ (ಕ್ಯಾಪ್ಸಿಕಂ), ಹಾಗಲಕಾಯಿ, ಬೀಟ್‌ರೂಟ್‌ನಲ್ಲೂ ನಿಗದಿತ ಪ್ರಮಾಣಕ್ಕಿಂತ ಅಧಿಕ ಸೀಸದ ಪ್ರಮಾಣ ಪತ್ತೆಯಾಗಿದೆ.

ಬೆಂಗಳೂರು ನಗರಕ್ಕೆ ಪ್ರತಿನಿತ್ಯ ಸರಬರಾಜಾಗುವ ಟನ್‌ಗಟ್ಟಲೆ ತರಕಾರಿಗಳು ಪೂರೈಕೆಯಾಗುತ್ತಿರುವುದು ಸೀಸದ ಅಂಶ ಪತ್ತೆಯಾದ ಜಿಲ್ಲೆಗಳಿಂದಲೇ. ಶೇ. 90ರಷ್ಟು ತರಕಾರಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದಲೇ ಪೂರೈಕೆಯಾಗುತ್ತಿರುವುದು. ರಾಮನಗರ, ತುಮಕೂರು, ಮಂಡ್ಯ, ಮೈಸೂರು ಮತ್ತಿತರ ಭಾಗದಿಂದ ಸರಬರಾಜಾಗುತ್ತಿರುವುದು ಅಲ್ಪ ಪ್ರಮಾಣದಲ್ಲಿ. ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಿಂದಲೇ ಪ್ರತಿನಿತ್ಯ ನಗರಕ್ಕೆ ಸರಬರಾಜಾಗುತ್ತಿರುವುದು 700 ಟನ್‌ಗೂ ಅಧಿಕ ತರಕಾರಿ. ಇವೆಲ್ಲವೂ ಒಂದು ರೀತಿಯಲ್ಲಿ ವಿಷಯುಕ್ತ ತರಕಾರಿಗಳೇ. ಸರಳವಾಗಿ ಹೇಳಬೇಕೆಂದರೆ ಬೆಂಗಳೂರಿನ ಸುಮಾರು 1.48 ಕೋಟಿ ನಿವಾಸಿಗಳು ಪ್ರತಿನಿತ್ಯ ಸ್ವಲ್ಪ ಸ್ವಲ್ಪವೇ ವಿಷವನ್ನು ಸೇವಿಸುತ್ತಿದ್ದಾರೆ. ತನ್ಮೂಲಕ ವಿಷ ಮಾನವರಾಗುತ್ತಿದ್ದಾರೆ.

ಕೇವಲ ತರಕಾರಿ ಅಷ್ಟೇ ಅಲ್ಲ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ನೆಲಮಂಗಲದಲ್ಲಿನ ಮಣ್ಣು ಕೂಡ ಕಲುಷಿತ. 23 ಮಾದರಿ ಮಣ್ಣು ಸಂಗ್ರಹಿಸಿ ಪರೀಕ್ಷೆ ನಡೆಸಿದಾಗ ಬಂದ ಫಲಿತಾಂಶವಿದು. ಬೆಂಗಳೂರು ಮತ್ತು ಸುತ್ತಮುತ್ತ ಇರುವ 142 ಕೆರೆಗಳ ನೀರು ಕೂಡ ಅತ್ಯಂತ ಕಳಪೆ ಗುಣಮಟ್ಟ ಎಂದು ಕಂಡುಬಂದಿದೆ. ಉತ್ತಮವಾಗಿ ನಿರ್ವಹಿಸಲ್ಪಟ್ಟಿದೆ ಎಂದು ಹೇಳಲಾಗುವ ಮಲ್ಲೇಶ್ವರದ ಸ್ಯಾಂಕಿ ಕೆರೆಯ ನೀರು ಕೂಡ ಕಳಪೆ ಗುಣಮಟ್ಟದ್ದು. ಕೇವಲ ಜಲಚರಗಳು ಮತ್ತು ಹಕ್ಕಿಗಳು ಮಾತ್ರ ಕುಡಿಯಲು ಯೋಗ್ಯವಾದುದು. ಕೆರೆಗಳ ನೀರಿನ ಗುಣಮಟ್ಟವನ್ನು ಎ,ಬಿ,ಸಿ,ಡಿ,ಇ ಎಂದು ಐದು ವಿಭಾಗಗಳಲ್ಲಿ ವರ್ಗೀಕರಣ ಮಾಡಲಾಗಿದೆ. ಆದರೆ ಬೆಂಗಳೂರಿನ 142 ಕೆರೆಗಳು ಡಿ ಮತ್ತು ಇ ವಿಭಾಗದಲ್ಲಿವೆ. ಎ,ಬಿ,ಸಿ ಈ ವಿಭಾಗದಲ್ಲಿ ಯಾವ ಕೆರೆಯ ನೀರೂ ಬರುವುದಿಲ್ಲ. ಈ ಕೆರೆಗಳ ನೀರನ್ನು ಕುಡಿಯಲು, ಸ್ನಾನಕ್ಕೆ ಬಳಸಲು ನಿಮಗೆ ಹೇಳಿದವರ್‍ಯಾರು? ಎಂದು ಉಪಮುಖ್ಯಮಂತ್ರಿಗಳು ಈ ಸುದ್ದಿ ಪ್ರಕಟವಾದ ಕೂಡಲೇ ಅರ್ಭಟಿಸಿದ್ದಾರೆ. ತಿಪ್ಪಗೊಂಡನಹಳ್ಳಿ ಕೆರೆ ನೀರನ್ನು ಮಾತ್ರ ಕುಡಿಯಿರಿ ಎಂದು ಅಪ್ಪಣೆ ಕೊಡಿಸಿದ್ದಾರೆ! (ಅದನ್ನು ಜಲಮಂಡಳಿ ಶುದ್ಧೀಕರಿಸುತ್ತಿದೆಯಂತೆ!).



ಬೆಂಗಳೂರು ನಗರದ ನೂರಾರು ಕೆರೆಗಳ ನೀರಿನ ಗುಣಮಟ್ಟ ಕಳಪೆಯಾಗಲು ಕಾರಣ– ಮೋರಿ ನೀರು ಸೇರ್ಪಡೆ, ಎಲ್ಲಾ ಮಾದರಿಯ ತ್ಯಾಜ್ಯಗಳನ್ನು ಕೆರೆಗೆ ಎಸೆಯುವುದು, ಕೈಗಾರಿಕಾ ಪ್ರದೇಶಗಳ ಸೇರ್ಪಡೆ ಇತ್ಯಾದಿ. ಕಳೆದ ಅನೇಕ ವರ್ಷಗಳಿಂದ ಕೆರೆಗಳ ನಿರ್ವಹಣೆಯನ್ನು ಆಡಳಿತ ವ್ಯವಸ್ಥೆ ಸಂಪೂರ್ಣ ನಿರ್ಲಕ್ಷಿಸಿರುವುದು ಇಂತಹ ದುಸ್ಥಿತಿಗೆ ಮುಖ್ಯ ಕಾರಣವೆನ್ನುವುದು ಅಸಲಿ ಸತ್ಯ.

ತಿನ್ನುವ ತರಕಾರಿ, ಕುಡಿಯುವ ನೀರು ಕಲುಷಿತವಾಗಿದ್ದಕ್ಕೆ ಸಂಕಟಪಟ್ಟು ವೆಂಕಟರಮಣನಿಗೆ ಮೊರೆ ಇಟ್ಟರೆ, ತಿರುಪತಿಯಲ್ಲಿ ವಿತರಿಸಲಾಗುವ ಲಡ್ಡು ಪ್ರಸಾದ ಕೂಡ ಕಲಬೆರಕೆ. ತಿರುಪತಿಯ ಲಡ್ಡು ಪ್ರಸಾದಕ್ಕೂ ಕಲಬೆರಕೆ ತುಪ್ಪ ಹಾಗೂ ಹಲವು ರಾಸಾಯನಿಕ ಬಳಸಲಾಗಿದೆ ಎಂಬ ಸತ್ಯವನ್ನು ಸಿಬಿಐ ಈಚೆಗೆ ದೃಢಪಡಿಸಿದೆ. ತಿರುಪತಿ ಲಡ್ಡು ತಯಾರಿಕೆಗೆ ಕಲಬೆರಕೆ ತುಪ್ಪ ಹಾಗೂ ರಾಸಾಯನಿಕಗಳ ಬಳಕೆ ಮಾಡಲಾಗಿದೆ ಎಂಬುದನ್ನು ತಿರುಮಲ ತಿರುಪತಿ ದೇವಸ್ಥಾನಮ್ (ಟಿಟಿಡಿ) ಮಾಜಿ ಅಧ್ಯಕ್ಷ ವೈ.ವಿ. ಸುಬ್ಬಾ ರೆಡ್ಡಿ ಅವರೇ ಸ್ವತಃ ಒಪ್ಪಿಕೊಂಡಿದ್ದಾರೆ. ಆದರೆ ಈ ಗೋಲ್‌ಮಾಲ್‌ನಲ್ಲಿ ತಾನು ಶಾಮೀಲಾಗಿರಲಿಲ್ಲ ಎಂದು ಜಾರಿಕೊಂಡಿದ್ದಾರೆ! ಸೂಕ್ತ ತನಿಖೆ ನಡೆದರೆ ಮಾಜಿ ಅಧ್ಯಕ್ಷರ ಬಣ್ಣ ಬಯಲಾಗುವುದು ಖಂಡಿತ. ಕಲಬೆರಕೆ ಲಡ್ಡು ಪ್ರಸಾದ ಹಗರಣವನ್ನು ಧಾರ್ಮಿಕ ಮುಖಂಡರು, ಮಠಾಧಿಪತಿಗಳು ಖಂಡಿಸಿ ಪ್ರಧಾನಿಗೆ ಪತ್ರ ಬರೆದು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ. ಕಲಬೆರಕೆ ಲಡ್ಡು ಪ್ರಸಾದವನ್ನು ಭಕ್ತಿಯಿಂದ ಸೇವಿಸಿದ ಕೋಟ್ಯಂತರ ಮುಗ್ಧ ಭಕ್ತರ ಆರೋಗ್ಯದ 'ಕಥೆ' ಏನಾಗಿರಬಹುದೆಂದು ನೀವೇ ಯೋಚಿಸಿ. (ನೀವೂ ಆ ಪ್ರಸಾದವನ್ನು ಸೇವಿಸಿದವರಲ್ಲಿ ಒಬ್ಬರಾಗಿರಬಹುದು!) ದೇವರ ಭಯವಿಲ್ಲದ, ಆಡಳಿತ ವ್ಯವಸ್ಥೆಯ ನಿಯಂತ್ರಣವಿಲ್ಲದ ಜನರು ಅಮೃತಕ್ಕೂ ವಿಷ ಬೆರೆಸಿ, ಇದೇ ಅಮೃತವೆಂದು ವಿತರಿಸಲೂ ಸಂಕೋಚ ಪಡಲಾರರು.

ಆಂಧ್ರದಲ್ಲಿ ವೈಎಸ್ ಆರ್ ಕಾಂಗ್ರೆಸ್ ಪಕ್ಷದ ಆಡಳಿತವಿದ್ದಾಗ ತಿರುಪತಿ ತಿರುಮಲಕ್ಕೆ ಉತ್ತರಾಖಂಡದ ಭಗವಾನ್‌ಪುರದ ಭೋಲೇಬಾಬಾ ಡೈರಿಯಿಂದ ಲಕ್ಷಾಂತರ ಕಿಲೋ ಗ್ರಾಂ ಕಲಬೆರಕೆ ತುಪ್ಪ ಪೂರೈಕೆ ಆಗುತ್ತಿತ್ತು . ಈ ಕಲಬೆರಕೆ ತುಪ್ಪ ತಯಾರಿಕೆಗೆ ಬಳಕೆಯಾಗುತ್ತಿದ್ದದು ಮೋನೋಗ್ಲೈಸಿರೆಡ್ಸ್ (Monoglycerides) ಎಂಬ ರಾಸಾಯನಿಕ ಪದಾರ್ಥ. ಇದರ ಅಧಿಕ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ಹಾನಿಯಾಗುವುದು ನಿಶ್ಚಿತ ಎಂದು ತಜ್ಞರ ಅಭಿಮತ. ಈ ರಾಸಾಯನಿಕವನ್ನು ಕೊರಿಯಾದ ಇಲ್ ಶಿನ್ ವೆಲ್ಸ್ ಕಂಪೆನಿ ಲಿಮಿಟೆಡ್ ಉತ್ಪಾದಿಸಿ ಭಾರತಕ್ಕೆ ಕಳುಹಿಸುತ್ತಿತ್ತು. ಇವೆಲ್ಲವನ್ನೂ ಎಸ್‌ಐಟಿ ತನ್ನ ದೋಷಾರೋಪ ಪಟ್ಟಿಯಲ್ಲಿ ದಾಖಲೆ ಸಹಿತ ಆರೋಪಿಸಿದೆ.

ದಿಢೀರ್ ಶ್ರೀಮಂತರಾಗಬೇಕು, ಶ್ರಮವಿಲ್ಲದೆ ತನ್ನ ಖಜಾನೆ ಭರ್ತಿಯಾಗಬೇಕು, ಇದರಿಂದಾಗಿ ಇತರರಿಗೆ ತೊಂದರೆಯಾದರೂ ಪರವಾಗಿಲ್ಲ, ಜೀವಕ್ಕೆ ಸಂಚಕಾರ ಬಂದೊದಗಿದರೂ ಅದೇನೂ ದೊಡ್ಡ ಸಂಗತಿಯಲ್ಲ– ಇಂತಹ ಕಲುಷಿತ ಮನಸ್ಸುಗಳ ವಿಕೃತ ಚಿಂತನೆಗಳು ತಿನ್ನುವ ತರಕಾರಿಗೆ ವಿಷ ಉಣಿಸುವ, ಕುಡಿಯುವ ನೀರನ್ನು ಕಲುಷಿತಗೊಳಿಸುವ, ಕೊನೆಗೆ ತಿರುಪತಿ ಲಡ್ಡು ಪ್ರಸಾದದ ಪಾವಿತ್ರ್ಯತೆಗೂ ಭಂಗ ತರುವ ಹೀನಾತಿಹೀನ ಮಟ್ಟಕ್ಕೆ ಇಳಿದಿವೆ. ತರಕಾರಿಗಳ ಗಾತ್ರ, ಆಕಾರ ಹೆಚ್ಚಿಸಲು ಬೆಳೆಯುವ ಹಂತದಲ್ಲಿ ಅವಕ್ಕೆ ರಾಸಾಯನಿಕಗಳನ್ನು ಇಂಜೆಕ್ಟ್ ಮಾಡುವುದು ಇದೆಯಂತೆ. ಹಾಗಾಗಿಯೇ ಕೆಲವು ತರಕಾರಿಗಳನ್ನು ಕತ್ತರಿಸಿ ಹೆಚ್ಚು ಹೊತ್ತು ಇಟ್ಟರೆ ಅವುಗಳ ಮೂಲ ಬಣ್ಣವೇ ಬದಲಾಗಿಬಿಡುತ್ತದೆ. ದ್ರಾಕ್ಷಿ ಹಣ್ಣನ್ನು ಎಷ್ಟು ಉಪ್ಪು ನೀರಿನಲ್ಲಿ ನೆನೆಸಿ, ತೊಳೆದು ತಿಂದರೂ, ತಿಂದ ಬಳಿಕ ತುಟಿ ಉರಿಯುವುದು ತಪ್ಪುವುದಿಲ್ಲ, ಹೊಳೆಯುವ ಹಳದಿ ಬಣ್ಣದ ಬಾಳೆಹಣ್ಣು ತಿಂದರೆ ಬಾಳೆಹಣ್ಣಿನ ರುಚಿಯೇ ಇರುವುದಿಲ್ಲ.ಅನಾನಸ್ ಗಂತೂ ಅದನ್ನು ರಕ್ಷಿಸಿಡಲು ಮಿತಿಮೀರಿ ರಾಸಾಯನಿಕ ಸಿಂಪಡನೆ ಮಾಡಲಾಗುತ್ತದೆ.

ಇಂತಹ ಕಲಬೆರಕೆ, ಕಲುಷಿತ ತರಕಾರಿ, ಹಣ್ಣು, ಆಹಾರ ಸೇವಿಸಿದರೆ ಹೊಸ ಹೊಸ ಕಾಯಿಲೆಗಳ ಕೊಡುಗೆಯಂತೂ ಗ್ಯಾರಂಟಿ. ಹಿಂದೆಲ್ಲ ತಮ್ಮ ಶತ್ರುಗಳನ್ನು ಉಪಾಯವಾಗಿ ಸಾಯಿಸಲು ರಾಜರು ವಿಷಕನ್ಯೆಯರನ್ನು ಬಳಸಿ ಕೊಳ್ಳುತ್ತಿದ್ದರಂತೆ. ಈಗ ಎಲ್ಲರೂ ವಿಷಕನ್ಯೆಯರೇ! ಎಲ್ಲರೂ ವಿಷ ಪುರುಷರೇ! ತರಕಾರಿ, ಮಾಂಸ, ಹಣ್ಣು, ಹಾಲಿನ ಮೂಲಕ ವಿಷ ಸೇವಿಸ ದವರೇ ಈಗ ಬಹುಶಃ ಇರಲಿಕ್ಕಿಲ್ಲ. ಇರುವುದೊಂದೇ ಭೂಮಿ . ಅದನ್ನು ಕಲುಷಿತಗೊಳಿಸುತ್ತಿದ್ದೇವೆ. ಎಲ್ಲವೂ ವಿಷಮಯವಾದರೆ ತಿನ್ನುವುದಾದರೂ ಏನನ್ನು!

ಮೊದಲು ಮನುಷ್ಯನ ಮನಸ್ಸಿನ ದುರಾಸೆ ಅಳಿಯಬೇಕು. ಆಗ ಮಾತ್ರ ಶುದ್ಧ ನೀರು, ಶುದ್ಧ ಆಹಾರ, ಶುದ್ಧ ಗಾಳಿ ದೊರೆಯಬಹುದಷ್ಟೇ.

ತಾರುಣ್ಯದಲ್ಲಿ ಬದಲಾವಣೆಗಳು–2

ಹರೆಯದವರಲ್ಲಿ ಭಾವನೆಗಳ ಏರಿಳಿತಗಳು ಸಾಮಾನ್ಯ. ಸಫಲರಾದರೆ ಆಕಾಶಕ್ಕೇರುತ್ತಾರೆ. ವಿಫಲರಾದರೆ ಪಾತಾಳಕ್ಕಿಳಿಯುತ್ತಾರೆ. ವಾಸ್ತವಗಳ ಪರಿವೆಯಾಗಲಿ, ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹರೆಯದವರಲ್ಲಿ ಕಡಿಮೆ

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಮಿದುಳಿನಲ್ಲಿ ಜರುಗುವ ಬದಲಾವಣೆಗಳು

ಹರೆಯದಲ್ಲಿ ಜರುಗುವ ಮಾನಸಿಕ ಮತ್ತು ಭಾವನಾತ್ಮಕ ಬದಲಾವಣೆಗಳಿಗೆ ಮುಖ್ಯವಾದದ್ದು ನಮ್ಮ ಮಿದುಳು. ನಾಲ್ಕು ದಶಕಗಳ ಹಿಂದೆ ಮಿದುಳಿನ ಕುರಿತಾದ ಮಾಹಿತಿಗಳು ಅಷ್ಟಾಗಿ ವೈದ್ಯ ಲೋಕಕ್ಕೆ ತಿಳಿದಿರಲಿಲ್ಲ. ಕಳೆದ ಶತಕದ ತೊಂಭತ್ತರ ದಶಕವನ್ನು ವೈದ್ಯ ವಿಜ್ಞಾನಿಗಳು ಮಿದುಳಿನ ಆವಿಷ್ಕಾರಗಳಿಗೆ ಮೀಸಲಾಗಿರಿಸಿದರು. ಆವಿಷ್ಕಾರಗಳು ಮಿದುಳಿನ ಬೇರೆ ಬೇರೆ ಭಾಗಗಳ ರಚನೆ, ಅವುಗಳು ನಿರ್ವಹಿಸುವ ಕ್ರಿಯೆಯನ್ನು ಎಳೆ ಎಳೆಯಾಗಿ ತೆರೆದಿಟ್ಟವು. ಅದರ ಫಲವಾಗಿ ಹರೆಯದವರಲ್ಲಿ ಜರುಗುವ ಮನೋವಿಕಾಸ ಮತ್ತು ಭಾವನಾತ್ಮಕ ಬದಲಾವಣೆಗಳಿಗೂ, ಮಿದುಳಿನಲ್ಲಿ ಜರುಗುವ ಬೆಳವಣಿಗೆಗಳಿಗೂ ನಿಕಟವಾದ ಸಂಬಂಧವಿದೆ ಎಂಬುದು ಸಾಬೀತಾಯಿತು.

ಹರೆಯದಲ್ಲಿ ಮಿದುಳಿನ ನರ ಸಮೂಹಗಳು ಮರು ಸಂಘಟನೆಗೊಂಡು, ಮರು ರೂಪುಗೊಳ್ಳುತ್ತವೆ. ಬಾಲ್ಯದಲ್ಲಿ ಉಪಯೋಗಿಸದೆ ಇರುವ ನರತಂತುಗಳ ಜೋಡಣೆ (Synapse) ಗಳು ಮಾಯವಾಗುತ್ತವೆ. ಅದೇ ರೀತಿ ನರಕೋಶಗಳು ಸಂದೇಶಗಳನ್ನು ಕಳುಹಿಸುವ ನರತಂತುಗಳ ವೇಗ ಹೆಚ್ಚಿಸಲು ಅವುಗಳ ಸುತ್ತ ಮೈಲಿನ್ ಎಂಬ ಕವಚ ಬೆಳೆಯುತ್ತದೆ. ಕ್ರಿಯಾಶಕ್ತಿಯನ್ನು ಹೆಚ್ಚು ಶಕ್ತವಾಗಿರಿಸಲು ಮುಮ್ಮೆದುಳು ಮರುರಚನೆಗೊಳ್ಳುತ್ತದೆ. ತೀರ್ಮಾನ ತೆಗೆದುಕೊಳ್ಳಲು, ಅಪಾಯದ ಸಂಕೇತವನ್ನು ಗ್ರಹಿಸಲು ಮತ್ತು ಯೋಜನೆಗಳನ್ನು ರೂಪಿಸಲು ಇದು ಅವಶ್ಯ. ಭಾವನಾತ್ಮಕ ಅಂಶಗಳು, ಸಾಮಾಜಿಕವಾಗಿ ಬೆರೆಯುವಿಕೆ, ಭಯ ಆತಂಕಗಳಿಗೆ ಲಿಂಬಿಕ್ (Limbic) ನರಕೋಶದ ಸಮೂಹಗಳು ಅವಶ್ಯ. ಇವೂ ಹಲವಾರು ರೀತಿಯಲ್ಲಿ ಮರುರೂಪುಗೊಳ್ಳುತ್ತವೆ. ಇದೇ ಅವಧಿಯಲ್ಲಿ ಮಿದುಳಿನ ನರವ್ಯೂಹಗಳಲ್ಲಿ ಹೊಂದಿಕೊಳ್ಳುವ (Plasitcity) ಗುಣಗಳು ವೃದ್ಧಿಯಾಗುತ್ತವೆ. ಈ ಅವಧಿಯಲ್ಲಿ ಕೆಲವು ನರಚೋದನಿಕೆಗಳು ಸ್ರವಿಸಲ್ಪಡುತ್ತವೆ.


ಮಾನಸಿಕ ಬದಲಾವಣೆಗಳು

ಬಾಲ್ಯದಲ್ಲಿ ಮಗುವಿಗೆ ವಸ್ತು ಎದುರಿಗೆ ಇಲ್ಲದಿದ್ದರೆ ಅದನ್ನು ಕಲ್ಪನೆ ಮಾಡಿಕೊಳ್ಳಲಾಗುವುದಿಲ್ಲ. ಇದಕ್ಕೆ ಮೂರ್ತರೂಪದ ಆಲೋಚನೆ (Abstract thinking) ಎನ್ನುತ್ತಾರೆ. ಹರೆಯಕ್ಕೆ ತಲುಪಿದಂತೆ ಮಗುವಿಗೆ ಒಂದು ವಸ್ತುವಿನ ಕುರಿತು ಹೇಳಿದರೆ, ವಸ್ತು ಇಲ್ಲದಿದ್ದರೂ, ಅದರ ಚಿತ್ರಣವನ್ನು ಅದು ಕಲ್ಪಿಸಿಕೊಳ್ಳಬಹುದು. ಹಾಗೆಯೇ ಅದರ ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ಆಲೋಚಿಸಲು ಸಾಧ್ಯ. ಇದಕ್ಕೆ ಅಮೂರ್ತ ರೂಪದ ಆಲೋಚನೆ (Concrete thinking) ಎಂದು ಕರೆಯುತ್ತಾರೆ. ಇದರೊಂದಿಗೆ ಸೃಜನಶೀಲ ಚಿಂತನೆ (Creative thinking), ತಾರ್ಕಿಕ ಚಿಂತನೆ (Reasoning) ಉದ್ವೇಗ ಹಿಡಿತ (Impulse control) ಸಮಸ್ಯೆಗಳನ್ನು ಬಗೆಹರಿಸುವುದು (Problem solving) ಮತ್ತು ತೀರ್ಮಾನ ತೆಗೆದುಕೊಳ್ಳುವ (Desicion making) ಸಾಮರ್ಥ್ಯ ಉಂಟಾಗುತ್ತದೆ. ಇದು ಸುಮಾರು ಏಳು ವರ್ಷ ವಯಸ್ಸಿಗೆ ಪ್ರಾರಂಭವಾಗಿ ತಾರುಣ್ಯದ ಮೊದಲ ಹಂತದವರೆಗೆ ವಿಕಾಸಗೊಳ್ಳುತ್ತಿರುತ್ತದೆ. ಹರೆಯದಲ್ಲಿ ಜರುಗುವ ಮನೋವಿಕಾಸವು ಇತರರಿಗಾಗದ ಬದಲಾವಣೆಗಳು ತನ್ನಲ್ಲಿ ಏಕೆ ಆಗುತ್ತದೆ ಎಂದು ಮೊದಲು ಕಾಣಿಸಿಕೊಂಡವರ ಕುರಿತು ಬೇಸರಗೊಳ್ಳುತ್ತದೆ. ಬದಲಾವಣೆಗಳು ತಡವಾದಲ್ಲಿ, ಅರೇ ತನ್ನಲ್ಲೇಕೆ ಇನ್ನೂ ಇತರರಿಗಾದ ಬದಲಾವಣೆಗಳು ಕಾಣಿಸಿಕೊಳ್ಳಲಿಲ್ಲ ಎಂಬ ಯೋಚನೆ ಕಾಣಿಸಿಕೊಳ್ಳುತ್ತದೆ. ಇವು ಹರೆಯದ ಮನಸ್ಸನ್ನು ತಲ್ಲಣಗಳಿಗೆ ಎಡೆ ಮಾಡಿಕೊಡುತ್ತವೆ.

ಮನೋವಿಕಾಸವು ಹರೆಯದ ಮನಸ್ಸಿಗೆ ಜೀವನ ಮೌಲ್ಯಗಳು, ಸಮಾಜದಲ್ಲಿರುವ ಆಗು ಹೋಗುಗಳು, ಜನರ ನಡೆ ನುಡಿಗಳು, ಅವರ ನಂಬಿಕೆಗಳು, ಟೀಕೆ ಟಿಪ್ಪಣಿಗಳು ಮತ್ತು ಜೀವನದ ಗುರಿ ಇವುಗಳ ಕುರಿತು ಪ್ರಶ್ನಿಸಲು ಪ್ರಾರಂಭಿಸುತ್ತದೆ. ಹಿರಿಯರ ದ್ವಂದ್ವ ಸಂದೇಶಗಳು, ಅವರ ನಡೆ ನುಡಿಗಳ ಕುರಿತು ಅವಲೋಕನ ಮಾಡುತ್ತದೆ. ಇದರಿಂದ ಪೋಷಕರಿಂದ ತಾನು ಯಾವ ರೀತಿ ಬೇರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಾಲ್ಪನಿಕವಾಗಿ ಚಿಂತನೆ ನಡೆಸುವುದು, ತಾರ್ಕಿಕವಾಗಿ ಯೋಚಿಸುವುದು, ಯೋಜನೆಗಳನ್ನು ರೂಪಿಸುವುದು ಮತ್ತು ಸಮಸ್ಯೆಗಳನ್ನು ಬಗೆಹರಿಸುವುದು ಹೀಗೆ ಹಲವಾರು ಅಂಶಗಳ ಕುರಿತು ಚಿಂತನೆ ನಡೆಸುವ ಶಕ್ತಿ ಮನೋವಿಕಾಸದಿಂದ ಉಂಟಾಗುತ್ತದೆ. ಹರೆಯದಲ್ಲಿ ಜರುಗುವ, ಭವಿಷ್ಯದ ಅಡಿಗಲ್ಲು ಎಂದು ಹೇಳಬಹುದಾದ "ತನ್ನತನ (Self Identity) ವು ಒಂದು ಮುಖ್ಯವಾದ ಹರೆಯದ ಘಟಕ. "ತನ್ನತನ" ಎಂದರೆ ಒಬ್ಬ ವ್ಯಕ್ತಿ ತನ್ನ ಕುರಿತು ತಾನೇ ಹೊಂದಿರುವ ಕಲ್ಪನೆ, ನಂಬಿಕೆ, ಸ್ವಗ್ರಹಿಕೆ, ತಾನು ಅಳವಡಿಸಿಕೊಳ್ಳಬೇಕಾದ ಮೌಲ್ಯಗಳು, ಕೌಶಲಗಳು, ಆತ್ಮಗೌರವ, ಆತ್ಮವಿಶ್ವಾಸ, ಸಮಾಜದಲ್ಲಿ ತನ್ನ ಸ್ಥಾನಮಾನಗಳು ಹೀಗೆ ಹಲವಾರು ಅಂಶಗಳು ಕೂಡಿರುತ್ತವೆ. ಹರೆಯದಲ್ಲಿ ಯಾರು 'ತನ್ನತನ' ವನ್ನು ಸ್ಪಷ್ಟವಾಗಿ ಹೊಂದುತ್ತಾರೋ ಅವರು ಭವಿಷ್ಯದಲ್ಲಿ ಸಾಧನೆ ಮಾಡಲು ಮುಂದಾಗುತ್ತಾರೆ.

ಭಾವನಾತ್ಮಕ ಬದಲಾವಣೆಗಳು

ಹರೆಯದವರಲ್ಲಿ ಭಾವನೆಗಳ ಏರಿಳಿತಗಳು ಸಾಮಾನ್ಯ. ಸಫಲರಾದರೆ ಆಕಾಶಕ್ಕೇರುತ್ತಾರೆ. ವಿಫಲರಾದರೆ ಪಾತಾಳಕ್ಕಿಳಿಯುತ್ತಾರೆ. ವಾಸ್ತವಗಳ ಪರಿವೆಯಾಗಲಿ, ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹರೆಯದವರಲ್ಲಿ ಕಡಿಮೆ ಎಂದು ಹೇಳಬಹುದು. ಈ ವಿಧದ ಭಾವನೆಗಳ ಏರುಪೇರು ಉಂಟಾಗಲು ಕಾರಣ ಮಿದುಳಿನಲ್ಲಿ ಭಾವನೆಗಳ ಪ್ರಕ್ರಿಯೆ ವಹಿಸುವ ಲಿಂಬಿಕ್ ಮತ್ತು ಮುಮ್ಮೆದುಳಿನ ಭಾಗಗಳು. ಇದರ ಜೊತೆಗೆ ನರ ಚೋದನಿಕೆ (Neurohormone) ಎಂಬ ನರರಸಧೂತಗಳು ಕಾರಣ. ಹರೆಯದವರು ತಮ್ಮ ರೂಪದ ಕುರಿತು ಚಿಂತಿಸುತ್ತಾರೆ. ಇತರರಿಗೆ ಹೋಲಿಸಿಕೊಂಡು ತಾನು ಅವರಷ್ಟು ಚೆನ್ನಾಗಿಲ್ಲವಲ್ಲಾ ಎಂದು ಬೇಸರಿಸಬಹುದು. ತನ್ನನ್ನು ನೋಡಿ ಗೇಲಿ ಮಾಡುತ್ತಾರೆಂಬ ಭಾವನೆ ಉಂಟಾಗಬಹುದು. ಇದರಿಂದ ಅವರಲ್ಲಿ ಕೀಳರಿಮೆ ಉಂಟಾಗುತ್ತದೆ. ಇನ್ನೊಂದು ಮುಖ್ಯವಾದ ಅಂಶ ಸ್ವತಂತ್ರತೆಯನ್ನು ಬಯಸುವ



ಹರೆಯದವರು, ಪೋಷಕರೊಂದಿಗೆ ಘರ್ಷಣೆಗಳಿಗಿಳಿಯಬಹುದು. ಅವರ ಮಾರ್ಗದರ್ಶನಗಳಿಗೆ ವಿರುದ್ಧವಾಗಿ ನಡೆದುಕೊಳ್ಳಬಹುದು. ಹೆಚ್ಚು ಹೆಚ್ಚು ಗೌಪ್ಯತೆಯನ್ನು ಬಯಸುವುದು ಹರೆಯದವರ ಗುಣ.

ಹರೆಯದ ಮನಸ್ಸು ರೋಚಕ ಮತ್ತು ಪ್ರಣಯದ ಅಂಶಗಳನ್ನು ಹೆಚ್ಚು ಹೆಚ್ಚು ಬಯಸುತ್ತದೆ. ಇದರಿಂದ ಕೆಲವು ವೇಳೆ ಪೋಷಕರಿಂದ ದೂರವಾಗಿ ಸ್ನೇಹಿತರ ಆಕರ್ಷಣೆ ಹೆಚ್ಚಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ರೋಚಕ ಮತ್ತು ಪ್ರಣಯದ ದೃಶ್ಯಗಳು ಹರೆಯದವರನ್ನು ಹೆಚ್ಚಾಗಿ ಆಕರ್ಷಿಸುತ್ತವೆ.

ಸಾಮಾಜಿಕ ಬದಲಾವಣೆಗಳು

ಇಷ್ಟು ದಿನವೂ ಪೋಷಕರ ನಿಕಟ ಸಂಬಂಧದಿಂದ ಕೂಡಿದ್ದ ಹರೆಯದ ಮನಸ್ಸು ಈಗ ಹೊರಗಿನ ಸ್ನೇಹಿತರ ಸಂಬಂಧವನ್ನು ಬಯಸುತ್ತದೆ. ಅಲ್ಲಿಯೂ ತನ್ನತನವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತದೆ. ಇದರಿಂದ ಪೋಷಕ–ಮಕ್ಕಳ ಸಂಬಂಧದಲ್ಲಿ ಘರ್ಷಣೆಗಳಾಗುತ್ತವೆ. ಹರೆಯದವರು ಸಹಪಾಠಿಗಳೊಂದಿಗೆ ಒಡನಾಡಲು ಬಯಸುತ್ತಾರೆ. ಅವರ ಸಲಹೆಗಳು ಇವರಿಗೆ ಪ್ರಿಯವಾಗುತ್ತವೆ. ಪೋಷಕರ ಸಲಹೆಗಳಿಗಿಂತ ಸ್ನೇಹಿತರ ಮತ್ತು ಸಹಪಾಠಿಗಳ ಸಲಹೆಗಳು ಸರಿ ಎನಿಸುತ್ತದೆ. ಸಾಮಾಜಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮನಸ್ಸು ಬಯಸುತ್ತದೆ. ಪ್ರೀತಿ, ಪ್ರೇಮ ಸಂಬಂಧಗಳೆಡೆಗೆ ಮನಸ್ಸು ಎಳೆಯುತ್ತದೆ. ಸಾಮಾಜಿಕ ಜಾಲತಾಣಗಳ ಕುರಿತು ಮನಸ್ಸು ಆಕರ್ಷಣೆಗೊಳ್ಳುತ್ತದೆ. ಆದರೆ ಹರೆಯದವರ ಅಪಕ್ವ ಮನಸ್ಸಿನಿಂದಾಗಿ ಸಾಮಾಜಿಕ ಸಂಬಂಧಗಳಲ್ಲಿ ಆಗುವ ಬದಲಾವಣೆಗಳು, ವಾಸ್ತವವೋ ಅಲ್ಲವೋ, ಅವುಗಳಿಂದ ತನಗೆ ಭವಿಷ್ಯದಲ್ಲಿ ಒಳಿತಾಗುವುದೋ ಇಲ್ಲವೋ, ಎಂಬ ಅರಿವು ಕಡಿಮೆ. ಹಾಗಾಗಿ ಕ್ಷಣಿಕ ಮುದ ನೀಡುವ ದೃಶ್ಯಗಳು ಮತ್ತು ಘಟನೆಗಳನ್ನು ನೋಡಿ ಅವು ವಾಸ್ತವವೆಂದು ನಂಬಿ ಮೋಸ ಹೋಗುವ ಸಂದರ್ಭಗಳು ಹೆಚ್ಚು.

ಹೀಗೆ ಜರುಗುವ ಬದಲಾವಣೆಗಳಿಂದ ಹರೆಯದವರು ಒತ್ತಡದ ಸುಳಿಯಲ್ಲಿ ಸಿಕ್ಕುವುದರೊಂದಿಗೆ, ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಮನಸ್ಸು ಸಾಧನೆಯತ್ತ ಮುಂದುವರೆಯಲು ವಾಸ್ತವದ ಅರಿವು ಅವಶ್ಯ.

ಹೀಗೊಂದು ಬೊಂಡಾವಲೋಕನ

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಬೇಸಿಗೆಯ ಬೇಗೆಯು ತೀರಾ ಬೇಗ ಬೇಗ ಅಲ್ಲದೇ ಹೋದರೂ ನಿಧಾನಕ್ಕೆ ತನ್ನ ತೀವ್ರತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಈ ಬೇಗೆಯನ್ನು ಬಗ್ಗು ಬಡಿಯುವ ಬೇರೆ ಬೇರೆ ವ್ಯವಸ್ಥೆಗಳನ್ನು ಈ ಕಾಲದಲ್ಲಿ ಮಾಡಿಕೊಳ್ಳುವುದು ಸಹಜ. ಬೇಡ ಬೇಡವೆಂದರೂ ನಮ್ಮನ್ನು ಕೈ ಬೀಸಿ ಕರೆಯುವ ಬಿಸಿಯನ್ನು ಕೊಂಚ ದೂರ ಸರಿಸಿ, 'ತಂಪಾದವೋ ಎಲ್ಲಾ ತಂಪಾದವೋ' ಎಂದು ನಿರಾಳತೆಯಿಂದ ಮನಸಾರೆ ಗುನುಗಬೇಕು ಅಂದರೆ, ಈ ಕಾಲದಲ್ಲಿ ಸಾಧ್ಯವಾದಷ್ಟೂ ತಣ್ಣನೆಯ ಆಹಾರ ಪದಾರ್ಥ ಹಾಗೂ ಪಾನೀಯಗಳ ಸೇವನೆ ಮಾಡಬೇಕು. ಬಿಸಿ ಬಿಸಿ ಏನಿದೆ ಎಂದು ಕೇಳುವವರ ಬಾಯಲ್ಲೂ ಈ ಕಾಲದಲ್ಲಿ 'ತಣ್ಣಗೆ ಏನಿದೆಯಪ್ಪಾ?' ಎಂಬ ಮಾತು ಹೊರಳುತ್ತದೆ ಎಂದರೆ, ಕಾಲವು ಬೇಸಿಗೆಯತ್ತ ಹೊರಳುತ್ತಿದೆ ಎಂದರ್ಥ. ಇಂತಿಪ್ಪ ಬೇಸಿಗೆಯ ಕಾಲದಲ್ಲಿ ಅನ್ಯರ ಹೊಟ್ಟೆ ತಣ್ಣಗಿರಲಿ ಎಂದು ತನ್ನ ಉದರದೊಳಗೆ ಸಂಗ್ರವಾಗಿರುವ ಸ್ವಾದಭರಿತ ಉದಕವನ್ನು ಉದಾರವಾಗಿ ಧಾರೆ ಎರೆಯುವ ಈ ಎಳನೀರೆಂದರೆ ಬಲು ಅಚ್ಚುಮೆಚ್ಚು. ಹಾಗಾಗಿ 'ಬನ್ನಿ ಒಂದು ಬೊಂಡ ಕುಡಿಯೋಣ..' ಎಂಬ ಮಾತು ಹೆಚ್ಚಾಗಿ ಕೇಳಿಬರುತ್ತದೆ.

ಎಲ್ಲ ಕಾಲದಲ್ಲೂ ಲಭ್ಯವಿದ್ದರೂ, ಈ ಬೊಂಡಕ್ಕೆ ಬೇರೆ ಕಾಲಗಳಿಗಿಂತಲೂ ಬೇಸಿಗೆಯಲ್ಲೇ ತುಸು ಡಿಮ್ಯಾಂಡ್ ಜಾಸ್ತಿ. ಬೀದಿ ಬೀದಿಗಳಲ್ಲಿ ಆಳೆತ್ತರಕ್ಕೆ ಜೋಡಿಸಿಟ್ಟು, ಅದರ ಮೇಲೆ ದಪ್ಪನೇ ದಟ್ಟಿಯಂಥ ಹಳೆಯ ಬಟ್ಟೆಯೋ, ಗೋಣಿಯೋ ಅಥವಾ ಟರ್ಪಾಲನ್ನೋ ಅರೆಬರೆ ಮುಚ್ಚಿಟ್ಟಿರುವ ದೃಶ್ಯ ಹೆಚ್ಚಾಗಿ ಕಾಣಿಸುತ್ತಿದೆ ಎಂದರೆ ಸಂಶಯವೇ ಬೇಡ, ಬೇಸಿಗೆ ಕಾಲಿಟ್ಟಿದೆ ಎಂದೇ ಅರ್ಥ. ಇನ್ನು ಕೆಲವೆಡೆಗಳಲ್ಲಿ ಪುಟ್ಟ ಅಂಗಡಿಯ ಮುಂಭಾಗದ ಗಟ್ಟಿಯಾದ ಜಂತಿಗೇ ಅದನ್ನು ನೇತುಹಾಕಿ, ಅದಕ್ಕೆ ಬಿಸಿಲು ಬೀಳದಂತೆ ರಕ್ಷಿಸಲು ಸೊಪ್ಪನ್ನು ದಪ್ಪಕ್ಕೆ ಹೊದೆಸಿ, ರಕ್ಷಾ ಕವಚವನ್ನು ತಯಾರಿಸಿಡುತ್ತಾರೆ. ಇನ್ನು ಅದು ಬೊಂಡಾ ಕುಡಿಯುವ ಆಕಾಂಕ್ಷಿ ಗ್ರಾಹಕರನ್ನು ಸೆಳೆಯುವ ತಂತ್ರವೂ ಕೂಡಾ ಆಗಿರಲಿಕ್ಕೂ ಸಾಕು. ಬೇಸಿಗೆ ಬಂತೆಂದರೆ ಎಲ್ಲೆಲ್ಲೂ ನೀರಿಗೆ ಕೊರತೆ, ಹಾಹಾಕಾರ ಎಂಬ ಮಾತುಗಳೇ ಕೇಳಿಬರುವಾಗ, ಈ ಎಳನೀರಿಗೆ ಮಾತ್ರ ಕೊರತೆಯೇ ಇರಲಿಕ್ಕಿಲ್ಲ ಎಂಬಂತೆ ಭಾರೀ ಪ್ರಮಾಣದಲ್ಲಿ ಲಭ್ಯವಿರುತ್ತದೆ. ಬಾಟಲಿಗಳಲ್ಲಿ ತುಂಬಿರುವಂಥ ವಿವಿಧ ಬಣ್ಣ, ರುಚಿ ಹಾಗೂ ಬೆಲೆಯ ರೆಡಿಮೇಡ್ ಜ್ಯೂಸ್‌ಗಳು ಜನರಿಗೆ ಮಂಕುಬೂದಿ ಎರಚುವ ನಡುವೆಯೂ, ಬೊಂಡಗಳು ಒಂದು ಮಟ್ಟಿಗಿನ ಪೈಪೋಟಿ ನೀಡುತ್ತವೆ.

ನಾವು ಕುಡಿಯುವ ಪಾನೀಯಗಳಲ್ಲಿ ಕೆಲವೊಂದನ್ನು ಓಪನರ್ ಸಾಧನದ ಮೂಲಕ ಒಮ್ಮೆಗೆ ಮುಚ್ಚಳ ತೆಗೆಯುವ ಮೂಲಕ, ಇನ್ನು ಕೆಲವನ್ನು ಕೈಯ್ಯಿಂದ ತಿರುಗಿಸಿ ಮುಚ್ಚಳ ತೆಗೆಯುವ ಮೂಲಕ ತೆರೆಯುತ್ತೇವೆ. ಹಾಗೆಯೇ ಮಿಕ್ಸಿಗೆ ಹಾಕಿ ಅರೆಯುವ ಮೂಲಕವೂ ಜ್ಯೂಸ್‌ನ್ನು ಪಡೆಯುತ್ತೇವೆ. ಅವುಗಳಿಗೆಲ್ಲ ಹೋಲಿಸಿದರೆ, ಎಳನೀರನ್ನು ಸರಿಯಾಗಿ ಕೆತ್ತಿ ಅಥವಾ ಕೊಚ್ಚಿ ಸರಿಯಾದ ರಂಧ್ರ ತೆಗೆದು, ಅದನ್ನು ಕುಡಿಯುವವರಿಗೆ ನೀಡುವುದು ಕೊಂಚ ಸವಾಲಿನ ಕೆಲಸವೇ ಸರಿ. ಅದರಲ್ಲೂ ಒಂದು ಕೈಯ್ಯಲ್ಲಿ ಬೊಂಡ ಇನ್ನೊಂದರಲ್ಲಿ ದಪ್ಪನೆಯ ಕತ್ತಿ ಹಿಡಿದುಕೊಂಡು ಕ್ಷಣಾರ್ಧದಲ್ಲಿ ಹಾಗೆ ಕೆತ್ತಿ ನೀಡುವ ಕೆಲವರ ಪ್ರಾವೀಣ್ಯತೆಯನ್ನು ಗಮನಿಸುತ್ತಿದ್ದರೆ, 'ಅರೇ ಇವರೇನಾದರೂ ಕತ್ತಿ ವರಸೆ ಪಾರಂಗತರೇ?' ಎಂಬ ಅನುಮಾನ ಮೂಡುತ್ತದೆ. ಈಗೀಗ ಇದನ್ನು ಕೆತ್ತಲೂ ಯಂತ್ರಗಳಂಥ ಸಾಧನಗಳೆಲ್ಲ ಮಾರುಕಟ್ಟೆಗೆ ಲಗ್ಗೆ ಇಟ್ಟರೂ ಕೂಡಾ, ಕೈಯ್ಯಲ್ಲಿ ಒಂದೊಂದೇ ಪಾರ್ಶ್ವವನ್ನು ಕೆತ್ತಿ ಒಂದು ಹದಕ್ಕೆ ಬಂದ ಮೇಲೆ, ಕತ್ತಿಯ ಚೂಪಾದ ತುದಿಯಿಂದ ಒಂದು ಲಘುವಾದ ಹೊಡೆತ ನೀಡಿ, ಚಳ್ ಎಂದು (ನೆತ್ತರೇ ಹಾರಿದಂತೆ) ನೀರು ಸಣ್ಣಗೆ ಹೊರಗೆ ಹಾರುವಂತೆ ಮಾಡಿ ರಂಧ್ರವನ್ನು ಸರಿಪಡಿಸಿ, ಕುಡಿಯುವವರ ಕೈಗೆ ನೀಡುವವರೆಗಿನ ಆ ಇಡೀ ಪ್ರಕ್ರಿಯೆಯ ಚೆಂದವೇ ಬೇರೆ ಬಿಡಿ. ತಮ್ಮ ಕೈ ಮೇಲೇ ಹಿಡಿದು ಇಷ್ಟನ್ನೆಲ್ಲಾ ಕರಾರುವಕ್ಕಾಗಿ ಮಾಡಿ ಮುಗಿಸುವ ಅವರ ಧೈರ್ಯವನ್ನು ನಾವು 'ಬೊಂಡ ಧೈರ್ಯ' ಎನ್ನಬಹುದು. ಮತ್ತಿದು ಭಂಡ ಧೈರ್ಯಕ್ಕಿಂತ ಒಂದು ಕೈ ಒಳ್ಳೆಯದೇ ಸರಿ.

ಇನ್ನು ಹೀಗೆ ಈ ಬೊಂಡ ಕತ್ತರಿಸಿ ಕೊಡುವ ಅವರಲ್ಲಿ ಒಂದು ಬಗೆಯ ದಿವ್ಯ ದೃಷ್ಟಿಯೂ ಇದೆಯೇ ಎಂಬ ಅನುಮಾನವೊಂದು ಮೂಡಲೂ ಕಾರಣವಿದೆ. ನೋಡಿ ಒಬ್ಬರು ಬರ್ತಾರೆ ದಪ್ಪ ಕಾಯಿ, ಇನ್ನೊಬ್ಬರು ಗಂಜಿ, ಮತ್ತೊಬ್ಬರು ತೆಳು ಗಂಜಿ, ಮಗದೊಬ್ಬರು ಬರೀ ನೀರು ಎನ್ನುತ್ತಾರೆ. ಹೀಗೆ ಬೇರೆ ಬೇರೆ ಬಗೆಯ ಎಳನೀರನ್ನು ಕಣ್ಣಳತೆಯಲ್ಲೇ ಅಥವಾ ಬೆರಳಿನಿಂದ ಸಿಡಿದು ಪರೀಕ್ಷಿಸಿ ಅವರವರಿಗೆ ತಕ್ಕುದಾದ ಎಳನೀರನ್ನು ಆರಿಸಿ ನೀಡುವ ಚಾಕಚಕ್ಯತೆ ಕಡಿಮೆಯದ್ದೇನಲ್ಲ. ಇವರ ಈ ಪರಿ ಯಾವುದೇ ಸ್ಕ್ಯಾನಿಂಗ್ ಯಂತ್ರವನ್ನೂ ಮೀರಿಸುವಂಥದ್ದು ಅನಿಸುತ್ತದೆ. ಅವತ್ತೊಂದಿನ ಎಳನೀರು ಕುಡಿಯುತ್ತಾ ನಿಂತಿದ್ದೆ. ಅಷ್ಟರಲ್ಲಿ ಒಬ್ಬಾತ ಬಂದು 'ದೋಸೆ' ಅಂದ. ನನಗೋ ಎಳನೀರು ಮಾರುವಲ್ಲಿ ದೋಸೆಯೂ ಸಿಗುತ್ತದೆಯೋ ಎಂಬ ಗೊಂದಲವುಂಟಾಗಿ ಅತ್ತ ತಿರುಗಿದರೆ, ದಪ್ಪ ಕಾಯಿಯುಳ್ಳ ಎಳನೀರನ್ನು ಅಂಗಡಿಯಾತ ಕತ್ತರಿಸಿ ನೀಡುತ್ತಿದ್ದ. ಆದರೂ ಅವರಲ್ಲಿ, "ಅದು ಹೇಗೆ ನೀವು, ಎಲ್ಲರೂ ಬಂದು ಬಗೆ ಬಗೆಯ ಎಳನೀರನ್ನು ಕೇಳುವಾಗ, ಅವರು ಕೇಳಿದ್ದಕ್ಕೆ ಅನುಗುಣವಾಗಿ ಸೂಕ್ತವಾದುದನ್ನೇ, ಹುಡುಕಿ ಹೆಕ್ಕಿ ನೀಡುವಿರಲ್ಲ?" ಎಂದು ಕೇಳಿದರೆ, ಅದಕ್ಕವರು "ಅಯ್ಯೋ ಅದೇನಿಲ್ಲ, ಅವರು ಕೇಳಿದಾಕ್ಷಣ ಸುಮ್ಮನೆ ಬೆರಳಲ್ಲಿ ಮೂರು ನಾಲ್ಕು ಸಲ ಟಿಕ್ ಟಿಕ್ ಸಿಡಿದು ನೋಡಿ, ಬೇರೆ ಬೇರೆ ಎರಡು ಮೂರನ್ನು ಹೆಕ್ಕಿ, ಅತ್ತಿತ್ತ ಸರಿಸಿ ಕೊನೆಗೊಂದು ಎತ್ತಿ ನೀಡಿದರೆ ಆಯ್ತು. ಗಿರಾಕಿ ಸಂತೃಪ್ತರಾಗುತ್ತಾರೆ" ಎಂದೆನ್ನಲೂಬಹುದು.

ಈ ಅಂಶ ಒಂದು ಮಟ್ಟಿಗೆ ನಿಜವೂ ಹೌದು. ಯಾರಾದರೂ ಇಂಥದ್ದೇ ಎಳನೀರು ಬೇಕೆಂದಾಗ ಅವರು ಒಮ್ಮೆಗೇ ನೇರವಾಗಿ ಒಂದನ್ನು ಎತ್ತಿ ನೀಡಿದರೆ, ಅದು ಅವರು ಹೇಳಿದ್ದ ರೀತಿಯದ್ದೇ ಆದರೂ ಗ್ರಾಹಕರಿಗೆ ಅದರಿಂದ ಅಷ್ಟೇನೂ ಖುಷಿಯಾಗದು. ಆತ ಸರಿಯಾಗಿ ಹುಡುಕಿ, ನನಗೆಂದೇ ಆರಿಸಿ ಕೊಡಲಿಲ್ಲ ಎಂಬ ಆಕ್ಷೇಪವೊಂದು ಉಳಿಯುತ್ತದೆ. ಅದೇ ಈ ಮೇಲೆ ಹೇಳಿದಂತೆಲ್ಲ ಮಾಡಿ, ಸ್ವಲ್ಪ ಸಮಯ ತೆಗೆದುಕೊಂಡು ನೀಡಿದಾಗ, ಅದು ಅವರು ಹೇಳಿದ್ದಕ್ಕಿಂತಲೂ ಸ್ವಲ್ಪ ವ್ಯತ್ಯಾಸವಾಗಿದ್ದರೂ ಕೂಡಾ ಅದಕ್ಕವರು



ಕಮಕ್ ಕಿಮಕ್ ಎನ್ನದೇ ಸುಮ್ಮನೇ ಎತ್ತಿ ಕಣ್ಣು ಮುಚ್ಚಿ ಕುಡಿದುಕೊಂಡು ಹೋಗುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಒಂದಂತೂ ನಿಜ, ಈ ಎಳನೀರು ಮಾರಾಟವೂ ಒಂದು ಕಲೆಯೇ ಹೌದು. ಬೇಕಿದ್ದರೆ ಅದನ್ನು ಕೆತ್ತಿ, ಕತ್ತರಿಸಿ, ಕೊಚ್ಚಿಯೋ ನೀಡುವಾಗ ಅದರ ಚೊಗರಿನ ಅಂಶ ಬಟ್ಟೆಗೆ, ಕತ್ತಿಗೆ ಹಾಗೂ ಮೈಕೈಗೆಲ್ಲಾ ಅಂಟಿಕೊಂಡು ಉಂಟಾಗುವ ಕಲೆಯ ಕಾರಣಕ್ಕೂ ನಾವು ಹಾಗೆ ಹೇಳಬಹುದು.

ಆರೋಗ್ಯ ಹದಗೆಟ್ಟಾಗಲೂ ಈ ಎಳನೀರು ಬೇಕು, ತುಂಬಾ ಸುಸ್ತು ಎನಿಸಿದಾಗ, ಆ ಸುಸ್ತನ್ನು ಬೇಸ್ತು ಬೀಳಿಸಲೂ ಸಹ ಇದೇ ಎಳನೀರು ನೆರವಿಗೆ ಬರುತ್ತದೆ. ಇನ್ನು ಮನೆಗೆ ಬಂದ ಅತಿಥಿಗಳು ಎಷ್ಟು ಪ್ರಮುಖರು ಎನ್ನುವುದನ್ನೂ ಕೂಡಾ ಈ ಬೊಂಡ ನೀಡಿ ಸ್ವಾಗತಿಸಿದರೋ ಇಲ್ಲವೋ ಎಂಬ ಆಧಾರದಲ್ಲಿ ನಿರ್ಧರಿಸುವುದಿದೆ. ಮನುಷ್ಯರಷ್ಟೇ ಅಲ್ಲದೆ ದೈವ–ದೇವರೂ ಸಹ ಬೊಂಡ ಪ್ರಿಯರು ಎನ್ನುವುದಕ್ಕೆ, ಸೀಯಾಳ ಸೇವೆ, ಸೀಯಾಳಾಭಿಷೇಕಗಳೇ ಸಾಕ್ಷಿಯಾಗಿವೆ. ಇಷ್ಟೆಲ್ಲಾ ಸಾಲದು ಎಂಬಂತೆ ಬೊಂಡದ ನೀರು, ಗಂಜಿಯನ್ನು ಬಳಸಿ ಜ್ಯೂಸ್‌ನ್ನು ಕೂಡಾ ತಯಾರಿಸಿ ಮಾರಲಾಗುತ್ತದೆ. ಇಷ್ಟೇ ಅಲ್ಲದೇ, ಎಳನೀರನ್ನು ಕಡಿದು ಅದರೊಳಗಿನ ನೀರನ್ನು ಬಾಟಲ್‌ಗಳಲ್ಲಿ ಹಾಕಿ ಸೀಲ್ ಮಾಡಿ ಮಾರುವುದು, ಅದರ ಮೇಲ್ಮೈ ಪದರವನ್ನೆಲ್ಲಾ ಚೆನ್ನಾಗಿ ಕೆತ್ತಿ ಮೇಲೊಂದು ಪ್ಲಾಸ್ಟಿಕ್ ಹೊದಿಕೆ ಹೊದೆಸಿ, ಸ್ಟಿಕ್ಕರ್ ಅಂಟಿಸಿ, ಸೀಲ್ ಮಾಡಿ ಮಾರುವುದಿದೆಯಲ್ಲ ಅದು ನಿಜಕ್ಕೂ ಬೊಂಡದ ಮೇಲಿನ ಶೋಷಣೆಯೇ ಸರಿ! ಏನೇ ಹೇಳಿ, ಮನುಷ್ಯರಿಗೆ ಸುಲಭಕ್ಕೆ ಲಭ್ಯವಾಗುವಂತೆ ಎಲ್ಲೆಡೆಯೂ ಸಿಹಿ ನೀರಿನ ಸೆಲೆಯನ್ನು ಸೃಷ್ಟಿಸಲು ಆಗಲಿಕ್ಕಿಲ್ಲ ಎಂದೇ ಆ ದೇವರು ಈ ಎಳನೀರನ್ನು ಸೃಷ್ಟಿಸಿರಬೇಕು. ಅದು, ಬಿರು ಬೇಸಿಗೆಯಲ್ಲೂ ಆದಷ್ಟೂ ಎಲ್ಲರನ್ನೂ ತಣ್ಣಗಿರಿಸಲಿ.

ಓವರ್‌ಡೋಸ್: ಹೆಚ್ಚಿನ ಆಮರಣಾಂತ ಉಪವಾಸ ಕೊನೆಗೊಳ್ಳುವುದೇ ಎಳನೀರಿನ ಸೇವನೆಯೊಂದಿಗೆ. ಅಂದರೆ ಅದೆಷ್ಟೋ ಜನರ ಪ್ರಾಣ ಉಳಿಸಿದ ಹೆಚ್ಚುಗಾರಿಕೆ ಈ ಎಳನೀರಿನದ್ದು ಎಂದಾಯ್ತು!



ಮಧ್ಯಪ್ರಾಚ್ಯ ಯುದ್ಧದ ತಂತ್ರಗಾರಿಕೆಯಲ್ಲಿ ಅಪಾಯಕಾರಿ ಬದಲಾವಣೆ | ಜೀವಜಲಕ್ಕೂ ಸಂಚಕಾರ

ತೈಲದಷ್ಟೇ ನೀರಿನ ಮೂಲಗಳೂ ಗುರಿ

ಅಪಾಯಕಾರಿ ಯುದ್ಧ ತಂತ್ರಗಳು

ನೀರು ಶುದ್ಧೀಕರಣ ಘಟಕಗಳನ್ನು ಗುರಿಯಾಗಿಸುವುದನ್ನು ತಜ್ಞರು ಅಸಮ್ಮಿತ ಯುದ್ಧ (ಅಸಿಮಿಟ್ರಿಕಲ್) ಎಂದು ಬಣ್ಣಿಸಿದ್ದಾರೆ. ಅಮೆರಿಕ ಅಥವಾ ಇಸ್ರೇಲ್ ಮೇಲೆ ಸಮಾನ ಬಲದೊಂದಿಗೆ ಸಾಂಪ್ರದಾಯಿಕ ದಾಳಿ ನಡೆಸುವ ಸಾಮರ್ಥ್ಯ ಇರಾನ್‌ಗೆ ಇಲ್ಲದಿರುವುದರಿಂದ, ಅದು ತನ್ನ ಕೊಲ್ಲಿ ನೆರೆಹೊರೆಯ ರಾಷ್ಟ್ರಗಳ ಮೇಲೆ ಒತ್ತಡ ಹೇರುತ್ತಿದೆ. ಅವರ ಮೂಲಭೂತ ಜೀವನ ಬೆಂಬಲ ವ್ಯವಸ್ಥೆಗಳಿಗೆ ಬೆದರಿಕೆ ಹಾಕುವ ಮೂಲಕ ಈ ರಾಷ್ಟ್ರಗಳು ಯುದ್ಧ ನಿಲ್ಲಿಸಲು ಮಧ್ಯಸ್ಥಿಕೆ ವಹಿಸುವಂತೆ ಮಾಡುವುದು ಇರಾನ್‌ನ ಗುರಿ ಎನ್ನಲಾಗಿದೆ.

ಪ್ರಾದೇಶಿಕ ದುರ್ಬಲತೆ ಮೇಲೆ ಕಣ್ಣು

ಈ ಘಟಕಗಳ ಕಾರ್ಯತಂತ್ರದ ಗಂಭೀರತೆಯನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ನೈಸರ್ಗಿಕ ಸಿಹಿನೀರಿನ ಕೊರತೆಯಿರುವ ಈ ಪ್ರದೇಶದಲ್ಲಿ, ಕೊಲ್ಲಿ ರಾಷ್ಟ್ರಗಳು ಕುಡಿಯುವ ನೀರಿಗಾಗಿ ಸಂಪೂರ್ಣವಾಗಿ ಸಂಸ್ಕರಿಸಿದ ಸಮುದ್ರದ ನೀರನ್ನು ಅವಲಂಬಿಸಿವೆ. ಕುವೈತ್ ತನ್ನ ಕುಡಿಯುವ ನೀರಿನ ಶೇ.90ರಷ್ಟನ್ನು, ಒಮಾನ್ ಶೇ.86ರಷ್ಟನ್ನು ಮತ್ತು ಸೌದಿ ಅರೇಬಿಯಾ ಶೇ.70ರಷ್ಟನ್ನು ಸಮುದ್ರದ ನೀರಿನ ಈ ಶುದ್ಧೀಕರಣ ಘಟಕಗಳಿಂದಲೇ ಪಡೆಯುತ್ತದೆ. ಜುಬೈಲ್‌ನಂತಹ ಪ್ರಮುಖ ಘಟಕಗಳು ಸ್ಥಗಿತಗೊಂಡರೆ ರಿಯಾದ್‌ನಂತಹ ನಗರಗಳನ್ನು ಕೇವಲ ಒಂದು ವಾರದೊಳಗೆ ಸಂಪೂರ್ಣವಾಗಿ ಖಾಲಿ ಮಾಡಬೇಕಾಗಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ದುಬೈ: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿದ್ದಂತೆ ಯುದ್ಧದ ತಂತ್ರಗಾರಿಕೆಯಲ್ಲಿ ಅಪಾಯಕಾರಿ ಬದಲಾವಣೆ ಕಂಡುಬಂದಿದೆ. ಜಾಗತಿಕ ಗಮನವು ಕಚ್ಚಾ ತೈಲ ಬೆಲೆಗಳ ಮೇಲೆ ಕೇಂದ್ರೀಕೃತವಾಗಿದ್ದರೂ, ಪ್ರಮುಖ ಸಮುದ್ರದ ನೀರು ಶುದ್ಧೀಕರಣ ಘಟಕಗಳನ್ನು ಪ್ರಮುಖ ಗುರಿಗಳೆಂದು ಗುರುತಿಸಲಾಗಿದ್ದು, ಇದು ಲಕ್ಷಾಂತರ ಜನರ ಉಳಿವಿಗೇ ಸಂಚಕಾರ ತಂದಿದೆ.

ಪ್ರಮುಖ ಶುದ್ಧೀಕರಣ ಘಟಕವೊಂದರ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಿಂದ ಭೌತಿಕ ಹಾನಿ ಸಂಭವಿಸಿದೆ ಎಂದು ಬಹ್ರೇನ್ ಭಾನುವಾರ ಅಧಿಕೃತವಾಗಿ ಆರೋಪಿಸಿದೆ. ಇದಕ್ಕೂ ಮುನ್ನ ಕ್ವೆಶ್ಮ್ ದ್ವೀಪದಲ್ಲಿರುವ ತನ್ನ ನೀರು ಶುದ್ಧೀಕರಣ ಘಟಕವನ್ನು ಅಮೆರಿಕದ ವೈಮಾನಿಕ ದಾಳಿ ಧ್ವಂಸಗೊಳಿಸಿದೆ ಎಂದು ಇರಾನ್ ಆರೋಪಿಸಿತ್ತು. ಇದರಿಂದಾಗಿ 30 ಗ್ರಾಮಗಳ ನೀರಿನ ಸಂಪರ್ಕ ಕಡಿತಗೊಂಡಿದೆ ಎಂದು ವರದಿಯಾಗಿದೆ. ನಾಗರಿಕರ ಬದುಕಿಗೆ ಅತ್ಯಗತ್ಯವಾದ ಮೂಲಸೌಕರ್ಯಗಳ ಮೇಲೆ ದಾಳಿ ಮಾಡುವುದನ್ನು ನಿಷೇಧಿಸುವ ಅಂತಾರಾಷ್ಟ್ರೀಯ ಮಾನವೀಯ ಕಾನೂನನ್ನು ಈ ದಾಳಿಗಳು ಉಲ್ಲಂಘಿಸಿವೆ.

ಪರಿಸರ ಮತ್ತು ಮಾನವೀಯ ಅಪಾಯಗಳು: ಇದಲ್ಲದೆ, ಈ ಘಟಕಗಳನ್ನು ನಡೆಸಲು ಅಗತ್ಯವಿರುವ ಇಂಧನ ಪೂರೈಕೆಗೂ ಯುದ್ಧದಿಂದ ವ್ಯತ್ಯಯ ಉಂಟಾಗಿದೆ. ಹೆಚ್ಚಿನ ಘಟಕಗಳು ವಿದ್ಯುತ್ ಕೇಂದ್ರಗಳೊಂದಿಗೆ ಸಂಯೋಜಿತವಾಗಿವೆ. ಆದ್ದರಿಂದ, ವಿದ್ಯುತ್ ಜಾಲಗಳ ಮೇಲೆ ನಡೆಯುವ ಯಾವುದೇ ದಾಳಿ ಏಕಕಾಲದಲ್ಲಿ ನೀರಿನ ಉತ್ಪಾದನೆಯನ್ನೂ ಸ್ಥಗಿತಗೊಳಿಸುತ್ತದೆ. ಅಸುರಕ್ಷಿತ ಕರಾವಳಿ ತೀರಗಳಲ್ಲಿ ನೂರಾರು ಘಟಕಗಳು ಇರುವುದರಿಂದ, ಯುದ್ಧ ವಿಸ್ತರಿಸಿದಂತೆ ಭೀಕರ ಮಾನವೀಯ ಬಿಕ್ಕಟ್ಟು ಸಂಭವಿಸುವ ಸಾಧ್ಯತೆ ದಟ್ಟವಾಗಿದೆ.

ಐದು ವರ್ಷಗಳ ತೀವ್ರ ಬರಗಾಲದ ನಂತರ, ಟೆಹ್ರಾನ್‌ನ ಜಲಾಶಯಗಳಲ್ಲಿನ ನೀರಿನ ಮಟ್ಟ ಅದರ ಸಾಮರ್ಥ್ಯದ ಶೇ.10ಕ್ಕೆ ಕುಸಿದಿರುವುದರಿಂದ ಇರಾನ್ ಅಪಾಯದಲ್ಲಿದೆ ಎಂದು ಸುದ್ದಿ ಸಂಸ್ಥೆಯೊಂದು ತಿಳಿಸಿದೆ. ಇರಾನ್ ಇನ್ನೂ ನದಿಗಳು ಮತ್ತು ಅಂತರ್ಜಲ ಮೂಲಗಳ ಮೇಲೆ ಅವಲಂಬಿತವಾಗಿದೆ. ಯುಎಸ್ ನೇತೃತ್ವದ ಅಂತಾರಾಷ್ಟ್ರೀಯ ನಿರ್ಬಂಧಗಳಿಂದ ಇವುಗಳ ವಿಸ್ತರಣೆಯೂ ಅಸಾಧ್ಯ ಎನಿಸಿದೆ.

ಚೇತರಿಕೆಗೆ ಬೇಕು ದೀರ್ಘಾವಧಿ: 1990-91ರ ಕೊಲ್ಲಿ ಯುದ್ಧದ ಸಮಯದಲ್ಲಿ ಇರಾಕಿ ಪಡೆಗಳು ಕುವೈತ್ ನೀರು ಶುದ್ಧೀಕರಣ ಸೌಲಭ್ಯಗಳನ್ನು ಹಾಳುಗೆಡವಿದ್ದವು. ಲಕ್ಷಾಂತರ ಬ್ಯಾರೆಲ್‌ಗಳಷ್ಟು ತೈಲವನ್ನು ಸಮುದ್ರಕ್ಕೆ ಬಿಡುಗಡೆ ಮಾಡಲಾಗಿತ್ತು. ಇದರಿಂದ ಕುವೈತ್ ಶುದ್ಧ ನೀರಿಲ್ಲದೆ ಪರದಾಡಿತ್ತು, ಇದರಿಂದ ಚೇತರಿಸಿಕೊಳ್ಳಲು ವರ್ಷಗಳೇ ಬೇಕಾಯಿತು.

ಯುಎಇ ಮೇಲೆ 16 ಕ್ಷಿಪಣಿ, 117 ಡ್ರೋನ್ ದಾಳಿ!

ಭಾನುವಾರ 16 ಖಂಡಾಂತರ ಕ್ಷಿಪಣಿಗಳು ಮತ್ತು 117 ಡ್ರೋನ್‌ಗಳಿಂದ ಇರಾನ್ ಹೊಸ ದಾಳಿ ನಡೆಸಿದೆಯೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಕ್ಷಣಾ ಸಚಿವಾಲಯ ಹೇಳಿದೆ. ಇರಾನ್ ಕಳುಹಿಸಿದ 16 ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸಿದ್ದು, 17ನೇ ಕ್ಷಿಪಣಿ ಗುರಿ ತಪ್ಪಿ ಸಮುದ್ರಕ್ಕೆ ಬಿದ್ದಿದೆ. ಬಹುತೇಕ ಎಲ್ಲಾ ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಆದರೆ 4 ಡ್ರೋನ್‌ಗಳು ಮಾತ್ರ ಯುಎಇ ಗಡಿಯೊಳಗೆ ಬಂದು ಬಿದ್ದಿವೆಯೆಂದು ಸಚಿವಾಲಯ ತಿಳಿಸಿದೆ. ಯುಎಇ ಮೇಲಿನ ಯಾವುದೇ ಆಕ್ರಮಣವನ್ನು ದೃಢವಾಗಿ ಎದುರಿಸಲು ಸಿದ್ಧರಿದ್ದೇವೆ ಎಂದು ಯುಎಇ ಸ್ಪಷ್ಟ ಸಂದೇಶವನ್ನು ನೀಡಿದೆ. ಆದರೆ ಭಾನುವಾರ ಎಲ್ಲೆಲ್ಲಾ ದಾಳಿ ನಡೆದಿವೆಯೆಂದು ಯುಎಇ ಮಾಹಿತಿ ನೀಡಿಲ್ಲ. ಮಧ್ಯ ಪ್ರಾಚ್ಯದೆಲ್ಲೆಡೆ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸುವುದಾಗಿ ಭಾನುವಾರ ಬೆಳಗ್ಗೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಯುಎಇ ಸೇರಿ ನೆರೆಯ ರಾಷ್ಟ್ರಗಳಿಗೆ ಬೆದರಿಕೆಯೊಡ್ಡಿದ್ದರು. ಆದರೆ ಇರಾನ್ ನಡೆಸಿದ ದಾಳಿಯನ್ನು ಯುಎಇ ಸಮರ್ಥವಾಗಿ ಎದುರಿಸಿದೆ.



200 ಹೆಜ್ಬೊಲ್ಲಾ ಉಗ್ರರ ಬಲಿ

ಮಾ.2ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಬಳಿಕ ಇಲ್ಲಿಯವರೆಗೆ 200 ಹೆಜ್ಬೊಲ್ಲಾ ಉಗ್ರರನ್ನು ಹೊಡೆದುರುಳಿಸಿದ್ದೇವೆ ಎಂದು ಇಸ್ರೇಲ್ ಸೇನೆ (ಐಡಿಎಫ್) ಭಾನುವಾರ ಘೋಷಿಸಿದೆ. ಲೆಬನಾನ್ ಉಗ್ರ ಸಂಘಟನೆ ವಿರುದ್ಧದ ಹೋರಾಟದಲ್ಲಿ ಶನಿವಾರ ರಾತ್ರಿಯವರೆಗೆ 14 ಮಂದಿ ಇಸ್ರೇಲಿ ಯೋಧರು ಗಾಯಗೊಂಡಿದ್ದಾರೆ ಎಂದು ಐಡಿಎಫ್ ತಿಳಿಸಿದೆ. ಶುಕ್ರವಾರ ಹೆಜ್ಬೊಲ್ಲಾ ಟ್ಯಾಂಕ್ ವಿರೋಧಿ ಕ್ಷಿಪಣಿಯ ಮೂಲಕ ದಾಳಿ ನಡೆಸಿದ್ದಾಗ ಇಬ್ಬರು ಇಸ್ರೇಲಿ ಯೋಧರು ಗಾಯಗೊಂಡಿದ್ದರು. ಇಸ್ರೇಲಿ ದಾಳಿ ಹಿನ್ನೆಲೆ ದಕ್ಷಿಣ ಲೆಬನಾನ್‌ನಲ್ಲಿ ವಾಸವಿದ್ದ 5 ಲಕ್ಷ ಬೆಂಬಲಿಗರನ್ನು ಹೆಜ್ಬೊಲ್ಲಾ ಸುರಕ್ಷಿತ ಸ್ಥಳಾಂತರ ಮಾಡಿದೆ. ಕಳೆದೊಂದು ವಾರದಲ್ಲಿ ಹೆಜ್ಬೊಲ್ಲಾ ವಿರುದ್ಧ 500 ದಾಳಿಗಳನ್ನು ಮಾಡಿದ್ದಾಗಿ ಐಡಿಎಫ್ ಹೇಳಿದೆ.



ಐದು ಇರಾನ್ ತೈಲ ಘಟಕಗಳ ಮೇಲೆ ದಾಳಿ

ಯುದ್ಧ ಆರಂಭವಾದಲ್ಲಿಂದ ಇಲ್ಲಿಯವರೆಗೆ ಇದೇ ಮೊದಲ ಬಾರಿಗೆ ಇರಾನ್ ತೈಲ ಸಂಸ್ಕರಣಾ ಘಟಕಗಳ ಮೇಲೆ ಇಸ್ರೇಲ್ ಭಾನುವಾರ ಭಾರೀ ದಾಳಿ ನಡೆಸಿದ್ದು, ಕನಿಷ್ಠ 4 ಮಂದಿ ಬಲಿಯಾಗಿದ್ದಾರೆ. ಇರಾನ್‌ನ ಐದು ತೈಲ ಶೇಖರಣಾ ಮತ್ತು ಉತ್ಪಾದನಾ ಘಟಕಗಳ ಮೇಲೆ ಇಸ್ರೇಲ್ ಶನಿವಾರ ತಡರಾತ್ರಿ ಭಾರೀ ದಾಳಿ ನಡೆಸಿದೆ. ಟೆಹ್ರಾನ್ ಮತ್ತು ಅಲ್ಬೊರ್ಜ್ ಎಂಬಲ್ಲಿನ ತೈಲ ಘಟಕಗಳ ಮೇಲೆ ದೊಡ್ಡ ಪ್ರಮಾಣದ ದಾಳಿ ನಡೆದಿದ್ದು, 4 ಮಂದಿ ಟ್ಯಾಂಕರ್ ಚಾಲಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಳೆದ ಜೂನ್‌ನಲ್ಲಿ 12 ದಿನಗಳ ಕಾಲ ಯುದ್ಧ ನಡೆದಿದ್ದಾಗ ಇರಾನ್ ತೈಲ ಘಟಕಗಳನ್ನು ಇಸ್ರೇಲ್ ಗುರಿಯಾಗಿಸಿತ್ತು.

ಎಫ್-14 ಯುದ್ಧ ವಿಮಾನ ಹೊಡೆದುರುಳಿಸಿದೆ ಇಸ್ರೇಲ್

ದಕ್ಷಿಣ ಟೆಹ್ರಾನ್‌ನ ಇಸ್ಫಹಾನ್ ವಿಮಾನ ನಿಲ್ದಾಣದಲ್ಲಿ ನಿಲುಗಡೆಗೊಳಿಸಿದ್ದ ಅಮೆರಿಕ ನಿರ್ಮಿತ ಎಫ್-14 ಯುದ್ಧ ವಿಮಾನಗಳನ್ನು ನಾಶ ಮಾಡಿದ್ದಾಗಿ ಇಸ್ರೇಲ್ ಹೇಳಿದೆ. 1979ರ ಇಸ್ಲಾಮಿಕ್ ಕ್ರಾಂತಿಗೂ ಮುನ್ನ ಎಫ್-14 ಯುದ್ಧ ವಿಮಾನಗಳನ್ನು ಇರಾನ್ ಅಮೆರಿಕದಿಂದ ಖರೀದಿಸಿತ್ತು. ಇವು ಇರಾನ್ ವಾಯು ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು.

ರಷ್ಯಾ ವಿಮಾನದಲ್ಲಿ 117 ಇರಾನಿಯನ್ನರ ಸ್ಥಳಾಂತರ

ಇಸ್ರೇಲ್ ದಾಳಿ ನಡುವೆ ಲೆಬನಾನ್‌ನ ಬೈರತ್‌ನಲ್ಲಿ ಸಿಲುಕಿದ್ದ ಒಟ್ಟು 117 ಇರಾನಿಯನ್ನರನ್ನು ರಷ್ಯಾ ವಿಮಾನವನ್ನು ಬಳಸಿ ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ ಎಂದು ಲೆಬನಾನಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವೆಸ್ಟ್ ಬ್ಯಾಂಕ್‌ನಲ್ಲಿ 3 ಪ್ಯಾಲೆಸ್ತೀನಿಯರ ಸಾವು

ವೆಸ್ಟ್ ಬ್ಯಾಂಕ್‌ನಲ್ಲಿ ಶನಿವಾರ ತಡರಾತ್ರಿ ಇಸ್ರೇಲಿ ನಾಗರಿಕರು ಮೂವರು ಪ್ಯಾಲೆಸ್ತೀನಿಯರ ಹತ್ಯೆಗೈದ ಘಟನೆ ಸಂಭವಿಸಿದ್ದು, ಭಾನುವಾರ ಐಡಿಎಫ್ ಕಾರ್ಯಾಚರಣೆ ನಡೆಸಿದೆ.

ಲೆಬನಾನ್‌ನಲ್ಲಿ 12 ಸಾವು

ಭಾನುವಾರ ಬೆಳಗ್ಗೆ ದಕ್ಷಿಣ ಲೆಬನಾನ್ ಮತ್ತು ಬೈರತ್ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಕನಿಷ್ಠ 12 ಮಂದಿ ಬಲಿಯಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ.

ಕಿರುಸುದ್ದಿ

ಮಾ.19ಕ್ಕೆ ಶ್ರೀರಾಮ ಮಂದಿರಕ್ಕೆ ರಾಷ್ಟ್ರಪತಿ

ಅಯೋಧ್ಯೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಮಾ.19ರಂದು ಅಯೋಧ್ಯೆ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಲಿದ್ದಾರೆ ಎಂದು ಶ್ರೀರಾಮ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಭಾನುವಾರ ಹೇಳಿದ್ದಾರೆ. ಶ್ರೀರಾಮ ಜನ್ಮಭೂಮಿ ಸಂಕೀರ್ಣದಲ್ಲಿ ಸುಮಾರು 3 ತಾಸುಗಳ ಕಾಲ ರಾಷ್ಟ್ರಪತಿ ಮುರ್ಮು ಇರಲಿದ್ದಾರೆ. ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕೊಡುಗೆ ನೀಡಿದ ಕಾರ್ಮಿಕರು, ಉದ್ಯೋಗಿಗಳನ್ನು ಸಮ್ಮಾನಿಸುವರು ಎಂದು ಮಿಶ್ರಾ ಮಾಹಿತಿ ನೀಡಿದ್ದಾರೆ. ಸುಮಾರು 5ವರ್ಷಗಳಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ಮುಗಿದಿದೆ. ಮಂದಿರ ನಿರ್ಮಾಣದ ಸಂಪೂರ್ಣ ಯಾನವನ್ನು ಪ್ರತಿಫಲಿಸುವ ಗ್ಯಾಲರಿಯನ್ನು ಮಂದಿರ ಸಂಕೀರ್ಣದಲ್ಲಿ ನಿರ್ಮಿಸಲಾಗುತ್ತಿದೆ. ದೇವಾಲಯದ ಭದ್ರತೆ ದೃಷ್ಟಿಯಿಂದ 4ಕಿಮೀ ಉದ್ದದ ಆವರಣಗೋಡೆಯನ್ನು ಇಂಜಿನಿಯರ್ಸ್ ಇಂಡಿಯಾ ನಿರ್ಮಿಸುತ್ತಿದೆ ಎಂದು ಮಿಶ್ರಾ ತಿಳಿಸಿದ್ದಾರೆ.

ಜೆಡಿಯು ಸೇರಿದ ಸಿಎಂ ನಿತೀಶ್ ಪುತ್ರ ನಿಶಾಂತ್

ಪಾಟ್ನಾ: ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಭಾನುವಾರ ಜೆಡಿಯು ಸೇರಿದ್ದು, ಪಕ್ಷ ಸಂಘಟನೆ ಬಲಪಡಿಸಲು ದುಡಿಯುವುದಾಗಿ ಘೋಷಿಸಿದ್ದಾರೆ. ಪಕ್ಷದ ಪ್ರಧಾನ ಕಚೇರಿಯಲ್ಲಿ ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ ಲಾಲನ್ ಮತ್ತು ಜೆಡಿಯುನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಸಂಜಯ್ ಝಾ ಉಪಸ್ಥಿತಿಯಲ್ಲಿ, ಇಂಜಿನಿಯರಿಂಗ್ ಪದವೀಧರ 40 ವರ್ಷದ ನಿಶಾಂತ್‌ರನ್ನು ಪಕ್ಷಕ್ಕೆ ಸೇರ್ಪಡೆ ಮಾಡಲಾಯಿತು. ನನ್ನ ತಂದೆ ರಾಜ್ಯಸಭೆಗೆ ತೆರಳಲು ತೀರ್ಮಾನಿಸಿದ್ದಾರೆ ಮತ್ತು ಇದು ಇವರ ವೈಯ್ಯಕ್ತಿಕ ನಿರ್ಧಾರ. ನಾವೆಲ್ಲರು ಅವರ ನಿರ್ಧಾರವನ್ನು ಗೌರವಿಸುತ್ತೇವೆ. ಅವರ ಮಾರ್ಗದರ್ಶನದಲ್ಲೇ ಕೆಲಸ ಮಾಡುತ್ತೇವೆ. ತಾನು ಪಕ್ಷ ಸಂಘಟನೆ ಬಲಪಡಿಸಲು ದುಡಿಯುತ್ತೇನೆಂದು ಹೇಳಿದ ನಿಶಾಂತ್, ಸುದೀರ್ಘ ಕಾಲ ಬಿಹಾರದ ಮುಖ್ಯಮಂತ್ರಿಯಾಗಿರುವ ತಂದೆ ಕಳೆದ 20ವರ್ಷಗಳಲ್ಲಿ ರಾಜ್ಯದ ಅಭಿವೃದ್ಧಿಗೆ ತುಂಬು ಕೊಡುಗೆ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಕೊಡುಗೆಯನ್ನು ರಾಜ್ಯದ ಜನತೆ ಎಂದಿಗೂ ಮರೆಯರು ಎಂದು ಹೇಳಿದರು.

ಪ್ರತಿಯೋರ್ವರಿಗೂ ನನ್ನ ಕೃತಜ್ಞತೆಗಳು. ನೀವೆಲ್ಲರು ನನ್ನ ಮೇಲಿಟ್ಟಿರುವ ನಂಬುಗೆಯನ್ನು ನಾನು ಗೌರವಿಸುತ್ತೇನೆ. ನನ್ನ ತಂದೆ ಕಳೆದ 20ವರ್ಷಗಳಲ್ಲಿ ಮಾಡಿರುವ ಸಾಧನೆ ಬಗ್ಗೆ ರಾಷ್ಟ್ರ, ನಮ್ಮ ರಾಜ್ಯ ಹಾಗೂ ತಾನು ಕೂಡ ಹೆಮ್ಮೆಪಡುತ್ತೇನೆ. ಮುಖ್ಯಮಂತ್ರಿಗಳು ಗೈದ ಅಭಿವೃದ್ಧಿ ಕಾರ್ಯಗಳನ್ನು ತಾನು ಜನಮಾನಸಕ್ಕೆ ತಲುಪಿಸುವುದಾಗಿ ನಿಶಾಂತ್ ಹೇಳಿದರು.

ಪ.ಬಂಗಾಳ ಮುಖ್ಯಮಂತ್ರಿ, ಮಮತಾಗೆ ಪ್ರಧಾನಿ ಮೋದಿ ತರಾಟೆ

ಪ್ರಜಾಪ್ರಭುತ್ವ ಪರಂಪರೆಗೆ ಅಪಮಾನ

ಹೊಸದಿಲ್ಲಿ: ಪ.ಬಂಗಾಳದ ಸಂಥಾಲ್ ಸಮುದಾಯದ ಅತ್ಯಂತ ಪುಣ್ಯಪ್ರದ ಹಾಗೂ ಮಹತ್ವಪೂರ್ಣ ಕಾರ್ಯಕ್ರಮವನ್ನು ಮಮತಾ ಬ್ಯಾನರ್ಜಿ ಹಾಗೂ ಆಕೆಯ ಪಕ್ಷ ಬಹಿಷ್ಕರಿಸಿದ್ದು ವಿಹಿತವಲ್ಲ. ಕಾರ್ಯಕ್ರಮದ ಅಸಮರ್ಪಕ ನಿರ್ವಹಣೆ ಮುಖೇನ ರಾಷ್ಟ್ರಪತಿ ಮತ್ತು ಪ್ರಜಾಪ್ರಭುತ್ವ ಪರಂಪರೆಯನ್ನು ಅಪಮಾನಿಸಲಾಗಿದೆ ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಟಿಎಂಸಿಯ ಅಧಿಕಾರದ ದುರಹಂಕಾರ ಶೀಘ್ರವೇ ನೆಲಸಮವಾಗಲಿದೆ ಎಂದು ತೀಕ್ಷ್ಣ ಎಚ್ಚರಿಕೆ ನೀಡಿದ್ದಾರೆ.

ಸಂಥಾಲ್ ಸಮುದಾಯದ ಕಾರ್ಯಕ್ರಮಕ್ಕೆ ಸಂಬಂಧಿಸಿ ಆಗಿರುವ ನ್ಯೂನತೆಗಳ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ತುಂಬು ಬೇಸರ ವ್ಯಕ್ತಪಡಿಸಿರುವ ಬೆನ್ನಲ್ಲೇ, ಪ್ರಧಾನಿ ಮೋದಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ತೀವ್ರವಾಗಿ ತರಾಟೆಗೆತ್ತಿಕೊಂಡಿದ್ದಾರೆ. ಕಾರ್ಯಕ್ರಮವನ್ನು ಸೂಕ್ತ ರೀತಿ ಆಯೋಜಿಸುವಲ್ಲಿ ಪ.ಬಂಗಾಳ ಸರಕಾರ ಪೂರ್ಣ ವಿಫಲವಾಗಿದೆ. ಅಂತಹ ಪವಿತ್ರ ಕಾರ್ಯಕ್ರಮದಿಂದ ಟಿಎಂಸಿ ದೂರ ಉಳಿದದ್ದು ಸರಿಯಲ್ಲ ಎಂದು ಪ್ರಧಾನಿ ಮೋದಿ ಟೀಕಿಸಿದ್ದಾರೆ.

ವ್ಯಕ್ತಿ ಎಷ್ಟೇ ಶಕ್ತಿಶಾಲಿಯಾಗಿದ್ದರೂ ತಾನೆಂಬ ಅಹಂಕಾರದಿಂದ ನಾಶವಾಗುತ್ತಾನೆ. ತಾನೀಗ ರಾಷ್ಟ್ರದ ರಾಜಧಾನಿಯಿಂದ ನಿಮ್ಮೆಲ್ಲರಿಗೂ ಹೇಳುವುದೇನೆಂದರೆ, ಬುಡಕಟ್ಟು ಸಮುದಾಯಕ್ಕೆ ಸೇರಿದ ರಾಷ್ಟ್ರಪತಿಗಳ ಘನತೆಗೆ ಅಪಮಾನ ಮಾಡಿದ ಟಿಎಂಸಿಯ ಕೊಳಕು ರಾಜನೀತಿ ಮತ್ತು ಅಧಿಕಾರದ ಮದವು ಶೀಘ್ರವೇ ಛಿದ್ರಛಿದ್ರವಾಗಲಿದೆ ಎಂದು ಮೋದಿ ಹೇಳಿದರು.



ಟಿಎಂಸಿಯನ್ನು ಜನತೆ ಖಂಡಿತ ಕ್ಷಮಿಸುವುದಿಲ್ಲ

ಓರ್ವ ಮಹಿಳೆ, ಬುಡಕಟ್ಟು ಸಮುದಾಯದ ಪ್ರತಿನಿಧಿ, ರಾಷ್ಟ್ರದ ರಾಷ್ಟ್ರಪತಿಯನ್ನು ಅವಮಾನಿಸಿದ ಟಿಎಂಸಿಯನ್ನು ಪ.ಬಂಗಾಳದ ಪ್ರಜ್ಞಾವಂತ ಜನತೆ ಖಂಡಿತ ಕ್ಷಮಿಸುವುದಿಲ್ಲ. ದೇಶ ಎಂದಿಗೂ ಇವರನ್ನು ಕ್ಷಮಿಸುವುದಿಲ್ಲ. ದೇಶದ ಬುಡಕಟ್ಟು ಸಮುದಾಯ ಕೂಡ ಕ್ಷಮಿಸರು ಎಂದು ಮೋದಿ ಕಿಡಿ ಕಾರಿದ್ದಾರೆ.

ಕಾಶ್ಮೀರ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಳ

ಜಮ್ಮು: ಜಮ್ಮು ಮತ್ತು ಕಾಶ್ಮೀರವಿಂದು ನಿರ್ಣಾಯಕ ಘಟ್ಟದಲ್ಲಿದೆ. ಕಳೆದೈದಾರು ವರ್ಷಗಳಿಂದ ಪರಿವರ್ತನಾತ್ಮಕ ಮಾರ್ಪಾಡುಗಳಿಗೆ ಕೇಂದ್ರಾಡಳಿತ ಪ್ರದೇಶ ಸಾಕ್ಷಿಯಾಗಿದೆ. ಪರಿಣಾಮ ಆಡಳಿತ ವ್ಯವಸ್ಥೆ ಹೆಚ್ಚು ಪಾರದರ್ಶಿಯಾಗಿದೆ ಮತ್ತು ದೃಢ ಸಂಕಲ್ಪದೊಂದಿಗೆ ಜನಸೇವೆಯತ್ತ ಹೊರಳಿದೆ ಎಂದು ಲೆ.ಗವರ್ನರ್ ಮನೋಜ್ ಸಿನ್ಹಾ ಹೇಳಿದ್ದಾರೆ. ಜಮ್ಮುವಿನ ಸಿಧ್ರಾದಲ್ಲಿ ಭ್ರಷ್ಟಾಚಾರ ನಿಗ್ರಹ ಮಂಡಳಿಯ(ಎಸಿಬಿ) ಪ್ರಧಾನ ಕಚೇರಿ ಸಂಕೀರ್ಣ ಹಾಗೂ ಅವಂತಿಪೋರದಲ್ಲಿ ಎಸಿಬಿಯ ಎಪಿಕೆಎಸ್ ಶಾಖೆ ಉದ್ಘಾಟಿಸಿದ ಬಳಿಕ ನೆರೆದ ಜನಸ್ತೋಮ ಉದ್ದೇಶಿಸಿ ಸಿನ್ಹಾ ಮಾತನಾಡಿದರು. ಇವೆರಡು ಸಂಕೀರ್ಣಗಳು ಬರೇ ಉಕ್ಕು, ಗಾಜು ಮತ್ತು ಕಾಂಕ್ರೀಟ್‌ನಿಂದ ನಿರ್ಮಿತ ಕಟ್ಟಡಗಳಷ್ಟೇ ಅಲ್ಲ, ಸಾರ್ವಜನಿಕ ಬದುಕಲ್ಲಿ ಪಾರದರ್ಶಿತ್ವ ಮತ್ತು ಭ್ರಷ್ಟಾಚಾರ ಮುಕ್ತ ಕೇಂದ್ರಾಡಳಿತ ಪ್ರದೇಶದ ಸಾಕಾರ ತಮ್ಮ ಧ್ಯೇಯವೆಂದು ಘಂಟಾಘೋಷ ಸಾರುತ್ತಿವೆ ಎಂದವರು ಬಣ್ಣಿಸಿದರು. ಇಂದಿನ ಆಡಳಿತ ವ್ಯವಸ್ಥೆ ಆಯ್ದ ಕೆಲವರ ಪ್ರಯೋಜನಕ್ಕಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಬದಲಾಗಿ ಕೇಂದ್ರಾಡಳಿತ ಪ್ರದೇಶಾದ್ಯಂತದ ಪ್ರತಿಯೋರ್ವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ. ಜಮ್ಮು ಕಾಶ್ಮೀರ ಸಾಮಾನ್ಯ ಪ್ರದೇಶವಾಗುಳಿಯಲ್ಲ, ಇದೀಗ ಧೈರ್ಯವಾಗಿ ಬೃಹತ್ ಕನಸು ಕಾಣುತ್ತಿದೆ. ಮುಂದೆ ಸ್ವರ್ಣ ಭವಿಷ್ಯ ನಮಗಿದೆ ಎಂಬ ವಿಶ್ವಾಸ ನಮ್ಮ ಜನರಲ್ಲಿ ಮೂಡಿದೆ. ಈ ಕನಸಿನ ಸಾಕಾರದ ಹೊಣೆ ಭ್ರಷ್ಟಾಚಾರ ನಿಗ್ರಹ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳದ್ದು ಎಂದು ಸಿನ್ಹಾ ಹೇಳಿದರು.



ಹೋಳಿ ಸಂಭ್ರಮಕ್ಕೆ ಸಮಸ್ಯೆ: ಆರೋಪಿ ನಿವಾಸ ನೆಲಸಮ

ಹೊಸದಿಲ್ಲಿ: ದಿಲ್ಲಿಯ ಉತ್ತಮನಗರದಲ್ಲಿ ಹೋಳಿ ಸಂದರ್ಭದ ಹೊಡೆದಾಟದಲ್ಲಿ 26ವರ್ಷದ ಯುವಕನೋರ್ವ ಹತ್ಯೆಯಾದ ಪ್ರಕರಣದ ಆರೋಪಿಯೋರ್ವನಿಗೆ ಸೇರಿದ್ದೆನ್ನಲಾದ ಮನೆಯ ಅಕ್ರಮ ಭಾಗವನ್ನು ಅಧಿಕಾರಿಗಳು ಭಾನುವಾರ ಬುಲ್ಡೋಜರ್ ಬಳಸಿ ಕೆಡವಿದ್ದಾರೆ. ಯುವಕನ ಹತ್ಯೆ ಬಗ್ಗೆ ಸಿಬಿಐ ತನಿಖೆ ನಡೆಯಬೇಕು ಮತ್ತು ಹತ್ಯೆಯಲ್ಲಿ ಶಾಮೀಲಾದ ಎಲ್ಲರ ವಿರುದ್ಧ ಕಠಿಣ ಕ್ರಮಕ್ಕೆ ಹತ್ಯೆಯಾದ ಯುವಕನ ಸಂತ್ರಸ್ತ ಕುಟುಂಬ ಆಗ್ರಹಿಸಿದೆ.ಭಾನುವಾರ ಜೆಜೆ ಕಾಲನಿಗೆ ತೆರಳಿದ ಅಧಿಕಾರಿಗಳ ತಂಡ, ಆರೋಪಿ ಉಮರ್‌ದೀನ್‌ನ ತಂದೆ ನಿಜಾಮುದ್ದೀನ್‌ಗೆ ಸೇರಿದ ಮನೆಯ ನಿರ್ದಿಷ್ಟ ಭಾಗಗಳನ್ನು ಬುಲ್ಡೋಜರ್‌ಗಳ ನೆರವಿನಿಂದ ಕೆಡವಿ ಹಾಕಿತು. ಮಾ.4ರಿಂದ ಉದ್ವಿಗ್ನ ಸ್ಥಿತಿಯಲ್ಲಿರುವ ಪ್ರದೇಶದಲ್ಲಿ ಪೊಲೀಸರು ಹಾಗೂ ಛಾಯಾ ಮಿಲಿಟರಿ ಪಡೆಯ ಕಾವಲು ಹಾಕಲಾಗಿದೆ. ದಿಲ್ಲಿಯಲ್ಲಿ ಈ ತೆರ ಆರೋಪಿಗಳ ಕಟ್ಟಡ ನಾಶ ಕ್ರಮ ಈಚಿನ ವರ್ಷಗಳಲ್ಲಿ ಇದೇ ಮೊದಲೆನ್ನಲಾಗಿದೆ.

ಕೇಂದ್ರ ಬಜೆಟ್ ಅಧಿವೇಶನ ಎರಡನೇ ಭಾಗ ಇಂದು ಆರಂಭ

ಕುತೂಹಲ ಕೆರಳಿಸಿದ ಸ್ಪೀಕರ್ ಪದಚ್ಯುತಿ!

ಹೊಸದಿಲ್ಲಿ: ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗ ಇಂದಿನಿಂದ(ಸೋಮವಾರ) ಆರಂಭವಾಗಲಿದ್ದು, ಭಾರೀ ಗದ್ದಲ ನಡೆಯುವ ಸಾಧ್ಯತೆ ಇದೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಪದಚ್ಯುತಿ ಕೋರುವ ನಿರ್ಣಯವನ್ನು ಸದನದ ಮೊದಲ ಕಾರ್ಯಸೂಚಿಯಾಗಿ ಪಟ್ಟಿ ಮಾಡಲಾಗಿದೆ.

ಇತ್ತೀಚಿನ ಕಲಾಪಗಳ ವೇಳೆ ಸ್ಪೀಕರ್ ಪಕ್ಷಪಾತದಿಂದ ವರ್ತಿಸಿದ್ದಾರೆ ಮತ್ತು ಸದನದಲ್ಲಿ ಕಾಂಗ್ರೆಸ್ ಸದಸ್ಯರ ವಿರುದ್ಧ ಸ್ಪೀಕರ್ ನೀಡಿದ ಕೆಲವು ಹೇಳಿಕೆಗಳು ಹಾದಿ ತಪ್ಪಿಸುವಂತಿವೆ ಎಂದು ಆರೋಪಿಸಿ ವಿರೋಧ ಪಕ್ಷದ ನಾಯಕರು ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಸಲ್ಲಿಸಿದ್ದಾರೆ. ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸದನಕ್ಕೆ ಹಾಜರಾಗದಂತೆ ಬಿರ್ಲಾ ಸೂಚಿಸಿದ್ದರು ಎಂಬ ಆರೋಪವನ್ನೂ ಮಾಡಲಾಗಿದೆ.

ನೋಟಿಸ್ ಸಲ್ಲಿಕೆಯಾದ ದಿನದಿಂದ ಬಿರ್ಲಾ ಸದನದ ಅಧ್ಯಕ್ಷತೆಯಿಂದ ಹಿಂದೆ ಸರಿದಿದ್ದು, ವಿಷಯ ಇತ್ಯರ್ಥವಾದ ನಂತರವಷ್ಟೇ ಮರಳುವ ನಿರೀಕ್ಷೆಯಿದೆ. ಶನಿವಾರವಷ್ಟೇ ಪ್ರಧಾನಿ ಮೋದಿ ಅವರು ಸ್ಪೀಕರ್ ಪರವಾಗಿ ಮಾತನಾಡಿದ್ದು, ಬಿರ್ಲಾ ಅವರು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ ಮತ್ತು ಎಲ್ಲಾ ಸಂಸದರನ್ನು ಒಟ್ಟಾಗಿ ಕೊಂಡೊಯ್ದಿದ್ದಾರೆ ಎಂದು ತಿಳಿಸಿದ್ದರು.



ಮಧ್ಯಪ್ರಾಚ್ಯ ಸಂಘರ್ಷ ಪ್ರತಿಧ್ವನಿ ಸಾಧ್ಯತೆ: ಪಶ್ಚಿಮ ಏಷ್ಯಾದಲ್ಲಿ ತೀವ್ರಗೊಳ್ಳುತ್ತಿರುವ ಸಂಘರ್ಷ, ವಿಶೇಷವಾಗಿ ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ದಾಳಿ ಮತ್ತು ಜಾಗತಿಕ ಕಚ್ಚಾ ತೈಲ ಪೂರೈಕೆ ಹಾಗೂ ಬೆಲೆಗಳ ಮೇಲೆ ಅದರ ಪರಿಣಾಮದ ಬಗ್ಗೆ ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸುವ ನಿರೀಕ್ಷೆಯಿದೆ. ರಷ್ಯಾದ ತೈಲವನ್ನು ಖರೀದಿಸುವುದನ್ನು ಮುಂದುವರಿಸಲು ಅಮೆರಿಕ ನೀಡಿರುವ ವಿನಾಯಿತಿಯ ಬಗ್ಗೆಯೂ ಪ್ರಶ್ನೆಗಳು ಏಳಬಹುದು.

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಳಿಕ ಸುಮಾರು 60 ಲಕ್ಷ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ವರದಿಯಾಗಿದೆ. ಈ ವಿಷಯವೂ ಕೋಲಾಹಲಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಕಾಂಗ್ರೆಸ್‌ನಿಂದ ವಿಪ್ ಜಾರಿ: ಲೋಕಸಭೆಯ ಕಾರ್ಯಸೂಚಿಯ ಪ್ರಕಾರ, ಸೋಮವಾರಕ್ಕೆ ಸ್ಪೀಕರ್ ವಿರುದ್ಧದ ನಿರ್ಣಯವೊಂದೇ ಪಟ್ಟಿಯಾಗಿರುವ ಏಕೈಕ ವಿಚಾರವಾಗಿದೆ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷವಾದ ಕಾಂಗ್ರೆಸ್ ಎರಡೂ ತಮ್ಮ ಸಂಸದರಿಗೆ ಸದನಕ್ಕೆ ಹಾಜರಾಗುವಂತೆ ವಿಪ್ ಜಾರಿಗೊಳಿಸಿವೆ. ಸರ್ಕಾರ ತನ್ನ ಸಂಖ್ಯಾಬಲದ ಆಧಾರದ ಮೇಲೆ ಈ ನಿರ್ಣಯವನ್ನು ಸುಲಭವಾಗಿ ಸೋಲಿಸುವ ನಿರೀಕ್ಷೆಯಿದೆ.

165 ಸ್ಥಾನಗಳಲ್ಲಿ 120 ಸ್ಥಾನ ಗೆದ್ದ ರಾಷ್ಟ್ರೀಯ ಸ್ವತಂತ್ರ ಪಕ್ಷ

ನೇಪಾಳ ಮುಂದಿನ ಪ್ರಧಾನಿ ಬಾಲೇನ್?

ಕಠ್ಮಂಡು: ಯುವ ರ್‍ಯಾಪರ್‌ನಿಂದ ರಾಜಕಾರಣಿಯಾದ ಬಾಲೇಂದ್ರ ಶಾ ಬಾಲೇನ್ ಅವರ ರಾಷ್ಟ್ರಿಯ ಸ್ವತಂತ್ರ ಪಕ್ಷ(ಆರ್‌ಎಸ್‌ಪಿ) ಸಾಮಾನ್ಯ ಚುನಾವಣೆಯಲ್ಲಿ ಐತಿಹಾಸಿಕ ಜಯದತ್ತ ಸಾಗುತ್ತಿದೆ. ಹಳೆಯ ಪರಂಪರಾಗತ ರಾಜಕೀಯ ಪಕ್ಷಗಳು ಸಾರ್ವತ್ರಿಕ ಚುನಾವಣೆಯಲ್ಲಿ ಭಾರೀ ಸೋಲು ಕಂಡಿವೆ. 2022ರಲ್ಲಿ ಸ್ಥಾಪಿಸಲ್ಪಟ್ಟ ಆರ್‌ಎಸ್‌ಪಿ ಸಾರ್ವತ್ರಿಕ ಚುನಾವಣೆಯಲ್ಲಿ 165 ನೇರವಾಗಿ ಆಯ್ಕೆಯಾಗುವ ಸ್ಥಾನಗಳಲ್ಲಿ 120 ಸ್ಥಾನಗಳನ್ನು ಗೆದ್ದಿದ್ದು, ಇನ್ನೂ ಆರು ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಭಾನುವಾರ ಸಂಜೆ 5.30ರ ವೇಳೆಗೆ 165 ಸ್ಥಾನಗಳಲ್ಲಿ 156 ಸ್ಥಾನಗಳ ಫಲಿತಾಂಶಗಳನ್ನು ಚುನಾವಣಾ ಆಯೋಗ (ಇಸಿ) ಘೋಷಿಸಿದೆ.

ಇನ್ನೂ ಒಂಬತ್ತು ಸ್ಥಾನಗಳ ಫಲಿತಾಂಶ ಪ್ರಕಟವಾಗಬೇಕಿದ್ದು, ಭಾನುವಾರ ತಡರಾತ್ರಿ ಅಥವಾ ಸೋಮವಾರ ಬೆಳಗ್ಗೆ ಪ್ರಕ್ರಿಯೆ ಪೂರ್ಣಗೊಳ್ಳಬಹುದು ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ. ಗುರುವಾರ ಮತದಾನ ಮುಗಿದ ತಕ್ಷಣ ಮತ ಎಣಿಕೆ ಆರಂಭವಾಗಿದ್ದು, ಶನಿವಾರದಿಂದ ಫಲಿತಾಂಶ ಪ್ರಕಟಿಸಲು ಆರಂಭಿಸಲಾಗಿತ್ತು.



ಮಾಜಿ ಪ್ರಧಾನಿ ಒಲಿ ಮಣಿಸಿದ ಶಾ: ಅವುಗಳಲ್ಲಿ 35 ವರ್ಷದ ಪ್ರಧಾನಿ ಅಭ್ಯರ್ಥಿ ಬಾಲೇನ್ ಶಾ, ಝಾಪಾ-5 ಕ್ಷೇತ್ರದಲ್ಲಿ ನಾಲ್ಕು ಬಾರಿಯ ಪ್ರಧಾನಿ ಹಾಗೂ ಪ್ರಮುಖ ಪಕ್ಷ ಸಿಪಿಎನ್-ಯುಎಂಎಲ್ ಅಧ್ಯಕ್ಷ ಕೆ.ಪಿ. ಶರ್ಮಾ ಒಲಿ ಅವರನ್ನು ಸುಮಾರು 50,000 ಮತಗಳ ಭಾರೀ ಅಂತರದಿಂದ ಸೋಲಿಸಿದ್ದು ಪ್ರಮುಖ ಫಲಿತಾಂಶಗಳಲ್ಲಿ ಒಂದಾಗಿದೆ.

ಬೆಳಗಾವಿಯಲ್ಲಿ ಶಿಕ್ಷಣ ಪಡೆದಿದ್ದ ಬಾಲೇನ್: ಕಳೆದ ವರ್ಷದ ಜೆನ್ ಝಿ ಪ್ರತಿಭಟನೆಗಳ ನೇತಾರ ಹಾಗೂ ನೇಪಾಳದ ಮುಂದಿನ ಪ್ರಧಾನಿ ಬಾಲೇಂದ್ರ ಅವರಿಗೆ ಭಾರತ, ಅದರಲ್ಲೂ ಕರ್ನಾಟಕದ ನಂಟಿದೆ ಎಂಬುದು ವಿಶೇಷ. ಜೆನ್ ಝಿ ನಾಯಕ ಬಾಲೇನ್ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) ಎಂಟೆಕ್ ಶಿಕ್ಷಣ ಪಡೆದಿದ್ದರು. ಎರಡು ವರ್ಷ ಭಾರತದಲ್ಲಿದ್ದರು. 1990ರಲ್ಲಿ ಕಠ್ಮಂಡುವಿನ ನೆವಾರ್ ಬೌದ್ಧ ಕುಟುಂಬದಲ್ಲಿ ಜನಿಸಿದ್ದರು.

ಕಿರುಸುದ್ದಿ

ಪದಾಧಿಕಾರಿಗಳ ಆಯ್ಕೆ



• **ಆಲಮೇಲ:** ತಾಲೂಕಿನ ರೇಣುಕಾಚಾರ್ಯರ ಪುರ್ವಬಾವಿ ಸಭೆಯಲ್ಲಿ ಆಲಮೇಲ ನಗರದ ಜಂಗಮ ಸಮಾಜದ ಯುವ ಘಟಕದ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಯುವ ಘಟಕದ ಗೌರವ ಅಧ್ಯಕ್ಷರಾಗಿ ಶ್ರೀಶೈಲ ಮಠಪತಿ, ಅಧ್ಯಕ್ಷರ ಬಂಡು ಸ್ಥಾವರಮಠ ಉಪಾಧ್ಯಕ್ಷರಾಗಿ ವಿಶ್ವನಾಥ ಹಿರೇಮಠ ಮೃತ್ಯಂಜಯ ಘಾಳಿಮಠ ಪ್ರದಾನ ಕಾರ್ಯದರ್ಶಿ ರಾಕೇಶ ರಾಂಪೂರಮಠ ಖಜಾಂಚಿ ನಾಗಯ್ಯ ಮುಳಮಠ ಅವರನ್ನು ಆಯ್ಕೆ ಮಾಡಲಾಯಿತು ಮುಖಂಡರಾದ ವಿರುಪಾಕ್ಷಿಯ್ಯ ಹೀರೇಮಠ ವಿಜಯಕುಮಾರ ಸಂಗಯ್ಯ ಮುಳಮಠ ಟಕ್ಕಯ್ಯ ಸಿದ್ದು ಮುಗಳಿ(ಹಿರೇಮಠ) ಚನ್ನಯ್ಯ ಸಾರಂಗಮಠ ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

ದಾನಿಗಳು ನೀಡಿದ ಜಾಗೆಯಲ್ಲಿ ಪ್ರಜಾಸೌಧ ಕಟ್ಟುವಂತೆ ಒತ್ತಾಯ



• **ವಿಜಯಪುರ:** ಜಿಲ್ಲೆಯ ತಾಳಿಕೋಟೆಯಲ್ಲಿ ಪ್ರಜಾಸೌಧ ಕಟ್ಟಡ ಈಗಾಗಲೇ ದಾನಿಗಳು ನೀಡಿದ ಜಾಗೆಯಲ್ಲಿ ಕಟ್ಟಬೇಕು ಎಂದು ಆಗ್ರಹಿಸಿ ತಾಳಿಕೋಟೆ ಪಟ್ಟಣದ ನಿವಾಸಿಗಳು ನಗರದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭ ಮುಖಂಡ ಸಂಗನಗೌಡ ಅಸ್ಕಿ ಮಾತನಾಡಿ, ಪಟ್ಟಣದಲ್ಲಿ ಪ್ರಜಾಸೌಧ ಕಟ್ಟಡ ಮಾಡಲು ಓರ್ವ ದಾನಿಗಳು ತಾಳಿಕೋಟೆ ಪಟ್ಟಣದ ರಿ.ಸ.ನಂಬರ್ 623/★/1 ಕ್ಷೇತ್ರ 19 ಎ 39 ಗುಂ ಪೈಕಿ 2 ಎಕರೆ ಜಮೀನನ್ನು ರಾಜ್ಯಪಾಲರು ಕರ್ನಾಟಕ ಸರ್ಕಾರ ಹೆಸರಿನಲ್ಲಿ ಪ್ರಜಾಸೌಧ ಕಟ್ಟಲು ಈಗಾಗಲೇ ಜಮೀನು ಬಿಟ್ಟುಕೊಟ್ಟಿದ್ದು, ಅದು ಮುದ್ದೇಬಿಹಾಳ ಉಪ ನೋಂದಣಾಧಿಕಗಳ ಕಚೇರಿಯಲ್ಲಿ ನೋಂದಣಿ ಆಗಿದೆ. ಅಲ್ಲದೆ ಈ ಜಮೀನು ಪೈಕಿ 2 ಎಕರೆ ಜಮೀನು ಫೆ.12, 2026 ರಂದು ತಹಶೀಲ್ದಾರ್ ಆದೇಶ ಪ್ರಕಾರ ಮುಟ್ಯೋಶನ್ ಸಂಖ್ಯೆ: ಟಿ266 ದಾಖಲಾಗಿದ್ದು, ಈ ಜಾಗೆಯಲ್ಲಿ ಪ್ರಜಾಸೌಧ ಕಟ್ಟಡ ಕಟ್ಟಬೇಕು. ಆದರೆ ಕೆಲವರು ವಿನಾಕಾರಣ ಈ ಜಾಗೆಯಲ್ಲಿ ಪ್ರಜಾಸೌಧ ಕಟ್ಟಬಾರದು ಎಂದು ಅಡತೆ ಮಾಡುತ್ತಿರುವುದು ಸರಿಯಲ್ಲ ಎಂದು ದೂರಿದರು.

ಈ ಸಂದರ್ಭ ಪ್ರಭುಗೌಡ ಮದರಕಂಡಿ, ಬಸು ಕಟ್ಟಿಮನಿ, ನಾಗಪ್ಪ ಕಟ್ಟಿಮನಿ, ಮಲ್ಲಪ್ಪ ಮಾದರ, ಹುಲಗಪ್ಪ ಮಾದರ ಇತರರು ಇದ್ದರು.

ಅಬಕಾರಿ ದಾಳಿ: ಮದ್ಯ ವಶ



• **ಇಂಡಿ:** ಹೋಳಿ ಹಬ್ಬದ ನಿಮಿತ್ತ ಮದ್ಯ ಮಾರಾಟ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಸಹ ತಾಲೂಕಿನ ನಾದ ಕೆಡಿ ಗ್ರಾಮದ ಆಲಮೇಲ ರಸ್ತೆಯ ಬದಿಯಲ್ಲಿರು ಆರ್.ಪಿ ಗಾರ್ಡನ ರೆಸ್ಟೋರೆಂಟ್ ಮೇಲೆ ಅಬಕಾರಿ ಅಧಿಕಾರಿಗಳು ಶನಿವಾರರಂದು ದಾಳಿ ಮಾಡಿ 17.280 ಲೀಟರ್ ಮದ್ಯ ಹಾಗೂ 15.6 ಲಿ. ಬೀಯರ್‌ನ್ನು ವಶಪಡಿಸಿಕೊಂಡು ಆರೋಪಿ ಮಂಜುನಾಥ ಚಂದ್ರಕಾಂತ ಕುಂಬಾರ ಇತನನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಲಯಕ್ಕೆ ಹಾಜರು ಪಡಿಸಿದ್ದಾರೆ. ಅಬಕಾರಿ ವಲಯ ನೀರಿಕ್ಷಕ ರಾಹೂಲ ನಾಯಕ ಅವರ ನೇತೃತ್ವದಲ್ಲಿ ಉಪನೀರೀಕ್ಷಕ ಎಸ್.ಜಿ.ಅಂಗಡಿ ಅವರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ದಾಳಿಯಲ್ಲಿ ಶಿವಶಂಕರ ಗೊಟ್ಯಾಳ, ಸುಭಾಸ ಅಥಗ್ರಡ, ಸಂಜೀವಕುಮಾರ ಹೂವಿನವರ, ಮಲ್ಲಪ್ಪ ಬಿರಾದಾರ ಇತರರು ಇದ್ದರು.

ಮಹಿಳಾ ಕ್ರೀಡಾಕೂಟಕ್ಕೆ ಚಾಲನೆ | ಜಿಲ್ಲಾಧಿಕಾರಿ ಸಂಗಪ್ಪ ಸಲಹೆ

ಮಹಿಳೆಯರು ಆರೋಗ್ಯದ ಗಮನ ಹರಿಸಲಿ



• **ಬಾಗಲಕೋಟೆ:** ಮಹಿಳೆಯರು ತಮ್ಮ ಮನೆಯ ಆರ್ಥಿಕ ಸುಧಾರಣೆಗೆ ಮಹತ್ವ ನೀಡಿದಷ್ಟೇ ತಮ್ಮ ಆರೋಗ್ಯಕ್ಕೂ ಅಷ್ಟೇ ಮಹತ್ವ ನೀಡಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಮಹಿಳಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ತಮ್ಮ ಕುಟುಂಬ ಮತ್ತು ಮಕ್ಕಳ ಪಾಲನೆ ಪೋಷಣೆಗೆ ಹೆಚ್ಚು ಒತ್ತು ಕೊಟ್ಟು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುವವರಾಗಿರುತ್ತಾರೆ, ಹೆಚ್ಚಿನ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆ ಇರುವುದರ ಕುರಿತು ವರದಿಗಳು ಹೇಳುತ್ತವೆ ಆದ್ದರಿಂದ ಹೆಣ್ಣು ಮಕ್ಕಳು ಆರೋಗ್ಯಕ್ಕೂ ಆಧ್ಯತೆ ನೀಡಿ, ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ದಿಸಿಕೊಳ್ಳಬೇಕು. ಕ್ರೀಡೆಗಳು ಆರೋಗ್ಯ ವೃದ್ದಿಗೆ ಸಹಕಾರಿಯಾಗಿರುವದರಿಂದ ಮಹಿಳೆಯರು ಮುಕ್ತವಾಗಿ ಎಲ್ಲ ಕ್ರೀಡೆಗಳಲ್ಲಿ ಭಾಗವಹಿಸುವಂತಾಗಬೇಕು ಎಂದರು.

ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಇನ್ನೂ ಬಯಲು ಶೌಚ ರೂಡಿಯಲ್ಲಿದೆ. ಇದು ಮಹಿಳೆಯರ ಸ್ಥಾನಮಾನಕ್ಕೆ ಚ್ಯುತಿ ತರುವಂತಾಗಿದೆ. ಅಲ್ಲದೇ ಬಯಲು ಬಹಿರ್ದೆಸೆ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವುದರಿಂದ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶೌಚಾಲಯಗಳಿಗೆ ಬೇಡಿಕೆ ಇಡಬೇಕು. ಬೇಡಿಕೆ ಇಡುವ ಮಹಿಳೆಯರಿಗೆ ಜಿಲ್ಲಾಡಳಿತ ಬೆಂಗಾವಲಿನಂತೆ ನಿಂತು ಸಹಾಯ, ಸಹಕಾರ ನೀಡಲು ಸದಾ ಸಿದ್ದವಿರುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ದಿವಾಣಿ ನ್ಯಾಯಾಧೀಶ ಚಂದ್ರಶೇಖರ ದಿಡ್ಡಿ ಮಾತನಾಡಿ, ಕ್ರೀಡೆಗಳು ಮನಸ್ಸನ್ನು ಶುಚಿಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಸೋಲು ಗೆಲವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ಕ್ರೀಡೆ ಕಲಿಸಿಕೊಡುತ್ತದೆ. ಮಹಿಳೆ ಇಂದು ಸಾಕಷ್ಟು ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಾಳೆ. ಸಾಧನೆ ಮಾಡಿದ್ದಾಳೆ. ಇನ್ನೂ ಸಾಕಷ್ಟು ಸಾಧನೆ ಆಗಬೇಕಿದೆ. 21 ನೇ ಶತಮಾನದಲ್ಲೂ ಮಹಿಳಾ ಸಮಾನತೆಗೆ ಹೊರಾಡಬೇಕಿದೆ. ನಮ್ಮ ಹಕ್ಕುಗಳನ್ನು ಪಡೆಯಲು ನಾವು ಸದಾ ಸಿದ್ದರಿರಬೇಕು. ಈ ನಿಟ್ಟಿನಲ್ಲಿ ಎಲ್ಲ ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ ಪಡೆದು ಸ್ವಾವಲಂಬಿಗಳಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಪಂಕಜಾ ಜೋಷಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ, ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಕ್ರೀಡಾ ತರಬೇತಿದಾರರಾದ ಅನೀತಾ ನಿಂಬರಗಿ ಸೇರಿದಂತೆ ಇತರರು ಇದ್ದರು.

ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಮುಖ್ಯ

• **ಲೋಕಾಪುರ:** ಪಟ್ಟಣದ ವಿದ್ಯಾಚೇತನ ಹಿರಿಯ ಪ್ರಾಥಮಿಕ ಶಾಲೆ ಜಾಡರ ಅರಳಿಕಟ್ಟಿ-ಲೋಕಾಪುರ ಶಾಲೆಯಲ್ಲಿ ಪಾಲಕ ಪೋಷಕರ ಸಭೆ ನಡೆಯಿತು.

ಸನ್ಮಾನ ಸ್ವೀಕರಿಸಿದ ಯಲ್ಲಟ್ಟಿಯ ಕೊಣ್ಣೂರು ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಬಸವರಾಜ ಕೊಣ್ಣೂರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಮುಖ್ಯವಾಗಿದೆ. ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು ಸದೃಢರನ್ನಾಗಿ ಬೆಳೆಸುವುದರ ಜೊತೆಯಲ್ಲಿ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತುವುದು ಅಗತ್ಯವಾಗಿದೆ ಎಂದು ಹೇಳಿದರು.

ವಿಶೇಷ ಸನ್ಮಾನ: ಈ ಸಂದರ್ಭದಲ್ಲಿ ಯಲ್ಲಟ್ಟಿಯ ಕೊಣ್ಣೂರು ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಬಸವರಾಜ ಕೊಣ್ಣೂರ ಅವರನ್ನು ವಿದ್ಯಾ ಚೇತನ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಎಸ್.ಎಂ. ರಾಮದುರ್ಗ ಹಾಗೂ ಶಿಕ್ಷಕ ವೃಂದ ಸನ್ಮಾನಿಸಿದರು.ಈ ವೇಳೆ ವಿದ್ಯಾ ಚೇತನ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಎಸ್.ಎಂ. ರಾಮಮರ್ಗ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ವಿವೇಕ ಮರಾಠಿ, ಶಿಕ್ಷಕರಾದ ಗಂಗಾ ಸಕ್ರಿ, ಚಿದಾನಂದ ಮುಂಡಾಸದ, ಬಿ.ಬಿ. ಹಾದಿಮನಿ. ಯಶೋಧಾ ಮರಾಠಿ, ಶಿಲ್ಪಾ ಗೌಡ, ಶಶಿಕಲಾ ಪಾಟೀಲ, ಎಂ.ಬಿ. ಮುಜಾವರ, ಸರಸ್ವತಿ ಮಾದರ, ಗೀತಾ ನಾಯಕ, ಮಂಜುಳಾ ಪಾಟೀಲ, ಗಂಗಾ ಸಗರಿ, ಸುರೇಶ ಮರಾಠಿ, ವೆಂಕಟರಮಣ ಗೌಡ, ಪಾಂಡುರಂಗ ಮುಗಳೊಳ್ಳಿ. ಮಲ್ಲೇಶ ಹಲಗಲಿ, ರಾಜೇಶ್ವರಿ ಗಂಗಣ್ಣವರ, ಪಲ್ಲವಿ ಗೌಡ, ಸಂಗೀತಾ ತಳವಾರ, ಮಂಜುಳಾ ಕಾಜಗಾರ, ಶೈಲಾ ಕ್ಯಾತನ, ಅಕ್ಷತಾ ಕಂಬಾರ, ಸ್ನೇಹಾ ಮಾಳೇದ, ಸರಸ್ವತಿ ದೇಸಾಯಿ, ಮಧು ತೆಗ್ಗಿ, ಸವಿತಾ ಹೊಸಮನಿ, ಜ್ಯೋತಿ ಮಡಿವಾಳರ, ರಮೀಜಾಬೇಗಂ ಡಂಗಿ, ಬಸವರಾಜ ಹಡಗಲಿ, ಶ್ವೇತಾ ನಿಂಗನಗೌಡರ, ಉಮಾ ದೊಡ್ಡನ್ನವರ, ಮಂಜುಳಾ ಪಾಟೀಲ ಇದ್ದರು.



ರಂಗಪಂಚಮಿ: ಬಣ್ಣದಲ್ಲಿ ಮಿಂದೆದ್ದ ಯುವಜನತೆ



• **ಬಸವನಬಾಗೇವಾಡಿ:** ಪಟ್ಟಣದಲ್ಲಿ ಬಸವೇಶ್ವರ ಸೇವಾ ಸಮಿತಿ ನೇತೃತ್ವದಲ್ಲಿ ಹಿಂದೂ ಸಮಾಜದ ವಿವಿಧ ಸಮುದಾಯಗಳ ಹಾಗೂ ಮುಸ್ಲಿಂ ಸಮುದಾಯದ ಕೆಲ ಮುಖಂಡರು ಭಾನುವಾರ ರಂಗಪಂಚಮಿ ನಿಮಿತ್ತ ಹಿರಿಯರು, ಯುವಕರು, ಮಕ್ಕಳು ಉತ್ಸಾಹದಿಂದ ಬಣ್ಣದಾಟವಾಡಿ ರಂಗಪಂಚಮಿ ಮೆರಗನ್ನು ಹೆಚ್ಚಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬೆಳಗ್ಗೆ ಸ್ಥಳೀಯ ವಿರಕ್ತ ಮಠದ ಸಿದ್ದಲಿಂಗ ಸ್ವಾಮೀಜಿ ಸ್ವಾಮೀಜಿಗಳ ನೇತೃತ್ವದಲ್ಲಿ ಬಸವೇಶ್ವರ ವೃತ್ತದಲ್ಲಿರುವ ಬಸವೇಶ್ವರರ ಪುತ್ಥಳಿಗೆ ಹೂವಿನ ಹಾರ ಹಾಕಿ ವಿಶೇಷ ಪೂಜೆ ಸಲ್ಲಿಸಿ ಮಕ್ಕಳು, ಯುವಕರು, ಹಿರಿಯರು ವಿವಿಧ ಬಣ್ಣ ಹಿಡಿದು ಕಾತುರದಿಂದ ಕಾಯುತ್ತಿದ್ದ ಓಕುಳಿ ಆಟಕ್ಕೆ ಚಾಲನೆ ನೀಡಲಾಯಿತು.

ಟ್ರ್ಯಾಕ್ಟರ್‌ನಲ್ಲಿ ಬಣ್ಣದ ನೀರನ್ನು ತುಂಬಿದ ಬ್ಯಾರಲ್‌ನಲ್ಲಿನ ಬಣ್ಣವನ್ನು ನೆರೆದ ಜನರ ಮೇಲೆ ಎರಚುತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸ್ನೇಹಿತರು ಪರಸ್ಪರ ಬಣ್ಣ ಹಚ್ಚುವ ಮೂಲಕ ಸಂಭ್ರಮಪಟ್ಟರು. ಮೆರವಣಿಗೆಯಲ್ಲಿ ಹಿರಿಯರು ಹಲಗಿ(ತಮಟೆ) ನಾದಕ್ಕೆ ಹೆಜ್ಜೆ ಹಾಕಿದರೇ ಯುವಕರು ಡಿಜೆ ಸೌಂಡಗೆ ಹೆಜ್ಜೆ ಹಾಕಿ ಬಣ್ಣದಾಟಕ್ಕೆ ಮೆರಗನ್ನು ಹೆಚ್ಚಿಸಿದರು. ಪಟ್ಟಣದ ಬಸವಜನ್ಮ ಸ್ಮಾರಕ ಮುಂಭಾಗದ ರಸ್ತೆಯಲ್ಲಿ ರಾಷ್ಟ್ರೀಯ ಬಸವ ಸೈನ್ಯ ಸಂಘಟನೆ ನೇತೃತ್ವದಲ್ಲಿ ರೈನ್ ಡಾನ್ಸ್‌ಗೆ ವ್ಯವಸ್ಥೆ ಮಾಡಿದ್ದರು ಮಕ್ಕಳು ಯುವಕರು ಬಣ್ಣದ ನೀರಿನೊಂದಿಗೆ ರೈನ್ ಡಾನ್ಸ್ ಮಾಡಿ ಬಣ್ಣದಲ್ಲಿ ಮಿಂದೆಳುವುದರೊಂದಿಗೆ ಬಿಸಿಲಿನ ತಾಪದಿಂದ ದೇಹವನ್ನು ತಂಪಾಗಿರಿಸಿಕೊಂಡರು.

ರಂಗಪಂಚಮಿ ಬಣ್ಣದಾಟದಲ್ಲಿ ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ, ಮುಖಂಡರಾದ ಬಸವರಾಜ ಹಾರಿವಾಳ, ಬಸವರಾಜ ಗೊಳಸಂಗಿ, ಅಶೋಕ ಕಲ್ಲೂರ, ಶೇಖಪ್ಪ ನಾಯ್ಕೋಡಿ, ಶೇಖರ ಗೊಳಸಂಗಿ,ಶೇಖರಗೌಡ ಪಾಟೀಲ, ಸುರೇಶಗೌಡ ಪಾಟೀಲ, ಸಂಗಮೇಶ ಓಲೇಕಾರ, ಬಸವರಾಜ ಕೋಟಿ, ಶಂಕರಗೌಡ ಬಿರಾದಾರ, ಎಂ.ಜಿ.ಆದಿಗೊಂಡ, ಉಮೇಶ ಹಾರಿವಾಳ, ರವಿ ರಾಠೋಡ, ಶಿವಪ್ಪ ಬುರ್ಲಿ, ಗುರಪ್ಪ ಅವಟಿ, ಸಂಗಯ್ಯ ಕಾಳಹಸ್ತೇಶ್ವರಮಠ, ಶ್ರೀಕಾಂತ ಬಸರಕೋಡ, ಗುರಲಿಂಗ ಬಸರಕೋಡ, ಮಹಾಂತೇಶ ಹಡಪದ, ಅಶೋಕ ಹಂಜಗಿ, ಪ್ರವೀಣ ಪೂಜಾರಿ ಇದ್ದರು.



ಮುದ್ದೇಬಿಹಾಳ: ವೀರಶೈವ ವಿದ್ಯಾವರ್ಧಕ ಸಂಘ ಹಾಗೂ ವರ್ತಕರ ಸಂಘದ ಮುಖಂಡರಾದ ಬಸವರಾಜ್ ಮೋಟಗಿ ಅವರು ತಮ್ಮ ಪೆಟ್ರೋಲ್ ಬಂಕ್ ಪ್ರಾರಂಭಿಸಿ 21ನೇ ವರ್ಷಕ್ಕೆ ಪಾದರ್ಪಣೆ ಮಾಡಿದ ಸಂದರ್ಭದಲ್ಲಿ ಊರಿನಲ್ಲಿ ಇದ್ದಂತ ಸಾಧು ಸಂತರರಿಗೆ ಅನ್ನ ಸಂತರ್ಪಣೆಯನ್ನು ಮಾಡಿ ನಂತರ ವಸ್ತ್ರದಾನವನ್ನು ಮಾಡುವ ಮೂಲಕ ಅವರ ಆಶೀರ್ವಾದ ಪಡೆದರು.

ಮಕ್ಕಳಿಗೆ ಸಂಸ್ಕಾರ ನೀಡುವ ಕಾರ್ಯವಾಗಲಿ: ಶ್ರೀಗಳು



• **ಬೀಳಗಿ:** ಸದ್ಗುರುವಿನಲ್ಲಿ ಹುಟ್ಟಿದ ಭಕ್ತಿಯನ್ನು ಜೀವಮಾನದ ವರೆಗೆ ಇಟ್ಟುಕೊಳ್ಳಬೇಕು. ಮಕ್ಕಳನ್ನು ಹಡೆಯುವುದು ದೊಡ್ಡದಲ್ಲ, ಮಕ್ಕಳಿಗೆ ಸಂಸ್ಕಾರ ಕೊಟ್ಟು ದೊಡ್ಡವರನ್ನಾಗಿ ಮಾಡುವುದು ದೊಡ್ಡದು. ಮನೆಗೆ, ಊರಿಗೆ ಹೆಣ್ಮಕ್ಕಳಿಂದ ಗೌರವ ದೊರೆಯುತ್ತದೆ ಎಂದು ಬೀದರ ಚಿದಂಬರ ಆಶ್ರಮ ಸಿದ್ದಾರೂಢ ಮಠದ ಡಾ.ಶಿವಕುಮಾರ ಸ್ವಾಮಿಗಳು ಹೇಳಿದರು.

ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಸಿದ್ದಾರೂಢ ಮಠದಲ್ಲಿ ಬಾಗೇವಾಡಿ ಅಜ್ಜನವರ ಪುಣ್ಯಾರಾಧನೆ ನಿಮಿತ್ತ ಹೋಳಿ ಬದಲಿಗೆ ವಿಶ್ವಶಾಂತಿಗಾಗಿ ಜರುಗಿರುವ 47ನೇ ಸತ್ಸಂಗ ಸಮ್ಮೇಳನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬೀದರ ಸಿದ್ದಾರೂಢ ಮಠದ ಶಿವಪ್ರಕಾಶಾನಂದಗಿರಿ ಸ್ವಾಮೀಜಿ ಮಾತನಾಡಿ, ಶಿವಾವತಾರಿ ಸಿದ್ದಾರೂಢ ಸ್ವಾಮೀಜಿಯ ಆಚರಣೆಯೇ ಉಪದೇಶ. ನಡೆ, ನುಡಿಯೇ ಉಪದೇಶವಾಗಿದೆ. ಗುರುವಿನ ಕೃಪೆ ಅಜ್ಞಾನ ಹೋಗಲಾಡಿಸುತ್ತದೆ. ಜನನ ಮರಣಗಳಿಂದ ಮುಕ್ತಗೊಳಿಸುತ್ತದೆ ಎಂದರು.

ಬೆಳಗಲಿಯ ಸಿದ್ದರಾಮ ಸ್ವಾಮೀಜಿ ಮಾತನಾಡಿ, ಕಷ್ಟಗಳನ್ನು ಪರಿಹರಿಸುವ ಶಕ್ತಿ ಸದ್ಗುರುವನ್ನು ಬಿಟ್ಟು ಮತ್ತೊಬ್ಬರಿಗಿಲ್ಲ. ಆಧ್ಯಾತ್ಮದ ಕಾರ್ಯಕ್ರಮಗಳಿಗೆ ಮಕ್ಕಳನ್ನು ಕರೆದುಕೊಂಡು ಬಂದು ಮಠದಲ್ಲಿ ಸೇವೆ ಮಾಡಲು ಹಚ್ಚಿದರೆ ಆಧ್ಯಾತ್ಮ ಕಡೆಗೆ ಒಲವು ಹೊಂದುವುದಲ್ಲದೇ, ಸಂಸ್ಕಾರವಂತರಾಗುತ್ತಾರೆಂದು ಹೇಳಿದರು.

ಭೀಮರಾಯನ ಗುಡಿಯ ಜ್ಞಾನೇಶ್ವರಿ ತಾಯಿ ಮಾತನಾಡಿ, ಸದ್ಗುರುವಿನ ಕೃಪೆ ಪಡೆಯುವುದೆಂದರೆ ಹುಲಿಯ ಹಾಲು ಪಡೆದಂತೆ. ಹೃದಯ ಪರಿಪಕ್ವವಾದರೆ ಗುರುವಿನ ಮಮತೆ, ಕರುಣೆ ದೊರೆಯುತ್ತದೆ ಎಂದರು.

ಕಲಬುರ್ಗಿ ಸಿದ್ದಾರೂಢ ಮಠದ ಲಕ್ಷ್ಮೀತಾಯಿ ಮಾತನಾಡಿ, ಸದ್ಗುರುವಿನಲ್ಲಿ ಒಲವು ಇರದಿದ್ದರೆ ಜ್ಞಾನ ಆಗಲಾರದು. ಗುರುವಿನ ಕೃಪೆಯು ಭವದಿಂದ ಮುಕ್ತಿ ದೊರೆಯುತ್ತದೆ. ಮಠಗಳಲ್ಲಿ ಸೇವೆ ಮಾಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದರು. ಕಲಬುರ್ಗಿಯ ವಿದ್ಯಾತಾಯಿ, ಸಂಪೂರ್ಣಾನಂದಮಯಿ ತಾಯಿ, ನಿರಂಜನಾನಂದಮಯಿ ತಾಯಿ ಮತ್ತಿತರಿದ್ದರು. ರವೀಂದ್ರ ಸಾವಳಗಿಮಠ ನಿರೂಪಿಸಿದರು.

ಮಹಿಳೆಯರಲ್ಲಿ ಆರೋಗ್ಯದ ಅರಿವು ಇರಲಿ

• **ಗುಳೇದಗುಡ್ಡ:** ಮಹಿಳೆ ಸಮಾಜ, ಕುಟುಂಬದ ಬೆನ್ನೆಲುಬು. ಪ್ರತಿಯೊಬ್ಬ ಮಹಿಳೆ ತನ್ನ ಸಂಸಾರದ ಜಂಜಾಟದಲ್ಲಿ ತನ್ನ ಆರೋಗ್ಯವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾಳೆ. ಮಹಿಳೆಯರು ಉತ್ತಮ ಪೌಷ್ಟಿಕ ಆಹಾರ ಸೇವಿಸುವುದರೊಂದಿಗೆ ನೈಸರ್ಗಿಕವಾಗಿ ದೊರೆಯುವ ವಸ್ತುಗಳನ್ನು ಉಪಯೋಗಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಬಾಗಲಕೋಟೆ ಸ್ತ್ರೀ ರೋಗ ತಜ್ಞ ವೈದ್ಯೆ ಡಾ.ಸವೀತಾ ಹಳವರ ಹೇಳಿದರು.

ಅವರು ಪಟ್ಟಣದ ಶ್ರೀ.ಜ.ಗುರುಸಿದ್ದೇಶ್ವರ ಸಿಬಿಎಸ್ಇ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮನೆ, ಸಮಾಜದಲ್ಲಿ ಮಹಿಳೆ ಗಟ್ಟಿಯಾಗಿದ್ದರೆ ಮಾತ್ರ ಒಂದು ಸಮಾಜ ಕುಟುಂಬ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಹಾಗಾಗಿ ನಾವು ನಮ್ಮತನವನ್ನು ಸಮಚಿತ್ತವಾಗಿ ಇಟ್ಟುಕೊಂಡು ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದರು. ಶ್ರೀ.ಜ.ಗುರುಸಿದ್ದೇಶ್ವರ ವಿದ್ಯಾವರ್ಧಕ ಸಂಸ್ಥೆಯ ಚೇರಮನ್ ರಾಜು ಜವಳಿ ಅಧ್ಯಕ್ಷತೆವಹಿಸಿ ಮಾತನಾಡಿ, ಮಹಿಳೆಯರು ಆತ್ಮವಿಶ್ವಾಸದಿಂದ ನಡೆದರೆ ಎಲ್ಲಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು. ಶ್ರೀ.ಜ.ಗುರುಸಿದ್ಧ ಪಟ್ಟದಾರ್ಯ ಸ್ವಾಮೀಜಿ, ಶ್ರೀ.ಜ. ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಪಟ್ಟಸಾಲಿ ನೇಕಾರ ಸಮಾಜ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ ಕಲಬುರ್ಗಿ, ಡಾ. ರುದ್ರೇಶ ಹಳವರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರೇಮಾ ಚಿಂದಿ, ತಾಂಡೂರ, ಪ್ರಾಂಶುಪಾಲ ಚಂದ್ರಿಕಾ ಜೋಶಿ, ಬಿ.ವಿ.ಚಿಂದಿ, ತಾರಾಮತಿ ರೋಜಿ, ಗಿರಿಜಾ ಕಲ್ಯಾಣಿ, ದೀಪಾ ಉಂಕಿ, ಭಾಗ್ಯಾ ಉದ್ನೂರ, ಸುಷ್ಮಾ ಚಿತ್ರಗಾರ, ಸೌಭಾಗ್ಯ ವಾಲಿಕಾರ, ನೀಲಾ ಗಣಾಚಾರಿ, ರವೀಶಬಾನು ಪಿಂಜಾರ, ವಿಜಯಲಕ್ಷ್ಮೀ ತೋಳಮಟ್ಟಿ, ವಿಶಾಲಾ ಗೆನ್ನೂರಮಠ, ರೇಷ್ಮಾ ನದಾಫ, ಶೀಲಾ ಪೂಜಾರ, ಸುಲೋಚನ ಶೇಬಿನಕಟ್ಟಿ, ಗೀತಾ ಬೇವೂರ್, ಸ್ನೇಹಾ ಕಾಳಿ, ಶ್ವೇತಾ ಕಲ್ಯಾಣಿ, ಕಮಲಾ ಶೇಬಿನಕಟ್ಟಿ, ಭಾರತಿ ರಂಜನಗಿ, ಪ್ರತಿಭಾ ಕಮತಗಿ, ಪ್ರಿಯಾಂಕ ಸನ್ನೂರ, ಗುರುಬಸಪ್ಪ ಒನರೊಟ್ಟಿ, ರಂಗಪ್ಪ ಬಲಕುಂದಿ ಇತರರು ಇದ್ದರು.



ಮಕ್ಕಳಿಗೆ ಮೊಬೈಲ್‌ಗಿಂತ ಮೌಲ್ಯಗಳ ಸಂಸ್ಕಾರ ನೀಡಿ



• **ಮುಧೋಳ:** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಾಲಕರು ಮಕ್ಕಳಿಗೆ ಮೊಬೈಲ್ ನೀಡಿ ಸುಮ್ಮನಿರಿಸುವ ಬದಲು, ಅವರಿಗೆ ಉತ್ತಮ ಸಂಸ್ಕಾರ ಹಾಗೂ ಜೀವನದ ನೈತಿಕ ಮೌಲ್ಯಗಳನ್ನು ಕಲಿಸಬೇಕು ಎಂದು ಮಹಾಲಿಂಗಪೂರ ಕ್ರೈಂ ಪಿಎಸ್ಐ ಶಾಂತಾ ಹಳ್ಳಿ ಹೇಳಿದರು.

ನಗರದ ಅರಳಿಕಟ್ಟಿ ಫೌಂಡೇಶನ್ ಅಂಗಸಂಸ್ಥೆಯಾದ ಮುಧೋಳ ರಾಯಲ್ ಸ್ಕೂಲ್ ಆಶ್ರಯದಲ್ಲಿ ಭಾನುವಾರ ಆಯೋಜಿಸಲಾಗಿದ್ದ 'ಚೋಟಾ ಚಾಂಪ್-2026' ನರ್ಸರಿ ಮಕ್ಕಳ ಕ್ವಿಜ್ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ನರ್ಸರಿ, ಎಲ್‌ಕೆಜಿ ಹಾಗೂ ಯುಕೆಜಿ ಹಂತದ ಮಕ್ಕಳು ಅತಿ ಹೆಚ್ಚು ಅನುಕರಣಶೀಲರಾಗಿರುತ್ತಾರೆ. ಈ ವಯಸ್ಸಿನಲ್ಲಿ ಅವರಿಗೆ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ಹಾಗೂ ಮೊಬೈಲ್ ದುರ್ಬಳಕೆಯ ದುಷ್ಪರಿಣಾಮಗಳ ಬಗ್ಗೆ ಪಾಲಕರು ಜಾಗೃತಿ ಮೂಡಿಸಬೇಕು. ಮೊಬೈಲ್ ಪರದೆಯ ಬದಲಾಗಿ ಪ್ರಕೃತಿ ಮತ್ತು ಪುಸ್ತಕಗಳ ಜೊತೆ ಸಮಯ ಕಳೆಯುವುದನ್ನು ಕಲಿಸಬೇಕು ಎಂದು ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಡಾ. ವೆಂಕಟೇಶ ಗುಡೆಪ್ಪನವರ, ಮಕ್ಕಳನ್ನು ತಿದ್ದಿ ತೀಡುವಲ್ಲಿ ಶಿಕ್ಷಕರು ಕುಂಬಾರನಂತೆ ಕೆಲಸ ಮಾಡುತ್ತಾರೆ. ರಾಯಲ್ ಸ್ಕೂಲ್ ಅಂತಹ ಸಂಸ್ಥೆಗಳು ಕೇವಲ ಪಠ್ಯವಲ್ಲದೆ, ಮಗುವಿನ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಮೌಲ್ಯ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅರಳಿಕಟ್ಟಿ ಫೌಂಡೇಶನ್ ಅಧ್ಯಕ್ಷ ಡಾ. ತಿಮ್ಮಣ್ಣ ಅರಳಿಕಟ್ಟಿ ಮಾತನಾಡಿ, ಚೋಟಾ ಚಾಂಪ್ ಸ್ಪರ್ಧೆಯು ಮಕ್ಕಳಲ್ಲಿನ ಅಳುಕನ್ನು ಹೋಗಲಾಡಿಸಿ ಆತ್ಮವಿಶ್ವಾಸ ತುಂಬುವ ವೇದಿಕೆಯಾಗಿದೆ. ನಮ್ಮ ಸಂಸ್ಥೆಯು ಮಕ್ಕಳಲ್ಲಿನ ಸುಪ್ತ ಪ್ರತಿಭೆ ಗುರುತಿಸಿ ಅವರಿಗೆ ಉತ್ತಮ ಭವಿಷ್ಯ ರೂಪಿಸಲು ಸದಾ ಬದ್ಧವಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕ್ವಿಜ್ ಸ್ಪರ್ಧೆಯಲ್ಲಿ ವಿಜೇತರಾದ ಪುಟ್ಟ ಮಕ್ಕಳಿಗೆ 'ಚೋಟಾ ಚಾಂಪ್-26' ಪ್ರಶಸ್ತಿ ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ಸಂಸ್ಥೆಯ ಆಡಳಿತಾಧಿಕಾರಿಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಬಹುಮಾನ ವಿತರಣೆ ಮಾಡಿದರು.

ಸಂಸ್ಥೆ ಅಧ್ಯಕ್ಷೆ ಸವಿತಾ ತಿಮ್ಮಣ್ಣ ಅರಳಿಕಟ್ಟಿ, ಕಾರ್ಯದರ್ಶಿ ವಿನಾಯಕ ಅರಳಿಕಟ್ಟಿ, ಪ್ರಾಚಾರ್ಯ ಚಂದ್ರಶೇಖರ ನಾಗವಂದ ಹಾಗೂ ಉಪಪ್ರಾಚಾರ್ಯ ಮಾರುತಿ ಪವಾರ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಪರಂಪರೆಗೆ ಜೀವತುಂಬಿದ್ದು ಸಾಹಿತ್ಯಲೋಕ

• **ಬಾಗಲಕೋಟೆ:** ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿಡುವ ಕಾರ್ಯವನ್ನು ಸಾಹಿತ್ಯ ಮಾಡುತ್ತದೆ. ಸಾಹಿತ್ಯಾಸಕ್ತರಿಗೆ ಬಾಗಿಲು ತೆರೆದು ಬೆಳೆಸುವ ಕಾರ್ಯವನ್ನು ಮಾಡುವುದೇ ಬಾಗಿಲುಕೋಟೆ ಎಂದು ಖ್ಯಾತ ಸಾಹಿತಿ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ ಹೇಳಿದರು.

ತ್ರಿವೇಣಿ ಶೆಲ್ಲಿಕೇರಿ, ಸುಶ್ರಾವ್ಯ ಶೆಲ್ಲಿಕೇರಿ ಸಾಹಿತ್ಯ ಪ್ರಶಸ್ತಿ ಪ್ರದಾನ



ನವನಗರದ ಬಿಡಿಸಿಸಿ ಬ್ಯಾಂಕಿನ ಸಭಾಭವನದಲ್ಲಿ ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನದಿಂದ ಆಯೋಜಿಸಿದ್ದ ರಾಜ್ಯ ಮಟ್ಟದ 'ತ್ರಿವೇಣಿ ಶೆಲ್ಲಿಕೇರಿ ಸಾಹಿತ್ಯ ಪ್ರಶಸ್ತಿ -2025' ಮತ್ತು 'ಸುಶ್ರಾವ್ಯ ಶೆಲ್ಲಿಕೇರಿ ಶಿಶು ಸಾಹಿತ್ಯ ಪ್ರಶಸ್ತಿ - 2025' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿರು.

ಸಾಹಿತಿಗಳು ಅಳಿಯಬಹುದು ಆದರೆ ಸಾಹಿತ್ಯ ಕೃತಿಗಳು ಅನಂತವಾದದ್ದು, ನಾಡಿನ ಸಾಂಸ್ಕೃತಿಕ ಪರಂಪರೆಯ ಜೀವಂತವಾಗಿಡುವ ಕಾರ್ಯವನ್ನು ಸಾಹಿತ್ಯ ಲೋಕ ಮಾಡುತ್ತಿದೆ, ಆದರೆ ಸಾಹಿತ್ಯ ಸಾಂಸ್ಕೃತಿಕ ಲೋಕಕ್ಕೆ ಶಕ್ತಿ ತುಂಬಿ ಬಾಗಿಲು ತೆರದ ಬಾಗಲಕೋಟೆ ತನ್ನ ಒಡಲಲ್ಲಿ ಸಾವಿರಾರು ಸಾಹಿತಿಗಳನ್ನು ನಾಡಿಗೆ ನೀಡಿದೆ, ಸಾಹಿತಿಗಳಿಗೆ ಭಾಗ್ಯದ ಬಾಗಿಲನ್ನು ತೆರೆದು ಬೆಳಸುವ ಕಾರ್ಯವನ್ನು ಬಾಗಿಲುಕೋಟೆ ಪರಿಸರ ಮಾಡುತ್ತಿದೆ, ಅಂತಹ ಕಾರ್ಯವನ್ನು ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನ ಸಾಹಿತಿಗಳನ್ನು ಗುರುತಿಸಿ, ಒಳ್ಳೆಯ ಸಾಹಿತ್ಯಕ್ಕೆ ಪ್ರಶಸ್ತಿ ನಿಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತೋಟಗಾರಿಕೆ ವಿಶ್ವವಿದ್ಯಾನಿಲಯ ಕುಲಪತಿ ಡಾ. ವಿಷ್ಣುವರ್ಧನ ಮಾತನಾಡಿ, ಸಮಾಜ, ಸಂಸ್ಕೃತಿ, ಪರಂಪರೆಯನ್ನು ಬೆಳೆಸುವಲ್ಲಿ ಸಾಹಿತ್ಯದ ಕೃಷಿ ತುಂಬಾ ಅಗತ್ಯವಿದೆ. ಕತೆಗಾರ ಮಲ್ಲಿಕಾರ್ಜುನ ಶೆಲ್ಲಿಕೇರಿ ಅವರ ದೀಡೆಕರೆ ಜಮೀನು ಕಥಾ ಸಂಕಲನವು 3 ನೇ ಆವೃತ್ತಿ ಬಿಡುಗೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಮಹಿಳಾ ಸಾಹಿತಿ ಡಾ.ಹೇಮಾ ಪಟ್ಟಣಶೆಟ್ಟಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಶಸ್ತಿ ಪ್ರದಾನ : 2025ರ ತ್ರಿವೇಣಿ ಶೆಲ್ಲಿಕೇರಿ ಪ್ರಶಸ್ತಿಗೆ ಪ್ರಮೋದ ಮರವಂತೆ ಅವರ ಕಾದಂಬರಿ ತೊಂಡೆ ಚಪ್ಪರ, ಸಿದ್ದು ಸತ್ಯಣ್ಣವರ ಕಥಾ ಸಂಕಲನ ಒಂದು ತೇಗದ ಕುರ್ಚಿ, ಶೋಭಾ ನಾಯಕ ಅವರ ಕವನ ಸಂಕಲನ ಅರ್ಧ ಮುಖಗಳ ಶಹರ ಹಾಗೂ 2025ರ ಸುಶ್ರಾವ್ಯ ಶೆಲ್ಲಿಕೇರಿ ಶಿಶು ಸಾಹಿತ್ಯ ಪ್ರಶಸ್ತಿಯನ್ನು ಗುಂಡುರಾವ್ ದೇಸಾಯಿ ಅವರ ಚಾರ್ಲಿ ಚಾರ್ಲಿ ವ್ಹೇರ್ ಆರ್ ಯೂ ಕತೆಗಳ ಮಕ್ಕಳ ಸಾಹಿತ್ಯ ಪ್ರಶಸ್ತಿಗಳನ್ನು ಹಾಗೂ ತಲಾ ಹತ್ತು ಸಾವಿರ ನಗದು ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ತ್ರಿವೇಣಿ ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಶೆಲ್ಲಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಷ್ಠಾನದ ಕಾರ್ಯದರ್ಶಿ ಶಿವಾನಂದ ಶೆಲ್ಲಿಕೇರಿ ಇದ್ದರು. ಸಂಗಮೇಶ ಪಾನಶೆಟ್ಟಿ ಹಾಗೂ ಸಂಗಡಿಗರು ನಾಡಗೀತೆ ಹೇಳಿದರು, ಡಾ.ಚಂದ್ರಶೇಖರ ಕಾಳನ್ನವರ ಸ್ವಾಗತಿಸಿದರು.

ಶಿಕ್ಷಣ, ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರದ ಆದ್ಯತೆ



• **ಚಡಚಣ:** ರಾಜ್ಯ ಸರ್ಕಾರ ಮಂಡಿಸಿದ ಬಜೆಟ್ಟಿನಲ್ಲಿ ಫಂಡರಪುರದಿಂದ ಗಾಣಗಾಪುರವರೆಗೆ ಸುಮಾರು 115 ಕಿ.ಮೀ ಡಬಲ್ ರಸ್ತೆ ನಿರ್ಮಾಣಕ್ಕೆ ಟೆಂಡರ್ ಕರೆಯಲು ಸರ್ಕಾರ ಅನುಮೋದನೆ ನೀಡಿದೆ ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ಪಟ್ಟಣದ ಹತ್ತಳ್ಳಿ ರಸ್ತೆ ಪಕ್ಕದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ತಾಲೂಕಿಗೆ ಅಗತ್ಯವಿರುವ ಎಲ್ಲಾ ಸರ್ಕಾರಿ ಕಚೇರಿಗಳನ್ನು ಸ್ಥಾಪಿಸುವ ಜೊತೆಗೆ ಶೀಘ್ರದಲ್ಲೇ ಪ್ರಜಾಸೌಧ ಹಾಗೂ ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು. ಪಟ್ಟಣದಲ್ಲಿ ವಿಕಾಸಸೌಧ ನಿರ್ಮಾಣಕ್ಕೂ ಶೀಘ್ರದಲ್ಲೇ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ತಿಳಿಸಿದರು.

ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ದರ್ಜೆ ಕಾಲೇಜು ಆರಂಭಿಸಲು ಸರ್ಕಾರದಿಂದ ಅನುಮೋದನೆ ದೊರೆತಿದೆ. ಜೊತೆಗೆ ಪಟ್ಟಣದಲ್ಲಿ ಬಸ್ ಡಿಪೋ ನಿರ್ಮಾಣ, 24 ಗಂಟೆ ಸತತ ನೀರು ಸರಬರಾಜು ವ್ಯವಸ್ಥೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. ಸಾರ್ವಜನಿಕರ ಸಹಕಾರವಿದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ. ಜನರು ಸದಾ ಸಹಕಾರ ನೀಡಿದರೆ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದು ಶಾಸಕ ಕಟಕಧೋಂಡ ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿ ಎಸ್.ಆರ್. ಗದ್ಯಾಳ ಮಾತನಾಡಿ, ಮೆಟ್ರಿಕ್ ನಂತರದ ಬಾಲಕಿಯರಿಗಾಗಿ ಸುಮಾರು 4000 ಚದರ ಅಡಿ ವಿಸ್ತೀರ್ಣದ ಜಾಗದಲ್ಲಿ 135 ವಿದ್ಯಾರ್ಥಿನಿಯರಿಗೆ ಪ್ರವೇಶ ಕಲ್ಪಿಸಬಹುದಾದ ಸುಸಜ್ಜಿತ ವಸತಿ ನಿಲಯವನ್ನು ಅಂದಾಜು 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಒಂದು ವರ್ಷದೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಈಸಂದರ್ಭದಲ್ಲಿ ಪ.ಪಂ.ಮುಖ್ಯಾಧಿಕಾರಿ ಬಿ.ಕೆ. ತಾವಸೆ, ಉಪಾಧ್ಯಕ್ಷ ಇಲಾಹಿ ನದಾಫ, ಸದಸ್ಯರಾದ ಮಾಸೀಮ ಮುಲ್ಲಾ, ಪರಶುರಾಮ ಪೂಜಾರಿ, ರಮೇಶ್ ಸಿಂಧೆ, ಇಂಡಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಎಸ್.ಆರ್. ಗದ್ಯಾಳ, ಗುತ್ತಿಗೆದಾರ ವಿನಾಯಕ ದೊಡಮನಿ, ಕೆಎಚ್‌ಬಿ ಇಂಜಿನಿಯರ್ ಸಚಿನ್ ಮೂರ್ತಿ, ಮುಖಂಡರಾದ ದೇವೇಂದ್ರಪ್ಪಗೌಡ ಪಾಟೀಲ, ದಶರಥ ಬನಸೋಡೆ, ಸೋಮು ಕತ್ನಾಳ, ಶಿವಾಜಿ ಬಾಮಣೆ, ಸಂಜೀವ ಬನಸೋಡೆ, ವಸತಿ ನಿಲಯ ಮೇಲ್ವಿಚಾರಕ ಮಂಜುನಾಥ ಸಾಂಗೋಲಿ ಹಾಗೂ ಇಲಾಖೆಯ ಸಿಬ್ಬಂದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪ್ರಕರಣ ಇತ್ಯರ್ಥಕ್ಕೆ ಲೋಕ ಅದಾಲತ್ ಸುವರ್ಣಾವಕಾಶ

◆**ಕೊಪ್ಪಳ:** ರಾಜಿ ಸಂಧಾನದ ಮೂಲಕ ರಾಜಿ ಆಗಬಹುದಾದ ಪ್ರಕರಣಗಳ ಇತ್ಯರ್ಥಕ್ಕಾಗಿ ಹಾಗೂ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ರಾಷ್ಟ್ರೀಯ ಲೋಕ ಅದಾಲತ್ ಒಂದು ಸುವರ್ಣಾವಕಾಶವಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಹೇಳಿದರು.

ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಮಾ.14ರಂದು ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ರಾಷ್ಟ್ರೀಯ ಲೋಕ ಅದಾಲತ್ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನ ಮಾಡಿಕೊಳ್ಳುವ ಮೂಲಕ ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. ರಾಜಿ ಸಂಧಾನಕ್ಕಾಗಿ ಸಿವಿಲ್ ದಾವೆಗಳು, ಭೂ-ಸ್ವಾಧೀನ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜಿ ಆಗಲು ಅರ್ಹವಿರುವ ಕ್ರಿಮಿನಲ್ ಕಂಪೌಂಡಬಲ್ ಪ್ರಕರಣಗಳು ಸೇರಿದಂತೆ ಹಲವಾರು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ರಾಜಿ ಸಂಧಾನದಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಪ್ರಕರಣವು ಇಬ್ಬರಿಗೂ ಒಪ್ಪಿಗೆಯಾಗುವಂತೆ



ಕೊನೆಗೊಂಡು ನ್ಯಾಯಾಲಯಕ್ಕೆ ತುಂಬಿದ ನ್ಯಾಯಾಲಯ ಶುಲ್ಕ ಸಂಪೂರ್ಣವಾಗಿ ವಾಪಸ್ ನೀಡಲಾಗುವುದು ಎಂದು ಹೇಳಿದರು.

ಅಂಕಿ ಸಂಖ್ಯೆಗಿಂತ ಮೌಲ್ಯಯುತ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಲು ಗಮನ ಹರಿಸಲಾಗುವುದು. ಇತ್ತೀಚಿಗೆ ಸಾರ್ವಜನಿಕರಲ್ಲಿಯೂ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ರಾಜೀ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವ ಆಸಕ್ತಿ ಹೆಚ್ಚಾಗಿದ್ದು, ಸಕಾರಾತ್ಮಕ ಬೆಳವಣಿಗೆಯಾಗಿದೆ. ಜಿಲ್ಲೆಯಲ್ಲಿ ಒಟ್ಟು 35,145 ಪ್ರಕರಣಗಳು ಬಾಕಿ ಇದ್ದು, ಇದರಲ್ಲಿ 16,199 ಸಿವಿಲ್ ಪ್ರಕರಣಗಳು ಹಾಗೂ 18,946 ಕ್ರಿಮಿನಲ್ ಪ್ರಕರಣಗಳಿವೆ. ಗಂಗಾವತಿ ಭಾಗದಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗುತ್ತವೆ. ಸಾರ್ವಜನಿಕರು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಭಾಗವಹಿಸುವ ಮೂಲಕ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಸುರೇಶ ಜಿ., ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಇತರೆ ಅಧಿಕಾರಿ, ಸಿಬ್ಬಂದಿ ಮತ್ತು ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳೊಂದಿಗೆ ಶಾಸಕ ಕಂದಕೂರ್ ಸಂವಾದ

◆**ಕೆಂಭಾವಿ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧಗೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ್ ಅವರು ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯುತ್ತಿರುವ ರಾತ್ರಿ ವಿಶೇಷ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿದರು.

ವಿದ್ಯಾರ್ಥಿಗಳ ಅಧ್ಯಯನದ ಪ್ರಗತಿಯನ್ನು ವಿಚಾರಿಸಿದ ಅವರು, ಆತ್ಮವಿಶ್ವಾಸ ಹಾಗೂ ನಿರಂತರ ಪರಿಶ್ರಮದಿಂದ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶ ಸಾಧಿಸಬೇಕು ಎಂದು ಕರೆ ನೀಡಿದರು.

ಶ್ರಮಪಟ್ಟು ಓದಿದರೆ ಯಾವುದೇ ಗುರಿ ಸಾಧಿಸುವುದು ಅಸಾಧ್ಯವಲ್ಲ. ನಿಮ್ಮ ಯಶಸ್ಸೇ ಕುಟುಂಬದ ಹೆಮ್ಮೆ ಮಾತ್ರವಲ್ಲ, ಸಮಾಜದ ಗೌರವವನ್ನೂ ಹೆಚ್ಚಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ರವೀಂದ್ರ ಚೌಹಣ ಅವರು ಮಾತನಾಡಿ, ಎಸ್ ಎಸ್‌ಎಲ್‌ಸಿ ಫಲಿತಾಂಶವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಲವಾರು ಶಾಲೆಗಳಲ್ಲಿ ರಾತ್ರಿ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಸಾಧನೆ ಮಾಡಬೇಕು. ಶಿಕ್ಷಕರ ಸಮರ್ಪಣೆ ಹಾಗೂ ಪೋಷಕರ ಸಹಕಾರದಿಂದ ಉತ್ತಮ ಫಲಿತಾಂಶ ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಸಹ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಪರಿಶ್ರಮದಿಂದ ಅಧ್ಯಯನ ಮಾಡಿ ಉತ್ತಮ ಸಾಧನೆ ಮಾಡಲು ಸಜ್ಜಾಗಿದ್ದಾರೆ.

ಕೃಷ್ಣರೆಡ್ಡಿ ಮುಖ್ಯಗುರುಗಳು, ಸಿ. ಆರ್. ಸಿ.ಬಾಲಪ್ಪ ಸಿರಿಗೆಮ್, ಲಕ್ಷ್ಮಿಕಾಂತ ರೆಡ್ಡಿ, ವೆಂಕಟರಾಮುಲು, ರಾಜಕುಮಾರ, ಶರಣಗೌಡ, ಕೇ. ರವಿಕಾಂತ್, ನರಸಪ್ಪ, ಶರಣಪ್ಪ ಪಾಟೀಲ್, ಎಸ್. ಎಮ್. ಭೂತಾಳ, ಶರಣಪ್ಪ ಪಾಂಚಳ್, ನರಸಪ್ಪ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನೈತಿಕ ಮೌಲ್ಯ ಬೆಳೆಸಿಕೊಳ್ಳಿ: ಶಂಕರಗೌಡ ಪಾಟೀಲ

◆**ಮಾನ್ವಿ:** ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ನೈತಿಕ ಮೌಲ್ಯವನ್ನು ಬೆಳೆಸಿಕೊಳ್ಳಬೇಕೆಂದು ಬಾಲಕರ ಸರ್ಕಾರಿ ಪದವಿ-ಪೂರ್ವ ಕಾಲೇಜಿನ ಉಪನ್ಯಾಸಕ ಶಂಕರ್ ಗೌಡ ಪಾಟೀಲ ಕೆ.ಗುಡದಿನ್ನಿ ಹೇಳಿದರು.

ಅವರು ಸಿರವಾರ ತಾಲೂಕಿನ ಕೆ.ಗುಡದಿನ್ನಿ ಗ್ರಾಮದಲ್ಲಿ ಮಾನ್ವಿ ಪಟ್ಟಣದ ಕಲ್ಮಠದ ಕೆಪಿಎಸ್‌ಎಸ್ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕ ಆಯೋಜಿಸಿರುವ 2025-26 ನೇ ಸಾಲಿನ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

21ನೇ ಶತಮಾನದಲ್ಲಿ ನಾವು ಬೆಳೆ ಯುತ್ತಿದ್ದೇವೆ. ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯ ಕಡಿಮೆಯಾಗುತ್ತಿದೆ. ನೈತಿಕ ಮೌಲ್ಯ ಹೆಚ್ಚಿಸಲು ಉಪನ್ಯಾಸಕರು ತಮ್ಮ ತರಗತಿಯಲ್ಲಿ ನೈತಿಕ ಪಾಠವನ್ನು ಬೋಧಿಸಬೇಕು ಹಾಗೂ ನೈತಿಕತೆ ಇಲ್ಲದಿದ್ದರೆ ಮುಂದಿನ ದಿನಮಾನಗಳಲ್ಲಿ ಭಯಾನಕ ಸಮಾಜ ಸೃಷ್ಟಿಯಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯವನ್ನು ಬೆಳೆಸುವಲ್ಲಿ ಉಪನ್ಯಾಸಕರು ಮತ್ತು ಪಾಲಕರು ಜವಾಬ್ದಾರಿಯಿಂದ ವರ್ತನೆ ಮಾಡಬೇಕೆಂದು ವಿವರಿಸಿದರು .

ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳು ಶಿಬಿರದಲ್ಲಿ ಕಲಿತಿರುವಂತಹ ವಿಷಯವನ್ನು ಮನೆಯಲ್ಲಿ ಅಳವಡಿಕೆ ಮಾಡಿಕೊಂಡು ತಂದೆ, ತಾಯಿಂದಿರಿಗೆ ಬದಲಾವಣೆಯನ್ನು ತೋರಿಸಬೇಕು ತಂದೆ, ತಾಯಿ



ದೇವರೆಂದು ಭಾವಿಸಿ ಅವರ ನಿಮ್ಮ ಮೇಲಿಟ್ಟಿರುವಂತಹ ನಂಬಿಕೆಯನ್ನು ಉಳಿಸಿಕೊಳ್ಳಿ ಎಂದು ಮಂಜುನಾಥ್ ಕಮತರ್ ಮುಖ್ಯ ಗುರುಗಳು ಕಲ್ಮಠ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಮಾನ್ವಿ ಇವರು ಹೇಳಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕಲ್ಮಠ ಪದವಿ ಕಾಲೇಜಿನ ಪ್ರಾಚಾರ್ಯ ಸಿದ್ದನಗೌಡ ಪಾಟೀಲ ವಹಿಸಿದ್ದರು. ಊರಿನ ಪ್ರಮುಖರಾದ ಸಾಯಿಬಣ್ಣ ಯಾದವ್, ನಾಗಪ್ಪ ಯಾದವ್, ಪಕೀರಪ್ಪ, ಮುಸ್ಲೆಪ್ಪ, ಗೆಜ್ಜಳ್ಳಿ ಮಲ್ಲಯ್ಯ,ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ಆನಂದ ಉಪ್ಪಳ, ಉಪನ್ಯಾಸಕ ಹನುಮಂತಪ್ಪ ಹರವಿ ರಾಘವೇಂದ್ರ ಸಂಕೇಶ್ವರ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರಾರ್ಥಿ ಉದಯ್ ಹಾಗೂ ನೀಲಾಂಬಿಕ ಅನಿಸಿಕೆಯನ್ನು ಹೇಳಿದರು. ನರಸಮ್ಮ ಸ್ವಾಗತಿಸಿದರು, ಅಕ್ಷತಾ ನಿರೂಪಿಸಿದರು.

ಸುಂಕದ ಮೇಘನಾಗೆ ಎಂವಿಎಸ್‌ಸಿಯಲ್ಲಿ ಚಿನ್ನದ ಪದಕ

◆**ಹೂವಿನಹಡಗಲಿ:** ಪಟ್ಟಣದ 8ನೇ ವಾರ್ಡ್ ಕಾಶಿ ವಿಶ್ವನಾಥ ಬಡಾವಣೆಯ ನಿವಾಸಿ, ಸೊಪ್ಪಿನ ಕಾಳಮ್ಮ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಸುಂಕದ ಬಸವರಾಜ್ ರವರ ಪುತ್ರಿ ಪ್ರತಿಭಾವಂತ ವಿದ್ಯಾರ್ಥಿನಿ ಕು.ಮೇಘನಾ ಸುಂಕದ ಪಶು ವೈದ್ಯಕೀಯ ವಿಜ್ಞಾನದಲ್ಲಿ ರೋಗಶಾಸ್ತ್ರ(ಎಂವಿಎಸ್ ಸಿ) ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಗಳಿಸಿ ಚಿನ್ನದ ಪದಕ ಮುಡಿಗೇರಿಸಿ ಕೊಂಡು ಮಲ್ಲಿಗೆ ನಾಡಿಗೆ ಕೀರ್ತಿ ತಂದಿರುತ್ತಾಳೆ.

ಶಿವಮೊಗ್ಗದ ಸ್ನಾತಕೋತ್ತರ ಪಶು ವೈದ್ಯಕೀಯ ಕಾಲೇಜಿನಲ್ಲಿ ಎಂವಿಎಸ್ಸಿ ಪದವಿಯಲ್ಲಿ ಪ್ರಥಮ ಸ್ಥಾನಗಳಿಸಿ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ ಬೀದರ್ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದಲ್ಲಿ ನಡೆದ 15ನೇ ಘಟಿಕೋತ್ಸವದಲ್ಲಿ



ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್ ಅವರು ವಿದ್ಯಾರ್ಥಿನಿಗೆ ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಿ ಸನ್ಮಾನಿಸಿದರು. ಸಚಿವ ವೆಂಕಟೇಶ್, ಕುಲಪತಿ ಕೆ.ಸಿ.ವೀರಣ್ಣ ಉಪಸ್ಥಿತರಿದ್ದರು.

ಟಿ20 ವಿಶ್ವಕಪ್: ಭಾರತ ಗೆಲ್ಲುವಂತೆ ಗಣಪತಿಗೆ ಪೂಜೆ

◆**ಬೆಳಗಾವಿ:** ಅಹಮದಾಬಾದ್ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಫೈನಲ್ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ತಂಡ ಗೆಲ್ಲಲಿ ಎಂದು ಪ್ರಾರ್ಥಿಸಿ, ನಗರದ ರಾಣಿ ಚನ್ನಮ್ಮನ ವೃತ್ತದಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಗಣಪತಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.

ರವಿವಾರ ನಡೆಯುವ ಪಂದ್ಯದಲ್ಲಿ ಭಾರತ ವಿಜಯಪತಾಕೆಯನ್ನು ಹಾರಿಸಲಿ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ನೇತೃತ್ವದಲ್ಲಿ ಕಾರ್ಯಕರ್ತರು ಹಾಗೂ ಕ್ರೀಡಾಭಿಮಾನಿಗಳ ಬಳಗ ಭಾರತ ತಂಡದ ಭಾವಚಿತ್ರ ಹಿಡಿದು



ಪೂಜೆ ಸಲ್ಲಿಸುವುದರ ಮೂಲಕ ಶುಭ ಕೋರಿದರು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ಮಾತನಾಡಿ, ಭಾರತ ಗೆಲುವಿಗಾಗಿ ಗಣಪತಿ ದೇವರಿಗೆ ಪೂಜೆ ಸಲ್ಲಿಸಿ ಶುಭ ಕೋರಲಾಗಿದೆ. ಭಾರತ ಗೆದ್ದು ಟಿ20 ವಿಶ್ವಕಪ್ ಮುಡಿಗೇರಿಸಿಕೊಳ್ಳಲಿದೆ. ನಮ್ಮಲ್ಲಿ ಅತ್ಯುತ್ತಮ ಆಟಗಾರರು ಇದ್ದಾರೆ. ಸೂರ್ಯಕುಮಾರ ಯಾದವ್ ತಂಡ ಬಹಳಷ್ಟು ಬಲಿಷ್ಠವಾಗಿದೆ. ಈ ಬಾರೀ ಎದುರಾಳಿಗಳನ್ನು ಕಟ್ಟಿಹಾಕುವುದು ಶತಸಿದ್ಧ, ಗೆಲುವು ನಮ್ಮದೇ ಎಂದು ಶುಭಕೋರಿದರು.

ಈ ವೇಳೆ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ಹಾಗೂ ಕಾರ್ಯಕರ್ತರು ಸೇರಿದಂತೆ ಹಲವರು ಇದ್ದರು.

ಟೂರ್ನಿ ಫೇವರಿಟ್ ವೈಷ್ಣವಿಗೆ ಚಾಂಪಿಯನ್ ಪಟ್ಟ



◆ **ಕಲಬುರಗಿ:** ಐಟಿಎಫ್ ಡಬ್ಲ್ಯೂ 35 ಮಹಿಳಾ ಟೆನಿಸ್ ಟೂರ್ನಿಯ ಕೊನೆಯ ದಿನ ಭಾನುವಾರ ನಡೆದ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ತಮ್ಮ ಟೆನಿಸ್ ವೃತ್ತಿ ಜೀವನದ 2ನೇ ಸಿಂಗಲ್ಸ್ ಟೈಟಲ್ ಪಡೆಯುವ ಮೂಲಕ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿ, ವಿಶ್ವ ಮಹಿಳಾ ದಿನಾಚರಣೆಯಂದು ಮಹಿಳೆಯರಿಗೆ ಗೆಲುವಿನಿಂದ ಶುಭಾಶಯಗಳು ತಿಳಿಸಿದರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಅಂಕಣದಲ್ಲಿ ನಡೆದ ಐಟಿಎಫ್ ಡಬ್ಲ್ಯೂ 35 ಮಹಿಳಾ ಟೆನಿಸ್ ಟೂರ್ನಿ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಭಾರತೀಯ ಅಗ್ರ ಆಟಗಾರ್ತಿ ವೈಷ್ಣವಿ ಅಡ್ಕರ್ ಸಹ ಆಟಗಾರ್ತಿ ಅಂಕಿತಾ ರೈನಾ ಅವರನ್ನು 7-6(3), 6-4 ಅಂತರದಲ್ಲಿ ಸೋಲಿಸಿ ಚಾಂಪಿಯನ್ ಪಟ್ಟ ಏರಿದರು.

ಪಂದ್ಯದ ಬಳಿಕ ಮಾತನಾಡಿದ ವೈಷ್ಣವಿ, ಈ ವಾರ ನನಗೆ ತುಂಬಾ ಉತ್ತಮವಾಗಿತ್ತು. ಪರಿಸ್ಥಿತಿಗಳು ಕಠಿಣವಾಗಿದ್ದರೂ ಕೊನೆಯ ಪಂದ್ಯವರೆಗೆ ಹೋರಾಡಲು ಸಾಧ್ಯವಾಯಿತು. ನಾನು ಚಿಕ್ಕವಳಿದ್ದಾಗಿನಿಂದಲೇ ಅಂಕಿತಾ ರೈನಾ ಅವರ ಆಟವನ್ನು ನೋಡುತ್ತಿದ್ದೆ. ಅವರ ವಿರುದ್ಧ ಆಡುವುದು ಮತ್ತು ಅವರ ಜೊತೆ ಡಬಲ್ಸ್ ಆಡುವುದು ನನಗೆ ದೊಡ್ಡ ವಿಷಯ. ಅಂಕಿತಾ ಕೊನೆಯ ಪಾಯಿಂಟ್ ತನಕ ಹೋರಾಡುತ್ತಾರೆ ಎಂಬುದು ಗೊತ್ತಿದ್ದರಿಂದ ಪ್ರತಿಯೊಂದು ಪಾಯಿಂಟ್ ವಿರುದ್ಧ ನಾನು ಹೋರಾಟ ನಡೆಸಿದ್ದರಿಂದ ಈ ಗೆಲುವು ಸಾಧ್ಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪಂದ್ಯದ ಬಳಿಕ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೆಎಸ್‌ಎಲ್ ಟಿಎ ಜಂಟಿ ಕಾರ್ಯದರ್ಶಿ ಸುನೀಲ್ ಯಾಜಮಾನ, ಎಂಎಲ್‌ಸಿ ಶಶಿಲ್ ಜಿ. ನಮೋಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸಂಯುಕ್ತ ನಿರ್ದೇಶಕ ಅಬ್ದುಲ್ ಅಜೀಮ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ್ವರ, ಪ್ರವೀಣ್ ಪುಣೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪ್ರೇಕ್ಷಕರತ್ತ ಸೈನ್ ಬಾಲ್

ಸಿಂಗಲ್ಸ್ ಫೈನಲ್ ಗೆಲುವಿನ ಬಳಿಕ ಇಡೀ ಟೂರ್ನಿಯಲ್ಲಿ ಬೆಂಬಲಿಸಿದ ಅಭಿಮಾನಿಗಳತ್ತ ವೈಷ್ಣವಿ ಅಡ್ಕರ್ ತಮ್ಮ ಆಟೋಗ್ರಾಫ್ ಹಾಕಿದ ಚೆಂಡನ್ನು ರಾಕೇಟ್ ಮೂಲಕ ನೀಡಿದರು. ಗೆಲುವಿನ ಬಳಿಕ ಅಭಿಮಾನಿಗಳು ಫೋಟೋ ತೆಗೆಸಿಕೊಂಡರು.

ಕಳೆದ 8 ವರ್ಷಗಳಿಂದ ಬೆಂಗಳೂರಿನ ರೋಹನ್ ಅಕಾಡೆಮಿಯಲ್ಲಿ ತರಬೇತಿ ಪಡೆದು ತನ್ನ ಆಟದಲ್ಲಿ ಸುಧಾರಣೆ ಕಂಡುಕೊಂಡಿದ್ದಾಳೆ. ಇದಕ್ಕಿಂತಲೂ ಮೊದಲು ಅವಳಿಗೆ ಒಳ್ಳೆಯ ದಿನಗಳು ಬಂದಿರಲಿಲ್ಲ, ಬರೀ ಅಫ್ಸ್ ಆಂಡ್ ಡೌನ್ ಜಾಸ್ತಿಯಿದ್ದು, ಮಗಳ ಗೆಲುವು ಖುಷಿ ತಂದಿದೆ. ಈ ಹಿಂದೆಯೂ ಆಕೆಯ ಮೊಳಕಾಲಿನ ಸರ್ಜರಿ ಬಳಿಕ ಕುಟುಂಬಕ್ಕೆ ದೊಡ್ಡ ಚಿಂತೆಯಾಗಿತ್ತು. ಆದರೆ,ಈದೀಗ ಯಾವುದೇ ಚಿಂತೆಯಿಲ್ಲ, ಪ್ರತಿ ಟೂರ್ನಿಯಲ್ಲಿ ಅವಳೊಂದಿಗೆ ನಾನು ಜೊತೆಗಿದ್ದು, ಬೆಂಬಲಿಸುವುದು ನನಗೆ ಖುಷಿ.

■ **ಗೌರಿ ಅಡ್ಕರ್, ವೈಷ್ಣವಿ ಅಡ್ಕರ್ ತಾಯಿ**

ವೈಷ್ಣವಿ ಭಾರತದ ಹೊಸ ಆಶಾಕಿರಣ. ಉತ್ತಮವಾದ ಆಟ ಆಡುವ ಮೂಲಕ ಚಾಂಪಿಯನ್ ಆಗಿದ್ದಾಳೆ. ಕಲಬುರಗಿಯ ಅಭಿಮಾನಿಗಳ ಬೆಂಬಲಕ್ಕೆ ಧನ್ಯವಾದಗಳು ಅರ್ಪಿಸುತ್ತೇನೆ. ವೈಷ್ಣವಿ ಗೆಲುವಿಗೆ ಅಭಿನಂದನೆ.

■ **ಅಂಕಿತಾ ರೈನಾ, ರನ್ನರ್ ಅಪ್**

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಸಂಜು, ಬೂಮ್ರಾ ಆಟಕ್ಕೆ ನ್ಯೂಜಿಲೆಂಡ್ ತತ್ತರ | ಟ್ರೋಫಿ ಉಳಿಸಿಕೊಂಡ ಭಾರತ

ಟಿ20 - ವಿಶ್ವ ಸಮರ ಗೆದ್ದ ಭಾರತ

ಅಹಮದಾಬಾದ್: ಭಾರತಾದ್ಯಂತ ವಂದೇ ಮಾತರಂ ಹಾಡು ಮೊಳಗಿತು. ಮೈದಾನದಲ್ಲಿ ಭಾರತ ಜಯಘೋಷದ ಮೆರುಗು ಮೂಡಿತ್ತು. ಭಾರತದ ಪ್ರತಿಯೊಂದು ಬೀದಿಯಲ್ಲಿ ಅಭಿಮಾನಿಗಳು ಕುಣಿದು ಕುಪ್ಪಳಿಸತೊಡಗಿದ್ದರು. ತಿರಂಗಾದೊಂದಿಗೆ ಮೆರೆದಾಡತೊಡಗಿದ್ದರು. ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ನ್ಯೂಜಿಲೆಂಡ್ ತಂಡವನ್ನು ಸೋಲಿಸಿದ ನಂತರ ದೇಶಾದ್ಯಂತ ಸಂಭ್ರಮ ಮುಗಿಲು ಮುಟ್ಟಿತ್ತು. ಇತಿಹಾಸ ದಾಖಲಾಯಿತು. ಭಾರತ ಮತ್ತೊಮ್ಮೆ ಸಾರ್ವಭೌಮತ್ವ ಸಾಬೀತು ಪಡೆಸಿತು.

ಭಾರತ ಅಭಿಮಾನಿಗಳನ್ನು ನಿಶ್ಯಬ್ದವಾಗಿಸುತ್ತೇನೆ ಎಂದಿದ್ದ ತಂಡ ತಾನೇ ನಿಬ್ಬೆರಗಾಗಿ ನಿಂತ ದಿನದಂದು ಸೂರ್ಯ ಪಡೆ 96 ರನ್‌ಗಳಿಂದ ಗೆದ್ದಿದೆ. ಇತಿಹಾಸ ಬರೆದಿದೆ. ಭಾನುವಾರದಂದು ಮೊದಲು ಬ್ಯಾಟಿಂಗ್‌ಗಿಳಿದ ಭಾರತ ಬರೋಬ್ಬರಿ 5 ವಿಕೆಟ್ ನಷ್ಟಕ್ಕೆ 255 ರನ್ ಬಾರಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 19 ಓವರ್‌ಗಳಲ್ಲಿ 159ಗೆ ಆಲೌಟ್ ಮಾಡಿ ಗೆದ್ದಿತು. ಸಂಜು ಸ್ಯಾಮ್ಸನ್ ದೊಡ್ಡ ದಾಖಲೆಗಳನ್ನೇ ಮಾಡುತ್ತಾ ಇತಿಹಾಸ ಪುಟಗಳಲ್ಲಿ ಸೇರಿದರು. ಫೈನಲ್ ಗೆಲ್ಲಿಸಿದವರಾದರು. ಇಶಾನ್ ಕಿಶನ್ ಮತ್ತು ಅಭಿಷೇಕ್ ಶರ್ಮ ಕೂಡ ಅಷ್ಟೇ ಪರಿಣಾಮಕಾರಿ ಆಟವಾಡಿದರು. ಬೂಮ್ರಾ ಮತ್ತೊಮ್ಮೆ ತನಗ್ಯಾರೂ ಸರಿಸಾಟಿ ಇಲ್ಲ ಎಂಬುದನ್ನು ಸಾಬೀತು ಪಡಿಸಿದರು.

ಭಾರತ ಐತಿಹಾಸಿಕ ಮೊತ್ತ: ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ಭಾರತ ದೊಡ್ಡ ಸ್ಕೋರ್ ನಿರ್ಮಿಸಿತು. ಸಂಜು ಸ್ಯಾಮ್ಸನ್ ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಅವರಿಗೆ ಅಭಿಷೇಕ್ ಮತ್ತು ಇಶಾನ್ ಕಿಶನ್ ಕೂಡ ಸಾಥ್ ನೀಡಿದರು. ಸ್ಯಾಮ್ಸನ್ 46 ಬಾಲ್‌ಗಳಲ್ಲಿ 5 ಬೌಂಡರಿ 8 ಸಿಕ್ಸರ್‌ಗಳೊಂದಿಗೆ ಬರೋಬ್ಬರಿ 89 ರನ್ ಚಚ್ಚಿದರು. ಅಭಿಷೇಕ್ ಶರ್ಮ 52, ಇಶಾನ್ ಕಿಶನ್ 54 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಶಿವಂ ದುಬೆ 26 ರನ್ ಬಾರಿಸಿ ಸ್ಕೋರ್ ಹಿಗ್ಗಿಸಿದರು.

ದಾಖಲೆ ಬರೆದ ಭಾರತ: ಆರೇ ಓವರ್‌ಗಳಲ್ಲಿ ಬರೋಬ್ಬರಿ 92 ರನ್ ಬಾರಿಸಿದ ಭಾರತ ವಿಶ್ವಕಪ್‌ನ ಪವರ್‌ಪ್ಲೇನಲ್ಲಿ ಅತಿ ಹೆಚ್ಚು ರನ್ ಬಾರಿಸಿದ ದಾಖಲೆ ಮಾಡಿತು. 20 ಓವರ್‌ನಲ್ಲಿ ಬರೋಬ್ಬರಿ 255 ರನ್ ಬಾರಿಸಿ ಫೈನಲ್ ಅಥವಾ ಪ್ಲೇಆಫ್‌ನಲ್ಲಿ ಅತಿ ಹೆಚ್ಚು ರನ್ ಬಾರಿಸಿದ ತಂಡ ಎನಿಸಿಕೊಂಡಿತು.

ದಿಗ್ಗಜರ ಸಾಲಿನಲ್ಲಿ ಸೂರ್ಯ

ಭಾರತ ತಂಡಕ್ಕೆ ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕರ ಪಟ್ಟಿಯಲ್ಲಿ ಸೂರ್ಯಕುಮಾರ್ ಯಾದವ್ ಸೇರಿಕೊಂಡರು. ಧೋನಿ, ಕಪಿಲ್ ಹಾಗೂ ರೋಹಿತ್ ಶರ್ಮ ನಂತರ ಈ ದಾಖಲೆ ಮಾಡಿದ ನಾಯಕ ಎನಿಸಿಕೊಂಡಿದ್ದಾರೆ.





ಸ್ಕೋರ್ ಬೋರ್ಡ್

ಭಾರತ 255/5(20)

ಸಂಜು ಸಿ ಸಬ್ (ಮೆಕ್‌ಕೊಂಚಿ) ಬಿ ನೀಶಮ್	89
ಅಭಿಷೇಕ್ ಸಿ ಸೀಫರ್ಟ್ ಬಿ ರವೀಂದ್ರ	52
ಕಿಶನ್ ಸಿ ಚ್ಯಾಪ್ಮನ್ ಬಿ ನೀಶಮ್	54
ಪಾಂಡ್ಯ ಸಿ ಸ್ಯಾಂಟ್ನರ್ ಬಿ ಹೆನ್ರಿ	18
ಸೂರ್ಯ ಸಿ ರವೀಂದ್ರ ಬಿ ನೀಶಮ್	0
ತಿಲಕ್ ಔಟಾಗದೆ	8
ದುಬೆ ಔಟಾಗದೆ	26
ಇತರೆ	8

ಬೌಲಿಂಗ್ ವಿವರ

ಮ್ಯಾಟ್ ಹೆನ್ರಿ	4-0-49-1
ಗ್ಲೆನ್ ಫಿಲಿಪ್ಸ್	1-0-5-0
ಜೇಕಬ್ ಡಫಿ	3-0-42-0
ಲೋಕಿ ಫರ್ಗುಸನ್	2-0-48-0
ಮಿಚೆಲ್ ಸ್ಯಾಂಟ್ನರ್	4-0-33-0
ರಚಿನ್ ರವೀಂದ್ರ	2-0-32-1
ಜೇಮ್ಸ್ ನೀಶಮ್	4-0-46-3

ನ್ಯೂಜಿಲೆಂಡ್ 159/10(19)

ಸೀಫರ್ಟ್ ಸಿ ಕಿಶನ್ ಬಿ ವರುಣ್	52
ಅಲೆನ್ ಸಿ ತಿಲಕ್ ಬಿ ಪಟೇಲ್	9
ರವೀಂದ್ರ ಸಿ ಕಿಶನ್ ಬಿ ಬೂಮ್ರಾ	1
ಫಿಲಿಪ್ಸ್ ಬಿ ಪಟೇಲ್	5
ಚ್ಯಾಪ್ಮನ್ ಬಿ ಪಾಂಡ್ಯ	3
ಡ್ಯಾ.ಮಿಚೆಲ್ ಸಿ ಕಿಶನ್ ಬಿ ಪಟೇಲ್	17
ಸ್ಯಾಂಟ್ನರ್ ಬಿ ಬೂಮ್ರಾ	43
ನೀಶಮ್ ಬಿ ಬೂಮ್ರಾ	8
ಹೆನ್ರಿ ಬಿ ಬೂಮ್ರಾ	0
ಫರ್ಗುಸನ್ ಔಟಾಗದೆ	6
ಡಫಿ ಸಿ ತಿಲಕ್ ಬಿ ಅಭಿಷೇಕ್	3
ಇತರೆ	12

ಬೌಲಿಂಗ್ ವಿವರ

ಅರ್ಷದೀಪ್ ಸಿಂಗ್	4-0-32-0
ಹಾರ್ದಿಕ್ ಪಾಂಡ್ಯ	4-0-36-1
ಅಕ್ಷರ್ ಪಟೇಲ್	3-0-27-3
ಜಸ್‌ಪ್ರೀತ್ ಬೂಮ್ರಾ	4-0-15-4
ವರುಣ್ ಚಕ್ರವರ್ತಿ	3-0-39-1
ಅಭಿಷೇಕ್ ಶರ್ಮಾ	1-0-5-1

ಪಂದ್ಯಶ್ರೇಷ್ಠ: ಜಸ್‌ಪ್ರೀತ್ ಬೂಮ್ರಾ
ಸರಣಿಶ್ರೇಷ್ಠ: ಸಂಜು ಸ್ಯಾಮ್ಸನ್

ಭಾರತ ಗೆದ್ದಿರುವ ಐಸಿಸಿ ಟ್ರೋಫಿಗಳು

ವರ್ಷ	ಟ್ರೋಫಿ	ನಾಯಕ
1983	ಏಕದಿನ ವಿಶ್ವಕಪ್	ಕಪಿಲ್ ದೇವ್
2002 (ಫೈನಲ್ ರದ್ದು)	ಚಾಂಪಿಯನ್ಸ್ ಟ್ರೋಫಿ	ಸೌರವ್ ಗಂಗೂಲಿ
2007	ಟಿ20 ವಿಶ್ವಕಪ್	ಎಮ್.ಎಸ್. ಧೋನಿ
2011	ಏಕದಿನ ವಿಶ್ವಕಪ್	ಎಮ್.ಎಸ್. ಧೋನಿ
2013	ಚಾಂಪಿಯನ್ಸ್ ಟ್ರೋಫಿ	ಎಮ್.ಎಸ್. ಧೋನಿ
2024	ಟಿ20 ವಿಶ್ವಕಪ್	ರೋಹಿತ್ ಶರ್ಮ
2025	ಚಾಂಪಿಯನ್ಸ್ ಟ್ರೋಫಿ	ರೋಹಿತ್ ಶರ್ಮ
2026	ಟಿ20 ವಿಶ್ವಕಪ್	ಸೂರ್ಯಕುಮಾರ್ ಯಾದವ್

ಶರಣಾದ ನ್ಯೂಜಿಲೆಂಡ್; 96 ರನ್ನಿಂದ ಗೆದ್ದ ಭಾರತ

ಎಲ್ಲಾ ವಿಭಾಗಗಳಲ್ಲೂ ವಿಶ್ವಶ್ರೇಷ್ಠ ಪ್ರದರ್ಶನ ನೀಡಿದ ಭಾರತ ತಂಡ ಪ್ರಾಬಲ್ಯ ಮೆರೆದಿದ್ದು, ಸತತ 2ನೇ ಬಾರಿಗೆ ವಿಶ್ವಕಪ್ ಗೆದ್ದಿತು. ಟಾಸ್ ಗೆದ್ದು ಭಾರತವನ್ನು ಬ್ಯಾಟಿಂಗ್‌ಗಿಳಿಸಿದ ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟ್ನರ್ ಅವರಿಗೆ ಬಹುಶಃ 256 ರನ್ ಬೃಹತ್ ಸವಾಲಿನ ನಿರೀಕ್ಷೆ ಇರಲಿಲ್ಲವೇನೋ ಅನಿಸುತ್ತದೆ. ಟಿ20 ಪಂದ್ಯವೊಂದರಲ್ಲಿ 256 ರನ್ ದೊಡ್ಡ ಸವಾಲು, ಅದರಲ್ಲೂ ಇದು ವಿಶ್ವಕಪ್ ಫೈನಲ್ ಬೇರೆ. ಸೂರ್ಯ ಪಡೆ ನೀಡಿದ ಬೃಹತ್ ಸವಾಲು ಬೆನ್ನತ್ತಲು ಆರಂಭಿಸಿದ ನ್ಯೂಜಿಲೆಂಡ್‌ಗೆ ನಿರೀಕ್ಷಿತ ಆರಂಭಿಕ ಜತೆಯಾಟ ಸಿಗಲಿಲ್ಲ. ಪವರ್ ಪ್ಲೇ ಓವರ್‌ಗಳಲ್ಲಿ 50 ರನ್ ಗಡಿದಾಟಿದ್ದರೂ 3 ಪ್ರಮುಖ ದಾಂಡಿಗರ ವಿಕೆಟ್ ಕಳೆದುಕೊಂಡ ನ್ಯೂಜಿಲೆಂಡ್ ಕೊನೆಯಲ್ಲಿ ಪರದಾಡಿತು. ಜಸ್‌ಪ್ರೀತ್ ಬೂಮ್ರಾ ಎಂದಿನಂತೆ ಇಕಾನಮಿಕಲ್ ಬೌಲಿಂಗ್ ಪ್ರದರ್ಶನ ನೀಡಿದ್ದು, ತಮ್ಮ 4 ಓವರ್ ಸ್ಪೆಲ್‌ನಲ್ಲಿ 15 ರನ್ ನೀಡಿ 4 ವಿಕೆಟ್ ಕಿತ್ತರು. ಆದರೆ ಲೆಗ್‌ಸ್ಪಿನ್ನರ್ ಅಕ್ಷರ್ ಪಟೇಲ್ ಮ್ಯಾಚ್‌ವಿನ್ನಿಂಗ್ ಪ್ರದರ್ಶನ ನೀಡಿ 3 ಪ್ರಮುಖ ವಿಕೆಟ್ ಕಿತ್ತು ಕಿವೀಸ್ ಬ್ಯಾಟಿಂಗ್ ಕ್ರಮಾಂಕದ ಬೆನ್ನೆಲುಬು ಮುರಿದರು. ಕೊನೆಯ ವಿಕೆಟ್ ಅಭಿಷೇಕ್ ಶರ್ಮಾ ಪಾಲಾಯಿತು. ಸೀಫರ್ಟ್ (52) ಅರ್ಧಶತಕ ಮತ್ತು ನಾಯಕ ಸ್ಯಾಂಟ್ನರ್ (43) ಏಕಾಂಗಿ ಹೋರಾಟ ಯಾವುದೇ ರೀತಿ ನೆರವಾಗಲಿಲ್ಲ. 19 ಓವರ್‌ಗಳಲ್ಲಿ 159 ರನ್‌ಗಳಿಗೆ ಆಲೌಟಾದ ಕಿವೀಸ್ 96 ರನ್‌ಗಳಿಂದ ಸೋಲೊಪ್ಪಿ, ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡಿತು.

ವರ್ಷ	ಆತಿಥ್ಯ	ವಿಜೇತ ದೇಶ
2007	ದಕ್ಷಿಣ ಆಫ್ರಿಕಾ	ಭಾರತ
2009	ಇಂಗ್ಲೆಂಡ್	ಪಾಕಿಸ್ತಾನ್
2010	ವೆಸ್ಟ್ ಇಂಡೀಸ್	ಇಂಗ್ಲೆಂಡ್
2012	ಶ್ರೀಲಂಕಾ	ವೆಸ್ಟ್ ಇಂಡೀಸ್
2014	ಬಾಂಗ್ಲಾದೇಶ್	ಶ್ರೀಲಂಕಾ
2016	ಭಾರತ	ವೆಸ್ಟ್ ಇಂಡೀಸ್
2021	ಯುಎಇ/ ಓಮನ್	ಆಸ್ಟ್ರೇಲಿಯಾ
2022	ಆಸ್ಟ್ರೇಲಿಯಾ	ಇಂಗ್ಲೆಂಡ್
2024	ಯುನೈಟೆಡ್ ಸ್ಟೇಟ್ಸ್ ವೆಸ್ಟ್ ಇಂಡೀಸ್	ಭಾರತ
2026	ಭಾರತ	ಭಾರತ

ಫೈನಲ್‌ಗೇರಿಸಿದ ಸಂಜು

ಆಡಿದ್ದು ಐದೇ ಪಂದ್ಯ. ಆದರೆ ಮೊದಮೊದಲಿಗೆ ಲಯಕ್ಕಾಗಿ ಪರದಾಡಿದ್ದ ಸಂಜು ಸ್ಯಾಮ್ಸನ್ ನಮೀಬಿಯಾ ವಿರುದ್ಧ ಮಾತ್ರ ಕಣಕ್ಕಿಳಿದು ಮುಂದೆ ವಾಟರ್ ಬಾಯ್ ಆಗಿದ್ದರು. ಬೆಂಚ್ ಕಾಯ್ದಿದ್ದರು. ರಿಂಕು ಸಿಂಗ್ ಬದಲಿ ಆಟಗಾರರಾಗಿ ಜಿಂಬಾಬ್ವೆ ವಿರುದ್ಧ ಪಂದ್ಯಕ್ಕೆ ಮತ್ತೆ ಬಂದಿದ್ದ ಅವರು ಚಮತ್ಕಾರ ಮಾಡಿಬಿಟ್ಟಿದ್ದರು. 15 ಬಾಲ್‌ಗಳಲ್ಲಿ 28 ರನ್ ಬಾರಿಸಿ ಭದ್ರ ಅಡಿಪಾಯ ಹಾಕಿದರು. ವಿಂಡೀಸ್ ವಿರುದ್ಧ ಗೆಲ್ಲಲೇಬೇಕಾದ ಪಂದ್ಯದಲ್ಲಿ 50 ಬಾಲ್‌ಗಳಲ್ಲಿ ಔಟಾಗದೆ 97 ರನ್‌ಗಳಿಸಿ ಗೆಲುವಿಗೆ ಕಾರಣರಾದರು. ಅಷ್ಟಕ್ಕೆ ನಿಲ್ಲದೆ ಸೆಮಿಫೈನಲ್‌ನಲ್ಲಿ 89 ರನ್ ಗಳಿಸಿ ಫೈನಲ್‌ಗೇರಿಸಿದ ಆಟಗಾರ ಎನಿಸಿದರು.



ಪರಿಣಾಮಕಾರಿ ಬೂಮ್ರಾ



ಪ್ರತಿ ಬಾರಿಯಂತೆ ಈ ಬಾರಿ ಕೂಡ ಜಸ್‌ಪ್ರೀತ್ ಬೂಮ್ರಾ ಗೆಲುವಿನ ರೂವಾರಿ ಎನಿಸಿಕೊಂಡರು. ಹೆಚ್ಚಿನ ವಿಕೆಟ್ ಪಡೆದು ಟೂರ್ನಿಯ ಬೆಸ್ಟ್ ಬೌಲರ್ ಎನಿಸಿಕೊಳ್ಳದಿದ್ದರೂ ಅವರು ತಮ್ಮ ತಾಳ್ಮೆ, ಅನುಭವ ಮತ್ತು ಪರಾಕ್ರಮದೊಂದಿಗೆ ಮತ್ತೊಮ್ಮೆ ಭಾರತ ಪಾಲಿನ ಹೀರೋ ಎನಿಸಿಕೊಂಡಿದ್ದಾರೆ. ಮೊದಲನೇ ಪಂದ್ಯದಿಂದಲೂ ಈ ಪ್ರದರ್ಶನ ಕಂಡುಬಂದಿತು. ಕೂಟದಲ್ಲಿ ಒಟ್ಟು 14 ವಿಕೆಟ್ ಪಡೆದರು.



ಇಶಾನ್ ಕಿಶನ್ ಕ್ಲಾಸ್



ಕಳೆದ ವರ್ಷವಷ್ಟೇ ಭಾರತ ತಂಡದಿಂದಲೂ, ಬಿಸಿಸಿಐ ಒಪ್ಪಂದದಿಂದಲೂ ಹೊರಬಿದ್ದಿದ್ದ ಕಿಶನ್ ನ್ಯೂಜಿಲೆಂಡ್ ಸರಣಿಗೆ ಆಯ್ಕೆಯಾಗಿದ್ದರು. ಅಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿ ವಿಶ್ವಕಪ್‌ನಲ್ಲಿ ಸ್ಥಾನ ಪಡೆದರು. ಕೂಟದುದ್ದಕ್ಕೂ ಭಾರತದ ಗೆಲುವಿನ ರೂವಾರಿ ಎನಿಸಿಕೊಂಡಿರುವ ಅವರು, ದೊಡ್ಡ ದೊಡ್ಡ ಇನ್ನಿಂಗ್ಸ್ ಕಟ್ಟಿದ್ದಾರೆ. ಪ್ರಮುಖವಾಗಿ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಗೆಲುವಿನ ಇನ್ನಿಂಗ್ಸ್ ಆಡಿದ್ದರು. ಫೈನಲ್‌ನಲ್ಲೂ ಅಬ್ಬರಿಸಿ ಭಾರತದ ಗೆಲುವಿನ ರೂವಾರಿಯಾಗಿದ್ದಾರೆ.

ಶಿವಂ ದುಬೆಯ ಚಿಕ್ಕ ಇನ್ನಿಂಗ್ಸ್ ದೊಡ್ಡ ಇಂಪ್ಯಾಕ್ಟ್

ಪ್ರತಿ ಪಂದ್ಯದಲ್ಲೂ ಶಿವಂ ದುಬೆ ಸಣ್ಣ ಇನ್ನಿಂಗ್ಸ್‌ಗಳಲ್ಲಿ ದೊಡ್ಡ ಇಂಪ್ಯಾಕ್ಟ್‌ಗಳನ್ನು ನೀಡುತ್ತಾ ಬಂದಿದ್ದಾರೆ. 25-35 ರನ್‌ಗಳ ಪರಿಣಾಮಕಾರಿ ಆಟ ಆಡುವ ಅವರು ದೊಡ್ಡ ದೊಡ್ಡ ಇನ್ನಿಂಗ್ಸ್ ಕೂಡ ಆಡಿದ್ದಾರೆ. ಬೇಕಾದಾಗ ವಿಕೆಟ್‌ಗಳನ್ನೂ ಕಿತ್ತಿ ದೊಡ್ಡ ಆಟಗಾರ ಎನಿಸಿಕೊಂಡಿದ್ದಾರೆ. 7 ಇನ್ನಿಂಗ್ಸ್‌ಗಳಲ್ಲಿ ಬ್ಯಾಟಿಂಗ್ ಮಾಡಿರುವ ದುಬೆ 209 ರನ್ ಬಾರಿಸಿದ್ದಾರೆ. ನೆದರ್ಲೆಂಡ್ಸ್ ಹಾಗೂ ದ.ಆಫ್ರಿಕಾ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಪ್ರಮುಖ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ.

ತಿಲಕ್ ವರ್ಮಾ



ಸ್ಟ್ರೈಕ್‌ರೇಟ್‌ನಿಂದಾಗಿ ಆರಂಭದಲ್ಲಿ ಭಾರೀ ಟೀಕೆ ಎದುರಿಸಿದ್ದ ಭಾರತದ ಮಧ್ಯಮ ಕ್ರಮಾಂಕದ ಬ್ಯಾಟರ್ ತಿಲಕ್ ವರ್ಮಾ ಕೂಡ ಚಿಕ್ಕ ಇನ್ನಿಂಗ್ಸ್‌ಗಳ ಮೂಲಕ ದೊಡ್ಡ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಗೆಲುವಿನಲ್ಲಿ ಮಿಂಚಿದ್ದಾರೆ. ಸೂರ್ಯಕುಮಾರ್ ಯಾದವ್ ಕೂಡ ಇದೇ ರೀತಿ ಪರಿಣಾಮಕಾರಿ ಆಟವಾಡಿದ್ದಾರೆ. ಪಾಕಿಸ್ತಾನ, ನೆದರ್ಲೆಂಡ್ಸ್, ಪ್ರಮುಖವಾಗಿ ವಿಂಡೀಸ್ ಹಾಗೂ ದ.ಆಫ್ರಿಕಾ ವಿರುದ್ಧ ಮಿಂಚಿದ್ದಾರೆ ತಿಲಕ್. ಇದರೊಂದಿಗೆ ಗೆಲುವಿನ ರೂವಾರಿ ಎನಿಸಿದ್ದಾರೆ.

ವಿಶ್ವಕಪ್, ಅದರಲ್ಲೂ ಟಿ20 ವಿಶ್ವಕಪ್‌ನಲ್ಲಿ ಬ್ಯಾಟರ್‌ಗಳದ್ದೇ ದರ್ಬಾರ್ ಇರುತ್ತದೆ. ಪಂದ್ಯಗಳಲ್ಲಿ ಫೀಲ್ಡಿಂಗ್, ಬ್ಯಾಟಿಂಗ್ ಮತ್ತು ಬೌಲಿಂಗ್ ಮೂರು ವಿಭಾಗದ ಆಟಗಾರರೂ ಅಷ್ಟೇ ಮಹತ್ವದ ಪಾತ್ರ ವಹಿಸುತ್ತಾರೆಯಾದರೂ ಮೈದಾನಕ್ಕೆ ಬರುವ ಅಭಿಮಾನಿಗಳು ಬ್ಯಾಟರ್‌ಗಳ ಸಿಕ್ಸರ್‌ಗಳನ್ನು ನೋಡಲೆಂದೆ ಬಂದಿರುತ್ತಾರೆ ಎನ್ನಬಹುದು. ಬ್ಯಾಟಿಗರಿಗೆ ಸಿಗುವ ಸ್ಥಾನ, ಗೌರವ ಮತ್ತು ಬೆಂಬಲದ ಅಳತೆಗೆ ಸರಿಸಾಟಿ ಆಕೃತಿಯೇ ಇಲ್ಲ, ಟಿ20 ಕ್ರಿಕೆಟ್ ಬ್ಯಾಟರ್‌ಗಳ ಆಟವೇ ಹೌದು.! ಹಾಗಿದ್ದರೆ ಈ ಬಾರಿಯ ವಿಶ್ವಕಪ್‌ನ ಬೆಸ್ಟ್ ಬ್ಯಾಟರ್ಸ್ ಯಾರು?

ದಂಡಿಸಿ ಮೆರೆದಾಡಿದ ದಾಂಡಿಗರು

ಸಹಿಬ್‌ಝಾದಾ ಫರ್ಹಾನ್ (ಪಾಕಿಸ್ತಾನ)



ಲೀಗ್ ಹಂತದ ಪಂದ್ಯಗಳಲ್ಲೇ ಹೀನಾಯ ಹಿನ್ನಡೆ ಅನುಭವಿಸಿ ಆಳುತ್ತಾ, ಬೀಳುತ್ತಾ ಸೂಪರ್-8ಕ್ಕೆ ಲಗ್ಗೆ ಹಾಕಿದ್ದ ಪಾಕಿಸ್ತಾನ ಕೂಟದಿಂದ ಹೊರಬಿತ್ತು. ಆದರೆ ತಂಡದ ಆರಂಭಿಕ ಬ್ಯಾಟರ್ ಫರ್ಹಾನ್ ದಾಖಲೆಗಳನ್ನು ಮಾಡಿದ್ದಾರೆ. ಎರಡು ದೊಡ್ಡ ಶತಕಗಳನ್ನು ಬಾರಿಸಿದ ಅವರು, ಸದ್ಯ 383 ರನ್ ಬಾರಿಸಿ ಟಿ20 ವಿಶ್ವಕಪ್‌ನಲ್ಲಿ ಬ್ಯಾಟರ್ ಒಬ್ಬ ಗಳಿಸಿದ ಹೆಚ್ಚು ರನ್ ಎಂಬ ದಾಖಲೆ ಹೊಂದಿದ್ದಾರೆ. 7 ಪಂದ್ಯದಲ್ಲಿ ಎರಡು ಶತಕ ಬಾರಿಸಿದ್ದು ಗಮನಾರ್ಹ.

ಇಶಾನ್ ಕಿಶನ್ (ಭಾರತ)

ತಮ್ಮ ಆಕ್ರಮಣಕಾರಿ ಆಟದಿಂದಲೇ ವಿಶ್ವದ ದೊಡ್ಡ ದೊಡ್ಡ ಬೌಲರ್‌ಗಳನ್ನು ಬೆದರಿಸಿರುವ ಇಶಾನ್ ಕಿಶನ್ ಈ ಬಾರಿಯ ಬೆಸ್ಟ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಪಾಕಿಸ್ತಾನ ವಿರುದ್ಧ ಇವರು ನೀಡಿದ ಕಾಣಿಕೆ ಮರೆಯುವ ಹಾಗಿಲ್ಲ, ತಮ್ಮ ಆಕ್ರಮಣಕಾರಿ ಮನಸ್ಥಿತಿಯಿಂದಲೇ ಅವರು ದೊಡ್ಡ ಬ್ಯಾಟರ್ ಆಗಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ದಾಖಲೆಗಳನ್ನು ಮಾಡುವ ಮುನ್ಸೂಚನೆ ಕೂಡ ನೀಡಿದ್ದಾರೆ. ಒಟ್ಟು 9 ಇನ್ನಿಂಗ್ಸ್‌ಗಳಲ್ಲಿ ಅವರು 317 ರನ್ ಬಾರಿಸಿದ್ದಾರೆ.



ಟಿಮ್ ಸೈಫರ್ಟ್ (ನ್ಯೂಜಿಲೆಂಡ್)

ನ್ಯೂಜಿಲೆಂಡ್ ತಂಡದ ಟಿಮ್ ಸೈಫರ್ಟ್ ಈ ಬಾರಿಯ ಬೆಸ್ಟ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಮೊದಲನೇ ಪಂದ್ಯದಿಂದಲೂ ನ್ಯೂಜಿಲೆಂಡ್ ಸ್ಫೋಟಕ ಆರಂಭ ನೀಡುತ್ತಿರುವ ಅವರು, ಸ್ಫೋಟಕ ಬ್ಯಾಟಿಂಗ್‌ಗೆ ಖ್ಯಾತರಾಗಿದ್ದಾರೆ. ಒಟ್ಟು 8 ಇನ್ನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಅವರು, 326 ರನ್ ಬಾರಿಸಿದ್ದಾರೆ.



ಸಂಜು ಸ್ಯಾಮ್ಸನ್

ಆಡಿರುವ 5 ಪಂದ್ಯಗಳಲ್ಲಿ ಭರ್ಜರಿ ಬ್ಯಾಟಿಂಗ್‌ನೊಂದಿಗೆ ದಾಖಲೆ ಮಾಡಿರುವ ಸಂಜು ಸ್ಯಾಮ್ಸನ್ ವಿಶ್ವಕಪ್‌ನ ಟಾಪ್ ಬ್ಯಾಟರ್ ಅನಿಸಿಕೊಂಡರು. ಕಳೆದ ಮೂರು ಪಂದ್ಯಗಳಲ್ಲಿ 97★, 89, 89 ರನ್ ಗಳಿಸಿರುವ ಅವರು, 321 ರನ್ ಗಳಿಸಿ ದಾಖಲೆ ಮಾಡಿದ್ದಾರೆ. ಟಿಮ್ ಸೀಫರ್ಟ್ ಕೂಡ 321 ರನ್ ಗಳಿಸಿ ಎರಡನೇ ಸ್ಥಾನದಲ್ಲಿದ್ದಾರೆ.



ಚೋಕರ್ಸ್ ಆಗೇ ಉಳಿದ ನ್ಯೂಜಿಲೆಂಡ್

ಟೆಸ್ಟ್ ಚಾಂಪಿಯನ್‌ಶಿಪ್ ಹಾಗೂ ಒಂದು ಚಾಂಪಿಯನ್ಸ್ ಟ್ರೋಫಿ ಗೆದ್ದರೂ ನ್ಯೂಜಿಲೆಂಡ್ ವಿಶ್ವಕಪ್‌ನಲ್ಲಿ ಚೋಕರ್ಸ್ ಪಟ್ಟ ಕಟ್ಟಿಕೊಂಡಿದೆ. ಅದು ಕಳಚಲಾಗದೆ ಮತ್ತೊಂದು ಬಾರಿ ಸೋತು ಹೊರ ನಡೆದಿದೆ. 2019ರ ಏಕದಿನ ವಿಶ್ವಕಪ್ ಫೈನಲ್‌ಗೇರಿದ್ದರೂ ತಂಡಕ್ಕೆ ದುರಾದೃಷ್ಟವಶಾತ್ ಸೋಲು ಎದುರಾಗಿತ್ತು. 2025ರಲ್ಲಿ ಫೈನಲ್‌ಗೇರಿದ್ದ ತಂಡ ಭಾರತದೊಂದಿಗೆ ಸೋಲು ಕಂಡಿತ್ತು. ಈಗ ಮೂರನೇ ಬಾರಿ ಫೈನಲ್‌ನಲ್ಲಿ ಸೋತಿದೆ. ಚೋಕರ್ಸ್ ಎಂಬ ಪಟ್ಟ ತನ್ನಲ್ಲೇ ಉಳಿಸಿಕೊಂಡಿದೆ.

ಬ್ಲೆಸ್ಸಿಂಗ್ ಮುಝರ್ಬಾನಿ (ಜಿಂಬಾಬ್ವೆ)



ಬ್ಯಾಟರ್‌ಗಳ ಪಾಲಿಗೆ ದುಃಸ್ವಪ್ನವಾಗಿ ಕಾಡಿರುವ ಜಿಂಬಾಬ್ವೆ ತಂಡದ ವೇಗಿ ಬ್ಲೆಸ್ಸಿಂಗ್ ಈ ಬಾರಿಗೆ ಬೆಸ್ಟ್ ಬೌಲರ್ ಎನ್ನುವುದರಲ್ಲಿ ಸಂಶಯವೇ ಇಲ್ಲ. ಮೊದಲನೇ ಪಂದ್ಯದಿಂದಲೂ ಅವರು ಮ್ಯಾಚ್ ವಿನ್ನರ್ ಅನ್ನಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ. ನಿರ್ಣಾಯಕ ಪ್ರದರ್ಶನ ನೀಡಿದ್ದಾರೆ. 6 ಪಂದ್ಯಗಳನ್ನಾಡಿರುವ ಅವರು, 23.5 ಓವರ್ ಬೌಲಿಂಗ್ ಮಾಡಿ 188 ರನ್



ಶ್ಯಾಡ್ಲಿ ವ್ಯಾನ್ ಶಾಲ್ಕವಿಕ್ (ಅಮೆರಿಕ)

ಬೌಲಿಂಗ್ ಮಾಡಿ ದೊಡ್ಡ ಪರಿಣಾಮ ಮೂಡಿಸಿದ ಮೊದಲನೇ ಆಟಗಾರ ಅಮೆರಿಕದ ಶ್ಯಾಡ್ಲಿ.! ಭಾರತದೊಂದಿಗೆ ನಡೆದಿದ್ದ ಮೊದಲ ಪಂದ್ಯದಿಂದಲೂ ಅದೇ ಬೆಸ್ಟ್ ಪ್ರದರ್ಶನ ನೀಡಿದ್ದಾರೆ. ಆಡಿರುವ ನಾಲ್ಕೇ ಪಂದ್ಯಗಳಲ್ಲಿ ತೆಗೆದಿದ್ದು ಬರೋಬ್ಬರಿ 13 ವಿಕೆಟ್.! ಇದೇ ಆವೇಗ ಮತ್ತು ಪರಿಣಾಮ ಅವರನ್ನು ಈ ಬಾರಿ ನಂಬರ್ 1 ಬೌಲರ್ ಅನ್ನಾಗಿ ಮಾಡಿದೆ. 14.5 ಓವರ್ ಮಾತ್ರ ಮಾಡಿರುವ ಅವರು, 101 ರನ್ ನೀಡಿ 6.81 ಎಕನಾಮಿ ಹೊಂದಿದ್ದು ಇನ್ನೂ ವಿಶೇಷ.



ಬೆವರಿಳಿಸಿದ ಬೌಲರ್ಸ್

ಬ್ಯಾಟರ್‌ಗಳು ಪಂದ್ಯ ಗೆಲ್ಲಿಸಿದರೆ ಬೌಲರ್‌ಗಳು ಕೂಟಗಳನ್ನೇ ಗೆಲ್ಲಿಸುತ್ತಾರೆ ಎಂಬ ಮಾತಿದೆ. ಪ್ರತಿ ಪಂದ್ಯದಲ್ಲಿ ಪಂದ್ಯದ ವೇಗ ಮತ್ತು ಪಂದ್ಯದ ಫಲಿತಾಂಶ ಅವಲಂಬನೆ ಬೌಲರ್‌ಗಳ ಮೇಲಿರುತ್ತೆ. ಬೌಲರ್‌ಗಳು ಸಾಥ್ ನೀಡಲಿಲ್ಲವೆಂದರೆ ಬ್ಯಾಟರ್‌ಗಳು ಬಾರಿಸಿದ ದೊಡ್ಡ ದೊಡ್ಡ ಸ್ಕೋರ್‌ಗಳು ಕೂಡ ವ್ಯರ್ಥವಾಗಿಬಿಡುತ್ತದೆ. ಬೌಲರ್‌ಗಳು ಮಾಡುವ ಒಂದೊಂದು ಓವರ್ ಪಂದ್ಯದ ತಿರುವನ್ನೇ ಬದಲಾಯಿಸುತ್ತದೆ. ಪಂದ್ಯದ ಫಲಿತಾಂಶಗಳನ್ನೇ ಬದಲಾಯಿಸುತ್ತದೆ. ಟೂರ್ನಿಯ ಕುತೂಹಲವನ್ನೇ ಬದಲಾಯಿಸುತ್ತದೆ. ಹಾಗಿದ್ದರೆ ಈ ಬಾರಿಯ ಬೆಸ್ಟ್ ಬೌಲರ್ಸ್ ಯಾರು?

ಲುಂಗಿ ಎನ್‌ಗಿಡಿ (ಆಫ್ರಿಕಾ)

ಸ್ಲೋವರ್ ಮೂಲಕ ಈ ಬಾರಿ ಗಮನ ಸೆಳೆದ ಬೌಲರ್ ಎಂದರೆ ಅವರು ಲುಂಗಿ ಎನ್‌ಗಿಡಿ. ಭಾರತ ಸೇರಿದಂತೆ ಪ್ರಮುಖ ತಂಡಗಳೆದುರು ಕರಾರುವಾಕ್ ಬೌಲಿಂಗ್‌ನೊಂದಿಗೆ ಬ್ಯಾಟರ್‌ಗಳ ಹೆಡೆಮುರಿ ಕಟ್ಟಿದ್ದಾರೆ. ದೊಡ್ಡ ದೊಡ್ಡ ವಿಕೆಟ್‌ಗಳನ್ನು ತಂದುಕೊಟ್ಟಿದ್ದಾರೆ. ಪಂದ್ಯದ ಗತಿಯನ್ನು, ಸ್ಥಿತಿಯನ್ನು ಬದಲಿಸಿದ್ದಾರೆ. ಒಟ್ಟು 26 ಓವರ್‌ಗಳನ್ನು ಮಾಡಿರುವ ಅವರು, 187 ರನ್ ನೀಡಿದ್ದು 12 ವಿಕೆಟ್ ಕಿತ್ತಿದ್ದಾರೆ.



ಜಸ್‌ಪ್ರೀತ್ ಬೂಮ್ರಾ

ಮೊದಲ ಪಂದ್ಯದಿಂದಲೂ ನಿರ್ಣಾಯಕ ಆಟವಾಡುತ್ತಿರುವ ಜಸ್‌ಪ್ರೀತ್ ಬೂಮ್ರಾ ಅವರು ಈ ಬಾರಿಯ ಬೆಸ್ಟ್ ಬೌಲರ್ ಎನಿಸಿದರು. ಭಾನುವಾರದ ಪಂದ್ಯಕ್ಕೂ ಮುನ್ನ ಬೂಮ್ರಾ 10 ವಿಕೆಟ್ ಮಾತ್ರ ಪಡೆದಿದ್ದರು. ಫೈನಲ್ ಪಂದ್ಯದಲ್ಲಿ 4 ವಿಕೆಟ್ ಕಿತ್ತ ಅವರು 14 ವಿಕೆಟ್ ಕಿತ್ತು ಮೊದಲ ಸ್ಥಾನಕ್ಕೇರಿದರು.





ವರುಣ್‌ಚಕ್ರವರ್ತಿ (ಭಾರತ)

ಭಾರತ ಪರ ಅಲ್ಪ ದುಬಾರಿಯಾದರೂ ವರುಣ್ ತಮ್ಮ ಮಾಸ್ಟರ್ ಕ್ಲಾಸ್ ಆಟ ಮುಂದುವರಿಸಿದ್ದಾರೆ. ದೊಡ್ಡ ದೊಡ್ಡ ಇನ್ನಿಂಗ್ಸ್‌ಗಳ ಮೂಲಕ ಈ ಬಾರಿಯ ಗೆಲುವಿನ ರೂವಾರಿಯೂ, ಬೆಸ್ಟ್ ಬೌಲರ್ ಆಗಿಯೂ ಹೊರ ಹೊಮ್ಮಿದ್ದಾರೆ. ತಮ್ಮ ಸ್ಪಿನ್ ಮೂಲಕ ವಿನ್ ನೀಡುವ ಅವರು ಒಟ್ಟು 14 ವಿಕೆಟ್ ಪಡೆದರು.

ಟಾಪ್ 5 ವೈಯಕ್ತಿಕ ಇನ್ನಿಂಗ್ಸ್

ಆಟಗಾರ	ತಂಡ	ಎದುರಾಳಿ	ಸ್ಕೋರ್
ಯುವರಾಜ್ ಸಾಮ್ರಾ	ಕೆನಡಾ	ನ್ಯೂಜಿಲೆಂಡ್	110
ನಿಸ್ಸಂಕಾ	ಶ್ರೀಲಂಕಾ	ಆಸ್ಟ್ರೇಲಿಯಾ	100★
ಫರ್ಹಾನ್	ಪಾಕಿಸ್ತಾನ	ನಮೀಬಿಯಾ	100★
ಫಿನ್ ಅಲೆನ್	ಕಿವೀಸ್	ದ.ಆಫ್ರಿಕಾ	100★
ಸಂಜು	ಭಾರತ	ಇಂಗ್ಲೆಂಡ್	97★

ನೆನಪಿನಲ್ಲಿ ಉಳಿಯುವ ಪಂದ್ಯ

ಇಂಗ್ಲೆಂಡ್-ನೇಪಾಳ ಪಂದ್ಯ

ವಿಶ್ವಕಪ್‌ನ 5ನೇ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ಠಕ್ಕರ್ ನೀಡಿದ ನೇಪಾಳ ನೆನಪಿನಲ್ಲೇ ಉಳಿಯುವ ಪಂದ್ಯವಾಡಿತು. ಲೀಗ್ ಹಂತದಲ್ಲಿ 185 ರನ್ ಗುರಿ ಬೆನ್ನತ್ತುವಾಗ 180 ರನ್‌ಗಳಿ ಕೇವಲ ನಾಲ್ಕು ರನ್‌ನಿಂದ ಸೋತಿತ್ತು. ಕ್ರಿಕೆಟ್ ಕಂಡುಹಿಡಿದ ತಂಡವನ್ನೇ ಸೋಲಿಸುವ ಹಂತಕ್ಕೆ ಬಂದಿದ್ದ ನೇಪಾಳ ಕೊನೆಯ ಬಾಲ್‌ನಲ್ಲಿ ಸೋತಿತು. ತಂಡದ ಲೋಕೇಶ್ 39 ರನ್ ಗಳಿಸಿ ಗಮನ ಸೆಳೆದಿದ್ದರು.

2 ಸೂಪರ್ ಓವರ್

ದ.ಆಫ್ರಿಕಾ ಹಾಗೂ ಅಫ್ಘಾನಿಸ್ತಾನ ಎದುರಾಗಿದ್ದವು. ಮೊದಲು ಬ್ಯಾಟಿಂಗ್ ಮಾಡಿದ್ದ ಆಫ್ರಿಕಾ 187 ರನ್‌ಗಳಿಸಿತ್ತು. ಗುರ್ಬಾಜ್ ಅವರ ಬ್ಯಾಟಿಂಗ್‌ನೊಂದಿಗೆ ಆಫ್ಘನ್ ಕೂಡ ಅಷ್ಟೇ ರನ್ ಬಾರಿಸಿತು. ಪರಿಣಾಮ ಸೂಪರ್ ಓವರ್ ಮೊರೆ ಹೋಗಲಾಯಿತು. ಅಲ್ಲಿಯೂ ಟೈ ಆಯಿತು. ಮತ್ತೊಂದು ಸೂಪರ್ ಓವರ್ ಆಡಿಸಲಾಯಿತು. ಆದರಲ್ಲಿ ದ.ಆಫ್ರಿಕಾ 4 ರನ್‌ಗಳ ಗೆಲುವು ಸಾಧಿಸಿತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5918



ಎಡದಿಂದ ಬಲಕ್ಕೆ
1.ಬಯಸು-ಅಪೇಕ್ಷೆಪಡು (4)
3.ಜನ್ಯ ನಡುವೆ ಇರುವ ದೊರೆಗಳ ಗುಂಪು (4)
5.ಈತ ಹರೆಯದವನು (3)
6.ಮಾರಿಯ ನಡುವೆ ಇಂಪಿನಿಂದ ಕೂಡಿದ್ದು ತಿರುಗಿದೆ (3)
8.ಅಚ್ಚ ಬಿಳಿಯ ಬಣ್ಣ ನೋಡಿ ಉಂಟಾದ ಬೆರಗು (3)
10.ಎಚ್ಚರಿಕೆಯಿಲ್ಲಿ ತಿರುಗಿದೆ (2)
12.ಪ್ರಮಾಣ ಎಂಬರ್ಥದ ಮರ್ಯಾದೆ (2)
14. ಲಕ್ಷ್ಯವಹಿಸು (3)
15.ಕೆಳಮುಖವಾಗಿ ಹೋಗುವುದು-ದುರ್ಗತಿ (4)
16.ಮರ-ಕಲ್ಲನ್ನು ತೂತು ಕೊರೆವ ಹುಳು (4)

ಮೇಲಿನಿಂದ ಕೆಳಕ್ಕೆ
1.ಡಾ.ರಾಜ್-ಬಿ.ಸರೋಜಾದೇವಿ ಅಭಿನಯದ ಚಿತ್ರ (5)
2.ಉತ್ತಮವಾಗಿ ಕಾಪಾಡಿದ್ದು (4)
3.ಭಾರತದ ಪವಿತ್ರ ಮಹಾಕಾವ್ಯಗಳಲ್ಲೊಂದು (4)
4.ಮೇರುಪರ್ವತ-ಚಿನ್ನದ ಬೆಟ್ಟವಿದು (5)
7.ಹೂವು ಸೇರಿಸಿ ಕಟ್ಟಿದ ಹಾರ (3)
8.ಇಂದ್ರನ ಅಂಶದಿಂದ ಜನಿಸಿದ ಪಾಂಡವ (4)
9.ಪರ್ವತರಾಜನ ಮಗಳು ತಲೆಕೆಳಗಾಗಿದ್ದಾಳೆ (3)
11. ಎಲ್ಲಮ್ಮ ದೇವತೆಯ ಭಕ್ತೆ (3)
12. ಈತ ಮನುವಿನ ಸಂತತಿಯವನು (3)
13. ರತ್ನಖಚಿತವಾದ ಶಿರೋಭೂಷಣ (3)

5917 ಉತ್ತರ

ಎಡದಿಂದ ಬಲಕ್ಕೆ:
1.ವಿವರಿಸು 3.ಉಪನ್ಯಾಸ
5.ಪ್ರತಾಪ 6.ಪರಾಜಿತ
8.ಹನುಮಂತ
10.ಅತಿರೇಕ 12.ಸುಸಜ್ಜಿತ
14.ಪಗಾರಾ 15.ಜರಿಪೇಟ
16.ಪರಿಪೂರ್ಣ

ಮೇಲಿನಿಂದ ಕೆಳಕ್ಕೆ:
1.ವಿಶ್ವರೂಪ 2.ಸುಪ್ರಭಾತ
3.ಉಪಗ್ರಹ
4.ಸಹಮತ 7.ರಾಮಸತಿ
9.ಮಂದಹಾಸ 10.ಅಗ್ರಜ
11.ಕಪಟ 12.ಪರಾತ
13.ಸುವರ್ಣ

ಕಿರುಸುದ್ದಿ

ರೇಣುಕಾಚಾರ್ಯರ ಜಯಂತಿ ಇಂದು

ಮುಂಡರಗಿ: ಪಟ್ಟಣದಲ್ಲಿ ಮಾ.9 ರಂದು ರೇಣುಕಾಚಾರ್ಯರ ಜಯಂತಿಯನ್ನು ವೈಭವಪೂರಿತವಾಗಿ, ಭಕ್ತಿಭಾವದಿಂದ ಆಚರಿಸಲು ಮುಂಡರಗಿ ತಾಲೂಕು ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘವು ಸಕಲ ಸಿದ್ಧತೆಗಳನ್ನು ಕೈಗೊಂಡಿದೆ. ಬೆಳಗ್ಗೆ 8 ಗಂಟೆಗೆ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಿಂದ ರೇಣುಕಾಚಾರ್ಯರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲ ವಾದ್ಯಗಳೊಂದಿಗೆ ಆರಂಭವಾಗಲಿದೆ. ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬೆಳಗ್ಗೆ 11 ಗಂಟೆಗೆ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಮಂಗಲಗೊಳ್ಳಲಿದೆ.

ಬೆಳಗ್ಗೆ 11.30ಕ್ಕೆ ನಡೆಯುವ ಜಯಂತಿ ಸಮಾರಂಭವು ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ಜರುಗಲಿದೆ. ಬನ್ನಿಕೊಪ್ಪದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ, ಕಲಕೇರಿ-ವಿರುಪಾಪುರದ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಿರೇವಡ್ಡಟ್ಟಿಯ ವೀರೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಂಪಸಾಗರ ಕಟ್ಟಿಮನಿ ಹಿರೇಮಠದ ರುದ್ರಮುನಿಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಶ್ರೀ.ಜ.ಅನ್ನದಾನೀಶ್ವರ ಸಂಸ್ಥಾನಮಠದ ಉತ್ತರಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಸೇರಿದಂತೆ ಅನೇಕ ಪೂಜ್ಯರು ನೇತೃತ್ವ ವಹಿಸುವರು. ಅಧ್ಯಕ್ಷತೆಯನ್ನು ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ.ಜೆ. ಹಿರೇಮಠ ವಹಿಸಲಿದ್ದಾರೆ. ಕರ್ನಾಟಕದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಕಾಂಗ್ರೆಸ್ ಯುವ ಮುಖಂಡ ಹಾಗೂ ಕೆಪಿಸಿಸಿ ಸದಸ್ಯ ಆನಂದಸ್ವಾಮಿ ಗಡ್ಡದೇವರಮಠ, ರಾಜ್ಯ ಪ್ರಶಸ್ತಿ ಪುರಸ್ಕೃತ ಜಾನಪದ ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಭಾಗವಹಿಸಲಿದ್ದಾರೆ. ಬೆಂಗಳೂರಿನ ಜಯಕಿರಣ ಸಂಸ್ಥೆಯ ವ್ಯವಸ್ಥಾಪಕ ಅನ್ನದಾನಿ ಹಿರೇಮಠ ಸೇರಿದಂತೆ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಗುವುದು ಎಂದು ಮುಂಡರಗಿ ತಾಲೂಕು ಶ್ರೀ ವೀರಮಾಹೇಶ್ವರ ಜಂಗಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ.ಜೆ. ಹಿರೇಮಠ, ಯುವ ಘಟಕದ ಅಧ್ಯಕ್ಷ ವಿನಯಕುಮಾರ ಬಿ. ಗಂಧದ ಹಾಗೂ ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಯು. ಹಂಪಿಮಠ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಗದಗ: ಲೋಕವಿಖ್ಯಾತ ಐತಿಹಾಸಿಕ ಕೀರ್ತಿಯ ತಾಣವಾದ ಲಕ್ಕುಂಡಿಯ ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾ ಸರಸ್ವತಿ ಪೂಜೆ ಹಾಗೂ 5ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಭಕ್ತಿ-ಭಾವ, ಹರ್ಷ ಸಂಯೋಜನೆಗಳೊಂದಿಗೆ ಅರ್ಥಪೂರ್ಣವಾಗಿ ನೆರವೇರಿತು.

ಲಕ್ಕುಂಡಿಯ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಮೀರನಾಯಕ ಮಾತನಾಡಿ, ಶಿಕ್ಷಣವೆಂಬುದು ಕೇವಲ ಅಕ್ಷರ ಜ್ಞಾನವಲ್ಲ ಅದು ಮನುಷ್ಯನ ಮನಸ್ಸನ್ನು ಮೆರುಗುಗೊಳಿಸುವ ಶಕ್ತಿಯಾಗಿದೆ. ಪುಸ್ತಕದಲ್ಲಿರುವ ಜ್ಞಾನ ಜೀವನದ ಬೆಳಕಾಗಬೇಕು ಎಂದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಂ 1 ರ ಮ್ಯಾನೇಜರ್ ಶರಣಪ್ಪ ಗರ್ಜಪ್ಪನವರ ಮಕ್ಕಳಿಗೆ ಸಂಗೀತವನ್ನು ಉಣಬಡಿಸಿದರು. ಅಂಬುಜಾ ಕುಲಕರ್ಣಿಯವರು ಸರಸ್ವತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಪಿ.ಬಿ.ಬರದ್ವಾಡ, ಅರ್ಜುನ ಚಲವಾದಿ, ಎ.ಎಂ. ದಂಡಿನ, ಲಕ್ಷ್ಮೀ ಗರ್ಜಪ್ಪನವರ, ಆರ್.ಬಿ.ಬರದ್ವಾಡ, ಬಸವರಾಜ ಗರ್ಜಪ್ಪನವರ, ರಫೀಯಾ ದಂಡಿನ ಇದ್ದರು.

ಯೋಗಿನಾರೇಯಣ ಜಯಂತಿ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಯೋಗಿನಾರೇಯಣ ಜಯಂತಿ ಕಾರ್ಯಕ್ರಮವನ್ನು ಜರುಗಿಸಲಾಯಿತು. ಅಪರ ಜಿಲ್ಲಾಧಿಕಾರಿ ದುರಗೇಶ ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ರಾಜ ಕುಮಾರ ಎಸ್. ಸಂಕನೂರ, ಕಲಾವಿದರಾದ ಬಸವರಾಜ, ಈರಣ್ಣ, ಮಂಜುನಾಥ ಚಲವಾದಿ ಉಪಸ್ಥಿತರಿದ್ದರು.

ದಾಖಲೆ ಪರಿಶೀಲನೆ



ಮುಂಡರಗಿ: ಬೆಂಗಳೂರಿನ ಪತ್ರಗಾರ ಇಲಾಖೆ ಮತ್ತು ಗ್ಯಾಸೆಟಿಯರ್ ಇಲಖೆಯ ನಿರ್ದೇಶಕ ಡಾ.ಗವಿಸಿದ್ದಯ್ಯ ಮತ್ತು ಜಂಟಿ ನಿರ್ದೇಶಕಿ ಮಂಜುಳಾ ಯಲಿಗಾರ ತಾಲೂಕಿನ ಕಲಕೇರಿ ಗ್ರಾಮದ ದೇಸಾಯಿ ಮನೆತನಕ್ಕೆ ಭೇಟಿ ನೀಡಿ ಮನೆತನದ ಚಾರಿತ್ರಿಕ ದಾಖಲೆಗಳನ್ನು ಪರಿವೀಕ್ಷಣೆ ಮಾಡಿದರು.

ಈ ವೇಳೆ ದೇಸಾಯಿ ಮನೆತನದ ರವಿರಾಜ ದೇಸಾಯಿ ಮತ್ತಿತರರು ದಾಖಲೆಗಳನ್ನು ತೋರಿಸಿ ಮಾಹಿತಿ ನೀಡಿದರು. ಕಳೆದ ವರ್ಷ ಇಲಾಖೆಯ ಸಹಯೋಗದಲ್ಲಿ ಆಯೋಜನೆಗೊಂಡು ಯಶಸ್ವಿಯಾಗಿ ಸಂಪನ್ನಗೊಂಡಿರುವ ಕಣ್ಮರೆಯಾದ ದೇಶಗತಿ ಕಲಕೇರಿ ಸಂಸ್ಥಾನದ ಗದಗ ಮತ್ತು ಕೊಪ್ಪಳದ ಐತಿಹಾಸಿಕ ನಿರೂಪಣೆಗಳು ಎಂಬ ಎರಡು ದಿನದ ರಾಜ್ಯ ವಿಚಾರ ಸಂಕೀರಣದಲ್ಲಿ ಮಂಡನೆಯಾದ ಲೇಖನಗಳ ಕುರಿತು ನಿರ್ದೇಶಕರ ಗಮನ ಸೆಳೆಯಲಾಯಿತು. ನಿರ್ದೇಶಕ ಡಾ.ಗವಿಸಿದ್ದಯ್ಯ ಅವರು ಶೀಘ್ರ ಸಂಪಾದಕ ಮಂಡಳಿ ರಚಿಸಿ ಈ ವಿಚಾರ ಸಂಕೀರಣದಲ್ಲಿ ಮಂಡನೆಯಾಗಿರುವ ಲೇಖನಗಳನ್ನು ಸಂಗ್ರಹಿಸಿ ಕರಡು ಪ್ರತಿಯೊಂದಿಗೆ ಕೃತಿಯ ಪ್ರಕಟಣೆಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದಾರೆ. ಹೀಗಾಗಿ ವಿಚಾರ ಸಂಕೀರಣದಲ್ಲಿ ವಿಚಾರ ಮಂಡಿಸಿದ ಎಲ್ಲರೂ ಆದಷ್ಟು ಬೇಗನೆ ಲೇಖನಗಳನ್ನು ಕಳಿಸಿಕೊಡಲು ಈ ಮೂಲಕ ರವಿರಾಜ ದೇಸಾಯಿ ವಿನಂತಿಸಿದ್ದಾರೆ.



ಗಜೇಂದ್ರಗಡ: ಗೌಡಗೇರಿ ಸಮೀಪದ ಹಾದಿ ಬಸವೇಶ್ವರ ಜಾತ್ರಾ ಮಹೋತ್ಸವ ಭಕ್ತರ ಹರ್ಷೋದ್ಗಾರದ ನಡುವೆ ಭಾನುವಾರ ವೈಭವದಿಂದ ಜರುಗಿತು. ಬೆಳಗ್ಗೆಯಿಂದ ಸಂಜೆವರೆಗೆ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು. ರಥೋತ್ಸವಕ್ಕೆ ಸಂಗಯ್ಯಜ್ಜನವರಿಂದ ವೀರಭದ್ರೇಶ್ವರ ಒಡಪುಗಳನ್ನು ಹೇಳುವ ಮೂಲಕ ಡೊಳ್ಳು ಮತ್ತು ಕರಡಿಮಜಲು ವಾದ್ಯಗಳ ನಾದಕ್ಕೆ ಭಕ್ತರು ಹರ್ಷದಿಂದ ಕುಣಿದಾಡಿದರು.

ಶರಣ ಚಿಂತನ ಉಪನ್ಯಾಸ ಕಾರ್ಯಕ್ರಮ ಉದ್ಘಾಟನೆ

ಮುಂಡರಗಿ: ಶರಣರು ತಾವು ಬದುಕಿದ್ದಲ್ಲದೇ ಸೇವೆ ಸಹಕಾರ ಸಹಬಾಳ್ವೆಯಿಂದ ನಡೆದಿದ್ದಾರೆ. ಅವರ ಆದರ್ಶಗಳನ್ನು ಇಂತಹ ವೇದಿಕೆಯಿಂದ ತಿಳಿಯಬಹುದು ಎಂದು ನಿವೃತ್ತ ಪ್ರಾಚಾರ್ಯ ಶರಣಪ್ಪ ಕುಬ್ಬ ಹೇಳಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ, ಶರಣ ಸಾಹಿತ್ಯ ಪರಿಷತ್ತು ಹಾಗೂ ಚೈತನ್ಯ ಶಿಕ್ಷಣ ಸಂಸ್ಥೆ ಸೌರಭ ಮುಂಡರಗಿ ಇವುಗಳ ಆಶ್ರಯದಲ್ಲಿ ನಡೆದ ಶರಣ ಮಹಾಪ್ರಸಾದಿ ಬಿಬ್ಬಿಬಾಚಯ್ಯ ಕುರಿತು ಶರಣ ಚಿಂತನ ಉಪನ್ಯಾಸ ಕಾರ್ಯಕ್ರಮ 36 ಉದ್ಘಾಟಿಸಿ ಮಾತನಾಡಿದರು.

ವಿಜಯಲಕ್ಷ್ಮೀ ಲಿಂಬಿಕಾಯಿ ಉಪನ್ಯಾಸ ನೀಡಿ, ಶರಣ ಬಿಬ್ಬಿ ಬಾಚಯ್ಯ ಅವರು ಬಸವಣ್ಣನ ಕಾಲದ ಪ್ರಮುಖ ಶರಣರಲ್ಲಿ ಒಬ್ಬರು. ಅವರು ಭಕ್ತಿ, ಸಮಾನತೆ ಮತ್ತು ಮಾನವೀಯತೆಯನ್ನು ಸಾರಿದ ಮಹಾನ್ ಸಂತರು ಎಂದರು.

ಅಧ್ಯಕ್ಷತೆ ವಹಿಸಿದ್ದ ವೀಣಾ ಪಾಟೀಲ ಮಾತನಾಡಿ, ಬಿಬ್ಬಿ ಬಾಚಯ್ಯನವರು ನೂರಾರು ಹೆಚ್ಚು ವಚನಗಳನ್ನು ಬರೆದಿದ್ದಾರೆ. ಅವರ ಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅನುಸರಿಸಿದರೆ ಸಮಾಜದಲ್ಲಿ ಸಮಾನತೆ ಮತ್ತು ಸೌಹಾರ್ದತೆ ಹೆಚ್ಚುತ್ತದೆ ಎಂದರು. ಕಸಾಪ ಗೌರವ ಕಾರ್ಯದರ್ಶಿ ಮಂಜುನಾಥ ಮುಧೋಳ ಪ್ರಾಸ್ತಾವಿಸಿದರು. ಕವಿ ಕೊಟ್ರೇಶ ಜವಳಿ, ಅಕ್ಕಮ್ಮ ಕೊಟ್ಟೂರ ಶೆಟ್ಟರ ಸ್ವರಚಿತ ಕವನ ವಾಚಿಸಿದರು. ಕವಯಿತ್ರಿ ಗಿರಿಜಾ ಕುಬ್ಬ ಪ್ರಾರ್ಥಿಸಿದರು. ಎಸ್.ಎ. ಪಾಟೀಲ, ಎಸ್. ಎನ್. ಕಲಕೇರಿ, ಕೃಷ್ಣಮೂರ್ತಿ ಸಾಹುಕಾರ, ಮಹೇಶ ಮೇಟಿ, ಸಂತೋಷ ಅಂಗಡಿ, ನಂಬುಂಡೇಶ ಲಿಂಬಿಕಾಯಿ, ಅರುಣಾ ಗುಜ್ಜರಿ, ಪ್ರತಿಭಾ ಹೊಸಮನಿ, ಶೋಭಾ ಪಾಟೀಲ, ರತ್ನಾ ಕಾಗನೂರಮಠ ಇತರರಿದ್ದರು. ಕಸಾಪ ಸದಸ್ಯ ಆರ್.ವೈ. ಪಾಟೀಲ ನಿರೂಪಿಸಿದರು. ಮಂಜುಳಾ ಇಟಗಿ ವಂದಿಸಿದರು.



ಮುಂಡರಗಿ: ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ, ಶರಣ ಸಾಹಿತ್ಯ ಪರಿಷತ್ತು ಹಾಗೂ ಚೈತನ್ಯ ಶಿಕ್ಷಣ ಸಂಸ್ಥೆ ಸೌರಭ ಮುಂಡರಗಿ ಇವುಗಳ ಆಶ್ರಯದಲ್ಲಿ ನಡೆದ ಶರಣ ಮಹಾಪ್ರಸಾದಿ ಬಿಬ್ಬಿಬಾಚಯ್ಯ ಕುರಿತು ಶರಣ ಚಿಂತನ ಉಪನ್ಯಾಸ ಕಾರ್ಯಕ್ರಮ 36 ಉದ್ಘಾಟನೆ ನಡೆಯಿತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | ಸಚಿವ ಎಚ್‌ಕೆಪಾ ಅಭಿಮತ

ಗ್ಯಾರಂಟಿಯಿಂದ ಮಹಿಳೆ ಸ್ವಾವಲಂಬಿ

ಗದಗ: ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳಿಂದ ಬಡತನವನ್ನು ಬೇರು ಸಮೇತ ಕಿತ್ತೊಗೆಯುವ ಕಾರ್ಯ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಮಾನವ ಹಕ್ಕುಗಳಾಗಿ ಪರಿಗಣಿಸಲ್ಪಡುವಂತಹ ಕಾನೂನು ರೂಪುಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಭಾನುವಾರ ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ವತಿಯಿಂದ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಾಜಕೀಯವಾಗಿ ಪಂಚಾಯತ್ ವ್ಯವಸ್ಥೆಯಲ್ಲಿ ಶೇ.50 ಮೀಸಲಾತಿ ನೀಡುವುದರ ಮೂಲಕ ಮಹಿಳೆಯರು ಆಡಳಿತ ಹಾಗೂ ಅಧಿಕಾರವನ್ನು ಸಮರ್ಥವಾಗಿ ನಿರ್ವಹಿಸಬಲ್ಲರು ಎಂಬುದನ್ನು ಸಾಬೀತು ಮಾಡಿದ್ದಾರೆ. ದೇಶದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಬಹುಕಾಲ ಸಮರ್ಥವಾಗಿ ಆಡಳಿತ ನಡೆಸಿದ್ದಾರೆ. ಇಂದು ಪ್ರತಿ ಗ್ರಾಮದಲ್ಲೂ ಇಂದಿರಾ ಗಾಂಧಿಯಂತಹ ಶಕ್ತಿಯುತ ಮಹಿಳೆಯರು ಇದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ಮಹಿಳೆಯರನ್ನು ಮಾತೃಭೂಮಿ ಎಂದು ಸಂಬೋಧಿಸುವ ಮೂಲಕ ಗೌರವಿಸುವ ಸಂಸ್ಕೃತಿ ನಮ್ಮದಾಗಿದೆ. ವಿಶ್ವದಾದ್ಯಂತ ಮಹಿಳೆಯರಿಗೆ ಮಹತ್ವದ ಸ್ಥಾನಮಾನ ನೀಡಲಾಗುತ್ತಿದೆ. ಮಹಿಳೆ ಸಮಾಜದಲ್ಲಿ ಹಲವಾರು ರೂಪಗಳಲ್ಲಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾಳೆ ಎಂದರು.

ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಸಿದ್ದು ಪಾಟೀಲ, ಎಸ್. ಎನ್.ಬಳ್ಳಾರಿ, ಪ್ರಕಾಶ ಆಕಳವಾಡಿ, ನೀಲಮ್ಮ ಬೋಳನವರ, ಶಕುಂತಲಾ ಅಕ್ಕಿ, ಸೋಮನಕಟ್ಟಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಸಹಾಯಕ ಆಯುಕ್ತ ಗಂಗಪ್ಪ, ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಎಂ.ವಿ.ಚಳಗೇರಿ, ಪದ್ಮಾವತಿ ಜಿ. ಇದ್ದರು.

- ಗೃಹಲಕ್ಷ್ಮೀ ಯೋಜನೆಯಡಿ ಪ್ರತಿ ತಿಂಗಳು ಗದಗ ತಾಲೂಕಿಗೆ ಸುಮಾರು 30 ಕೋಟಿ ರೂ. ಅನುದಾನ ಬರುತ್ತಿದೆ ಎಂದು ತಿಳಿಸಿದ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ್ ಮಂದಾಲಿ
- ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡು ಯೋಜನೆಗಳಿಂದ ಜೀವನದಲ್ಲಿ ಆಗಿರುವ ಬದಲಾವಣೆ ವಿವರಿಸಿದರು



ಹೊಣೆಗಾರಿಕೆ ಸಮರ್ಥವಾಗಿ ನಿರ್ವಹಣೆ

ಮಹಿಳೆ ಮಗಳಾಗಿ, ಸಹೋದರಿಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಸೊಸೆಯಾಗಿ, ಅತ್ತೆಯಾಗಿ ಹಾಗೂ ಅಜ್ಜಿಯಾಗಿ ಹಲವು ಹೊಣೆಗಾರಿಕೆಗಳನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯ ಹೊಂದಿದ್ದಾಳೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಹೇಳಿದರು.

ಸಮಾನ ಅವಕಾಶಕ್ಕೆ ಯತ್ನ

12ನೇ ಶತಮಾನದಲ್ಲೇ ಮಹಿಳೆಯರಿಗೆ ಸಮಾನತೆ ಹಾಗೂ ಸ್ವಾತಂತ್ರ್ಯ ದೊರಕಬೇಕು ಎಂದು ಬಸವಣ್ಣನವರು ಹೋರಾಟ ನಡೆಸಿದರು. ಶ್ರೇಣೀಕೃತ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ದೊರಕದ ಹಿನ್ನಲೆ ಅದನ್ನು ಸರಿಪಡಿಸಲು ತಮ್ಮ ಜೀವನವನ್ನೇ ಬಸವಣ್ಣನವರು ಮುಡಿಪಾಗಿಟ್ಟರು ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ದೇಶದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಬಹುಕಾಲ ಸಮರ್ಥವಾಗಿ ಆಡಳಿತ ನಡೆಸಿದ್ದಾರೆ. ಇಂದು ಪ್ರತಿ ಗ್ರಾಮದಲ್ಲೂ ಇಂದಿರಾ ಗಾಂಧಿಯಂತಹ ಶಕ್ತಿಯುತ ಮಹಿಳೆಯರು ಇದ್ದಾರೆ.
■ ಎಚ್.ಕೆ.ಪಾಟೀಲ, ಸಚಿವ

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು 17 ವರ್ಷಗಳು ದೇಶವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ. ಮಹಿಳೆಯರಲ್ಲಿ ಅಗಾಧ ಶಕ್ತಿ ಅಡಗಿದ್ದು, ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ.
■ ಜಿ.ಎಸ್. ಪಾಟೀಲ, ಶಾಸಕ

ಮಹಿಳೆ ಸಾಧನೆಗೆ ಪುರುಷ ಬೆಂಬಲಿಸಲಿ

ಮುಂಡರಗಿ: ಮಹಿಳೆಯರು ಇಂದು ಪುರುಷನಿಗೆ ಸರಿಸಮಾನವಾಗಿ ಬೆಳೆಯುತ್ತಿದ್ದಾರೆ. ಅವರ ಹಿಂದೆ ತಂದೆ, ಅಣ್ಣ, ಪತಿ, ಸಹೋದರನಾಗಿ ಬೆನ್ನಲುಬಾಗಿ ಪುರುಷ ನಿಂತಾಗ ಮಾತ್ರ ಮಹಿಳೆ ಸಾಧನೆ ಮಾಡೊದಕ್ಕೆ ಸಾಧ್ಯವಾಗುತ್ತದೆ. ಮಹಿಳೆ ತನ್ನನ್ನು ತಾನು ರಕ್ಷಣೆ ಮಾಡುವುದರ ಜೊತೆಗೆ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುತ್ತಾಳೆ. ಛಲದಿಂದ ಸಾಧನೆ ಮಾಡಿದ ಅನೇಕ ಮಹಿಳಾ ಸಾಧಕರ ಜೀವನದ ಹೆಜ್ಜೆಗಳ ಕುರಿತು ಅರಿತಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಉಪನ್ಯಾಸಕಿ ಅರುಣಾ ಗುಜ್ಜರಿ ಹೇಳಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ವಸತಿ ನಿಲಯ ಸಂಯುಕ್ತಾಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಸಬಲೀಕರಣ-ಒಂದು ಚಿಂತನೆ ವಿಷಯವಾಗಿ ಉಪನ್ಯಾಸ ನೀಡಿದದರು.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ಸವಿತಾ ಸಾಸ್ವಿಹಳ್ಳಿ ಉದ್ಘಾಟಿಸಿ ಮಾತನಾಡಿ, ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ಸರ್ಕಾರ ಎಲ್ಲಾ ಸವಲತ್ತುಗಳನ್ನು ನೀಡುತ್ತಿವೆ. ಅದರ ಪ್ರಯೋಜನ ಸಾರ್ಥಕವಾಗಬೇಕಾದರೆ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ತಂದೆ ತಾಯಿಗೆ ಹೆಸರು ತರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಎಂ.ಜಿ. ಗಚ್ಚಣ್ಣವರ ಮಾತನಾಡಿ, ಮಹಿಳೆಯರು ಪ್ರತಿಯೊಂದು ರಂಗದಲ್ಲಿ ಬೆಳೆಯುತ್ತಿದ್ದಾರೆ. ನಿರಂತರ ಪ್ರಯತ್ನ ,ಓದು ಇದಕ್ಕೆ ಕಾರಣವಾಗಿದೆ ಎಂದರು.

ವೀಣಾ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳೆ ಅಬಲೆಯಲ್ಲಾ ಸಬಲೆಯಾಗಿದ್ದಾಳೆ. ಅನೇಕ ಕಷ್ಟಗಳಿಂದ ಮನೆಯ ಎಲ್ಲಾ ಜವಾಬ್ದಾರಿ ನಿಭಾಯಿಸಿ ಕ್ಷಮಯಾದರಿತ್ರಿಯಾಗಿ ಬೆಳೆದವಳು ಮಹಿಳೆ ಎಂದರು. ಕಸಾಪ ಗೌರವ ಕಾರ್ಯದರ್ಶಿ ಮಂಜುನಾಥ ಮುಧೋಳ ಮಹಿಳಾ ದಿನಾಚರಣೆ ಅಂಗವಾಗಿ ಸ್ವರಚಿತ ಕವನ ವಾಚನ ಮಾಡಿದರು. ರಮೇಶಗೌಡ ಪಾಟೀಲ, ಕಾವೇರಿ ಭೋಲಾ, ಕಸಾಪ ಆಜೀವ ಸದಸ್ಯರಾದ ರವಿಗೌಡ ಪಾಟೀಲ, ಶರಣಪ್ಪ ಹೊಂಬಳಗಟ್ಟಿ, ವಸತಿ ನಿಲಯದ ಸಿಬ್ಬಂದಿ ಮಮತಾಜ್ ಬಿಸನಳ್ಳಿ, ನಾಗಮ್ಮ ಹಳ್ಳಕಾರ, ರತ್ನಮ್ಮ ನಾಗರಹಳ್ಳಿ, ಇಮಾಂಬಿ ಬಾಗಮಾರ್, ಮೈಮುನ್ನಾ ಬೂಕಿಟಗಾರ ಭಾಗವಹಿಸಿದ್ದರು. ಉಪನ್ಯಾಸಕಿ ರತ್ನಾ ಕಾಗನೂರಮಠ ನಿರೂಪಿಸಿದರು. ಆರ್. ವೈ. ಪಾಟೀಲ ವಂದಿಸಿದರು.



ಸಮಾನತೆಗೆ ಶಿಕ್ಷಣವೊಂದೇ ಮಾರ್ಗ: ಜಿಎಸ್‌ಪಾ

ಮುಂಡರಗಿ: ಸಾವಿರಾರು ಜಾತಿ, ಅನೇಕ ಧರ್ಮಗಳನ್ನು ಹೊಂದಿದ ಭಾರತ ದೇಶದಲ್ಲಿ ಎಲ್ಲರೂ ಸಮಾನತೆಯಿಂದ, ಭ್ರಾತೃತ್ವದಿಂದ ಪರಸ್ಪರ ವಿಶ್ವಾಸದಿಂದ ಇರಬೇಕು ಎಂಬ ಪರಿಕಲ್ಪನೆ ಹೊಂದಿದ್ದವರು ಡಾ. ಬಿ.ಆರ್.ಅಂಬೇಡ್ಕರರು. ಇದರ ಫಲವಾಗಿಯೇ ಅವರು ಸಂವಿಧಾನವನ್ನು ರಚಿಸಿದರು ,ಅಸಮಾನತೆಯ ವಿರುದ್ಧವಾಗಿ ನಿರಂತರವಾಗಿ ಡಾ. ಬಿ.ಆರ್.ಅಂಬೇಡ್ಕರ್ ಅವರು ದೇಶ ಕಂಡ ಅಪ್ರತಿಮ ಹೋರಾಟಗಾರರು. ಅಂಥವರ ಮೂರ್ತಿ ಸ್ಥಾಪನೆಯಿಂದ ಅವರ ತತ್ವಾ ದರ್ಶಗಳನ್ನು ನಾವು ಪಾಲಿಸುವಂತಾಗಬೇಕು ಎಂದು ರೋಣ ಮತಕ್ಷೇತ್ರ ಶಾಸಕ ಹಾಗೂ ಬೆಂಗಳೂರು ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ. ಎಸ್. ಪಾಟೀಲ ಹೇಳಿದರು.

ಅವರು ತಾಲೂಕಿನ ಡಂಬಳ ಗ್ರಾಪಂ ಆವರಣದಲ್ಲಿ 6.8 ಅಡಿ ಎತ್ತರದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಮೂರ್ತಿ ಅನಾವರಣ ಮಾಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಂಬೇಡ್ಕರರು ಹಿಂದುಳಿದ ಶೋಷಿತರ ತುಳಿತಕ್ಕೊಳಗಾದವರಿಗೆ ನ್ಯಾಯ ಸಿಗಲಿ ಎಂದು ಬಯಸಿದ್ದರು. ಅವರು ಉನ್ನತ ಹುದ್ದೆಗೆ ಹೋಗಿ ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನ ಹೊರಬರಲು ಕಾರಣ ಅವರು ಪಡೆದ ಶಿಕ್ಷಣ. ಸಮಾನತೆಗೆ ಶಿಕ್ಷಣವೊಂದೇ ಮಾರ್ಗ ಎಂದರು.

ಸಾನ್ನಿಧ್ಯ ವಹಿಸಿದ್ದ ನಿಜಗುಣಪ್ರಭು ತೋಂಟದಾರ್ಯ ಸ್ವಾಮಿ ಆರ್ಶಿವಚನ ನೀಡಿ, ಸಮಾಜಕ್ಕೆ ತಮ್ಮನ್ನು ಅರ್ಪಿಸಿ ಕೊಂಡು ಎಲ್ಲರೂ ಸಮಾನತೆ ಹೊಂದಬೇಕು ಎಂದು ಹೇಳಿ ಬಾಳಿದವರು ಎಂದಿಗೂ ತಮ್ಮ ಮೂರ್ತಿಗಳಾಗಬೇಕು ಎಂದು ಬಯಸಿದವರಲ್ಲ. ಮೂರ್ತಿ ಸ್ಥಾಪನೆ ಅವರ ಬಗ್ಗೆ ಅಭಿಮಾನದ ಸಂಕೇತವಾಗಿದೆ. ಅವರು ಅನುಸರಿಸಿದ ಮಾನವೀಯತೆಯ ಹೆಜ್ಜೆ ಗುರುತುಗಳನ್ನು ಗುರ್ತಿಸಿಕೊಂಡು ಸಮಾಜದಲ್ಲಿ ಏಕತೆ ಐಕ್ಯತೆ ಭಾವ ಹೊಂದುವುದೇ ನಾವು ಅವರಿಗೆ ಸಲ್ಲಿಸಬೇಕಾದ ಗೌರವ ಎಂದರು. ಜೆ.ಟಿ.ಮಠದ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ ಮಾತನಾಡಿ, ಡಂಬಳದಲ್ಲಿ ಡಾ.ಅಂಬೇಡ್ಕರ್ ಮೂರ್ತಿ ಪ್ರತಿಷ್ಠಾಪಿಸಬೇಕೆಂಬುದು ಲಿಂ.ಸಿದ್ಧಲಿಂಗ ಮೂರ್ತಿ ತೋಂಟದಾರ್ಯ ಪೂಜ್ಯರ ಕನಸಾಗಿತ್ತು ಎಂದರು. ಅಧ್ಯಕ್ಷತೆಯನ್ನು ಡಂಬಳ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಶಿವಲೀಲಾ ದೇ. ಬಂಡಿಹಾಳ ವಹಿಸಿದ್ದರು. ಮಾಜಿ ಶಾಸಕ ರಾಮಕೃಷ್ಣ ಶಿ. ದೊಡ್ಡಮನಿ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ವೈ. ಎನ್. ಗೌಡರ, ಮಾದಿಗ ಮಹಾಸಭಾ ಉಪಾಧ್ಯಕ್ಷ ಮೋಹನ ಅಲಮೇಲ್ಕರ್, ರಾಜ್ಯ ಸಂಘಟನಾ ಸಂಚಾಲಕ ಎಸ್. ಎನ್. ಬಳ್ಳಾರಿ, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಎಸ್. ಡಿ. ಮಕಾಂದಾರ, ಎಚ್.ಡಿ. ಪೂಜಾರ, ಸತೀಶ ಪಾಸಿ, ಮಿಥುನಗೌಡ ಪಾಟೀಲ ಪಿ.ಜಿ. ಹಿರೇಮಠ, ರಾಮಣ್ಣ ಮೇಗಲಮನಿ, ಮಲ್ಲಪ್ಪ ಮಠದ, ಮಾರುತಿ ಜೋಗದಂಡಕರ ಮುಂತಾದವರಿದ್ದರು. ಪ್ರೊ.ಸತೀಶ ಪಾಸಿ ಸಂವಿಧಾನ ಪೀಠಿಕೆ ಬೋಧಿಸಿದರು. ಮಂಜುನಾಥ ಬಿಸನಳ್ಳಿ ಸ್ವಾಗತಿಸಿದರು. ಮರಿಯಪ್ಪ ಸಿದ್ದಣ್ಣವರ ಪ್ರಾಸ್ತಾವಿಸಿದರು. ಮಲ್ಲಿಕಾರ್ಜುನ ಗೌಡಣ್ಣವರ ನಿರೂಪಿಸಿದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಾ.ಜಡೇಶ ಭದ್ರಗೌಡ್ರ ಸರ್ಕಾರಕ್ಕೆ ಮನವಿ

ನರಗುಂದ: ಸರ್ಕಾರದಿಂದ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಿಗಳ ಸರಬರಾಜಾಗುತ್ತಿಲ್ಲ, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಸರ್ಕಾರದ ಆದೇಶವಿದ್ದರೂ ತಿದ್ದುಪಡಿ ಮಾಡಿಲ್ಲ, ಇಲಾಖೆಯ ಯಾವುದೇ ಅಧಿಕಾರಿ, ನೌಕರ ಸಿಬ್ಬಂದಿಗೆ 5 ವರ್ಷಗಳಿಂದ ಮುಂಬಡ್ತಿಯನ್ನೇ ನೀಡಿಲ್ಲ, ಸೇವಾನಿರತ ಸರ್ಕಾರಿ ವೈದ್ಯರು, ಅಧಿಕಾರಿ, ನೌಕರರು ಉನ್ನತ ವ್ಯಾಸಂಗ, ಸ್ನಾತಕೋತ್ತರ ವ್ಯಾಸಂಗಕ್ಕೆ ಅವಕಾಶವಿದ್ದರೂ ಶಿಕ್ಷಣಕ್ಕೆ ಅವಕಾಶ ನೀಡುತ್ತಿಲ್ಲ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ತಾಲೂಕು ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಜಡೇಶ ಭದ್ರಗೌಡ್ರ ಸರ್ಕಾರವನ್ನು ಆಗ್ರಹಿಸಿದರು.

ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಆರೋಗ್ಯ ಇಲಾಖೆಯ ಅಧಿಕಾರಿ ಹಾಗೂ ನೌಕರ ಸಿಬ್ಬಂದಿ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಗ್ರೇಡ್-2 ತಹಶೀಲ್ದಾರ್ ಪರಶುರಾಮ ಕಲಾಲ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಮಾತನಾಡಿದರು.

ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಮಾತನಾಡಿ, ಮಾ.11 ರಿಂದ 15 ರವರೆಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಗುತ್ತದೆ. ಈ ವೇಳೆ ಕೇವಲ ತುರ್ತು ಸೇವೆಗಳನ್ನು ಮಾತ್ರ ನೀಡಲಾಗುತ್ತಿದ್ದು, ಹೊರ ರೋಗಿಗಳಿಗೆ ಯಾವುದೇ ರೀತಿಯ ಚಿಕಿತ್ಸೆ ಸೇವೆ ನೀಡುವುದಿಲ್ಲ, ನ್ಯಾಯಯುತ ಬೇಡಿಕೆ ಈಡೇರಿಸದಿದ್ದರೆ ಮಾ.16 ರಿಂದ ಅನಿರ್ದಿಷ್ಟಾವಧಿ ಕರ್ತವ್ಯಕ್ಕೆ ಗೈರಾಗುತ್ತೇವೆ ಎಂದು ತಿಳಿಸಿದರು.



ಡಾ.ರೇಣುಕಾ ಕೊರವನವರ, ಡಾ.ನಿರ್ಮಲಾ ಹಂಜಿ, ಡಾ.ರಿಯಾಜ್, ಡಾ.ಸಹನಾ ಪಿಳ್ಳೆ, ಡಾ.ನಿಖಿಲ್ ಪಾಟೀಲ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘದ ಅಧ್ಯಕ್ಷ ಸಿ.ಎಫ್.ಕುಂಬಾರ, ಕಾರ್ಯದರ್ಶಿ ಸಶಾಂಕ ನಂದರಗಿ, ಭಾರತಿ ಪಾಟೀಲ, ಪ್ರಶಾಂತ ಕುಲಕರ್ಣಿ, ಸಿದ್ದು, ಪ್ರಶಾಂತ, ಎಂ.ಪಿ ಶಿಗ್ಗಾಂವಕರ, ಎಸ್.ಆರ್.ಹಿಪ್ಪಿ, ಜಿ.ಆರ್.ಕೊರವರ, ಸಂತೋಷ ಅಂಬಿಗೇರ, ಇತರರಿದ್ದರು.

ಮಕ್ಕಳಲ್ಲಿ ಸಮಾಜದ ಬಗ್ಗೆ ಅಭಿಮಾನ ಮೂಡಿಸುವ ಕಾರ್ಯವಾಗಲಿ: ಕುಲಕರ್ಣಿ

ಲಕ್ಷ್ಮೇಶ್ವರ: ಶಿಸ್ತುಬದ್ಧವಾದ ಜೀವನ, ಸಂಸ್ಕಾರ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಬ್ರಾಹ್ಮಣ ಸಮಾಜದಲ್ಲಿನ ಮಕ್ಕಳಲ್ಲಿ ಸಮಾಜದ ಬಗ್ಗೆ ಅಭಿಮಾನ ಮೂಡಿಸುವ ಕಾರ್ಯವಾಗಬೇಕು. ಅಲ್ಲದೇ ಸಂಘಟನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಗದಗ ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ವೆಂಕಟೇಶ ಕುಲಕರ್ಣಿ ಹೇಳಿದರು.

ಅವರು ಪಟ್ಟಣದ ಶಂಕರಭಾರತಿಮಠದಲ್ಲಿ ಭಾನುವಾರ ನಡೆದ ಬ್ರಾಹ್ಮಣ ಸಮಾಜದ ಸಭೆಯಲ್ಲಿ ಮಾತನಾಡಿ, ಸಮಾಜದಲ್ಲಿ ವಿವಾಹ, ಉದ್ಯೋಗ ಸೇರಿದಂತೆ ಅನೇಕ ಸಮಸ್ಯೆಗಳಿವೆ. ಅವುಗಳಿಗೆ ಪರಿಹಾರ ಕಂಡುಕೊಳ್ಳುವದು ನಮ್ಮಲ್ಲಿಯೇ ಇದೆ. ಇದೀಗ ಬ್ರಾಹ್ಮಣ ನಿಗಮ ಮಂಡಳಿ ವತಿಯಿಂದ ಸ್ವಯಂ ಉದ್ಯೋಗ ಮಾಡುವವರಿಗೆ, ಶಿಕ್ಷಣಕ್ಕಾಗಿ ಅನೇಕ ರೀತಿಯ ಆರ್ಥಿಕ ಸಹಾಯಗಳು ದೊರೆಯುತ್ತಿವೆ. ಅವುಗಳ ಸದುಪಯೋಗಪಡಿಸಿಕೊಳ್ಳುವುದು ಅವಶ್ಯವಾಗಿದೆ. ನಮ್ಮ ಸಮಾಜದಲ್ಲಿನ ವಿವಾಹದ ಸಮಸ್ಯೆಗಳಿಗೆ ಪರಿಹಾರ ನೀಡಲು ಜಿಲ್ಲಾ ಮಟ್ಟದಲ್ಲಿ ವಧು-ವರರ ಯೋಚನೆಯಿದೆ ಎಂದು ಹೇಳಿದ ಅವರು, ಮಾ.21 ರಿಂದ ಶೃಂಗೇರಿಯಲ್ಲಿ ನಡೆಯುವ ಜಗದ್ಗುರುಗಳ ವರ್ಧಂತಿ ಉತ್ಸವ ನಿಮಿತ್ತ ಗಾಯತ್ರಿ ಜಪಾನುಷ್ಠಾನದಲ್ಲಿ ಗದಗ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವಿಶಿಷ್ಟ ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸೋಣ ಎಂದು ಹೇಳಿದರು. ಗದಗ ಜಿಲ್ಲಾ ಶಾಂಕರ ತತ್ವ ಪ್ರಸಾರ ಸಂಚಾಲಕ ಗಿರೀಶ ಪಂತರ, ಲಕ್ಷ್ಮೇಶ್ವರ ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೃಷ್ಣ ಕುಲಕರ್ಣಿ, ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್ ಮಾತನಾಡಿ ಬ್ರಾಹ್ಮಣ ಸಮಾಜದವರು ಸಂಘಟಿತರಾಗುವುದು ಅವಶ್ಯವಾಗಿದೆ ಎಂದರು. ಅನಂತಭಟ್ ಪೂಜಾರ, ಅನಿಲ ತೆಂಬದಮನಿ, ಆರ್. ಎಸ್.ಕುಲಕರ್ಣಿ, ಗಣೇಶ ಕುರಂದವಾಡ, ಶ್ರೀಪಾದ ತಮ್ಮಣ್ಣವರ, ಡಾ.ಪ್ರಸನ್ನ ಕುಲಕರ್ಣಿ, ಧೃವ ಬೆಟಗೇರಿ, ದತ್ತಾತ್ರೇಯ ಪಾಟೀಲಕುಲಕರ್ಣಿ, ಅನಿಲ ಕುಲಕರ್ಣಿ, ಸರ್‌ದೇಶಪಾಂಡೆ, ವ್ಯಾಪಾರಿ, ಆನಂದ ತಂತ್ರಿ, ಎ.ಪಿ.ಕುಲಕರ್ಣಿ, ಪಾಪು ಪುರೋಹಿತ, ಶ್ರೀಕಾಂತ ಪೂಜಾರ ಮುಂತಾದವರಿದ್ದರು. ಕಾರ್ಯದರ್ಶಿ ದಿಗಂಬರ ಪೂಜಾರ ನಿರೂಪಿಸಿದರು.



ಪಾಲಕರು ಮಕ್ಕಳಿಗೆ ಸಂಸ್ಕಾರ ಕಲಿಸಲಿ



ಮುಂಡರಗಿ: ಮಕ್ಕಳಿಗೆ ಸಂಸ್ಕಾರ ಅಗತ್ಯವಿದ್ದು, ಪಾಲಕರು ತಮ್ಮ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರವನ್ನು ಕಲಿಸಬೇಕು. ಬದುಕಿನಲ್ಲಿ ಸನ್ಮಾರ್ಗದಲ್ಲಿ ಸಾಗಬೇಕೆಂದರೆ ಉತ್ತಮ ಮಾರ್ಗದರ್ಶನ ಅವಶ್ಯವಾಗುತ್ತದೆ. ಸನ್ಮಾರ್ಗದಲ್ಲಿ ನಡೆಯುವುದಕ್ಕೆ ಸಂಸ್ಕಾರದ ಜೊತೆಗೆ ಗುರುವಿನ ಮಾರ್ಗದರ್ಶ ಸಹಕಾರಿಯಾಗುತ್ತದೆ ಎಂದು ನಾಡೋಜ ಡಾ.ಅನ್ನದಾನೀಶ್ವರ ಶಿವಯೋಗಿಗಳು ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರಸಂಸ್ಥಾನಮಠದಲ್ಲಿ ಜರುಗಿದ 1843ನೇ ಮಾಸಿಕ ಶಿವಾನುಭವದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ನರಸಾಪುರದ ಶ್ರೀ ಗುರು ಕಾರುಣ್ಯ ಧಾರ್ಮಿಕ ಗುರುಕುಲದ ಡಾ.ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜಗದ್ಗುರು ಅನ್ನದಾನೀಶ್ವರ ಶ್ರೀಗಳು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕಾರ್ಯ ಮಾಡಿದ್ದಾರೆ. ಗುರು ತೋರುವ ಸನ್ಮಾರ್ಗ, ವಿಚಾರದಲ್ಲಿ ಸಾಗಿದರೆ ಸುಂದರ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಕೆ.ಆರ್.ಬೆಲ್ಲದ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಕುಮಾರ ಜಿ. ಅವರು ಹೋಳಿ ಹುಣ್ಣಿಮೆ ಕುರಿತು ಉಪನ್ಯಾಸ ನೀಡಿದರು. ಶಿವಾನುಭವದ ಭಕ್ತಿಸೇವೆ ವಹಿಸಿಕೊಂಡಿದ್ದ ಕದಾಂಪುರದ ಸಿದ್ದಲಿಂಗಮ್ಮ ಹಿರೇಮಠ ಕುಟುಂಬದವರಿಗೆ ಶ್ರೀಗಳು ಆಶೀರ್ವದಿಸಿದರು. ವೇ.ಮೂ. ಚನ್ನವೀರಯ್ಯ ಹಿರೇಮಠ ಸಂಗೀತ ಸೇವೆ ಸಲ್ಲಿಸಿದರು. ಜಗದ್ಗುರು ಅನ್ನದಾನೀಶ್ವರ ಅಕ್ಕನ ಬಳಗದವರು ಪ್ರಾರ್ಥನೆ ಗೈದರು. ಶಿಕ್ಷಕ ಎಸ್.ಎಸ್. ಮಠದ ಕಾರ್ಯಕ್ರಮ ನಿರೂಪಿಸಿದರು.

ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ

ಗಜೇಂದ್ರಗಡ: ವಿಜ್ಞಾನ ಎನ್ನುವುದು ಕುತೂಹಲ ಕಾರಿಯಾದದ್ದು, ಕ್ರಮಬದ್ಧವಾದ ಜ್ಞಾನವನ್ನು ಒದಗಿಸುತ್ತದೆ. ಪ್ರಶ್ನೆ ಮಾಡದೇಯಾವ ವಿಷಯವನ್ನೂ ಒಪ್ಪಿಕೊಳ್ಳಬಾರದು. ಆಗ ಮಾತ್ರ ವಿದ್ಯಾರ್ಥಿಗಳು ಜಾಣರಾಗಲು ಸಾಧ್ಯ ಎಂದು ಮುಖ್ಯೋಪಾಧ್ಯಾಯ ಬಿ. ಸಿ. ಅಂಗಡಿ ಹೇಳಿದರು.

ನಗರದ ಕೆಳಗಲ ಪೇಟೆಯ ಪಿಎಂಶ್ರೀ ಸರ್ಕಾರಿ ದ್ವಿಭಾಷಾ (ಕನ್ನಡ /ಇಂಗ್ಲಿಷ್) ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ನಂ -2 ಶಾಲೆಯಲ್ಲಿ ಜರುಗಿದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಪೋಷಕರ, ಶಿಕ್ಷಕರ ಸಭೆಯಲ್ಲಿ ಮಾತನಾಡಿ, ಮುಂಬರುವ ಪರೀಕ್ಷೆ ದೃಷ್ಟಿಕೋನದಿಂದ ಪಾಲಕರು ಸಂಜೆ ಟಿವಿ ನೋಡುವದನ್ನು ಬಿಟ್ಟು ಮಕ್ಕಳ ಪರೀಕ್ಷಾ ತಯಾರಿಗೆ ಪೂರಕವಾಗಿ ಟೈಮ್ ಟೇಬಲ್ ತಯಾರಿಸಿ ಮಕ್ಕಳೊಂದಿಗೆ ಕಲಿಕೆಯಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು ಎಂದರು.

ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ವಸ್ತುಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಕೆ.ಎಂ.ಹಣಗಿ ಮಾತನಾಡಿದರು. ಶಿಕ್ಷಕರಾದ ಶ್ರೀನಿವಾಸ ನಿಲೂರ, ವೀರೇಶ ಬೂದಿಹಾಳ, ಎಸ್. ಕೆ. ಸರಗಣಾಚಾರಿಮಠ, ಬಸವರಾಜ ಅಣ್ಣಿಗೇರಿ, ಎ. ಕೆ. ವಂಟಿ, ಕೆ.ಎಸ್.ವನ್ನಾಲ, ಭಾಗ್ಯಶ್ರೀ ಆಂಬೋರೆ, ಸಂಗಪ್ಪ ಹಾವೇರಿ, ಕಳಕಪ್ಪ ನಿಂಬೋಜಿ, ಕಳಕಪ್ಪ ರಾಠೋಡ್, ಖಾಜಾಹುಸೇನ್ ಉಟಗೂರ, ಗೀತಾ ಪವಾರ, ಇಂದುಮತಿ ಗೌಡರ, ಲಕ್ಷ್ಮೀ ಸೂರ್ಯವಂಶಿ ಇತರರಿದ್ದರು.



ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ



ಲಕ್ಷ್ಮೇಶ್ವರ: ಯಾವುದೇ ವ್ಯಕ್ತಿ ಸಾಧನೆ ಮಾಡಬೇಕಾದರೆ ಅದರ ಹಿಂದೆ ಅನೇಕ ಕಷ್ಟಗಳು ಎದ್ದು ಕಾಣುತ್ತವೆ. ಅದರಲ್ಲಿ ಕನ್ನಡ ನಾಡಿನ ಸಾಧಕಿಯರ ಜೀವನ ಮತ್ತು ಕಠಿಣ ಪರಿಶ್ರಮವು ಕೇವಲ ಅವರ ಸಾಧನೆಯಲ್ಲ, ಬದಲಾಗಿ ಯುವ ಪೀಳಿಗೆಗೆ, ವಿಶೇಷವಾಗಿ ಯುವತಿಯರಿಗೆ ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಲು ದೊಡ್ಡ ಪ್ರೇರಣೆಯಾಗಿದೆ ಎಂದು ಕನ್ನಡ ಉಪನ್ಯಾಸಕಿ ಅಮೃತಾ ಗುಡಗೇರಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ರಾಜರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ ಹಮ್ಮಿಕೊಂಡ ಕನ್ನಡ ನಾಡಿನ ಅನನ್ಯ ಸಾಧಕಿಯರು ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಿತ್ತೂರು ರಾಣಿ ಚೆನ್ನಮ್ಮರಂತಹ ಐತಿಹಾಸಿಕ ನಾಯಕಿಯರಿಂದ ಹಿಡಿದು, ಪರಿಸರ ಕ್ಷೇತ್ರದಲ್ಲಿ ಸಾಲುಮರದ ತಿಮ್ಮಕ್ಕ, ತುಳಸಿ ಗೌಡ, ಆರೋಗ್ಯ ಸೇವೆಯಲ್ಲಿ ಸೂಲಗಿತ್ತಿ ನರಸಮ್ಮ ಸಾಹಿತ್ಯ ಮತ್ತು ಸಮಾಜ ಸೇವೆಯಲ್ಲಿ ಸುಧಾ ಮೂರ್ತಿಯವರಂತಹ ಮಹಿಳೆಯರು ದೇಶದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ರುಕ್ಮಿಣಿಬಾಯಿ ಪೂಜಾರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಅಧ್ಯಕ್ಷೆ ಹಿರಿಯ ಸಾಹಿತಿ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತೆ ಲಲಿತಾ ಕೆರಿಮನಿ, ಮಾಲಾದೇವಿ ದಂಧರಗಿ, ಲಕ್ಷ್ಮವ್ವ ಆಚಾರಿ, ವಿಜಯಲಕ್ಷ್ಮೀ ಬಾಳಿಕಾಯಿ, ನಿರ್ಮಲಾ ಅರಳಿ, ಪ್ರತಿಮಾ ಮಹಾಜನಶೆಟ್ಟರ, ಸಾವಿತ್ರಿಬಾಯಿ ಗುಡಿಗೇರಿ, ಜಯಶ್ರೀ ಮತ್ತಿಕಟ್ಟಿ, ಅಕ್ಕಮಹಾದೇವಿ ಮಳಲಿ ಮುಂತಾದವರಿದ್ದರು. ಶಿಲ್ಪಾ ಯಾಳಗಿ ಗೌರಾ ಸಂಗಪ್ಪಶೆಟ್ಟರ್, ಅಂಕಿತಾ ಅರಳಿ, ನಂದಿತಾ ಮಾಳವಾಡ ಕಾರ್ಯಕ್ರಮ ನಿರ್ವಹಿಸಿದರು.

ಅಂಧರ ಬದುಕಿಗೆ ಬೆಳಕಾದ ಪುಟ್ಟರಾಜರು

ಗದಗ: ಲಿಂ.ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳವರು ಅಂಧ, ಅನಾಥ, ವಿಕಲಚೇತನರ ಬದುಕಿಗೆ ಬೆಳಕಾಗಿ, ಭಕ್ತರ ಹೃದಯ ಮಂದಿರದಲ್ಲಿ ದೇವರಾಗಿ ಪೂಜಿತರಾದ ಪುಣ್ಯಾತ್ಮರಾಗಿದ್ದರು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.

ನಗರದ ವೀರಶೈವ ಜನರಲ್ ಲೈಬ್ರರಿಯ ಆವರಣದಲ್ಲಿರುವ ವೀರಶೈವ ಮಹಾಸಭಾದ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ಪುಟ್ಟರಾಜ ಗವಾಯಿಗಳ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗುರು ಪಂಚಾಕ್ಷರ ಗವಾಯಿಗಳವರ ನೆಚ್ಚಿನ ಶಿಷ್ಯರಾಗಿದ್ದ ಪುಟ್ಟರಾಜರು ಗುರುವನ್ನು ಮೀರಿಸಿ ಸಾಧನೆ ಮಾಡಿದವರು. ಸಂಗೀತ ಕ್ಷೇತ್ರದಲ್ಲಿ ದಿಗ್ಗಜರಾಗಿದ್ದರು ಎಂದರು.

ಸಿ.ಕೆ.ಕಡಣಿ ಶಾಸ್ತ್ರೀ, ವಿ.ಕೆ.ಗುರುಮಠ, ಎಸ್.ಐ. ಯಾಳಗಿ, ಜಿ.ಎಸ್.ಹಿರೇಮಠ, ರಾಜು ಕುರಡಗಿ ಪುಟ್ಟರಾಜ ಬದುಕು, ಸಾಧನೆ ಕುರಿತು ವಿವರವಾಗಿ ಮಾತನಾಡಿದರು. ಕಲಾ ವಿಕಾಸ ಪರಿಷತ್ತು 25ನೇ ವರ್ಷದ ಸಂಭ್ರಮಾಚರಣೆ ಆಚರಿಸಿಕೊಳ್ಳುತ್ತಿದ್ದು ಈ ಕುರಿತಾದ ಲೋಗೋವನ್ನು ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಬಿಡುಗಡೆಗೊಳಿಸಿದರು. ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ಸ್ವಾಗತಿಸಿದರು. ಖಜಾಂಚಿ ಚನ್ನವೀರಪ್ಪ ಹುಣಶಿಕಟ್ಟಿ ನಿರೂಪಿಸಿ, ವಂದಿಸಿದರು. ನಿವೃತ್ತ ತಹಶೀಲ್ದಾರ್ ಎ.ಟಿ.ನರೇಗಲ್ಲ, ಬಿ.ಎ.ಪಾಟೀಲ, ಎಂ.ಬಿ.ಚನ್ನಪ್ಪಗೌಡ್ರ, ಸಿದ್ದಣ್ಣ ಜೀವನಗೌಡ್ರ ಇದ್ದರು.



ಮಾಜಿ ಸಂಸದ ಅನಂತಕುಮಾರ ಹೆಗಡೆ ಮಾತು

ಆರೆಸ್ಸೆಸ್ ನಿಷೇಧ ಸಾಧ್ಯವಿಲ್ಲ



ಭಟ್ಕಳ: ರಾಷ್ಟ್ರೀಯ ಸ್ವಯಂಸೇವಕ ಸಂಘ ಕಳೆದ ನೂರು ವರ್ಷಗಳಲ್ಲಿ ಹೆಮ್ಮರವಾಗಿ ಬೆಳೆದಿದ್ದು, ಇದನ್ನು ನಿಷೇಧಿಸಲು ಯಾರಿಂದಲೂ ಸಾಧ್ಯವಿಲ್ಲ. ಸಂಘದ ಸಂಘಟನೆ ಪ್ರಭಲವಾಗಿದ್ದು, ನಮ್ಮನ್ನು ಮುಟ್ಟುವುದು ಅಷ್ಟು ಸುಲಭವಲ್ಲ ಎಂದು ಮಾಜಿ ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ಪಟ್ಟಣದ ಹಳೇ ತಹಶೀಲ್ದಾರ್ ಕಚೇರಿ ಹಿಂಬದಿಗಿರುವ ಮೈದಾನದಲ್ಲಿ ನಗರ ಹಿಂದು ಸಮ್ಮೇಳನ ಸಮಿತಿ ಏರ್ಪಡಿಸಿದ್ದ ಹಿಂದು ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ನಾವು ದುರ್ಬಲರಲ್ಲ, ನಾವು ದುರ್ಬಲರಾದಾಗ ಮಾತ್ರ ನಮ್ಮನ್ನು ತಡೆಯಲು ಸಾಧ್ಯ. ಸಂಘದ ನೂರನೇ ವರ್ಷ ಆಚರಣೆ ನಿಮಿತ್ತ ದೇಶದ ಮೂಲೆ ಮೂಲೆಯಲ್ಲಿ ಹಿಂದು ಸಮ್ಮೇಳನ ನಡೆಸಿ ಹಿಂದುಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗುತ್ತಿದೆ. ಇದೊಂದು ಜಾಗತಿಕ ದಾಖಲೆಯಾಗಿದೆ ಎಂದರು.

ಹಿಂದು ಸಮಾಜ ಒಟ್ಟಾಗಬೇಕು ಎನ್ನುವುದು ಕೋಟ್ಯಾಂತರ ಜನರ ಆಸೆಯಾಗಿದೆ. ಹಿಂದುತ್ವ ಎಂದರೆ ಸೆಕ್ಯುಲರ್ ಆಗಿದೆ. ಹಿಂದುಗಳು ಎಲ್ಲರನ್ನೂ ಸ್ವಾಗತಿಸಿದ್ದಾರೆ. ಜಗತ್ತಿಗೆ ಶಾಂತಿ ಪಾಠ ಮಾಡಿದವರು ನಾವು. ಇಸ್ಲಾಂ ದೇಶದಲ್ಲಿ ಶಾಂತಿ ಇಲ್ಲ, ಅವರ ದೇಶದಲ್ಲೇ ಯುದ್ಧ ನಡೆಯುತ್ತಿದೆ. ನಮ್ಮಲ್ಲಿ ಜಾತಿಯಿಂದ ಯಾರನ್ನೂ ಗುರುತಿಸಿಲ್ಲ, ಮನೆಯಲ್ಲಿ ಜಾತಿ ಇರಲಿ. ಆದರೆ, ಸಮಾಜದ ಕರೆ ಬಂದಾಗ ನಾವೆಲ್ಲರೂ ಹಿಂದು ಎಂಬ ಭಾವನೆಯಿಂದ ಒಗ್ಗಟ್ಟಾಗಬೇಕೆಂದರು.

ಹಿಂದು ಆಚರಣೆ, ಸಂಸ್ಕೃತಿಯನ್ನು ಜಗತ್ತು ಒಪ್ಪಿಕೊಳ್ಳುತ್ತಿದೆ. ನಮ್ಮ ಯೋಗಾಚರಣೆ ಜಗತ್ತೇ ಮಾಡುತ್ತಿದೆ. ಜಾತಿ, ಭಾಷೆ ಅಪಸ್ವರದ ಮಧ್ಯೆಯೂ ಎಲ್ಲೆಲ್ಲೂ ಹಿಂದು ಧ್ವನಿ ಕೇಳುತ್ತಿದೆ. ಹಿಂದುತ್ವದ ಕಿಚ್ಚು ಎದ್ದಿದೆ. ಆದರೆ, ಜಗತ್ತು ನಮ್ಮನ್ನು ದುರ್ಬಲಗೊಳಿಸಲು ಹುನ್ನಾರ ನಡೆಸುತ್ತಿದೆ ಎಂದರು.

ನಮ್ಮಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಕೀಳರಿಮೆ ಬಿಡಬೇಕು.

> ನಮ್ಮ ದೇಶದ ರಕ್ತ ಜಗತ್ತನ್ನೇ ಗೆದ್ದಿದೆ. ಜಗತ್ತಿನ ದುರಹಂಕಾರ ಗೆದ್ದಿದೆ. ಜಗತ್ತನ್ನು ಮೆಟ್ಟಿನಿಂತವರು ನಾವು. ಜಗತ್ತಿಗೆ ಎಲ್ಲವನ್ನೂ ಕೊಟ್ಟಿದ್ದು ಭಾರತ. ಆದರೆ, ಸ್ವಾತಂತ್ರ್ಯ ನಂತರದಲ್ಲಿ ಆಗಿದ್ದೇ ಬೇರೆ. ಇತಿಹಾಸ ಏನೇ ಹೇಳಲಿ. ನಮ್ಮದು ಪರಮೋನ್ನತ ಸಂಸ್ಕೃತಿಯಾಗಿದೆ.
>
> ■ **ಅನಂತಕುಮಾರ ಹೆಗಡೆ,** ಮಾಜಿ ಸಂಸದ

ನಮ್ಮಲ್ಲಿ ಮೈಮರೆವು ಹೆಚ್ಚಿದೆ. ನಮ್ಮ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಜಾತಿ ಬಗ್ಗೆ ಹೇಳಿಲ್ಲ, ಪ್ರಸ್ತುತ ದಿನಗಳಲ್ಲಿ ನಡೆಯುವ ಜಾತಿಯ ಸಮಾವೇಶ ಒಂದು ರೀತಿಯ ಫ್ಯಾಶನ್ ಆಗಿದೆ ಎಂದ ಅವರು, ಮುಸ್ಲೀಂ, ಕ್ರೈಸ್ತರಿಂದ ನಮ್ಮ ಹಿಂದು ಸಮಾಜವನ್ನು ಏನೂ ಮಾಡಲು ಆಗಲಿಲ್ಲ, ನಮ್ಮವರೇ ನಮ್ಮನ್ನು ಸೋಲಿಸಿದರು ಎಂದು ಶಿವಾಜಿ ಮತ್ತು ಕಿತ್ತೂರು ರಾಣಿ ಚನ್ನಮ್ಮನಿಗಾದ ಅನ್ಯಾಯದ ಬಗ್ಗೆ ತಿಳಿಸಿ ಹೇಳಿದ ಅವರು, ಸಮಾಜದ ಓರೆಕೋರೆಯನ್ನು ಸರಿಪಡಿಸಿ ನಾವೆಲ್ಲರೂ ಒಂದು ಎಂದು ಸಾಗಬೇಕು. ಹೀಗಾದಾಗ ಮಾತ್ರ ನಮ್ಮನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದರು.

ದಿವ್ಯ ಉಪಸ್ಥಿತಿ ವಹಿಸಿದ್ದ ಬಂಟ್ವಾಳದ ಮೋಹನದಾಸ ಪರಮಹಂಸ ಸ್ವಾಮೀಜಿ ಮಾತನಾಡಿ, ಹಿಂದುಗಳಲ್ಲಿ ಜಾಗೃತಿ ಮೂಡಿಸಲು ಹಿಂದು ಸಂಗಮ ಕಾರ್ಯಕ್ರಮ ನಡೆಸಲಾಗುತ್ತದೆ. ಹಿಂದುಗಳು ಪರಸ್ಪರ ದ್ವೇಷ, ಅಸೂಯೆ ಬಿಡಬೇಕು. ಎಲ್ಲರ ಬಳಿ ಪ್ರೀತಿಯಿಂದ ನಡೆದುಕೊಳ್ಳಬೇಕು ಎಂದರು.

ಹಿಂದು ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷ ರಾಮದಾಸ ಪ್ರಭು ಉಪಸ್ಥಿತರಿದ್ದರು. ಹಿಂದು ಸಮ್ಮೇಳನ ಸಮಿತಿಯ ಶ್ರೀಧರ ನಾಯ್ಕ ಆಸರಕೇರಿ ಪ್ರಸ್ತಾವಿಕ ಮಾತನಾಡಿದರು. ಕೃಷ್ಣಾ ನಾಯ್ಕ ಆಸರಕೇರಿ ಸ್ವಾಗತಿಸಿದರು. ಸುರೇಂದ್ರ ಪೂಜಾರಿ ವಂದಿಸಿದರು. ಗಣಪತಿ ಶಿರೂರು ನಿರೂಪಿಸಿದರು. ಪವಿತ್ರಾ ನಾಯ್ಕ ವೈಯಕ್ತಿಕ ಗೀತೆ ಹಾಡಿದರು. ಕೊನೆಗೆ ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ಆಕರ್ಷಕ ಶೋಭಾಯಾತ್ರೆ ನಡೆಯಿತು.

ಎಲ್ಲರಲ್ಲೂ ದೇಶ ಸೇವೆಯ ಚಿಂತನೆ ಅಗತ್ಯ



ಉಪ್ಪಿನಬೆಟಗೇರಿ: ಭಾರತೀಯರಾಗಿ ಭಾರತವನ್ನು ಪ್ರೀತಿಸುವ ಜೊತೆಗೆ ರಾಷ್ಟ್ರಕ್ಕಾಗಿ ಸಮರ್ಪಣೆ ಮಾಡುವ ಮನೋಭಾವದೊಂದಿಗೆ ಎಲ್ಲರಲ್ಲೂ ದೇಶ ಸೇವೆಯ ಚಿಂತನೆ ಅಗತ್ಯವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಜ್ಞಾ ಪ್ರವಾಹ ಸಹ ಸಂಯೋಜಕ ರಘುನಂದನ ಹೇಳಿದರು.

ಅವರು ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ ಶ್ರೀ ಸಂಸ್ಥಾನ ಪಂಚಗೃಹ ಹಿರೇಮಠದ ಆವರಣದಲ್ಲಿ ರಾಷ್ಟ್ರಿಯ ಸ್ವಯಂಸೇವಕ ಸಂಘದ ಶತಮಾನೋತ್ಸವದ ಅಂಗವಾಗಿ ಅಮ್ಮಿನಬಾವಿ ಹಾಗೂ ಕನಕೂರ ಮಂಡಳಗಳ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಹಿಂದು ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ದೇಶ ಸೇವೆ ನಮ್ಮ ಗ್ರಾಮದಿಂದಲೇ ಆರಂಭಗೊಳ್ಳಬೇಕು. ಗುಟಕಾ, ಸಾರಾಯಿ, ಪ್ಲಾಸ್ಟಿಕ್, ರಾಸಾಯನಿಕ ಹಾಗೂ ಕೊಳಚೆ ಮುಕ್ತ ಗ್ರಾಮ ನಿರ್ಮಾಣವೂ ಸಹ ದೇಶ ಸೇವೆಯೇ ಆಗಿದ್ದು, ಇದನ್ನು ಕೂಡಲೇ ಯುವ ಸಮೂಹ ಆರಂಭಿಸಬೇಕೆಂದು ಕರೆ ನೀಡಿದರು.

ದೇಶವೇ ದೊಡ್ಡದು, ದೇಶವೇ ಮೊದಲು ಎಂಬ ಮನೋಭೂಮಿಕೆಯಲ್ಲಿ ದೇಶದ ಘನತೆಯನ್ನು ಎತ್ತಿ ಹಿಡಿದು ಬದಲಾವಣೆಗೆ ತೆರೆದುಕೊಳ್ಳಬೇಕು. ಹಿರಿಯರು ತಮ್ಮ ಕುಟುಂಬದ ಸದಸ್ಯರಿಗೆ ನಮ್ಮ ರಾಷ್ಟ್ರದ ಸನಾತನ ಹಿಂದು ಸಂಸ್ಕೃತಿ– ಸಂಸ್ಕಾರಗಳನ್ನು ನೀಡಿ ಹಿಂದುತ್ವದ ಜಾಗೃತಿ ಮೂಡಿಸಲು ಕೈಜೋಡಿಸಬೇಕು ಎಂದೂ ರಘುನಂದನ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಪತ್ರಿಕಾರಂಗದ ಹಿರಿಯ ನಿಯತಕಾಲಿಕ 'ಜೀವನ ಶಿಕ್ಷಣ' ಮಾಸಪತ್ರಿಕೆಯ ವಿಶ್ರಾಂತ ಸಂಪಾದಕ ಗುರುಮೂರ್ತಿ ಯರಗಂಬಳಿಮಠ ಮಾತನಾಡಿ, ಸತ್ಯದ ಅನುಸಂಧಾನದೊಂದಿಗೆ, ಅಹಿಂಸೆಯ ಅನುಪಾಲನೆ ಮಾಡಿ, ವಿಶ್ವ ಕುಟುಂಬದ ಭಾವ

ಶೋಭಾಯಾತ್ರೆ

ಇದಕ್ಕೂ ಮೊದಲು ನಡೆದ ದೇಶಭಕ್ತರ ಭಾವಚಿತ್ರಗಳನ್ನು ಹೊತ್ತ ಸುಮಾರು 50ಕ್ಕೂ ಹೆಚ್ಚು ಚಕ್ಕಡಿಗಳ ಮೆರವಣಿಗೆಯ ಶೋಭಾಯಾತ್ರೆಯನ್ನು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಹಿರಿಯ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ತಾಪಂ ಮಾಜಿ ಸದಸ್ಯ ಸುರೇಂದ್ರ ದೇಸಾಯಿ, ವಿ.ಬಿ.ಕೆಂಚನಗೌಡರ, ಬಿ.ಸಿ.ಕೊಳ್ಳಿ, ಶಿವಾಜಿ ಕಲಾಲ, ಅಮ್ಮಿನಬಾವಿ, ಮರೇವಾಡ, ಚಂದನಮಟ್ಟಿ, ಕೌಲಗೇರಿ ಗ್ರಾಮಗಳ ಶ್ರೀವಿಠೋಬ ದೇವರ ವಾರಕರಿ ಸಂತರ ಬಳಗದ ಸದಸ್ಯರು ಸೇರಿ ಹಲವಾರು ರೈತ ಮುಖಂಡರು ಪಾಲ್ಗೊಂಡಿದ್ದರು.

ಅಖಿಲ ಭಾರತೀಯ ಪ್ರಜ್ಞಾ ಪ್ರವಾಹ ಸಹ ಸಂಯೋಜಕ ರಘುನಂದನ ಅಭಿಪ್ರಾಯ

ಸಿಂಚನದಲ್ಲಿ ಉತ್ಕೃಷ್ಟ ಜೀವನ ವಿಧಾನ ಹೊಂದಿ ಆತ್ಮಜ್ಞಾನ ಸಂಪಾದನೆಗೆ ತೆರೆದುಕೊಂಡಾಗ ದೇವಭೂಮಿ ಭಾರತದ ಮಣ್ಣಿನ ಕಣಗಳ ಘನತೆ ನಮಗೆ ಅರ್ಥವಾಗುತ್ತದೆ. ಮನುಕುಲವೂ ಸೇರಿದಂತೆ ಎಲ್ಲ ಜೀವಸಂಕುಲದಲ್ಲಿ ಇರುವ ದೈವತ್ವದ ಚೈತನ್ಯವನ್ನು ಗುರುತಿಸಲು ಸಾಧ್ಯವಾದಾಗ, ಸಂಘರ್ಷವಳಿದು ಎಲ್ಲೆಡೆ ಸಮನ್ವಯ ಅಂಕುರಿಸಲು ಸಾಧ್ಯವಾಗುತ್ತದೆ ಎಂದರು.

ಶಿವಾನಂದ ತಡಕೋಡ ಹಾಗೂ ನವೀನ ಪದಕಿ ದೇಶಭಕ್ತಿ ಗೀತೆಗಳನ್ನು ಹಾಡಿದರು. ವಸಂತ ಪದಕಿ, ಯಲ್ಲಪ್ಪ ಜಾಮನೂನವರ, ಮಹಾಂತೇಶ ಹುಲ್ಲೂರ, ಮೌನೇಶ ಪತ್ತಾರ, ಕಿರಣ ಜಾಧವ, ಚಂದ್ರು ಶೆಟ್ಟರ, ರಾಮಚಂದ್ರ ದೇಶಪಾಂಡೆ, ಲಿಂಗರಾಜ ಮುಂದಿನಮನಿ, ಬಸವರಾಜ ಸವದತ್ತಿ, ಶಾಂತಿನಾಥ ಲೋಕೂರ, ಶ್ರೀನಿವಾಸ ಭೋವಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಬೈಕ್ ಸವಾರ ಸಾವು

ಹುಬ್ಬಳ್ಳಿ: ಬೈಕ್ ಸವಾರ ನಿಯಂತ್ರಣ ತಪ್ಪಿ ಬಿಆರ್‌ಟಿಎಸ್ ಬ್ಯಾರಿಕೇಡ್ ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟ ಘಟನೆ ಕಳೆದ ರಾತ್ರಿ ನಡೆದಿದೆ. ಉಣಕಲ್ ಗ್ರಾಮದ ನಾಗರಾಜಸಿಂಗ್ ಹಜೇರಿ(23) ಮೃತಪಟ್ಟ ಯುವಕ. ವಿದ್ಯಾನಗರದ ಗುರುದತ್ತ ಭವನದ ಹತ್ತಿರ ಶನಿವಾರ ರಾತ್ರಿ 11.30ರ ವೇಳೆಗೆ ವೇಗವಾಗಿ ಬೈಕ್ ಚಲಾಯಿಸಿ ನಿಯಂತ್ರಣ ತಪ್ಪಿ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡ ಯುವಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಹುಬ್ಬಳ್ಳಿ ಉತ್ತರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತ ವ್ಯಕ್ತಿ ಸಾವು: ಬೈಕ್ ಸವಾರನೊಬ್ಬ ಅಪರಿಚಿತ ವ್ಯಕ್ತಿಗೆ ಡಿಕ್ಕಿ ಹೊಡೆದ ಪರಿಣಾಮ ಮೃತ ಪಟ್ಟಿರುವ ಘಟನೆ ತಾಲೂಕಿನ ಇಂಗಳಹಳ್ಳಿ ಕ್ರಾಸ್ ಬಳಿ ಹುಬ್ಬಳ್ಳಿ ಗದಗ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಅಪರಿಚಿತ 45 ವರ್ಷದ ವ್ಯಕ್ತಿ ಮೃತಪಟ್ಟಿದ್ದು, ಬೈಕ್ ಸವಾರ ಗದಗ ಜಿಲ್ಲೆಯ ನರಸಾಪುರದ ಬಸವರಾಜ ಆಲಗೋಡಿ ಡಿಕ್ಕಿ ಹೊಡೆದಿದ್ದಾನೆ. ರಸ್ತೆ ದಾಟುವಾಗ ಬೈಕ್ ಅಪರಿಚಿತ ವ್ಯಕ್ತಿಗೆ ಡಿಕ್ಕಿ ಹೊಡೆದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮಹಿಳೆ ಆತ್ಮಹತ್ಯೆ

ಬನವಾಸಿ: ಇಲ್ಲಿಯ ವರದಾ ನದಿಗೆ ಬಿದ್ದು ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಬನವಾಸಿ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ. ಆದರ್ಶ ನಗರ ನಿವಾಸಿಯಾಗಿದ್ದ ಸುಶೀಲಮ್ಮ ಕೋಂ ಹನುಮಂತ ರಾವ್ ಮೂಳೆಕರ(75) ಮೃತ ದುರ್ದೈವಿಯಾಗಿದ್ದಾರೆ. ಮೃತರು ಬೆನ್ನು ಮೂಳೆ ನೋವಿನಿಂದ ಮತ್ತು ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದು ಇದನ್ನು ಮನಸ್ಸಿಗೆ ಹಚ್ಚಿಕೊಂಡು ಜೀವನದಲ್ಲಿ ಜಿಗುಪ್ಸೆಯಾಗಿ ಮಧುಕೇಶ್ವರ ದೇವಸ್ಥಾನದ ಬಳಿಯ ವರದಾ ನದಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಮಗಳು ಭಾರತಿ ಮಹೇಂದ್ರ ದಾವಸ್ಕರ್ ಬನವಾಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅಧಿಕ ಬೆಲೆಗೆ ಕೃಷಿ ಪರಿಕರ ಮಾರಾಟಕ್ಕೆ ಕಡಿವಾಣ

ರಾಜ್ಯಮಟ್ಟದ ಸಲಹಾ ಸಮಿತಿ ರಚನೆ: ಸಕ್ಕರೆ ಸಚಿವ ಪಾಟೀಲ

ಹಾವೇರಿ: ಜಿಲ್ಲೆಯಲ್ಲಿ ಕಳಪೆ ಬೀಜ, ಕೀಟನಾಶಕ ಹಾವಳಿ ತೀವ್ರವಾಗಿದ್ದು, ಈ ಕಾರಣದಿಂದ ಬೆಳೆ ಹಾನಿಗೀಡಾಗಿ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕಳಪೆ ಬೀಜ, ಕಳಪೆ ಕೀಟನಾಶಕ ಮಾರಾಟ



ತಡೆ ಹಾಗೂ ಅಧಿಕ ಬೆಲೆಗೆ ಕೃಷಿ ಪರಿಕರ ಮಾರಾಟಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧ್ಯಯನ ಮಾಡಿ ಶಿಫಾರಸು ಸಲ್ಲಿಸಲು ರಾಜ್ಯಮಟ್ಟದ ಸಲಹಾ ಸಮಿತಿ ರಚನೆ ಘೋಷಣೆ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ಜಿಲ್ಲೆಯ ರೈತರ ಹಿತರಕ್ಷಣೆಯ ದೃಷ್ಟಿಯಿಂದ ಈ ಘೋಷಣೆ ಆಶಾದಾಯಕವಾಗಿದ್ದು, ಕಳಪೆ ಬೀಜ ಮತ್ತು ಕೀಟನಾಶಕ ಮಾರಾಟದ ಜಾಲವನ್ನು ಕೊನೆಗಾಣಿಸಲು ಸಾಧ್ಯ. ಹಾವೇರಿಗೆ ಸಿಲ್ಕ್ ಪಾರ್ಕ್ ಘೋಷಣೆ ಮಾಡಿರುವುದು ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗಲಿದೆ. ಹಾವೇರಿ ಜಿಲ್ಲೆಯ ತಿಳವಳ್ಳಿಗೆ ನೂತನ ಪೊಲೀಸ್ ಠಾಣೆ ಹಾಗೂ ಸವಣೂರಿನಲ್ಲಿ ಮಹಿಳಾ ಪಿಯು ಕಾಲೇಜು ಆರಂಭಿಸಬೇಕು ಎಂಬ ಬೇಡಿಕೆಗೂ ಸ್ಪಂದನೆ ಸಿಕ್ಕಿದೆ. ಇದರಿಂದ ವೈಜ್ಞಾನಿಕ ಕೃಷಿಯ ಮಾರ್ಗದರ್ಶನ, ಹಣಕಾಸು ನೆರವು, ಗುಣಮಟ್ಟದ ಕೃಷಿ ಪರಿಕರ ಪೂರೈಕೆ, ಕೊಯ್ಲೋತ್ತರ ಚಟುವಟಿಕೆಗಳಿಗೆ ನೆರವು ನೀಡುವುದರಿಂದ ರೈತರ ಬದುಕಿನ ಬದಲಾವಣೆಗೆ ಕಾರಣವಾಗಲಿದೆ ಎಂದು ಆಶಿಸಿದ್ದಾರೆ.

> ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿ ನಮ್ಮ ಹಲವು ಬೇಡಿಕೆಗಳಿಗೆ ಸಿಎಂ ಸ್ಪಂದಿಸಿದ್ದಾರೆ. ಜಿಲ್ಲೆಯ ಎಲ್ಲ ಶಾಸಕರ ಸಹಕಾರದಿಂದ ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.
>
> ■ **ಶಿವಾನಂದ ಪಾಟೀಲ,** ಜಿಲ್ಲಾ ಉಸ್ತುವಾರಿ ಸಚಿವ

ಬ್ಯಾಡಗಿ ತಾಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆ, ರಟ್ಟಿಹಳ್ಳಿ ತಾಲೂಕಿನ ಮದಗ – ಮಾಸೂರು ಕೆರೆ ಆಧುನೀಕರಣ ಯೋಜನೆಗಳಿಗೆ ಈಗಾಗಲೇ ಅನುಮೋದನೆ ದೊರೆತಿದೆ. ರಟ್ಟಿಹಳ್ಳಿ ಮತ್ತು ಶಿಗ್ಗಾವಿ ತಾಲೂಕುಗಳಲ್ಲಿ ಚೆಕ್ ಡ್ಯಾಮ್‌ಗಳ ನಿರ್ಮಾಣಕ್ಕೂ ಅನುಮೋದನೆ ಸಿಕ್ಕಿದೆ ಎಂದು ತಿಳಿಸಿದ್ದಾರೆ.

ಲಾಡ್ಜ್‌ನಲ್ಲಿ ಕಳ್ಳತನ ಮಾಡುತ್ತಿದ್ದ ಮಹಿಳೆ ಬಂಧನ

ಲಕ್ಷಾಂತರ ಮೌಲ್ಯದ ವಸ್ತುಗಳ ವಶ

ಬೆಳಗಾವಿ: ನಗರದಲ್ಲಿರುವ ಲಾಡ್ಜ್‌ಗಳಲ್ಲಿ ಸರಣಿ ಕಳ್ಳತನ ಮಾಡುತ್ತಿದ್ದ ಮಹಿಳೆಯನ್ನು ತಿಲಕವಾಡಿ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿಯ ಕೋಸ್ಟಲ್ ಎಂಪೈರ್ ಮತ್ತು ಅಮಿತ್ ಡಿಲಕ್ಸ್ ಲಾಡ್ಜ್‌ಗಳಲ್ಲಿ ಕಳ್ಳತನ ನಡೆಸುತ್ತಿದ್ದ ದೀಪಾ ಮಹಾಲಿಂಗ ಅವಟಗಿ ಎಂಬಾಕೆ ಆರೋಪಿಯನ್ನು ತಿಲಕವಾಡಿ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಮಹಿಳೆಯಿಂದ ಸುಮಾರು 32.86 ಲಕ್ಷ ರೂ. ಮೌಲ್ಯದ 11 ಮೊಬೈಲ್‌ಗಳು, ಎರಡು ಕಾರು, ಟ್ಯಾಬ್ ಮತ್ತು ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಪ್ರಕರಣದಲ್ಲಿ ಭಾಗಿಯಾದ ಮತ್ತೊರ್ವ ಆರೋಪಿ ಶಿವಾನಂದ ಮಠಪತಿ ಪರಾರಿಯಾಗಿದ್ದು, ಆತನಿಗಾಗಿ ಪೊಲೀಸರು ತೀವ್ರ ಶೋಧ ನಡೆದಿಸಿದ್ದಾರೆ. ತಿಲಕವಾಡಿ ಇನ್ಸ್‌ಪೆಕ್ಟರ್ ಪರಶುರಾಮ ಪೂಜೇರಿ ನೇತೃತ್ವದ ತಂಡ ಈ ಕಾರ್ಯಾಚರಣೆ ಯಶಸ್ವಿಯಾಗಿ ನಿರ್ವಹಿಸಿದೆ. ದಕ್ಷತೆಯಿಂದ ಕಾರ್ಯನಿರ್ವಹಿಸಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯ ಕಾರ್ಯವೈಖರಿಯನ್ನು ಬೆಳಗಾವಿ ನಗರ ಪೊಲೀಸ್ ಆಯುಕ್ತರು ಶ್ಲಾಘನೆ ವ್ಯಕ್ತಪಡಿಸಿ ತಂಡಕ್ಕೆ ಬಹುಮಾನ ಘೋಷಣೆ ಮಾಡಿದ್ದಾರೆ.

ಜೈ ಘೋಷದ ಮಧ್ಯೆ ಶರಣನ ಅದ್ಧೂರಿ ರಥೋತ್ಸವ



ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಆರಾಧ್ಯ ದೈವ ಮಹಾದಾಸೋಹಿ ಶ್ರೀ ಶರಣಬಸವೇಶ್ವರ 204ನೇ ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ಸಂಜೆ ಲಕ್ಷಾಂತರ ಭಕ್ತರ ಜಯ ಘೋಷಗಳ ಮಧ್ಯೆ ಅದ್ಧೂರಿ ಮಹಾರಥೋತ್ಸವ ನಡೆಯಿತು.

ಶರಣಬಸವೇಶ್ವರ ಸಂಸ್ಥಾನದ ದೇವಸ್ಥಾನದ ಆವರಣದಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಕುಂಭದಿಂದ ರಥೋತ್ಸವಕ್ಕೆ ನಾಲ್ಕು ಸುತ್ತು ಹಾಕಿದ ಬಳಿಕ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಚಿರಂಜೀವಿ ದೊಡ್ಡಪ್ಪ ಅಪ್ಪ ಹಾಗೂ ಮಾತೋಶ್ರೀ ಡಾ.ದಾಕ್ಷಾಯಿಣಿ ಎಸ್ ಅಪ್ಪ ಸಮ್ಮುಖದಲ್ಲಿ, ಚಿ.ದೊಡ್ಡಪ್ಪ ಅಪ್ಪ ಅವರು ಸಂಪ್ರದಾಯದಂತೆ ಪರುಷ ಭಟ್ಟಲು ಬೆಳ್ಳಿ ಬಟ್ಟಲು ತೋರಿಸಿ, ಮೂರು ಬಾರಿ ಶಂಕನಾದ ಮೊಳಗಿಸುವ ಮುಖೇನ ಅದ್ಧೂರಿ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವಕ್ಕೆ ಚಾಲನೆ ಕೊಡುವ ಮುನ್ನ ಚಿ.ದೊಡ್ಡಪ್ಪ ಅಪ್ಪ ಅವರು ಎಲ್ಲರಿಗೂ ಶರಣು ಶರಣಾರ್ಥಿ ಎಂದು ನುಡಿದರು. ಕಲ್ಯಾಣದ ಆರಾಧ್ಯ ದೇವರಿಗೆ, ಎಲ್ಲ ದೇವಾನು ದೇವತೆಗಳಿಗೆ, ಪೂಜ್ಯ ಅಪ್ಪಾಜಿ,ಅವ್ವಾಜಿ ನಮಸ್ಕರಿಸಿ ದಾಸೋಹದ ಪರಂಪರೆಗೆ, ಗುರುಲಿಂಗ ಜಂಗಮಕ್ಕೆ, ಸೇವೆ ಮಾಡಿಕೊಂಡು ಬಂದವರಿಗೆ ಹಾಗೂ ವಿಶೇಷವಾಗಿ ಬಂದಂತಹ ಲಕ್ಷಾಂತರ ಭಕ್ತರಿಗೆ ನಮಸ್ಕರಿಸಿದರು.

ಈ ಸಂದರ್ಭದಲ್ಲಿ ರಾಜ್ಯದ ಅರಣ್ಯ ಸಚಿವ ಈಶ್ವರ ಖಂಡ್ರೆ, ಶರಣಬಸವೇಶ್ವರ ಸಂಸ್ಥಾನದ ಕಾರ್ಯದರ್ಶಿ ಬಸವರಾಜ ದೇಶಮುಖ, ಎಂಎಲ್‌ಸಿಗಳಾದ ಬಿ.ಜಿ.ಪಾಟೀಲ್, ಶಶೀಲ್ ಜಿ. ನಮೋಶಿ, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ಪೋಲಿಸ್ ಆಯುಕ್ತ ಡಾ. ಶರಣಪ್ಪ ಢಗೆ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶರಣಕುಮಾರ ಮೋದಿ, ಅಲ್ಲಂಪ್ರಭು ಪಾಟೀಲ್, ಅಲ್ಲಂಪ್ರಭು ದೇಶಮುಖ, ಸೇರಿದಂತೆ ಹಲವು ಗಣ್ಯರು ಮಹಾರಥೋತ್ಸವದಲ್ಲಿ ಭಾಗಿಯಾಗಿ ದರ್ಶನ ಪಡೆದರು.

ನೆರೆ ರಾಜ್ಯಗಳ ಭಕ್ತರ ಆಗಮನ

ಇದಕ್ಕೂ ಮುನ್ನ ಶ್ರೀ ಶರಣಬಸವೇಶ್ವರ ಕರ್ತೃ ಗದ್ದುಗೆಗೆ ವಿಶೇಷ ಪೂಜೆ ಕೈಂಕರ್ಯಗಳು ಜರುಗಿದವು. ಪ್ರತಿ ವರ್ಷದಂತೆ ಈ ವರ್ಷವೂ 204ನೇ ಜಾತ್ರಾ ಮಹೋತ್ಸವ ಅಂಗವಾಗಿ ಶರಣನ ಜಾತ್ರೆಯ ರಥೋತ್ಸವವನ್ನು ಕಣ್ತುಂಬಿಕೊಳ್ಳಲು ನೆರೆಯ ಮಹಾರಾಷ್ಟ್ರ ತೆಲಂಗಾಣ ಕರ್ನಾಟಕದ ಮೂಲೆ ಮೂಲೆಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸಿ ಭವ್ಯ ರಥೋತ್ಸವಕ್ಕೆ ಸಾಕ್ಷಿಯಾದರು.

ಅಪ್ಪಾಜಿ ಲಿಂಗೈಕ್ಯ ಬಳಿಕ ಮೊದಲ ಜಾತ್ರೆ

ಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿ ಡಾ.ಶರಣಬಸವಪ್ಪ ಅಪ್ಪಾ ಅವರ ಲಿಂಗೈಕ್ಯ ಬಳಿಕ ಬಂದ ಮೊದಲ ಜಾತ್ರೆಯಲ್ಲಿ ಅಪ್ಪಾಜಿಯವರ ಅನುಪಸ್ಥಿತಿ ಭಕ್ತರಿಗೆ ಕಾಡಿತು. ಈ ಹಿನ್ನೆಲೆಯಲ್ಲಿ ರಥೋತ್ಸವದ ಪಕ್ಕದಲ್ಲಿ 32 ಅಡಿ ಎತ್ತರದ ಕಟೌಟ್ ಹಾಕಿದ್ದು, ರಥೋತ್ಸವದ ಜೊತೆಗೆ ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ದರ್ಶನ ಕೂಡ ಮಾಡಿದರು. ಶ್ರೀ ಶರಣಬಸವೇಶ್ವರ 204ನೇ ಜಾತ್ರಾ ಮಹೋತ್ಸವ ಅಂಗವಾಗಿ ಸಂಘ ಸಂಸ್ಥೆಗಳು, ರಾಜಕೀಯ ಧುರೀಣರು, ನಾಡಿನ ಉದ್ಯಮಿಗಳು ನಗರದ ಸುಪರ್ ಮಾರ್ಕೆಟ್, ಜಗತ್ ವೃತ್ತದ ರಸ್ತೆಯಲ್ಲಿ, ಕೇಂದ್ರ ಬಸ್ ನಿಲ್ದಾಣ, ಆಳಂದ ರಸ್ತೆ, ಹುಮನಾಬಾದ್ ರಸ್ತೆ, ಸೇಡಂ ರಸ್ತೆ, ಜೇವರ್ಗಿ ರಸ್ತೆ ಸೇರಿದಂತೆ ನಗರದಾದ್ಯಂತ ಪ್ರಮುಖ ರಸ್ತೆಗಳಲ್ಲಿ ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಸೇವೆ ಸಲ್ಲಿಸಿದರು.

ಬಿಸಿಲು ಲೆಕ್ಕಿಸದೆ ದುರಸ್ತಿ ಕಾರ್ಯದಲ್ಲಿ ಕೆಪಿಟಿಸಿಎಲ್ ಸಿಬ್ಬಂದಿ

ಬೆಳಗಾವಿ: ನಗರ ಮತ್ತು ಗ್ರಾಮೀಣದ ಪ್ರಮುಖ ಭಾಗಗಳಲ್ಲಿ ಕಳೆದ ಮಧ್ಯರಾತ್ರಿಯಿಂದಲೇ ವಿದ್ಯುತ್ ಸಂಚಾರ ಕಡಿತಗೊಳಿಸಲಾಗಿದೆ. ಇಂಡೋಲ್‌ನಿಂದ ಸರಬರಾಜಾಗುವ 110 ಕೆವಿ ಹೈ–ಟೆನ್ಷನ್ ಲೈನ್ ಕಟ್ ಆಗಿದ್ದು, ಕೆಪಿಟಿಸಿಎಲ್ ಅಧಿಕಾರಿಗಳು ಸುಡುವ ಬಿಸಿಲನ್ನು ಲೆಕ್ಕಿಸದೆ ದುರಸ್ತಿ ಕಾರ್ಯದಲ್ಲಿ ತೊಡಗಿರುವುದು ಎಲ್ಲರ ಗಮನ ಸೆಳೆದಿಸಿದೆ.

ಭಾನುವಾರ ಮಧ್ಯಾಹ್ನ ಇಂಡಾಲ್ ಕೇಂದದಿಂದ ಸರಬರಾಜಾಗುವ 110 ಕೆವಿಮುಖ್ಯ ವಿದ್ಯುತ್‌ಲೈನ್ ಕಟ್ ಆಗಿರುವುದರಿಂದ ಬೆಳಗಾವಿ ಹಲಗಾ ವಿಧಾನ ಸಭಾ ಕ್ಷೇತ್ರ, ಮಚ್ಚೆ ಕೈಗಾರಿಕಾ ಪ್ರದೇಶ ಹಾಗೂ ವಡಗಾಂವ ವ್ಯಾಪ್ತಿಯಲ್ಲಿ ಸಂಪೂರ್ಣ ವಿದ್ಯುತ್ ಸ್ಥಗಿತಗೊಂಡಿದೆ. ಬೆಳಗ್ಗೆ 3 ಗಂಟೆಯಿಂದಲೇ ಕಾರ್ಯ ಪ್ರವೃತ್ತರಾಗಿರುವ ಕೆಪಿಟಿಸಿಎಲ್ ಸಿಬ್ಬಂದಿ, ಅಧಿಕಾರಿಗಳು, ಹಳೆ ಬೆಳಗಾವಿ ಬಳಿ ಇರುವ ಬಿ.ಎಸ್.ಯಡಿಯೂರಪ್ಪ ಮಾರ್ಗದಲ್ಲಿನ ಬೃಹತ್ ವಿದ್ಯುತ್ ಕಂಬಗಳನ್ನೇರಿ ಲೈನ್ ದುರಸ್ಥಿ ಪಡಿಸುತ್ತಿರುವ ಕೆಪಿಟಿಸಿಎಲ್ ಸಿಬ್ಬಂದಿ ದುರಸ್ತಿ ಕಾರ್ಯದಲ್ಲಿ ಮಗ್ನರಾಗಿದ್ದರು. ಟಿಎಲ್‌ಎಂ ವಿಭಾಗದ ಸೆಕ್ಷನ್ ಆಫೀಸರ್ ರಾಜುಕುಮಾರ್ ಅವರ ನೇತೃತ್ವದಲ್ಲಿ ದುರಸ್ತಿ ಕಾರ್ಯಾಚರಣೆ ನಡೆಯುತ್ತಿದೆ.

ಐಟಿಎಫ್ ಡಬ್ಲ್ಯೂ35 ಮಹಿಳಾ ಓಪನ್ ಟೆನಿಸ್

ಭಾರತೀಯ ವೈಷ್ಣವಿ ಅಡ್ಕರ್ ಸಿಂಗಲ್ಸ್ ಚಾಂಪಿಯನ್

ರಾಚಪ್ಪಾ ಜಂಬಗಿ



ಕಲಬುರಗಿ: ಬಿಸಿಲು ನಾಡು ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಐಟಿಎಫ್ ಡಬ್ಲ್ಯೂ35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಭಾರತದ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಭರ್ಜರಿ ಪ್ರದರ್ಶನ ನೀಡಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು.

ಭಾನುವಾರ ಚಂಪಾ ಕ್ರೀಡಾಂಗಣದ ಲಾನ್ ಟೆನಿಸ್ ಅಂಕಣದಲ್ಲಿ ನಡೆದ ಐಟಿಎಫ್ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಭಾರತದ ಅಂಕಿತಾ ರೈನಾ ಅವರನ್ನು 7–6(3),6–4 ಅಂತರದಲ್ಲಿ ಸೋಲಿಸಿ ಪ್ರಶಸ್ತಿಯನ್ನು ಬಾಚಿಕೊಂಡರು.

ಪಂದ್ಯದ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ವೈಷ್ಣವಿ ಅಡ್ಕರ್, ಬಲಿಷ್ಠ ಬ್ಯಾಕ್‌ಹ್ಯಾಂಡ್ ಮತ್ತು ಫೋರ್ ಹ್ಯಾಂಡ್ ಶಾಟ್‌ಗಳ ಮೂಲಕ ಮೊದಲ ಗೇಮ್‌ನಲ್ಲೇ ಅಂಕಿತಾ ರೈನಾ ಅವರ ಸರ್ವ್ ಬ್ರೇಕ್ ಮಾಡಿದರು.

ಎರಡನೇ ಸೆಟ್‌ನ ಆರಂಭದಲ್ಲಿ ರೈನಾ ಬ್ರೇಕ್ ಸಾಧಿಸಿ ಮುನ್ನಡೆ ಪಡೆದರೂ ಅಡ್ಕರ್ ತಕ್ಷಣವೇ ಬ್ರೇಕ್ ಹಿಂತೆಗೆದು 1–1ಕ್ಕೆ ಸಮಬಲ ಸಾಧಿಸಿದರು. ನಂತರ ಎರಡೂ ಆಟಗಾರ್ತಿಯರು ಸಮಬಲದ ಹೋರಾಟ ಮುಂದುವರಿಸಿದರು. ಬಳಿಕ 9ನೇ ಗೇಮ್‌ನಲ್ಲಿ ಅಡ್ಕರ್ ಉತ್ತಮ ಶಾಟ್‌ಗಳ ಮೂಲಕ ಸರ್ವ್ ಉಳಿಸಿಕೊಂಡು 5–4 ಮುನ್ನಡೆ ಪಡೆದರು. ಕೊನೆಯಲ್ಲಿ ರೈನಾ ಮಾಡಿದ ತಪ್ಪನ್ನು ಬಳಸಿಕೊಂಡ ಅಡ್ಕರ್, ಬ್ರೇಕ್ ಸಾಧಿಸಿ 6–4 ಅಂತರದಲ್ಲಿ ಎರಡನೇ ಸೆಟ್ ಗೆದ್ದು ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

4.45 ಲಕ್ಷ ರೂ. ಬಹುಮಾನ

ಸಿಂಗಲ್ಸ್ ಚಾಂಪಿಯನ್ ವೈಷ್ಣವಿ ಅಡ್ಕರ್ ಅವರಿಗೆ ಈ ವಿಕ್ಟರಿಯಿಂದ 35 ಡಬ್ಲ್ಯುಟಿಎ ರ‍್ಯಾಂಕಿಂಗ್ ಅಂಕ ಮತ್ತು 4,860 ಅಮೆರಿಕನ್ ಡಾಲರ್(ಭಾರತೀಯ 4.45 ಲಕ್ಷ ರೂಪಾಯಿ), ಫೈನಲ್‌ನಲ್ಲಿ ರನ್ನರ್ ಅಫ್ ಆದ ಅಂಕಿತಾ ರೈನಾಗೆ 23 ಡಬ್ಲ್ಯುಟಿಎ ರ‍್ಯಾಂಕಿಂಗ್ ಅಂಕ ಹಾಗೂ 2,637 ಅಮೆರಿಕನ್ ಡಾಲರ್ (ಭಾರತೀಯ 2.40 ಲಕ್ಷ ರೂಪಾಯಿ) ಬಹುಮಾನ ನೀಡಲಾಯಿತು.

> ಹೈಲೆವಲ್ ಗೇಮ್ ಆಡಿರುವ ಅಂಕಿತಾ ಜೊತೆ ಆಡುವುದು ಬಹಳ ಕಷ್ಟವಾಗಿತ್ತು. ಬಾಲ್ಯದಿಂದಲೂ ಅವಳ ಆಟ ನೋಡಿಕೊಂಡು ವೃತ್ತಿಯಲ್ಲಿ ಬೆಳೆದಿದ್ದೇನೆ. ಭಾರತದ ಅನುಭವಿ ಆಟಗಾರ್ತಿ ಜೊತೆಗೆ ಸಿಂಗಲ್ಸ್ ಫೈನಲ್ ಗೆದ್ದಿದ್ದು ಖುಷಿ ನೀಡಿದೆ. ಒಟ್ಟಾರೆ ಈ ಟೂರ್ನಿ ನನಗೆ ಉತ್ತಮವಾಗಿತ್ತು. ಡಬಲ್ ಅಂಡ್ ಸಿಂಗಲ್ಸ್ ಫೈನಲ್ ಗೆದ್ದಿದ್ದು, ಮುಂಬರುವ ದಿನಗಳಲ್ಲಿ ದೆಹಲಿಯಲ್ಲಿ ನಡೆಯಲಿರುವ ಬಿಲಿ ಜೀನ್ ಕಪ್‌ಗೆ ತಯಾರಿ ನಡೆಸುತ್ತೇನೆ.
>
> ■ **ವೈಷ್ಣವಿ ಅಡ್ಕರ್,** ಸಿಂಗಲ್ಸ್ ಚಾಂಪಿಯನ್

ಹಿಂದು ಸಮಾಜ ಉಳಿವಿಗೆ ಶ್ರಮಿಸಿ: ಶ್ರೀಗಳು



ಧಾರವಾಡ: ಇತ್ತೀಚಿನ ಭಾರತದಲ್ಲಿ ಹಿಂದುಗಳ ಅಸ್ತಿತ್ವ ಕ್ರಮೇಣ ಕ್ಷೀಣಿಸುತ್ತಿದೆ. ಈ ಕಾರಣಕ್ಕಾಗಿ ಹಿಂದುಗಳು ನಿದ್ರಾವಸ್ಥೆಯಿಂದ ಏಳಬೇಕು. ಹಿಂದು ಸಮಾಜ ಉಳಿವಿಗೆ ಶ್ರಮಿಸಬೇಕು ಎಂದು ದ್ವಾರಪುರದ ಪರಮಾತ್ಮ ಮಹಾರಾಜ ಸ್ವಾಮೀಜಿ ಸಲಹೆ ನೀಡಿದರು.

ಕುಮಾರೇಶ್ವರ ನಗರದ ಹಿಂದು ಶಕ್ತಿ ಸಮ್ಮೇಳನ ಉದ್ಘಾಟಿಸಿದ ಅವರು, ಪ್ರಸ್ತುತ ನಮ್ಮ ನಿಷ್ಕಾಳಜಿ ದೇಶದಲ್ಲಿ ಹಿಂದುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಹೀಗೆ ಹಿಂದುಗಳು ಮುನ್ನಡೆದರೆ, ಹಿಂದು ಸಮಾಜ ಇತಿಹಾಸದ ಪುಟ ಸೇರಲಿದೆ ಎಂದು ಎಚ್ಚರಿಕೆ ನೀಡಿದರು.

ಜಗತ್ತಿನಲ್ಲಿ 52 ಮುಸ್ಲಿಂ ದೇಶಗಳಿವೆ. 70ಕ್ಕೂ ಹೆಚ್ಚು ಕ್ರಿಶ್ಚಿಯನ್ ದೇಶಗಳಿವೆ. ಆದರೆ, ಹಿಂದುಗಳಿಗೆ ದೇಶವೇ ಇಲ್ಲವೆಂಬ ಸಂದಿಗ್ಧತೆ ಎದುರಾಗಿದೆ. ಕರ್ನಾಟಕ ಸಹ ಹಿಂದುಗಳದ್ದು ಅಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿರುವುದು ಸುಳ್ಳಲ್ಲ ಎಂದು ಎಚ್ಚರಿಸಿದರು.

ಭಾರತದ 20 ರಾಜ್ಯಗಳಲ್ಲಿ ಮಾತ್ರವೇ ಹಿಂದುಗಳಿದ್ದು, ನಮ್ಮ ದೇಶ ಎಲ್ಲಿಗೆ ತಲುಪದೆ ಎಂಬುದು ಗಂಭೀರವಾಗಿ ಪರಿಗಣಿಸಬೇಕು. ಇಲ್ಲವಾದರೆ ಭವಿಷ್ಯದಲ್ಲಿ ನಮ್ಮ ಹಿಂದು ಸಮಾಜಕ್ಕೆ ಗಂಡಾಂತರ ತಪ್ಪಿದ್ದಲ್ಲ. ಈ ಬಗ್ಗೆ ಜಾಗೃತಗೊಳ್ಳಬೇಕು ಎಂದು ಹೇಳಿದರು.

ಕವಿವಿ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಸಹಪ್ರಾಧ್ಯಾಪಕ ಡಾ.ಮಲ್ಲಪ್ಪ ಬಂಡಿ, ಸಾಹಿತಿ ಡಾ.ಸಂಗಮೇಶ ಸವದತ್ತಿಮಠ ಮಾತನಾಡಿದರು. ಹಿಂದು ಶಕ್ತಿ ಸಮ್ಮೇಳನ ಸಮಿತಿ ಅಧ್ಯಕ್ಷರಾದ ಜಿ.ಜಿ.ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂತೋಷ ದೇವರಡ್ಡಿ, ವಿಠ್ಠಲ ಅಂಕುಶಕರ, ಶ್ರೀನಿವಾಸ ಕುಲಕರ್ಣಿ ಇದ್ದರು. ಬಾಳೇಶ ಹುಣಶ್ಯಾಳ ಪರಿಚಯಿಸಿದರು. ಪ್ರಕಾಶ ಬಾಳಿಕಾಯಿ ನಿರೂಪಿಸಿದರು. ಎಂ.ಐ.ಕಳ್ಳಿಗುಡ್ಡ ವಂದಿಸಿದರು.


Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ಯಲ್ಲಾಪುರ: ಪಟ್ಟಣದ ಬಸ್ ನಿಲ್ದಾಣ ಸಮೀಪದ ಚೌಡೇಶ್ವರಿ ದೇವಾಲಯದಲ್ಲಿ ವಾರ್ಷಿಕ ಧಾರ್ಮಿಕ ಕಾರ್ಯಕ್ರಮಗಳು ಭಾನುವಾರ, ಸೋಮವಾರ ಚೌಡೇಶ್ವರಿ ದೇವಿಯ ಸನ್ನಿಧಿಯಲ್ಲಿ ನವಚಂಡಿ ಹವನ, ಗಣ ಹವನ, ಸಪ್ತಶತಿ ಪಾರಾಯಣ,ಪೂರ್ಣಾಹುತಿ, ಮಹಾಪೂಜೆ, ನಡೆಯಿತು. ಶಾಸಕ ಹೆಬ್ಬಾರ್ ದಂಪತಿಗಳು ವಿಶೇಷ ಪೂಜೆ ಸಲ್ಲಿಸಿದರು. ನೂರಾರು ಭಕ್ತರು ದೇವಾಲಯಕ್ಕೆ ಆಗಮಿಸಿ, ದೇವಿಯ ದರ್ಶನ ಪಡೆದು, ಅನ್ನ ಪ್ರಸಾದ ಸ್ವೀಕರಿಸಿದರು.

ಬಜೆಟ್ ಜನಪರವಾಗಿದೆ: ಶಾಸಕ ಭೀಮಣ್ಣ

ಸಿದ್ದಾಪುರ: ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಜನಪರ ಬಜೆಟ್ ಆಗಿದೆ. ಬಜೆಟ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ರೈತರಿಗೂ ಕೂಡ ಹೆಚ್ಚಿನ ಶಕ್ತಿ ನೀಡಲು ಈ ಬಜೆಟ್ ಪೂರಕವಾಗಿದೆ ಎಂದು ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಅವರು ಮಾತನಾಡಿದರು. ಐದು ಗ್ಯಾರಂಟಿಗಳನ್ನು ಸಮರ್ಪಕವಾಗಿ ಮುನ್ನಡೆಸಿಕೊಂಡು ಹೋಗುವುದರ ಜೊತೆಗೆ ರಾಜ್ಯದ ಸಮಗ್ರ ಹಿತದೃಷ್ಟಿ ಕಾಪಾಡುವಂತಹ ಬಜೆಟ್ ಇದಾಗಿದೆ. ನಮ್ಮ ಜಿಲ್ಲೆಗೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನೂರು ಕೋಟಿ ರೂ.ಗಳನ್ನು ಸಹ ನೀಡಿದ್ದಾರೆ. ವಿರೋಧ ಪಕ್ಷದವರು ಟೀಕೆ ಮಾಡುವುದು ಸಹಜ. ಆದರೆ ಅವರು ಅಧಿಕಾರದಲ್ಲಿ ಇದ್ದಾಗ ಮಾಡಿದ ಕೆಲಸ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಮನ್ವಯತೆ ಇವುಗಳನ್ನು ಅರಿತು ಟೀಕೆ ಮಾಡವುದು ಉತ್ತಮ. ಬಿಜೆಪಿ ಸಂಸದರು ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ಹಣ ತರಲು ಶ್ರಮಿಸುವ ಬದಲು ಸರ್ಕಾರವನ್ನು ಟೀಕಿಸುವುದರಲ್ಲಿ ಅರ್ಥವಿಲ್ಲ. ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಗುತ್ತಿಗೆದಾರರಿಗೆ ನೀಡಬೇಕಾದ ಹಣ ನೀಡಿಲ್ಲ. ಕಾರಣ ಇಂದು ಗುತ್ತಿಗೆದಾರರು ಪ್ರತಿಭಟನೆಗೆ ಮುಂದಾಗಿದ್ದಾರೆ. ಆದರೆ ಮುಖ್ಯಮಂತ್ರಿಗಳು ಹಿಂದಿನ ಸರ್ಕಾರವನ್ನು ದೂಷಿಸದೇ ಗುತ್ತಿಗೆದಾರರ ಬಾಕಿಯನ್ನು ಪಾವತಿಸಲು ಕ್ರಮ ಕೈಗೊಂಡಿದ್ದಾರೆ. ನನ್ನ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ಮನ್ಮನೆ ಮತ್ತು ಪಕ್ಷದ ಪ್ರಮುಖರು ಇದ್ದರು.



ಯಲ್ಲಾಪುರ: ಪಟ್ಟಣದ ಬಸ್ ನಿಲ್ದಾಣ ಸಮೀಪದ ಚೌಡೇಶ್ವರಿ ದೇವಾಲಯದಲ್ಲಿ ಹೂವಿನಿಂದ ದೇವಿಯ ಅಲಂಕಾರ ಆಕರ್ಷಕವಾಗಿತ್ತು.

ಕಿರುಸುದ್ದಿ

ಜನರ ಸಮಸ್ಯೆ ಆಲಿಸಿದ ಶಾಸಕ ದಿನಕರ ಶೆಟ್ಟಿ



ಗೋಕರ್ಣ: ಇಲ್ಲಿನ ನಾಡುಮಾಸ್ಕೇರಿ ಗ್ರಾಪಂ ವ್ಯಾಪ್ತಿಯ ಕಡಲತೀರಗಳಲ್ಲಿನ ಸರ್ಕಾರಿ ಜಾಗದಲ್ಲಿರುವ ರೆಸಾರ್ಟ, ಹೊಟೇಲ್‌ಗಳನ್ನ ತೆರವುಗೊಳಿಸುವಂತೆ ಏಕಾಏಕಿ ಆದೇಶಿಸಿರುವುದರಿಂದ ಚಿಕ್ಕ ಉದ್ಯಮ ಮಾಡಿಕೊಂಡಿರುವ ಸ್ಥಳೀಯ ಮೀನುಗಾರರು ಮತ್ತಿತರ ವರ್ಗದವರಿಗೆ ತೊಂದರೆಯಾಗಿರುವ ಕುರಿತು ಶಾಸಕ ದಿನಕರ ಶೆಟ್ಟಿ ಭಾನುವಾರ ಸ್ಥಳಕ್ಕೆ ಆಗಮಿಸಿ ಸಮಸ್ಯೆಯನ್ನ ಆಲಿಸಿದರು. ಕಡಲತೀರದ ಪ್ರವಾಸೋದ್ಯಮ ನಡೆಸಲು ಸಹಕರಿಸುವ ಜೊತೆ ಮೀನುಗಾರರಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು. ಈ ಬಗ್ಗೆ ಸಚಿವರ ಗಮನಕ್ಕೂ ತರುವೆ ಎಂದ ಶಾಸಕರು ಸದನದಲ್ಲಿಯೂ ಪ್ರಸ್ತಾಪಿಸಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದರು. ಈ ವೇಳೆ ಜಿಪಂ ಮಾಜಿ ಸದಸ್ಯ ಕಾಂಗ್ರೆಸ್ ಮುಖಂಡ ಪ್ರದೀಪ ನಾಯಕ, ನಾಗರಾಜ್ ನಾಯ್ಕ್, ಗಂಗಾಧರ್ ಗೌಡ ವಾಸುದೇವ್ ಮೋರ್ಜೆ, ರತೀಶ್ ಕುರ್ಲೆ,ಮಾಜಿ.ತಾ.ಪಂ.ಸದಸ್ಯ ಮಹೇಶ ಶೆಟ್ಟಿ, ರೂಪಾ ಅಂಕೋಲೆಕರ್, ನಾಡು ಮಾಸ್ಗೇರಿ ಗ್ರಾಪಂ ಮಾಜಿ ಅಧ್ಯಕ್ಷ ಧನಶ್ರೀ ಅಂಕೋಲೇಕರ್, ಕುಮಾರ್ ಕೌರಿ ರಾಜೇಶ್ ಚುಡನ್ಕರ್, ನಾಗೇಶ್ ಗೌಡ ಮತ್ತಿತರ ಮೀನುಗಾರ ಮುಖಂಡರು ಉಪಸ್ಥಿತರಿದ್ದರು.

ಸಮಾಜಕ್ಕೆ ಮಹಿಳೆಯರ ಕೊಡುಗೆ ಅಪಾರ



ಕುಮಟಾ: ಪತಂಜಲಿ ಯೋಗ ಕೇಂದ್ರದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಪೂಜಾ ಪೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಣ್ಯರು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು.ಸಮಾಜದಲ್ಲಿ ಸಾಧನೆಯ ಶಿಖರವೇರಿದ ಆಶಾ ನಾಯ್ಕ ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಉದ್ಘಾಟಕರಾಗಿ ಮಾತನಾಡಿದ ಸಂಧ್ಯಾ ಉಪಾಧ್ಯಾಯ ಮಹಿಳಾ ದಿನದ ಶುಭಾಶಯಗಳನ್ನು ಕೋರಿ, ಜೀವನದಲ್ಲಿ ಪ್ರೇರಣೆಯುತವಾಗಿರುವ ಕೆಲವು ಅಮೂಲ್ಯ ಸಂದೇಶಗಳನ್ನು ಹಂಚಿಕೊಂಡರು.ಶೈಲಾ ಗೌಡ ಹಾಗೂ ಸುಧಾ ಶೆಟ್ಟಿ ಅವರು ಮಹಿಳೆಯರ ಶಕ್ತಿ, ತ್ಯಾಗ ಮತ್ತು ಸಮಾಜ ನಿರ್ಮಾಣದಲ್ಲಿ ಅವರ ಪಾತ್ರದ ಮಹತ್ವವನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಸರೋಜಾ ನಾಯ್ಕ ತಮ್ಮ ಅಧ್ಯಕ್ಷೀಯ ಭಾಷಣ ಮಾಡಿದರು. ಮಕ್ಕಳಿಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಸ್ಪರ್ಧೆಗಳು ವಿದ್ಯಾ ನಾಯ್ಕ ಮತ್ತು ಸುಜಾತ ಗೌಡ ಅವರ ಮಾರ್ಗದರ್ಶನದಲ್ಲಿ ನಡೆದವು. ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಕಾರಣಕರ್ತರಾದ ಯೋಗ ಗುರು ದಿನೇಶ ರೇವಣಕರರಿಗೆ ಮಹಿಳಾ ಭಗಿನಿಯರು ಧನ್ಯವಾದ ಸಲ್ಲಿಸಿದರು. ಕಾರ್ಯಕ್ರಮವನ್ನು ಭಾರತಿ ಶೆಟ್ಟಿ ನಿರ್ವಹಿಸಿದರು. ವಿದ್ಯಾ ನಾಯಕ ಪ್ರಾರ್ಥಿಸಿದರು. ಅನುಷಾ ವಂದಿಸಿದರು.

ನಿಧನ ಸುದ್ದಿ

ಈಶ್ವರ ಪೂಜಾರಿ

ಮುಂಡಗೋಡ: ತಾಲೂಕಿನ ಕಂಚಿಕೊಪ್ಪ ಗ್ರಾಮದ ಈಶ್ವರ ಮಂಜಾ ಪೂಜಾರಿ(50) ನಿಧನರಾದರು. ಇವರು



ಬೆಡಸಗಾಂವ ಗ್ರಾಪಂ ಕಂಚಿಕೊಪ್ಪ ವಾರ್ಡ್‌ನ ಸದಸ್ಯರಾಗಿ 2 ಅವಧಿಗಳ ಕಾಲ ಉತ್ತಮ ಸೇವೆ ಸಲ್ಲಿಸಿದ್ದರು.ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವಿದೆ. ಬೆಡಸಗಾಂವ ಗ್ರಾಪಂ ಮಾಜಿ ಅಧ್ಯಕ್ಷ, ಸದಸ್ಯರು, ಸಿಬ್ಬಂದಿ, ಬೆಡಸಗಾಂವ ಸಹಕಾರಿ ಸಂಘದ ಸಿಬ್ಬಂದಿ ಮತ್ತು ನಿರ್ದೇಶಕರು ಇವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | ರಾಜೇಂದ್ರ ರಾಣೆ ಹೇಳಿಕೆ

ಗ್ಯಾರಂಟಿ ಯೋಜನೆಯಿಂದ ಬಡತನ ನಿರ್ಮೂಲನೆ

ಕಾರವಾರ: ಮಹಿಳೆಯರು ಉನ್ನತ ಸ್ಥಾನಕ್ಕೇರಲು ಮತ್ತು ಆರ್ಥಿಕ ಸಬಲೀಕರಣವಾಗಲು ಸರ್ಕಾರ ಜಾರಿಗೆ ತಂದ ಪಂಚ ಗ್ಯಾರಂಟಿ ಯೋಜನೆಗಳು ಸಹಕರಿಯಾಗಿದ್ದು, ಈ ಯೋಜನೆಗಳು ಬಡತನ ನಿರ್ಮೂಲನೆಗೆ ಕಾರಣವಾಗಿದೆ ಎಂದು ತಾಲೂಕು ಪಂಚಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ರಾಜೇಂದ್ರ ರಾಣೆ ಹೇಳಿದರು.

ಅವರು ಭಾನುವಾರ ತಾಪಂ ಸಭಾಂಗಣದಲ್ಲಿ, ಕಾರವಾರ ತಾಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯು ಆಯೋಜಿಸಲಾದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಯೋಜನೆಯ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಕ್ತಿ ಯೋಜನೆಯಿಂದ ಮಹಿಳೆಯರು ನಾಡಿನಾದ್ಯಂತ ಉಚಿತವಾಗಿ ಪ್ರಯಾಣಿಸಲು ಸಾಧ್ಯವಾಗಿದೆ. ಗೃಹ ಲಕ್ಷ್ಮೀ ಯೋಜನೆಯಿಂದ ಪ್ರತಿ ಕುಟುಂಬದ ಯಜಮಾನಿಗೆ 2,000ರೂ. ನೀಡಲಾಗುತ್ತಿದೆ. ಗೃಹ ಜ್ಯೋತಿ ಮೂಲಕ ಪ್ರತಿ ಕುಟುಂಬಕ್ಕೆ 200ಯೂನಿಟ್ ವರೆಗೂ ಉಚಿತವಾಗಿ ವಿದ್ಯುತ್ ನೀಡಲಾಗಿದ್ದು, ಇದರಿಂದ ಪಾವತಿಸಬೇಕಾದ ವಿದ್ಯುತ್ ಬಿಲ್ ಮೊತ್ತ ಉಳಿತಾಯವಾಗಲಿದೆ, ರಾಜ್ಯದಲ್ಲಿ ಯಾರು ಕೂಡ ಹಸಿವಿನಿಂದ ಬಳಲಬಾರದೆಂದು ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಗಿದ್ದು, ನಿರೋದ್ಯೋಗಿ ಯುವಕರಿಗೆ ನಿರುದ್ಯೋಗ ಭತ್ಯೆ ನೀಡುತ್ತಿದ್ದು, ಒಟ್ಟಾರೆಯಾಗಿ ಪ್ರತಿ ಕುಟುಂಬಕ್ಕೆ ತಿಂಗಳಿನಲ್ಲಿ 5 ರಿಂದ 6 ಸಾವಿರ ರೂ.ಲಭಿಸುತ್ತಿದ್ದು, ಮಹಿಳೆಯರು ಆರ್ಥಿಕವಾಗಿ ಸಬಲರಾಗುವ ಜೊತೆಗೆ ಬಡತನ ನಿರ್ಮೂಲನೆ ಮಾಡಲು ಮುಖ್ಯ ಮಂತ್ರಿಗಳು ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದಾರೆ ಎಂದರು.



ಮಹಿಳಾ ದಿನಚಾರಣೆ ಗೀವ ಟೂ ಗೇನ್ (ಕೊಟ್ಟುಗಳಿಸು) ಎಂಬ ಘೋಷ ವಾಕ್ಯದೊಂದಿಗೆ ಈ ವರ್ಷ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ. ಮಹಿಳೆಯರಿಗೆ ಪ್ರೋತ್ಸಾಹ, ಅವಕಾಶ, ಸನ್ಮಾನ, ಸಮಾನತೆ ನೀಡಿ, ಸಬಲರಾನ್ನಾಗಿಸಿದ್ದಾಗ ಅವರೂ ದೇಶದ ಅಭಿವೃದ್ಧಿಗೆ ಸಹಕರಿಯಾಗಲಿದ್ದಾರೆ.
■ ಡಾ. ಆಶ್ವಿನಿ ಬೋರಕರ್,ತಾಲೂಕು ಕುಟುಂಬ ಕಲ್ಯಾಣಾಧಿಕಾರಿ

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರಿಗೆ ಅನುಕೂಲವಾಗಿದೆ. ನಾವು ಗ್ಯಾರಂಟಿ ಯೋಜನೆಯ ಹಣದಿಂದ ಸ್ವಂತ ವ್ಯಾಪಾರ ಆರಂಭಿಸಿ ಉತ್ತಮ ಲಾಭ ದೊರೆತಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ವ್ಯಾಪಾರ ಆರಂಭಿಸಿ ಕೆಲವರಿಗೆ ಉದ್ಯೋಗ ನೀಡುವ ಗುರಿ ಹೊಂದಿದ್ದೇವೆ. ಅಲ್ಲದೇ, ಸಂಸಾರ ನಡೆಸಲು, ಮಕ್ಕಳ ವಿದ್ಯಾಭ್ಯಾಸಕ್ಕೆ, ಮನೆ ಬಾಡಿಗೆ ಕಟ್ಟಲು, ಆರೋಗ್ಯಕರ ಜೀವನ ನಡೆಸಲು ಕೂಡಾ ಅನುಕೂಲವಾಗಿದೆ. ಹೊಟ್ಟೆ ತುಂಬಾ ಊಟ ಮಾಡಲು ಮಕ್ಕಳ ಉತ್ತಮ ಹುದ್ದೆ ಪಡೆಯಲು ಕೂಡಾ ಸಹಕರಿಯಾಗಿದೆ ಒಟ್ಟಾರೆ ಗ್ಯಾರಂಟಿ ಯೋಜನೆಯ ಮೂಲಕ ಸರ್ಕಾರವು ಮಹಿಳೆಯರ ಸಬಲೀಕರಣಕ್ಕೆ ಬೆನ್ನೆಲುಬಾಗಿ ನಿಂತಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಗ್ಯಾರಂಟಿ ಯೋಜನೆಯ ಸದುಪಯೋಗ ಪಡಿಸಿಕೊಂಡ ಮಹಿಳಾ ಫಲಾನುಭವಿಗಳಿಗೆ ಸನ್ಮಾನಿಸಲಾಯಿತು. ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಮ್ಯೂಸಿಕಲ್ ಚೇರ್, ಬಾಲ್ ಇನ್ ಬಟಲ್, ರಂಗೋಲಿ, ಕಣ್ಣು ಪಟ್ಟಿ ಆಟ, ಸಂಗೀತ ಹಾಗೂ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

ವಿಜೇತರಿಗೆ ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಏಜೆನ್ಸಿ ಲಿಮಿಟೆಡ್ ಅಧ್ಯಕ್ಷ ಸತೀಶ್ ಕೆ. ಸೈಲ್ ಬಹುಮಾನ ವಿತರಿಸಿದರು.

ವಾಕರಸಾ ಸಂಸ್ಥೆಯ ಕಾರವಾರ ಘಟಕದ ವ್ಯವಸ್ಥಾಪಕಿ ಸೌಮ್ಯ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೀರನಗೌಡ ಪಿ.ಏಣಗೌಡರ, ತಾಲೂಕು ಪಂಚ ಗ್ಯಾರಂಟಿ ಯೋಜನೆಯ ಸಮಿತಿಯ ಸದಸ್ಯರು, ಫಲಾನುಭವಿಗಳು ಮತ್ತಿತರರು ಉಪಸ್ಥಿತರಿದ್ದರು.

ಮಂಗನ ಕಾಯಿಲೆ ತಡೆಗಟ್ಟಲು ಕ್ರಮ ಕೈಗೊಳ್ಳಿ: ಶಾಸಕ ಭೀಮಣ್ಣ

ಸಿದ್ದಾಪುರ: ತಾಲೂಕಿನ ಹೇರೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಮಂಗನ ಕಾಯಿಲೆ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳ ಕುರಿತ ಸಭೆಯಲ್ಲಿ ಶಾಸಕ ಭೀಮಣ್ಣ ನಾಯ್ಕ ಅವರು ಅಧ್ಯಕ್ಷತೆ ವಹಿಸಿ ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಮಹತ್ವದ ಸೂಚನೆಗಳನ್ನು ನೀಡಿದರು.

ಮಂಗನ ಕಾಯಿಲೆ ಹರಡದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕು. ಗ್ರಾಮೀಣ ಭಾಗದ ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲು ಆದ್ಯತೆ ನೀಡಬೇಕು ಎಂದು ಶಾಸಕರು ತಿಳಿಸಿದರು. ಅರಣ್ಯ ಪ್ರದೇಶದ ಸಮೀಪವಿರುವ ಹಳ್ಳಿಗಳ ಜನರು ಕಾಡಿಗೆ ಹೋಗುವಾಗ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸಿಬ್ಬಂದಿ ಮನೆಮನೆಗೆ ಭೇಟಿ ನೀಡಿ ಮಾಹಿತಿ ನೀಡಬೇಕು. ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಿ, ರೋಗ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಸ್ಪಂದಿಸಬೇಕು ಎಂದು ಕಟ್ಟುನಿಟ್ಟಿನ ಆದೇಶ ನೀಡಿದರು. ಸಾರ್ವಜನಿಕರ ಆರೋಗ್ಯ ರಕ್ಷಣೆ ನಮ್ಮ ಮೊದಲ ಆದ್ಯತೆ. ಮಂಗನ ಕಾಯಿಲೆಯ ಭೀತಿಯನ್ನು ಹೋಗಲಾಡಿಸಲು ಸರ್ಕಾರ ಮತ್ತು ಆಡಳಿತ ಯಂತ್ರ ಸನ್ನದ್ಧವಾಗಿದೆ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಆದರೆ ಆರೋಗ್ಯ ಇಲಾಖೆ ನೀಡುವ ಮುನ್ನೆಚ್ಚರಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಶಾಸಕರು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಸ್ಥಳೀಯ ಜನಪ್ರತಿನಿಧಿಗಳು, ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಪಂಚಾಯತರಾಜ್ ಸಂಸ್ಥೆಗಳ ಪ್ರಮುಖರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅಧಿಕಾರಿಗಳಿಗೆ ಸೂಚನೆ
ಆಸ್ಪತ್ರೆಗಳಲ್ಲಿ ಅಗತ್ಯವಿರುವ ಲಸಿಕೆಗಳು, ಔಷಧಗಳು ಹಾಗೂ ಚಿಕಿತ್ಸಾ ಉಪಕರಣಗಳ ದಾಸ್ತಾನು ಸಮರ್ಪಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.



ಮೇಲ್ಸೇತುವೆ ನಿರ್ಮಾಣಕ್ಕೆ ನಾಯಕ ಒತ್ತಾಯ

ಅಂಕೋಲಾ: ತಾಲೂಕಿನ ಸಗಡಗೇರಿ ಮಾದನಗೇರಿ ನಡುವಿನ ಕೂಡು ರಸ್ತೆಯ ನಡುವೆ ಇರುವ ರೈಲ್ವೆಗೇಟಿನಿಂದ ಸಾರ್ವಜನಿಕರ ಸಂಚಾರಕ್ಕೆ ಸಮಸ್ಯೆಯಾಗುತ್ತಿದ್ದು, ಆ ಭಾಗದಲ್ಲಿ ಮೇಲ್ಸೇತುವೆ ನಿರ್ಮಿಸಿ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪ್ರಧಾನಿ ನರೇಂದ್ರ ಮೋದಿ, ಸಂಬಂಧಿಸಿದ ಇಲಾಖೆಯ ಸಚಿವರು ಮತ್ತು ಶಾಸಕರಿಗೆ ನಿವೃತ್ತ ಮುಖ್ಯಾಧ್ಯಾಪಕ ಸುರೇಶ ರಾಮಚಂದ್ರ ನಾಯಕ ಪತ್ರ ಬರೆಯುವ ಮೂಲಕ ಆಗ್ರಹಿಸಿದ್ದಾರೆ.



ಗೋಕರ್ಣ ರೈಲ್ವೆ ನಿಲ್ದಾಣದ ಪಕ್ಕದಲ್ಲೇ ರೈಲ್ವೆ ಗೇಟ್ ಇರುವುದರಿಂದ ರೈಲು ನಿಲುಗಡೆ, ಕ್ರಾಸಿಂಗ್ ಮತ್ತಿತರ ಸಂದರ್ಭಗಳಲ್ಲಿ ಸಗಡಗೇರಿ, ಕಾಮಗಿ, ಬಿಳಿಸಿರಿ, ಹೆಗ್ರೆ,

ಬಯಲಕೇರಿ, ಬಂಕಿಕೊಡ್ಲ, ಅಗ್ರಗೋಣ, ಗೋಕರ್ಣ, ಹನೇಹಳ್ಳಿ ಸೇರಿದಂತೆ ಹತ್ತಾರು ಹಳ್ಳಿಗಳ ಜನರು ರೈಲ್ವೆ ಗೇಟ್ ಬಳಿ ಗಂಟೆಗಟ್ಟಲೆ ಕಾಯುವ ಅನಿವಾರ್ಯತೆ ಎದುರಾಗಿದೆ ಇದರಿಂದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಆಸ್ಪತ್ರೆಗಳಿಗೆ ತೆರಳುವವರು, ತುರ್ತು ಸಂಚರಿಸಬೇಕಾದ ಅಗತ್ಯತೆ ಇರುವ ಸಾರ್ವಜನಿಕರು ಸಮಸ್ಯೆ ಎದುರಿಸುವಂತಾಗಿದೆ. ರೈಲ್ವೆ ಗೇಟಿನ ಪಕ್ಕದಲ್ಲೇ ಅತಿ ಎತ್ತರದ ಸ್ಥಳವಿದ್ದು, ಮೇಲ್ಸೇತುವೆ ನಿರ್ಮಾಣಕ್ಕೆ ಅನುಕೂಲಕರವಾಗಿದೆ. ರೈಲ್ವೆ ಇಲಾಖೆಯ ಅಧಿಕಾರಿಗಳು ಆ ದಿಶೆಯಲ್ಲಿ ಗಮನ ಹರಿಸಬೇಕಿದೆ ಎಂದು ಸುರೇಶ ನಾಯಕ ಆಗ್ರಹಿಸಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೆ ಸಹ ಸಂಬಂಧಿಸಿದವರ ಗಮನಕ್ಕೆ ತರುವ ಪ್ರಯತ್ನ ನಡೆಸಲಾಗಿದ್ದು, ಯಾರೂ ಸಹ ಕಾಳಜಿ ತೋರದ ಕಾರಣ ಪ್ರಧಾನ ಮಂತ್ರಿಗಳು, ರೈಲ್ವೆ ಸಚಿವರು, ರಾಜ್ಯದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸ್ಥಳೀಯ ಸಂಸದರು ಮತ್ತು ಶಾಸಕರಿಗೆ ಪತ್ರ ಬರೆದು ಮೇಲ್ಸೇತುವೆ ನಿರ್ಮಾಣಕ್ಕೆ ಆಗ್ರಹಿಸಲಾಗಿದ್ದು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಈ ಕುರಿತಂತೆ ಆಸಕ್ತಿವಹಿಸಿ ಮೇಲ್ಸೇತುವೆ ನಿರ್ಮಾಣಕ್ಕೆ ರೈಲ್ವೆ ಸಚಿವರಿಗೆ ಒತ್ತಾಯಿಸಬೇಕು ಎಂದು ಸುರೇಶ ನಾಯಕ ಸಗಡಗೇರಿ ಅವರು ಆಗ್ರಹಿಸಿದ್ದು, ಮೇಲ್ಸೇತುವೆ ನಿರ್ಮಾಣ ಆಗದಿದ್ದರೆ ಸಾರ್ವಜನಿಕರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.



ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಅಶೋಕ ಪ್ರೌಢಶಾಲೆಯಲ್ಲಿ ನೂತನವಾಗಿ ನಿರ್ಮಿಸಿದ ಸಭಾಭವನವನ್ನು ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ದೊಡ್ಮನೆ ಉದ್ಘಾಟಿಸಿದರು.

ಮಹಿಳೆಯರು ಆರೋಗ್ಯದ ಕಾಳಜಿ ವಹಿಸಲಿ

ದಾಂಡೇಲಿ: ಇಡೀ ಸಂಸಾರದ ನಿರ್ವಹಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ದಾಂಡೇಲಿಯ ಲಯನ್ಸ್ ಕ್ಲಬ್ ಅಧ್ಯಕ್ಷೆ ಡಾ.ಗೌರಿ ಶೇಖರ ಹಂಚಿನಾಳಮಠ ಹೇಳಿದರು.

ಅವರು ಭಾನುವಾರ ನಗರದ ಅಂಬೇಡ್ಕರ್ ಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತವಾಗಿ ದಾಂಡೇಲಿಯ ಲಯನ್ಸ್ ಕ್ಲಬ್ ಹಾಗೂ ರಾಷ್ಟ್ರೀಯ ಅಪರಾಧ ತಡೆ ಮತ್ತು ಮಾನವ ಹಕ್ಕುಗಳ ಭಾರತ ಪರಿಷತ್ ಆಶ್ರಯದಡಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿ ಮಾತನಾಡಿದರು. ನ್ಯಾಯಾಧೀಶರಾಗಿ ಆಯ್ಕೆಯಾದ ಪದ್ಮಾವತಿ ಮಾದಿಗ ಅವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ನಗರಸಭೆಯ ಮಾಜಿ ಅಧ್ಯಕ್ಷೆ ಯಾಸ್ಮಿನ್ ಕಿತ್ತೂರ್, ನಗರಸಭೆಯ ಮಾಜಿ ಉಪಾಧ್ಯಕ್ಷೆ ಶಾರದಾ ಪರಶುರಾಮ, ಶಿಕ್ಷಕಿ ಸರೋಜಿನಿ ವೆರ್ಣೇಕರ, ರಾಷ್ಟ್ರೀಯ ಅಪರಾಧ ತಡೆ ಮತ್ತು ಮಾನವ ಹಕ್ಕುಗಳ ಭಾರತ ಪರಿಷತ್ತಿನ ತಾಲೂಕು ಅಧ್ಯಕ್ಷೆ ಪ್ರಮೀಳಾ ಮಾನೆ ಭಾಗವಹಿಸಿ ಮಹಿಳಾ ದಿನಾಚರಣೆಯ ಶುಭವನ್ನು ಕೋರಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂದು ಹೇಳಿದರು.ಶಿಬಿರದ ವೈದ್ಯರುಗಳಾದ ಡಾ.ಕೀರ್ತಿ ಸಾಳುಂಕೆ ಮತ್ತು ಡಾ.ನಸ್ರೀನ್ ಬೇಗಂ ಅವರು ಮಹಿಳೆಯರ ಆರೋಗ್ಯ ಸುರಕ್ಷತೆಯ ಕುರಿತು ಮಾತನಾಡಿದರು.ರಾಷ್ಟ್ರೀಯ ಅಪರಾಧ ತಡೆ ಮತ್ತು ಮಾನವ ಹಕ್ಕುಗಳ ಭಾರತ ಪರಿಷತ್ತಿನ ಬೆಳಗಾವಿ ವಿಭಾಗದ ಅಧ್ಯಕ್ಷೆ ರೇಣುಕಾ ಬಂದಂ ಕಾರ್ಯಕ್ರಮದ ಆಯೋಜನೆಯ ಉದ್ದೇಶವನ್ನು ವಿವರಿಸಿದರು. ನ್ಯಾಯಾಧೀಶರಾಗಿ ಆಯ್ಕೆಯಾದ ಪದ್ಮಾವತಿ ಮಾದಿಗ ಅವರನ್ನು ಈ ಸನ್ಮಾನಿಸಲಾಯಿತು. ಲಯನ್ಸ್ ಕ್ಲಬ್ ಖಜಾಂಚಿ ಸುಮಂಗಲಾ ಚಿಕ್ಕಮಠ ಸ್ವಾಗತಿಸಿದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ರುಬಿನಾ ಕೌಸರ್ ಇಮ್ತಿಯಾಜ್ ಅತ್ತಾರ ವಂದಿಸಿದರು.



ಬೀರಮ್ಮ ನಾಯಕರಿಗೆ ಸನ್ಮಾನ

ಅಂಕೋಲಾ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಅಂಕೋಲಾ ಹಾಗೂ ಶಾಲಾ ಶಿಕ್ಷಣ ಇಲಾಖೆಯ ನೌಕರರ ಸಂಘ ತಾಲೂಕು ಘಟಕ ಅಂಕೋಲಾ ಇವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ಅಂಕೋಲಾ ತಾಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಮ್ಯಾನೇಜರ್ ಆಗಿ ಹಲವು ವರ್ಷಗಳ ಕಾಲ ದಕ್ಷತೆ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ್ದ ಬೀರಮ್ಮ ನಾಯಕರನ್ನು ಅವರ ಮನೆಯಲ್ಲಿಯೇ ಗೌರವಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಬೀರಮ್ಮನಾಯಕರು ವೃತ್ತಿ ಜೀವನದಲ್ಲಿ ಎಲ್ಲರನ್ನೂ ಸಮಾನವಾಗಿ ಕಂಡಿದ್ದೇನೆ. ಅಂಕೋಲೆಯಲ್ಲಿ ನಾನು ಸಲ್ಲಿಸಿದ ಸೇವೆ ನನಗೆ ತೃಪ್ತಿಯನ್ನು ತಂದಿತ್ತು. ಹಿರಿ,ಕಿರಿಯ ಶಿಕ್ಷಕರ ಬಳಗದವರು ನನ್ನ ಮನೆ ಬಾಗಿಲಿಗೆ ಬಂದು ನನ್ನನ್ನು ಸನ್ಮಾನಿಸಿ ಗೌರವಿಸಿರುವುದು ನನಗೆ ಅತೀವ ಸಂತೋಷವನ್ನು ತಂದಿದೆ. ಇದು ನನಗೆ ಅನಿರೀಕ್ಷಿತವಾದುದು.ನನ್ನ ಜೀವನದಲ್ಲಿ ಮರೆಯಲಾಗದ ಸುಂದರವಾದ ಕ್ಷಣವಾಗಿದೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದರು.ಬೀರಮ್ಮನಾಯಕರನ್ನು ಗೌರವಿಸಿ ಮಾತನಾಡಿದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಂಕೋಲಾ ತಾಲೂಕು ಘಟಕದ ಅಧ್ಯಕ್ಷ ಜಗದೀಶ ಜಿ. ನಾಯಕ ಹೊಸ್ಕೇರಿ ಬೀರಮ್ಮನಾಯಕರು ಅಪರೂಪದಲ್ಲಿ,ಅಪರೂಪವಾದ ವ್ಯಕ್ತಿತ್ವವನ್ನು ಹೊಂದಿದವರು. ಅವರು ಎಲ್ಲ ಶಿಕ್ಷಕರನ್ನು ಮಕ್ಕಳಂತೆ ಕಾಣುತ್ತಿದ್ದರು. ಅವರ ಸೇವೆ ಇಂದಿಗೂ ಸಹ ಶಿಕ್ಷಕರ ಮನಃಪಟಲದಲ್ಲಿ ಹಸಿರಾದ ನೆನಪಾಗಿದೆ ಎಂದರು ಶಾಲಾ ಶಿಕ್ಷಣ ಇಲಾಖೆಯ ಉಕ ಜಿಲ್ಲಾ ಘಟಕದ ಖಜಾಂಚಿ ಸುಜಾತ ರೇವಣಕರ, ಅಂಕೋಲಾ ಘಟಕದ ಅಧ್ಯಕ್ಷ ನಾಗರಾಜ ಹನೇಹಳ್ಳಿ,ಪ್ರಧಾನ ಕಾರ್ಯದರ್ಶಿ ನಮ್ರತಾ ಬಿ.ನಾಯಕ, ಅಂಕೋಲಾ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರತಿನಿಧಿ ಆನಂದು ನಾಯ್ಕ, ಶಿಕ್ಷಕರಾದ ಬೀರಣ್ಣ ನಾಯಕ, ಶ್ರೀನಿವಾಸ ನಾಯಕ, ಜಯಶೀಲ ಆಗೇರ, ವಿಶ್ರಾಂತ ಶಿಕ್ಷಕರಾದ ರೋಹಿದಾಸ ಬಂಟ, ಸಂಜೀವ ನಾಯಕ ಅಭಿನಂದಿಸಿ ಬೀರಮ್ಮ ನಾಯಕರ ಸೇವೆಯನ್ನು ಸ್ಮರಿಸಿದರು. ಅಡವೀಶ ನಾಯಕ, ದೀಪಾ ನಾಯಕ, ಅಕ್ಷರಾ ನಾಯಕ ಸಹಕರಿಸಿದರು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಕಾರವಾರ: ಯಲ್ಲಾಪುರ ಪಪಂ ವ್ಯಾಪ್ತಿಯ ಕಾಳಮ್ಮ ನಗರ ಪ್ರದೇಶದಲ್ಲಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಯಲ್ಲಾಪುರ ಇದರ ವತಿಯಿಂದ, ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಮಾಜಿ ಶಾಸಕ ವಿ.ಎಸ್.ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದೇವಿದಾಸ (ಉಲ್ಲಾಸ) ನಾಗೇಶ್ ಶಾನಭಾಗ ಯಲ್ಲಾಪುರ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಸಮಿತಿ ಸದಸ್ಯರು ಹಾಗೂ ಪಪಂ ಮಾಜಿ ಅಧ್ಯಕ್ಷೆ ನರ್ಮದಾ ನಾಯ್ಕ, ಯಲ್ಲಾಪುರ ಮಹಿಳಾ ಅಧ್ಯಕ್ಷ ಪೂಜಾ ನೇತ್ರೆಕರ್, ಗ್ಯಾರಂಟಿ ಸಮಿತಿ ಸದಸ್ಯ ಅನಿಲ್ ಮರಾಠೆ, ಯಲ್ಲಾಪುರ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು, ಸುತ್ತಮುತ್ತಲಿನ ಮಹಿಳೆಯರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಲಕ್ಷ್ಮೀ ಮರಾಠೆ ಹಾಗೂ ದೇವಾಡಿಗ ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ಅನಿಲ್ ಮರಾಠೆ ಸ್ವಾಗತಿಸಿ, ವಂದಿಸಿದರು.

ಹೆಣ್ಣು ಜಗದ ಕಣ್ಣು: ಪೂಜಾ ಧೂಳಿ



ಹಳಿಯಾಳ: ವಿಶ್ವ ಮಾನವ ಹಕ್ಕುಗಳ ಆಯೋಗ ಆರ್.ಕೆ.ಫೌಂಡೇಶನ ಹಳಿಯಾಳ ತಾಲೂಕು ಘಟಕದ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಭಾನುವಾರ ಆಚರಿಸಲಾಯಿತು.

ವಿಶ್ವ ಮಾನವ ಹಕ್ಕುಗಳ ಆಯೋಗ ಆರ್.ಕೆ.ಫೌಂಡೇಶನ ಅಧ್ಯಕ್ಷರಾದ ಪೂಜಾ ರಾಜು ಧೂಳಿ ಮಾತನಾಡಿ, ಹೆಣ್ಣು ಸಮಾಜ ಮುಖಿಯಾಗಿ ಕೆಲಸ ಮಾಡಲು ಅವಳ ಅಸ್ಮಿತೆಯನ್ನು ಬೆಂಬಲಿಸಿ ಪ್ರೋತ್ಸಾಹಿಸುವುದು ಅವಶ್ಯಕ. ಈ ನಿಟ್ಟಿನಲ್ಲಿ ಮಹಿಳೆ ಸಮಾಜದ ಕಣ್ಣಾಗಿ ಶೋಷಣೆಯನ್ನು ಮೆಟ್ಟಿ ನಿಂತು ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಾಗುತ್ತದೆ. ಅವಳ ಅಸ್ಮಿತೆಯನ್ನು ಬೆಂಬಲಿಸಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಹಳಿಯಾಳ ತಾಲೂಕಿನ ಸಾಹಿತಿ ಹಾಗೂ ಶಿಕ್ಷಕಿಯಾದ ಭಾರತಿ ನಲವಡೆಯವರನ್ನು ಸನ್ಮಾನಿಸಲಾಯಿತು. ಮಹಿಳೆಯರ ಸಬಲತೆಯನ್ನು ಪ್ರೇರೇಪಿಸಲು ಮಾನವ ಹಕ್ಕುಗಳ ಆಯೋಗ ಆರ್.ಕೆ.ಫೌಂಡೇಶನ ಕಾರ್ಯ ಶ್ಲಾಘನೀಯವಾಗಿದೆ. ಹೆಣ್ಣುಮಕ್ಕಳ ಸಾಕ್ಷರತೆಯುಅವಳನ್ನು ಸ್ವಾವಲಂಬಿಯನ್ನಾಗಿ ಮಾಡಿ ಸಾಧನೆಯ ಹಾದಿಯಲ್ಲಿ ಕೊಂಡೊಯ್ಯುತ್ತದೆ. ಇದಕ್ಕೆ ಕುಟುಂಬದ ಸಮಾಜದ ಸಹಕಾರ ಮುಖ್ಯ ಎಂದು ಹೇಳಿದರು. ಆರ್.ಕೆ.ಫೌಂಡೇಶನ್‌ನ ಸದಸ್ಯೆ ಸುಧಾ ಶೆಟ್ಟಿ ಸ್ವಾಗತಿಸಿದರು. ಅನಿತಾ ಪಾಟೀಲ ವಂದಿಸಿದರು.ಮಾನವ ಹಕ್ಕುಗಳ ಆಯೋಗ ಆರ್.ಕೆ. ಫೌಂಡೇಶನ್‌ನ ಸದಸ್ಯರಾದ ಶಾಂತಾ ಹಿರೇಕರ, ಜಯಲಕ್ಷ್ಮಿ ಚವ್ಹಾಣ, ಭಾರತಿ ಬೋಸಲೆ, ಸುರೇಖಾ ಘಾಕ್ರಿ, ಕಸ್ತೂರಿ ಭರಮಣ್ಣವರ, ಪ್ರಿಯಾ ಬೋಕಡೆ, ಅನಿತಾ ಪಾಟೀಲ, ರೀತೂ ಧೂಳಿ, ಸುಧಾ ಶೆಟ್ಟಿ ಉಪಸ್ಥಿತರಿದ್ದರು.

ಯುಪಿಎಸ್‌ಸಿ: ಬಸವರಾಜ 739ನೇ ರ್‍ಯಾಂಕ್

ಹಳಿಯಾಳ: ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಯುಪಿಎಸ್‌ಸಿ) 2025 ನೇ ಸಾಲಿನಲ್ಲಿ ನಡೆಸಿದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಮೆಕ್ಯಾನಿ ಕಲ್ ವಿಭಾಗದ ಹಳೆಯ ವಿದ್ಯಾರ್ಥಿ ಬಸವರಾಜ.ಎಂ.ಪಾಟೀಲ 739ನೇ ರ್‍ಯಾಂಕ್ ಪಡೆದುಕೊಂಡಿದ್ದಾನೆ.



ತಾಳ್ಮೆ ಹಾಗೂ ನಿರಂತರ ಪ್ರಯತ್ನವೇ ಈ ಫಲಿತಾಂಶಕ್ಕೆ ಕಾರಣ ಎಂದು ಬಸವರಾಜ್ ಹೇಳಿದ್ದಾರೆ.

ಬೈಲಹೊಂಗಲ ತಾಲೂಕಿನ ಮೇಕಲಾಮರಡಿ ಗ್ರಾಮದ ನಿವಾಸಿಯಾದ ಬಸವರಾಜ್ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಪ್ರಾಥಮಿಕ ಶಾಲೆ ಕಬ್ಬುರ್‌ನಲ್ಲಿ ಪೂರೈಸಿ, ಬೆಳಗಾವಿಯ ಜವಾಹರ್ ನವೋದಯ ವಿದ್ಯಾಲಯದಲ್ಲಿ ಮುಂದಿನ ಹಂತದ ಶಿಕ್ಷಣ ಪಡೆದರು. 2019 ರಿಂದ 2023 ರ ವರೆಗೆ ಕೆಎಲ್‌ಎಸ್ ವಿಡಿಐಟಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದಾರೆ.

ಬಸವರಾಜ್ ಅವರ ತಂದೆ ಮಡಿವಾಳ ಪ್ಪ ಪಾಟೀಲ್ ನಿವೃತ್ತ ಶಾಲಾ ಶಿಕ್ಷಕರಾಗಿದ್ದು, ತಾಯಿ ಶಾಂತವ್ವ ಪಾಟೀಲ್ ಗೃಹಿಣಿಯಾಗಿದ್ದಾರೆ.

ಮಹಾವಿದ್ಯಾಲಯದ ಮಾಜಿ ವಿದ್ಯಾರ್ಥಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದಿರುವುದಕ್ಕೆ ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಮತ್ತು ಪ್ರಾ. ಡಾ.ವಿ.ಎ ಕುಲಕರ್ಣಿ ಸಂತಸ ವ್ಯಕ್ತಪಡಿಸಿದ್ದಾರೆ. ವಿಭಾಗ ಮುಖ್ಯಸ್ಥ ಡಾ.ಕೆ. ಎಸ್ ಪೂಜಾರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ರಾಷ್ಟ್ರೀಯ ಪವರ್ ಮ್ಯಾನ್ ದಿನಾಚರಣೆ



ದಾಂಡೇಲಿ: ವಿದ್ಯುತ್ ಪೂರೈಕೆ ಮಾಡಲು ಹಗಲಿರುಳು ಶ್ರಮಿಸುವ, ಹವಾಮಾನದ ಸವಾಲುಗಳನ್ನು ಎದುರಿಸಿ, ಜೀವದ ಹಂಗು ತೊರೆದು ಕಾರ್ಯನಿರ್ವಹಿಸುವ ಪವರ್ ಮ್ಯಾನ್ ಗಳ (ಲೈನ್‌ಮ್ಯಾನ್‌ಗಳ) ಸೇವೆಗಳನ್ನು ಗೌರವಿಸುವ ಮತ್ತು ಸ್ಮರಿಸುವ ಉದ್ದೇಶದಡಿ ನಗರದ ಹೆಸ್ಕಾಂ ಕಾರ್ಯಾಲಯದಲ್ಲಿ ರಾಷ್ಟ್ರೀಯ ಪವರ್ ಮ್ಯಾನ್ ದಿನಾಚರಣೆಯನ್ನು ಆಚರಿಸಲಾಯಿತು.

ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಪುರುಷೋತ್ತಮ ಮಲ್ಯ ಅವರು ಮಾತನಾಡಿ, ತಮ್ಮ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುವ ಮೂಲಕ ನಾಡಿಗೆ ಬೆಳಕು ಕೊಡುವಂತಹ ಅತ್ಯಂತ ಮಹತ್ವದ ಸೇವೆಯನ್ನು ಪ್ರಾಮಾಣಿಕವಾಗಿ ಪವರ್ ಮ್ಯಾನ್‌ಗಳು ನಿರ್ವಹಿಸಿಕೊಂಡು ಬಂದಿರುವುದರಿಂದಲೇ ಇವತ್ತು ಹೆಸ್ಕಾಂ ಜನತೆಯ ನಂಬಿಕೆಯ ಇಲಾಖೆಯಾಗಿ ಗಮನ ಸೆಳೆದಿದೆ. ಪವರ್ ಮ್ಯಾನ್ ಗಳು ವೈಯಕ್ತಿಕ ಸುರಕ್ಷತೆಯ ಕಡೆಗೆ ಆದ್ಯತೆಯನ್ನು ನೀಡಿ ತಮ್ಮ ಕೆಲಸಗಳನ್ನು ಮಾಡಬೇಕೆಂದುಎಂದರು.ಈ ಸಂದರ್ಭದಲ್ಲಿ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಾದ ದೀಪಕನಾಯಕ ಮತ್ತು ಪರಶುರಾಮ ಉಪ್ಪಾರ್ ಅವರು ಹೆಸ್ಕಾಂ ಪವರ್ ಮ್ಯಾನ್‌ಗಳ ಸೇವಾ ಬದ್ಧತೆಯನ್ನು ಸ್ಮರಿಸಿದರು.

ಹೆಸ್ಕಾಂ ನೌಕರರ ಕೇಂದ್ರ ಸಮಿತಿ ಸದಸ್ಯ ಜಹಿರುದ್ದೀನ್ ರೋಣ್, ಲೆಕ್ಕಾಧಿಕಾರಿ ಕಿರಾಣ್.ಬಿ.ಆಚಾರಿ ಹಾಗೂ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಪವರ್ ಮ್ಯಾನ್‌ಗಳು ಉಪಸ್ಥಿತರಿದ್ದರು. ಹಿರಿಯ ಸಹಾಯಕರಾದ ಕುಮಾರ್ ಕರಗಯ್ಯ ಸ್ವಾಗತಿಸಿ, ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.

ಕಿರುಸುದ್ದಿ



ರಟ್ಟೀಹಳ್ಳಿ: ತಾಲೂಕಿನ ಕೋಡಮಗ್ಗಿಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಜರುಗಿದ ಪೋಷಕ-ಶಿಕ್ಷಕರ ಮಹಾಸಭೆ ಮತ್ತು ಇಕೋ ಕ್ಲಬ್ಆಶ್ರಯದಲ್ಲಿ ನಡೆದ ಚಟುವಟಿಕೆಗಳ ಬಹುಮಾನ ವಿತರಣಾ ಸಮಾರಂಭದಲ್ಲಿ ರಟ್ಟೀಹಳ್ಳಿ ಪೊಲೀಸ ಠಾಣೆಯ ಎಎಸ್ಐ ಅಶೋಕ ಕೊಂಡ್ಲಿ ಅವರನ್ನು ಸನ್ಮಾನಿಸಲಾಯಿತು.

ಉತ್ತಮ ಸಮಾಜ ನಿರ್ಮಾಣ ನಮ್ಮ ಸಂಸ್ಕೃತಿ



ಶಿಗ್ಗಾವಿ: ನಮ್ಮದು ಹಿಂದೂ ಸನಾತನ ಧರ್ಮ, ನಮ್ಮ ಧರ್ಮವೇ ಕಾಯಕ ಧರ್ಮ, ಅದನ್ನೇ ಬಸವಣ್ಣನವರು ಹೇಳಿದ್ದು, ಧರ್ಮ ಮತ್ತು ಕಾಯಕ ಬೇರೆ ಅಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದ ವಿರಕ್ತಮಠದಲ್ಲಿ 33ನೇಯ ಶರಣ ಸಂಸ್ಕೃತಿ ಉತ್ಸವದ 4ನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಮನುಷ್ಯ ದುಡಿಯುತ್ತಾನೆ. ಕಾಯಕದಿಂದ ಬಂದ ಫಲವನ್ನು ದಾಸೋಹಕ್ಕೆ ಕೊಡಬೇಕು. ಅಂತಹ ಸಂಸ್ಕೃತಿ ಶಿಗ್ಗಾವಿ ವಿರಕ್ತಮಠದ ಸಂಸ್ಕೃತಿ ಉತ್ತಮವಾದ ಸಮಾಜ ನಿರ್ಮಾಣ ಮಾಡುವುದಾಗಿದೆ ಎಂದರು. ಮ.ನಿ.ಪ್ರ ಸಂಗನಬಸವ ಶ್ರೀಗಳು, ಬಸವಲಿಂಗ ದೇವರು, ಡಾ.ಎ.ಸಿ ವಾಲಿ ಮಹಾರಾಜರು ಸಾನಿಧ್ಯವಹಿಸಿದ್ದರು. ಜಿ.ಟಿ.ಟಿ.ಸಿ ವಲಯ ಮುಖ್ಯಸ್ಥ ಶಿವಾನಂದ ಕುಂಬಾರ, ದುಂಡಸಿ ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ, ವಾಗ್ಮಿ ಕಗ್ಗ ನಟೇಶ, ನಿವೃತ್ತ ಪ್ರಾ. ಜಿ.ಎನ್.ಯಲಿಗಾರ, ಮುಖಂಡರಾದ ಶಿವಾನಂದ ಮ್ಯಾಗೇರಿ ಉಪಸ್ಥಿತರಿದ್ದರು.

ಶಿಕ್ಷಣದಿಂದ ವಂಚಿತರಾಗದಿರಿ: ಪಾಟೀಲ



ಶಿಗ್ಗಾವಿ: ಬಡತನ ಶಿಕ್ಷಣಕ್ಕೆ ಅಡ್ಡಿಯಾಗಿ ಶಿಕ್ಷಣದಿಂದ ಯಾರು ವಂಚಿತರಾಗಬಾರದು ಎಂದು ಸಮಾಜ ಸೇವಕ ಹಾಗೂ ನಟ ವರುಣ್‌ಗೌಡ್ರ ಪಾಟೀಲ ಹೇಳಿದರು.

ತಾಲೂಕಿನ ಶ್ಯಾಡಂಬಿ ಗ್ರಾಮದಲ್ಲಿ ಬಡ ಪ್ರತಿಭಾವಂತ ವಿದ್ಯಾರ್ಥಿನಿ ಅಶ್ವಿನಿ ಯಲ್ಲಪ್ಪ ಹಡಪದ ವಿದ್ಯಾರ್ಥಿನಿಯ ನರ್ಸಿಂಗ್ ವಿದ್ಯಾಭ್ಯಾಸಕ್ಕೆ ಧನ ಸಹಾಯ ಮಾಡಿ ಮಾತನಾಡಿದ ಅವರು, ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಬೆಳೆಯಬೇಕು. ನಮ್ಮ ತಾಲೂಕಿನಲ್ಲಿ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದಿದ್ದಾರೆ ಯಾರು ಪ್ರತಿಭಾವಂತರಿದ್ದಾರೆ ಅಂತವರನ್ನು ಗುರುತಿಸಿ ಮುಂದಿನ ದಿನಮಾನಗಳಲ್ಲಿ ಆರ್ಥಿಕವಾಗಿ ಸಹಾಯ ಮಾಡುವುದಾಗಿ ತಿಳಿಸಿದ ಅವರು, ಇದರಿಂದ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕಿದ್ದ ಮಕ್ಕಳು ಶಿಕ್ಷಣದಿಂದ ದೂರ ಉಳಿಯುವಂತಾಗಿದೆ ಎಂದರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯ ತಂದೆ ಯಲ್ಲಪ್ಪ ಹಡಪದ, ಪತ್ರಕರ್ತ ಬಸವರಾಜ ಹಡಪದ ಇದ್ದರು.

ರಾಚಪ್ಪ ಅಕ್ಕಿ ನಿಧನ

ಹಾವೇರಿ: ಬ್ಯಾಡಗಿ ತಾಲೂಕು ಕದರಮಂಡಲಗಿ ಗ್ರಾಮದ ರಾಚಪ್ಪ ಅಕ್ಕಿ (69) ವಯೋ ಸಹಜವಾಗಿ ಭಾನುವಾರ ನಿಧನರಾದರು. ಮೃತರಿಗೆ ಪತ್ನಿ ಇಬ್ಬರು ಪುತ್ರರು, ಒರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರು ಇದ್ದಾರೆ.



ರಾಚಪ್ಪ ಅವರ ಮರಣಾನಂತರ ಅವರ ಮೃತದೇಹವನ್ನು ಅವರು ಕುಟುಂಬದವರು ಸ್ನೇಹಮೈತ್ರಿ ಬ್ಲಡ್ ಆರ್ಮಿ ಸಹಕಾರದೊಂದಿಗೆ ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದೇಹದಾನ ಮಾಡಿದರು.



ಶಿಗ್ಗಾವಿ : ತಾಲೂಕಿನ ಯತ್ತಿನಹಳ್ಳಿ ತಾಂಡಾದಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಾಲಾ ರಜತ ಮಹೋತ್ಸವ ಕಾರ್ಯಕ್ರಮ ಹಾವೇರಿ ಶಾಸಕರು ಹಾಗೂ ವಿಧಾನಸಭೆಯ ಉಪ ಸಭಾಧ್ಯಕ್ಷರಾದ ರುದ್ರಪ್ಪ ಲಮಾಣಿ ಉದ್ಘಾಟಿಸಿದರು.ಈ ವೇಳೆ ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ,ಬಂಜಾರ ಗುರುಪೀಠದ ತಿಪ್ಪೇಶ್ವರ ಶ್ರೀಗಳು ಇದ್ದರು.

ವಾದಿರಾಜರ ಮೌಲಿಕ ಬದುಕಿನ ಅರಿವು ಅಗತ್ಯ

ಹಾವೇರಿ: ಇಂದು ಪ್ರತಿ ವ್ಯಕ್ತಿ ತನ್ನ ಕೆಲಸವೇ ಕಷ್ಟ ಎಂದುಕೊಳ್ಳುತ್ತಿದ್ದು, ಒಂದು ಕಡೆ ಕುಟುಂಬ ಇನ್ನೊಂದೆಡೆ ವೃತ್ತಿ ಬದುಕು ಮತ್ತೊಂದು ಮಗ್ಗುಲಲ್ಲಿ ಆತ್ಮೋದ್ಧಾರದ ಭಾರವನ್ನು ನಿಭಾಯಿಸುವಲ್ಲಿ ಎಡವುತ್ತಿದ್ದಾನೆ. ಇದನ್ನು ಸರಿದೂಗಿಸಲು ವಾದಿರಾಜರ ಮೌಲಿಕ ಉಪದೇಶಗಳನ್ನು, ಬದುಕನ್ನು ಎಲ್ಲರೂ ಅರಿಯುವ ಅಗತ್ಯವಿದೆ ಎಂದು ಶ್ರೀಹರಿ ಆಚಾರ್ಯ ವಾಳ್ವೇಕರ ಹೇಳಿದರು. ತಾಲೂಕಿನ ಹಾವನೂರ ಗ್ರಾಮದ ವಾದಿರಾಜ ಮೃತ್ತಿಕಾ ವೃಂದಾವನ ಮಠದಲ್ಲಿ ವಾದಿರಾಜ ಯತಿವರೇಣ್ಯರ ಆರಾಧನಾ ಮಹೋತ್ಸವದ ಉತ್ತರಾರಾಧನೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಾದಿರಾಜರ ಬದುಕಿನ ಮೌಲಿಕ ಚಿಂತನೆಗಳ ಕುರಿತು ಉಪನ್ಯಾಸ ನೀಡಿದ ಅವರು, ಯಾವುದೇ ಕಷ್ಟ ಬರುವುದು ಅದು ಕಳೆದುಹೋಗಲಿದೆ ಎಂದೇ ಅರ್ಥ. ಅಂದರೆ ಅದಕ್ಕೆ ಅಂತ್ಯವಿದೆ. ಅದು ಶಾಶ್ವತವಾಗಿ ಇರುವುದಿಲ್ಲ. ಆದರ ಭ್ರಮೆಯನ್ನು ಬಿಟ್ಟು ಬದುಕಬೇಕು ಎಂದು ನಿರೂಪಿಸಿದ್ದಾರೆ ಎಂದರು. ಉಪನ್ಯಾಸದ ನಂತರ ತ್ರಿವಿಕ್ರಮ ದೇವರ ಹಾಗೂ ವಾದಿರಾಜರ ಮೂರ್ತಿಗಳ ಅದ್ದೂರಿ ರಥೋತ್ಸವ, ಪಾಲಕಿ ಸೇವೆ, ಮಹಾ ನೈವೇದ್ಯ, ಹಸ್ತೋದಕ ತೀರ್ಥಪ್ರಸಾದ ನಡೆದವು. ಸಂಜೆ ಕೊಪ್ಪಳದ ಸಮೀರಾಚಾರ್ಯ ಬಂಡಿಹಾಳ ಹಾಗೂ ಸಂಗಡಿಗರಿಂದ ದಾಸವಾಣಿ ನಡೆಯಿತು. ಈ ವೇಳೆ ಪುರುಷೋತ್ತಮಾಚಾರ್ಯ ಗಲಗಲಿ, ಮತ್ತು ಕುಟುಂಬ ವರ್ಗ, ಕೃಷ್ಣಮೂರ್ತಿ ಗಂಗೂರ, ಅಜಿತ ಗೋಠೆ, ದೃವರಾಜ ಅಣ್ಣೀಗೇರಿ, ಧೀರೇಂದ್ರ ಕುಲಕರ್ಣಿ, ಆದಿತ್ಯ ಕುಲಕರ್ಣಿ, ರಕ್ಷಕ ಕೆ.ಎಂ., ರಂಗನಾಥ ಮೋಖಾಶಿ, ದೃವರಾಜ ಅಣ್ಣೀಗೇರಿ, ಉದಯ ಜಹಗೀರದಾರ ಮತ್ತಿತರರು ಇದ್ದರು.



ಹಾವೇರಿ: ತಾಲೂಕಿನ ಹಾವನೂರ ಗ್ರಾಮದ ವಾದಿರಾಜ ಮೃತ್ತಿಕಾ ವೃಂದಾವನ ಮಠದಲ್ಲಿ ವಾದಿರಾಜ ಯತಿವರೇಣ್ಯರ ಆರಾಧನಾ ಮಹೋತ್ಸವದ ಉತ್ತರಾರಾಧನೆಯ ಕಾರ್ಯಕ್ರಮದಲ್ಲಿ ಶ್ರೀಹರಿ ಆಚಾರ್ಯ ವಾಳ್ವೇಕರ ಉಪನ್ಯಾಸ ನೀಡಿದರು.

ಪ್ರತಿಭೆ ಗುರುತಿಸಲು ಕ್ರೀಡಾಕೂಟ ಸಹಾಯಕ

ರಟ್ಟೀಹಳ್ಳಿ: ಸ್ಥಳೀಯ ಪ್ರತಿಭೆಗಳನ್ನು ಗುರುತಿಸಲು ಸಂಸದರ ಕ್ರೀಡಾ ಮಹೋತ್ಸವ ಏರ್ಪಡಿಸಲಾಗಿದ್ದು, ಇಲ್ಲಿ ಆಡಿದವರು ರಾಷ್ಟ್ರೀಯ ಮಟ್ಟಕ್ಕೆ ಹೋಗಲು ಅವಕಾಶ ಇದೆ. ಯಾರಿಗೆ ಯೋಗ್ಯತೆ ಇದೆ ಅವರನ್ನು ಪ್ರೋತ್ಸಾಹಿಸಿ ರಾಷ್ಟಮಟ್ಟಕ್ಕೆ ಕಳುಹಿಸುವ ಕೆಲಸ ಮಾಡುತ್ತೇವೆ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ರಟ್ಟೀಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಸಂಸದರ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ಕರೆ ಮೇರೆಗೆ ಪ್ರತಿ ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಸಂಸದರ ಕ್ರೀಡೆ ನಡೆಯುತ್ತವೆ. ಜಿಲ್ಲಾಮಟ್ಟದಲ್ಲಿ ಆಯ್ಕೆಯಾದವರನ್ನು ದೆಹಲಿಯಲ್ಲಿ ಆಡಿಸಲು ಅವಕಾಶ ಕಲ್ಪಿಸಲಾಗುವುದು. ಪ್ರಧಾನಿಯವರು ಮೊದಲು ಫಿಟ್ ಇಂಡಿಯಾ ಅಂದರು, ನಂತರ ಖೇಲೋ ಇಂಡಿಯಾ ಅಂದರು, ನಂತರ ಟೋಕಿಯೋ ಒಲಿಂಪಿಕ್ ಬಂದಾಗ ಜೀತೋ ಇಂಡಿಯಾ ಎಂದರು. ಅದರ ಪರಿಣಾಮ ಭಾರತಕ್ಕೆ 34 ಮೆಡೆಲ್‌ಗಳು ಬಂದವು. ಅಷ್ಟೇ ಅಲ್ಲ ದಿವ್ಯಾಂಗರ ಒಲಿಂಪಿಕ್ಸ್‌ನಲ್ಲಿ ಭಾರತ ಅತಿ ಹೆಚ್ಚು ಪದಕಗಳನ್ನು ಪಡೆಯಿತು ಎಂದು ಹೇಳಿದರು.

ಸಂಸದರ ಕ್ರೀಡಾಕೂಟ

ನಾವು ಕ್ರಿಕೆಟ್ ಆಟಗಾರರನ್ನು ಹೆಚ್ಚು ಬೆಂಬಲಿಸುತ್ತೇವೆ. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಲು ಸಂಸದರ ಕ್ರೀಡಾ ಮಹೋತ್ಸವ ಏರ್ಪಡಿಸಲಾಗಿದೆ. ಮನುಷ್ಯನಿಗೆ ಗುಣ ಬಹಳ ಮುಖ್ಯ. ಕ್ರೀಡೆಯಿಂದ ಶಿಸ್ತು ಬರುತ್ತದೆ. ಶಿಸ್ತು ಇದ್ದರೆ ಒಳ್ಳೆಯ ಆರೋಗ್ಯ, ಒಳ್ಳೆಯ ಚಿಂತನೆ ಬರುತ್ತದೆ. ಈ ದೇಶಕ್ಕೆ ಒಳ್ಳೆಯ ಚರಿತ್ರೆ ಇದೆ. ಚಾರಿತ್ರ್ಯ ಬೇಕಿದೆ. ನಮ್ಮ ಸಂಸ್ಕಾರ, ಸಂಸ್ಕೃತಿ, ಶಿಕ್ಷಣ ಜ್ಞಾನದ ಜೊತೆಗೆ ಕ್ರೀಡೆಯ ಮೂಲಕ ಚಾರಿತ್ರ್ಯ ಗಳಿಸಲು ಸಾಧ್ಯವಾಗುತ್ತದೆ. ಪ್ರಧಾನಿ ನರೇಂದ್ರ ಮೋದಿಯವರು ಕಂಡ ಕನಸು ಹಿರೇಕೆರೂರು, ರಟ್ಟೀಹಳ್ಳಿ ತಾಲೂಕಿನಲ್ಲಿ ನನಸಾಗುತ್ತಿದೆ. ಇದನ್ನು ಆಯೋಜನೆ ಮಾಡಿ ಯಶಸ್ವಿಗೊಳಿಸಿರುವ ಮಾಜಿ ಸಚಿವರಾದ ಬಿ.ಸಿ. ಪಾಟೀಲರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕ್ರೀಡೆಯಲ್ಲಿ ಕೆಲವರು ಸೋಲಬಾರದು ಎಂದು ಆಡುತ್ತಾರೆ. ಕೆಲವರು ಗೆಲ್ಲಬೇಕೆಂದು ಆಡುತ್ತಾರೆ. ಬದುಕಿನಲ್ಲಿ ಆಕ್ರಮಣಕಾರಿ ಆಟ ಆಡಿದಾಗ ಮಾತ್ರ ಗೆಲ್ಲಲು ಸಾಧ್ಯ. ಗೆಲ್ಲಬೇಕೆಂದು ಆಡಿದರೆ ಮಾತ್ರ ಯಶಸ್ಸು ಸಿಗುತ್ತದೆ. ಸಕಾರಾತ್ಮಕ ಚಿಂತನೆ ಇರಬೇಕು. ಸೋಲಲು ಭಯ ಪಡಬಾರದು. ಯಾರು ಸೋಲಿಗೆ ಭಯ ಪಡುತ್ತಾರೆ. ಅವರು ಜೀವನದಲ್ಲಿ ಯಶಸ್ವಿಯಾಗುವುದಿಲ್ಲ. ಯಾರು ಸೋಲಿಗೆ ಭಯ ಪಡುವುದಿಲ್ಲ, ಅವರು ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎಂದು ಹೇಳಿದರು.

ಮಾಜಿ ಸಚಿವ ಬಿ.ಸಿ. ಪಾಟೀಲ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕ ಅರುಣಕುಮಾರ ಪೂಜಾರ, ಪಟ್ಟಣ ಪಂಚಾಯತ ಅಧ್ಯಕ್ಷರಾದ ರವೀಂದ್ರ ಮುದಿಯಪ್ಪನವರ, ಉಪಾಧ್ಯಕ್ಷರಾದ ಶಿವಕುಮಾರ ಉಪ್ಪಾರ, ಹಿರೇಕೆರೂರ ಮಂಡಳದ ಬಿಜೆಪಿ ಅಧ್ಯಕ್ಷ ಸಂಜೀವಯ್ಯ ಕಬ್ಬಿಣಕಂತಿಮಠ, ರಟ್ಟೀಹಳ್ಳಿ ಮಂಡಳದ ಅಧ್ಯಕ್ಷ ದೇವರಾಜ ನಾಗಣ್ಣವರ, ಮುಖಂಡರುಗಳಾದ ಎನ್.ಎಂ. ಈಟೇರ, ಅಜಯಕುಮಾರ, ಜಿ.ಪಿ. ಪ್ರಕಾಶ, ರವಿ ಬಾಳಿಕಾಯಿ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ವಿವಿಧ ಕ್ರೀಡೆಗಳಲ್ಲಿ ವಿಜೇತರು: ವಾಲಿಬಾಲ್: ಪ್ರಥಮ: ಗುಡ್ಡದ ಮಾದಾಪುರ, ದ್ವಿತೀಯ- ಹಿರೇಕೆರೂರು, ತೃತೀಯ-ಹಿರೇಕೆರೂರು ದುರ್ಗಾ ಟೀಮ್ ಖೋ-ಖೋ: ಪ್ರಥಮ-ತಾವರಗಿ, ದ್ವಿತೀಯ-ರಟ್ಟೀಹಳ್ಳಿ, ತೃತೀಯ- ಯತ್ತಿನಹಳ್ಳಿ, ಕಬಡಿ: ಪ್ರಥಮ - ಸಣ್ಣಗುಬ್ಬಿ, ದ್ವಿತೀಯ-ಚನ್ನಳ್ಳಿ, ತೃತೀಯ- ಹಿರೇಕೆರೂರು. ಮಹಿಳೆಯರ ವಾಲಿಬಾಲ್: ಪ್ರಥಮ- ಅಣಜಿ, ದ್ವಿತೀಯ-ಹಿರೇಕೆರೂರು. ಪುರುಷರ ಶಾರ್ಟ್ ಪುಟ್: ಪ್ರಥಮ-ಸಣ್ಣಗುಬ್ಬಿ,ದ್ವಿತೀಯ-ರಟ್ಟೀಹಳ್ಳಿ, ಮಹಿಳೆಯರ ಶಾರ್ಟ್ ಪುಟ್: ಪ್ರಥಮ-ರಟ್ಟೀಹಳ್ಳಿ, ದ್ವಿತೀಯ-ಹಿರೇಕೆರೂರು, ತೃತೀಯ-ರಟ್ಟೀಹಳ್ಳಿ.

ಬೇಸಿಗೆಯಲ್ಲಿ ಇರಲಿ ಆರೋಗ್ಯದ ಕಾಳಜಿ



ಹಾವೇರಿ: ಬೇಸಿಗೆಯಲ್ಲಿ ಬಿಸಿಲಿನ ತಾಪದಿಂದ ಉಷ್ಣಾಂಶವು ಹೆಚ್ಚಾಗಿರುವುದರಿಂದ, ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ತಡೆಗೆ ಸಾರ್ವಜನಿಕರು ಅಗತ್ಯ ಮುಂಜಾಗ್ರತಾ ಕ್ರಮ ಅನುಸರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಂ. ಜಯಾನಂದ ಅವರು ಸಲಹೆ ನೀಡಿದ್ದಾರೆ.

ತೆಳು ಬಿಳಿಬಣ್ಣದ ಹತ್ತಿ ಬಟ್ಟೆ ಧರಿಸಿ: ಹೊರಗಡೆ ಹೋಗುವಾಗ ಸಡಿಲವಾದ ತೆಳು ಬಿಳಿ ಬಣ್ಣದ ಹತ್ತಿ ಬಟ್ಟೆ ಧರಿಸಬೇಕು, ಯಥೇಚ್ಛವಾಗಿ ನೀರನ್ನು ಆಗಾಗ್ಗೆ ಕುಡಿಯಬೇಕು, ಜೊತೆಯಲ್ಲಿ ತಪ್ಪದೇ ಶುದ್ಧ ಕುಡಿಯುವ ನೀರನ್ನು ಮನೆಯಿಂದ ಹೋಗುವಾಗ ತೆಗೆದುಕೊಂಡು ಹೋಗಿ, ಆಗಾಗ್ಗೆ ನಿಧಾನವಾಗಿ, ಧಾರಾಳವಾಗಿ ಉಪ್ಪು, ಸಕ್ಕರೆ ಮಿಶ್ರಿತ ನೀರು ಕುಡಿಯಬೇಕು.

ಮಜ್ಜಿಗೆ-ಪಾನಕ ಸೇವಿಸಿ: ಹಣ್ಣಿನ ರಸ, ಎಳನೀರು, ಮಜ್ಜಿಗೆ ಮತ್ತು ಪಾನಕಾ ಸೇವಿಸಬೇಕು. ನುಣುಪಾದ ಹತ್ತಿ ಬಟ್ಟೆ ಮತ್ತು ಕರವಸ್ತ್ರದಿಂದ ಬೆವರನ್ನು ವರೆಸಿಕೊಳ್ಳಬೇಕು ಹಾಗೂ ಬೆಚ್ಚಗಿನ ಮಸಾಲಾ ರಹಿತ ಶುದ್ಧ ಸಾತ್ವಿಕ ಆಹಾರ ಸೇವಿಸಬೇಕು. ಗಾಳಿಯಾಡುವ ಚಪ್ಪಲಿ ಧರಿಸಬೇಕು, ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ವಾಂತಿ-ಭೇದಿ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಈ ಹಿನ್ನೆಲೆಯಲ್ಲಿ ಶುದ್ಧಿಕರಿಸಿದ ಅಥವಾ ಶುದ್ಧಿಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು ಎಂದು ತಿಳಿಸಿದ್ದಾರೆ.

ತುರ್ತು ಪರಿಸ್ಥಿತಿಯಲ್ಲಿ 108, 102ಕ್ಕೆ ಕರೆಮಾಡಿ: ಬಿಸಿಲಿನಲ್ಲಿರುವ ಯಾವುದೇ ವ್ಯಕ್ತಿ ಅಪಾಯದ ಚಿಹ್ನೆಗಳಾದ ತೊದಲು ಮಾತು, ಅರ್ಥರಹಿತವಾಗಿ ಬಡಬಡಿಸುವುದು, ಚರ್ಮ ಕೆಂಪಾಗುವುದು, ಬೆವರು ಕಡಿಮೆಯಾಗುವುದು, ದೇಹದ ಉಷ್ಣತೆ ಜಾಸ್ತಿಯಾಗುವುದು, ದೀರ್ಘವಾದ ತೀವ್ರ ಉಸಿರಾಟವಿದ್ದಲ್ಲಿ ಕೂಡಲೇ ನೆರಳಿನ ಪ್ರದೇಶಕ್ಕೆ ಸ್ಥಳಾಂತರಿಸಿ ಕೆಳಗೆ ಮಲಗಿಸಿ, ದೇಹದ ಎಲ್ಲ ಭಾಗಗಳನ್ನು ಒಳಗೊಂಡಂತೆ ಒದ್ದೆ ಬಟ್ಟೆಯಿಂದ ವರೆಸಬೇಕು. ಅಪಾಯದ ಚಿಹ್ನೆಗಳು ಮುಂದುವರೆದಲ್ಲಿ ಹತ್ತಿರದ ವೈದ್ಯರನ್ನು ಸಂಪರ್ಕಿಸಿ ಅಥವಾ 108,102 ಕ್ಕೆ ಕರೆ ಮಾಡಿರಿ.

ಈ ನಿಟ್ಟಿನಲ್ಲಿ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕಾ ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಯನ್ನು ಒಳಗೊಂಡಂತೆ ಬೇಸಿಗೆಯಲ್ಲಿ ಬರಬಹುದಾದ ರೋಗಗಳ ಆರೈಕೆಗಾಗಿ ಓಆರ್‌ಎಸ್. ಐವಿ ಫ್ಲೂಯಿಡ್ಸ್ ಮತ್ತು ಜೀವ ರಕ್ಷಕ ಔಷಧಿಗಳು ಲಭ್ಯವಿದ್ದು, ಬಿಸಿಲಿನ ತಾಪದಿಂದ ಉಂಟಾಗಬಹುದಾದ ಆರೋಗ್ಯ ತೊಂದರೆಯನ್ನು ನಿಭಾಯಿಸಲು ಇಲಾಖೆ ಸನ್ನದ್ಧವಾಗಿದೆ ಎಂದು ತಿಳಿಸಿದ್ದಾರೆ.

ಮತಾಂತರ ಜಾಲ: ಕಾನೂನು ಕ್ರಮ ಕೈಗೊಳ್ಳಲು ಆಗ್ರಹ

ಹಾವೇರಿ: ದಲಿತರನ್ನು ಟಾರ್ಗೆಟ್ ಮಾಡಿ ಆಮಿಷ ಒಡ್ಡಿ ಮತಾಂತರ ಮಾಡುವ ಜಾಲ ಜಿಲ್ಲೆಯಲ್ಲಿ ಸದ್ದಿಲ್ಲದೇ ಸಕ್ರಿಯವಾಗಿದ್ದು, ಇಂಥವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಹೋರಾಟ ರೂಪಿಸಲಾಗುವುದು ಎಂದು ಶ್ರೀರಾಮ ಸೇನೆ ಮತ್ತು ಭಜರಂಗದಳ ಕಾರ್ಯಕರ್ತರು ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಭಜರಂಗದಳ ತಾಲೂಕು ಸಂಚಾಲಕ ಸಂತೋಷ ನೂರಂದೇವರ ಮಠ ಮಾತನಾಡಿ, ಕ್ರೈಸ್ತ ಸಂಘದ ಕೆಲ ನಾಯಕರು ದಮ್ಕಿ ಹಾಕುತ್ತಾರೆ. ಜಿಲ್ಲೆಯಲ್ಲಿ ಆಮಿಷ ಒಡ್ಡಿ ಮತಾಂತರ ಮಾಡುತ್ತಿದ್ದಾರೆ. ಇದನ್ನು ಪೊಲೀಸರು ತಡೆಗಟ್ಟಬೇಕು. ಪೊಲೀಸರು ಆಟದ ಗೊಂಬೆಗಳಾಗಿ ಕೆಲಸ ಮಾಡುತ್ತಿದ್ದಾರೆ. ಅಪರಾಧಿ ಸ್ಥಾನದಲ್ಲಿರುವವರಿಗೆ ಫ್ಯಾನ್ ಹಾಕಿ ಠಾಣೆಯಲ್ಲಿ ಕೂರಿಸುತ್ತಾರೆ. ಮಧ್ಯಾಹ್ನ ಅವರಿಗೆ ಬಿರಿಯಾನಿ ತರಿಸಿಕೊಟ್ಟಿದ್ದಾರೆ. ಬೆಳಗ್ಗೆ 11ಕ್ಕೆ ಹೋದರೆ ಸಂಜೆ 7 ಗಂಟೆವರೆಗೆ ದೂರು ನೀಡಲು ಹೋದವರನ್ನು ಹೊರಗೆ ನಿಲ್ಲಿಸಿದ್ದರು. ತಪ್ಪು ಯಾರೇ ಮಾಡಿದರೂ ಕ್ರಮತೆಗೆದು ಕೊಳ್ಳಬೇಕು, ಕರ್ತವ್ಯ ನಿಷ್ಠೆ ತೋರಿಸಬೇಕೆಂದು ಆಗ್ರಹಿಸಿದರು. ಶ್ರೀರಾಮ ಸೇನೆ ಮುಖಂಡ ಕುಮಾರ ಮಲಗೋಡ ಮಾತನಾಡಿ, ನನಗೆ ಎರಡೂ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ನೀನು ಏಸು ಕ್ರಿಸ್ತನನ್ನು ನಂಬಿದರೆ ಕಣ್ಣು ವಾಪಸ್ ಬರುತ್ತದೆ ಎಂದು ಆಮಿಷ ಒಡ್ಡಿ ಈ ಹಿಂದೆ ನನ್ನನ್ನೂ ಮತಾಂತರ ಮಾಡಿದ್ದರು. ಸ್ಟಾಲಿನ್ ಪಿಂಟೋ, ಇತರರು ನನಗೆ ಕಿರುಕುಳ ನೀಡಿದರು. ಹಿಂದು ಸಂಘಟನೆ ಕಾರ್ಯಕರ್ತರು ನನ್ನನ್ನು ವಾಪಸ್ ಕರೆತಂದರು. ಇದೀಗ ಅಮಾಯಕ ದಲಿತರನ್ನು ಟಾರ್ಗೆಟ್ ಮಾಡಿ ಆಮಿಷತೋರಿಸಿ ಮತಾಂತರಿಸುತ್ತಿದ್ದಾರೆ. ಜೀವ ಬೆದರಿಕೆಯನ್ನೂ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ವಿನಾಯಕ ಇಚ್ಚಂಗಿ, ಭಜರಂಗದಳ ಸೋಮು ರಾಠೋಡ ಮಾತನಾಡಿದರು.

ಜೀವ ಬೆದರಿಕೆ ಹಾಕ್ತಾರೆ

ಹಲವು ವರ್ಷಗಳಿಂದ ನಮ್ಮ ಸಂಬಂಧಿಕರ ಮನೆ ಬಾಡಿಗೆ ಪಡೆದು ಮತಾಂತರ ಮಾಡುತ್ತಿದ್ದರು. ಹತ್ತಾರು ಕುಟುಂಬಗಳನ್ನು ಮತಾಂತರಿಸಿದ್ದಾರೆ. ನೀವು ಪೂಜಿಸುವ ದೇವರು ದೇವರಲ್ಲ. ಅದು ಕಲ್ಲು, ಮಣ್ಣು. ಏಸು ದೇವರನ್ನು ನಂಬಿ ಎಂದು ನನ್ನ ಕುಟುಂಬಕ್ಕೆ ಕಿರುಕುಳ ನೀಡಿದ್ದಾರೆ. ನಂಬದಿದ್ದರೆ ನಿಮ್ಮ ಗಂಡನಿಗೆ ತೊಂದರೆ ಕೊಡುತ್ತೇವೆ ಎಂದು ಬೆದರಿಸಿದ್ದಾರೆ ಎಂದು ಇಜಾರಿ ಲಕಮಾಪೂರ ನಿವಾಸಿ ಹನುಮವ್ವ ಹಳ್ಳಿಕೇರಿ ಆರೋಪಿಸಿದರು.



ಮಹಿಳೆಯರ ಸುರಕ್ಷತೆಗೆ ಹೆಚ್ಚು ಒತ್ತು ನೀಡಿ: ಮಾನೆ

ಹಾನಗಲ್ಲ: ಲಿಂಗ ತಾರತಮ್ಯ ರಹಿತ ಸಮಾಜದ ಕನಸು ಕಂಡ 12ನೇ ಶತಮಾನದ ಶರಣರ ಆಶಯ ಈಡೇರಬೇಕಾಗಿದೆ, ಮಹಿಳೆಯ ಪ್ರತಿಭೆಗೆ ಮನ್ನಣೆ ಸಿಗುವ ಕಾಲ ಬರಬೇಕು, ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹಿಳಾ ಸಶಕ್ತೀಕರಣಕ್ಕೆ ಪೂರಕವಾಗಿವೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.



ಹಾನಗಲ್ಲ ಬಳಿಯ ನಾಲ್ಕರ ಕ್ರಾಸನಲ್ಲಿರುವ ರೋಶನಿ ಸಮಾಜ ಸೇವಾ ಸಂಸ್ಥೆಯ ಸಭಾಂಗಣದಲ್ಲಿ ರೋಶನಿ ಸಮಾಜ ಸೇವಾ ಸಂಸ್ಥೆ ಹಾಗೂ ಆದರ್ಶ ತಾಲೂಕು ಮಹಿಳಾ ಒಕ್ಕೂಟ ಆಯೋಜಿಸಿದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಈಗ ಮಹಿಳೆಯ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದರು.

ರಾಜ್ಯ ಸರ್ಕಾರದ ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳಾ ಜೈನ ಮಾತನಾಡಿ, ಮಹಿಳೆ ಬದಲಾಗುತ್ತಿದ್ದಾಳೆ. ಸಮಾನತೆಯ ಹತ್ತಿರವಿದ್ದಾಳೆ. ಆದರೂ ದೌರ್ಜನ್ಯಗಳು ನಿಂತಿಲ್ಲ. ಈ ದೇಶದಲ್ಲಿ ಮಹಿಳೆಯ ಮೇಲೆ ಎರಡು ದಿನಕ್ಕೊಂದು ಅತ್ಯಾಚಾರ ನಡೆಯು ತ್ತಿವೆ. 3 ದಿನಕ್ಕೊಂದು ವರದಕ್ಷಿಣೆ ಸಾವು ಕೇಳಿ ಬರುತ್ತಿವೆ. ಕೌಟುಂಬಿಕ ಕಲಹಗಳಿಂದ ಮಹಿಳೆಮನೆಯಿಂದಹೊರಹೋಗುವ ಪ್ರಕರಗಳು ಆತಂಕಾರಿ ಆಗಿವೆ. ಕೌಟುಂಬಿಕ ಹೊಂದಾಣಿಕ ಬೇಕು. ಆದರೆ ಮಹಿಳೆಯ ಅಪೇಕ್ಷೆಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ರೋಶನಿ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕಿ ಅನಿತಾ ಡಿಸೋಜಾ ಆಶಯ ನುಡಿಗಳನಾಡಿದರು.

ರೋಶನಿ ಹುಬ್ಬಳ್ಳಿ ಪ್ರಾಂತೀಯ ಸಲಹೆಗಾರರಾದ ಸಿಸ್ಟರ್ ಸ್ಟೆಲ್ಲಾ ಸಲ್ಡಾನಾ ಅಧ್ಯಕ್ಷತೆವಹಿಸಿದ್ದರು. ಆದರ್ಶ ತಾಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ಗಂಗಾ ಗೋಣೆಣ್ಣನವರ, ಪ್ರಗತಿಪರ ಸಂಘಟನೆಯ ಅಧ್ಯಕ್ಷ ಎನ್.ಎಂ.ಪೂಜಾರ, ಪುರಸಭೆ ಮಾಜಿ ಅಧ್ಯಕ್ಷೆ ಮಮತಾ ಆರೆಗೊಪ್ಪ, ಬಿ.ಆರ್.ಶೆಟ್ಟರ, ಫೈರೋಜ ಶಿರಬಡಗಿ, ಹನುಮಂತ ಮರಗಡಿ, ಎಂ.ಎಸ್. ನೆಗಳೂರ, ಎಸ್.ಎಫ್. ಕಮ್ಮಾರ, ಮಂಗಳೂರಿನ ಜರೆಲ್ಡಾ, ಅನಿತಾ ಇದ್ದರು. ಶಾಂತಿ ಡಿಸೋಜಾ ವಾರ್ಷಿಕ ವರದಿ ಓದಿದರು. ಪ್ರಿಯಾ ತೋಟದ ಸ್ವಾಗತಿಸಿದರು.

ಮಹಿಳೆಯರನ್ನು ಗೌರವಿಸುವ ಪ್ರವೃತ್ತಿ ಹೊಂದಿ: ಪಾಟೀಲ

ರಾಣೇಬೆನ್ನೂರ: ಎಲ್ಲಿ ಮಹಿಳೆಯರನ್ನು ಪೂಜ್ಯನೀಯ ಸ್ಥಾನದಲ್ಲಿ ಕಾಣುತ್ತಾರೋ ಅಲ್ಲಿ ನೆಮ್ಮದಿಯ ಸುಸಂಸ್ಕೃತ ವಾತಾವರಣ ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಸರ್ವರೂ ಮಹಿಳೆಯರನ್ನು ಪೂಜಿಸುವ ಹಾಗೂ ಗೌರವಿಸುವ ಪ್ರವೃತ್ತಿ ಹೊಂದಬೇಕು ಅಂದಾಗ ನಾವು ಮಹಿಳೆಯರಿಗೆ ಪೂಜ್ಯನೀಯ ಸ್ಥಾನವನ್ನು ನೀಡಿದಂತಾಗುತ್ತದೆ ಎಂದು ಕೆಎಸ್ ಆರ್‌ಟಿಸಿ ಡಿಪೋ ಮ್ಯಾನೇಜರ್ ಆರ್.ಸಿ.ಪಾಟೀಲ್ ಹೇಳಿದರು.



ಇಲ್ಲಿನ ಮಾಗೋಡ ರಸ್ತೆಯ ಹೊರವಲಯದಲ್ಲಿರುವ ಸಾರಿಗೆ ಘಟಕದಲ್ಲಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಣ್ಣು ಹೆಣ್ಣೆಂದು ಹೆಣ್ಣನ್ನು ಹೀಯಾಳಿಸದಿರಿ, ಹೆಣ್ಣಲ್ಲವೇ ನಮ್ಮನ್ನು ಹೆತ್ತ ತಾಯಿ, ಆಟೋ ಚಾಲನೆಯಿಂದ ಹಿಡಿದು ವಿಮಾನ ಚಾಲನೆಯಲ್ಲಿರುವವರೂ ಹೆಣ್ಣಲ್ಲವೇ? ಹೀಗಿರುವಾಗ ಇಂದಿನ ಆಧುನಿಕ ಜಗತ್ತಿನಲ್ಲಿ ಮಹಿಳೆಯರು ಎಲ್ಲ ರಂಗಗಳಲ್ಲಿಯೂ ನಾವು ಅಬಲೆಯಲ್ಲ ಸಬಲೆ ಎಂಬುದನ್ನು ಸಾಬೀತುಪಡಿಸಿ ಇಡೀ ಜಗತ್ತಿಗೆ ಮಾದರಿಯಾಗಿದ್ದಾರೆ ಎಂದರು.

ಹಿರೇಮಾಗನೂರಿನ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ವಿಜಯಾ.ಆರ್. ಪಾಟೀಲ್ ಮಾತನಾಡಿದರು. ಸಂಚಾರಿ ನಿರೀಕ್ಷಕರಾದ ನಾಗರಾಜ ಕಳಕ್ಕವರ, ಪುಷ್ಪಾ, ಸಂಚಾರಿ ನಿಯಂತ್ರಕ ರಮೇಶ ತೇಲ್ಕರ, ಆರ್.ಎನ್. ಮಾಳನಾಯಕನಹಳ್ಳಿ, ನಿಟ್ಟೂರ ಸ್ಕೂಲ್ ಶಿಕ್ಷಕಿ ಶೈಲಾಬಾನು ಜಾತಗೇರ ಸೇರಿದಂತೆ ಸಾರಿಗೆ ಸಂಸ್ಥೆಯ ನಿರ್ವಾಹಕಿಯರು ಮತ್ತು ಸಿಬ್ಬಂದಿ ಸೇರಿದಂತೆ ಮತ್ತಿತರರು ಇದ್ದರು.

ಪುಸ್ತಕಗಳು ಬದುಕಲು ಸ್ಫೂರ್ತಿದಾಯಕ

ಬ್ಯಾಡಗಿ: ಮನೆಯಲ್ಲಿಗ್ರಂಥಾಲಯ ನಿರ್ಮಿಸಿದರೆ ಮನಸ್ಸಿಗೆ ಬೇಸರವಾದಾಗ ಪುಸ್ತಕಗಳು ಸ್ನೇಹಿತರಾಗಿ ಬದುಕಲು ಸ್ಫೂರ್ತಿ ನೀಡುತ್ತದೆ ಎಂದು ಲೇಖಕ ಜೀವರಾಜ್ ಛತ್ರದ ಹೇಳಿದರು.



ಪಟ್ಟಣದ ನಿಸರ್ಗ ನಗರದಲ್ಲಿರುವ ಈಶ್ವರ ದೇವಸ್ಥಾನದಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ ಸಹಯೋಗದೊಂದಿಗೆ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಮಾತನಾಡಿದರು.

ಖಿನ್ನತೆಯಲ್ಲಿರುವ ವ್ಯಕ್ತಿಗಳಿಗೆ ಪುಸ್ತಕ ಸ್ನೇಹಿತರಾಗುತ್ತಾರೆ. ಮನೆಗೊಂದು ಗ್ರಂಥಾಲಯ ಮೂಲಕ ಲಕ್ಷ ಮನೆ ತಲುಪುವ ಕೆಲಸವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಮಾಡುತ್ತಿದ್ದು, ಪ್ರಾಧಿಕಾರದ ಕಚೇರಿಯಿಂದ ಮನೆ ಬಾಗಿಲಿಗೆ ಬರುವ ಕೆಲಸವನ್ನು ಪುಸ್ತಕ ಪ್ರಾಧಿಕಾರ ಮಾಡುತ್ತಿದೆ ಎಂದು ತಿಳಿಸಿದರು.

ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಮಾತನಾಡಿ, ಪುಸ್ತಕ ಓದುವುದು ಸಾಹಿತಿಗಳಿಗೆ, ಲೇಖಕರಿಗೆ, ನಗರ ಪ್ರದೇಶದವರಿಗೆ ಎಂಬ ಕಲ್ಪನೆ ಹೋಗಲಾಡಿಸಬೇಕು. ಗ್ರಾಮೀಣ ಭಾಗಕ್ಕೂ ಈ ಉದ್ದೇಶ ತಲುಪುವ ಕೆಲಸ ಆಗಬೇಕು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ ಮಾತನಾಡಿದರು.

ಕಸಾಪ ತಾಲೂಕು ಅಧ್ಯಕ್ಷ ಬಿ.ಎಂ. ಜಗಾಪುರ ಮಾತನಾಡಿ, ಈಶ್ವರ ದೇವಾಲಯದಲ್ಲಿ ಗ್ರಂಥಾಲಯವು ಎಲ್ಲರೂ ಮೆಚ್ಚುವಂತೆ ಸೂಕ್ತ ಸೌಲಭ್ಯ ಒದಗಿಸಿ ಮುಂದಿನ ದಿನಗಳಲ್ಲಿ ಇಲ್ಲಿಗೆ ಬರುವ ಭಕ್ತರಿಗೆ ಪುಸ್ತಕಗಳು ಓದಲು ವ್ಯವಸ್ಥೆ ಮಾಡಲಾಗುವುದು ಮತ್ತು ಹಾವೇರಿ ಮತ್ತು ಬ್ಯಾಡಗಿ ನಿಸರ್ಗ ನಗರದಲ್ಲಿ ಮೂರು ಗ್ರಂಥಾಲಯದ ಉದ್ಘಾಟನೆ ಹಾಗೂ ಶಿಗ್ಗಾವಿಯಲ್ಲಿ ಇನ್ನಷ್ಟು ಗ್ರಂಥಾಲಯಗಳನ್ನು ಆರಂಭಿಸಿ ಒಟ್ಟು ವರ್ಷದ ಕೊನೆಯ 50 ಗ್ರಂಥಾಲಯಗಳನ್ನು ಜಿಲ್ಲೆಯಲ್ಲಿ ಮನೆ ಮನೆಯಲ್ಲಿ ಸ್ಥಾಪಿಸುವ ಯೋಜನೆ ಇದೆ ಎಂದು ಹೇಳಿದರು.

ನಿವೃತ್ತ ಶಿಕ್ಷಕರಾದ ಪಿ.ಎಂ.ಶೀಡೆನೂರ.ವ್ಹಿ.ಎನ್.ಮಾಳಪ್ಪನವರ, ರೇಣುಕಾ ಗುಡಿಮನಿ, ಬಿಸಿ ಮಾಕಳ್ಳಿ, ವೈ.ಟಿ.ಹೆಬ್ಬಳ್ಳಿ, ಮಾಲತೇಶ್ ಚಳಗೇರಿ, ಎಸ್.ಆರ್.ಹಿರೇಮಠ, ಡಾ.ಲಕ್ಷ್ಮಿಕಾಂತ್ ಮಿರಜಕರ್, ಸಿದ್ದೇಶ್ವರ ಹುಣಸಿಕಟ್ಟಿಮಠ, ಸೋಮಣ್ಣ ಡಬ್ಬರ ಮತ್ತೂರ ಮತ್ತಿತರರಿದ್ದರು.

ಸಂಭ್ರಮದ ರಂಗಪಂಚಮಿ ಆಚರಣೆ

ಬ್ಯಾಡಗಿ: ವಸಂತ ಋತುವಿನ ಆಗಮನದ ಸಂಕೇತವಾಗಿರುವ ಹೋಳಿ ಹಬ್ಬವನ್ನು ಬ್ಯಾಡಗಿ ಪಟ್ಟಣದಲ್ಲಿ ಭಕ್ತಿಭಾವ ಮತ್ತು ಉತ್ಸಾಹಭರಿತವಾಗಿ ಆಚರಿಸಲಾಯಿತು. ಪಟ್ಟಣದ ಹೊಂಡದ ಓಣಿಯಲ್ಲಿ ಕಾಮನ ದಹನ ಮಾಡುವ ಮೂಲಕ ರಂಗ ಪಂಚಮಿ ಆಚರಿಸಲಾಯಿತು. ಹಲಗಿಯ ನಾದಕ್ಕೆ ಹೆಜ್ಜೆ ಹಾಕುತ್ತ ಪರಸ್ಪರ ಬಣ್ಣ ಎರಚಿಕೊಂಡು ನೃತ್ಯ ಮಾಡಿದ ದೃಶ್ಯ ಜನರ ಗಮನ ಸೆಳೆಯಿತು. ಮುಖ್ಯ ರಸ್ತೆ, ಕಾಕೋಳು ರಸ್ತೆ, ಗುಮ್ಮನಹಳ್ಳಿ ಸರ್ಕಲ್, ಮುಲ್ಲೂರು ರಸ್ತೆ, ಸಂಗಮೇಶ್ವರನಗರ, ವಿದ್ಯಾನಗರ, ನೆಹರು ನಗರ, ಶಿವಪೂರ ಬಡಾವಣೆ ಹಾಗೂ ಸುಭಾಷ್ ಸರ್ಕಲ್ ರಸ್ತೆಗಳಲ್ಲೂ ರಂಗು-ರಂಗಿನ ಬಣ್ಣದಾಟ ಜೋರಾಗಿ ನಡೆಯಿತು. ಮಕ್ಕಳು ನೀರಿನ ಬಲೂನುಗಳು ಗುಲಾಲುಗಳನ್ನು ಬಳಸಿ ಸಂಭ್ರಮಿಸಿದರು. ಪಟ್ಟಣದಲ್ಲಿ ಒಟ್ಟಾರೆ ಹಬ್ಬದ ಕಳೆ ಮಿಂಚಿತ್ತು ಮನೆ ಮನೆಗೆ ಭೇಟಿ ನೀಡಿ ಪರಸ್ಪರ ಬಣ್ಣ ಹಚ್ಚಿಕೊಳ್ಳುವುದು ಹಿರಿಯರಿಗೆ ಗೌರವ ಸಲ್ಲಿಸುವುದು ಹಾಗೂ ಸಿಹಿ ತಿಂಡಿಗಳನ್ನು ಹಂಚಿಕೊಳ್ಳುವ ಮೂಲಕ ಸಂಪ್ರದಾಯಗಳನ್ನು ಪಾಲಿಸಲ್ಪಟ್ಟರು. ಅಲ್ಲಲ್ಲಿ ಮಹಿಳೆಯರು ಮಕ್ಕಳು ರಂಗ ಪಂಚಮಿ ಆಡುವ ಮೂಲಕ ಪರಸ್ಪರ ಬಣ್ಣ ಏರಿಚಿಕೊಂಡು ಹಬ್ಬಕ್ಕೆ ವಿಶೇಷ ಮೆರಗು ನೀಡಿದರು. ಬ್ಯಾಡಗಿ ಪಟ್ಟಣದಲ್ಲಿ ಒಟ್ಟಾರೆ ಹೋಳಿ ಹಬ್ಬವು ಶಾಂತಿ ಸೌಹಾರ್ದತೆ ಮತ್ತು ಸಂಭ್ರಮದ ಸಂಕೇತವಾಗಿ ರಂಗಪಂಚಮಿ ನೆನಪುಗಳನ್ನು ಮೂಡಿಸಿದವು.



ಫಕೀರಪ್ಪ ಶಿಗ್ಗಿ ಅವರಿಗೆ ನುಡಿನಮನ

ಹಾವೇರಿ: ತಾಲೂಕಿನ ಹೊಸರಿತ್ತಿಯ ಜಿ.ವಿ. ಹಳ್ಳಿಕೇರಿ ಪಿಯು ಕಾಲೇಜಿನ ಪ್ರಾಚಾರ್ಯ ಫಕೀರಪ್ಪ ಶಿಗ್ಗಿ ದಿಡೀರ್ ಅಗಲಿಕೆ ಹಿನ್ನೆಲೆಯಲ್ಲಿ ಅವರ ನುಡಿ ನಮನ ಕಾರ್ಯಕ್ರಮ ಭಾನುವಾರ ಸ್ಥಳೀಯ ಗುದ್ಲೇಪ್ಪ ಹಳ್ಳಿಕೇರಿ ಶತಮಾನೋತ್ಸವಸ್ಮಾರಕ ಭವನದಲ್ಲಿ ನಡೆಯಿತು.



ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಮಾತನಾಡಿ, ಫಕೀರಪ್ಪ ಶಿಗ್ಗಿ ಅವರ ವ್ಯಕ್ತಿತ್ವ ಸಮಾಜಕ್ಕೆ ಮಾದರಿ, ಸಹಸ್ರಾರು ವಿದ್ಯಾರ್ಥಿಗಳು ತಮ್ಮ ಜೀವನವನ್ನ ಕಟ್ಟಿಕೊಳ್ಳಲು ಅವರು ದಾರಿ ತೋರಿದ್ದಾರೆ. ಶಿಸ್ತು-ಸಂಯಮಕ್ಕೆ ಹೆಸರಾಗಿದ್ದ ಫಕೀರಪ್ಪ ಅವರು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಾಗಿ ತಮ್ಮ ಜೀವನವನ್ನೆ ಮುಡಿಪಾಗಿಟ್ಟಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಅವರ ಆತ್ಮಕ್ಕೆ ಶಾಂತಿ ಸಿಗಲಿದೆ, ಮುಖ್ಯವಾಗಿ ಸಾವಿರಾರು ವಿದ್ಯಾರ್ಥಿಗಳು ಜೀವನ ರೂಪಿಸಿಕೊಳ್ಳಲು ಶ್ರಮ ವಹಿಸಿದ ಶಿಗ್ಗಿ ಅವರ ಕುಟುಂಬದೊಂದಿಗೆ ನಾವೆಲ್ಲಾ ನಿಲ್ಲಬೇಕಿದೆ ಎಂದರು.

ಸಾನಿಧ್ಯ ವಹಿಸಿದ್ದ ಗುದ್ದಲೀಸ್ವಾಮಿ ಮಠದ ಗುದ್ದಲೀ ಶಿವಯೋಗಿಶ್ವರ ಸ್ವಾಮೀಜಿ, ಜಿಪಂ ಮಾಜಿ ಸದಸ್ಯ ಹಾಗೂ ಬಿಜೆಪಿ ಮುಖಂಡ ಸಿದ್ದರಾಜ ಕಲಕೋಟಿ, ಬೆಳಗಾವಿ ಸಹಾಯಕ ಸಂರಕ್ಷಣಾಧಿಕಾರಿ ನಾಗರಾಜ ಬಾಳೆಹೊಸೂರು, ಅಗಡಿ ಕಲ್ಮಠದ ಗುರುಸಿದ್ಧ ರಾಜಯೋಗಿಂದ್ರ ಸ್ವಾಮೀಜಿ, ಸಂಸ್ಥೆಯ ಉಪ ಗೌರವಾಧ್ಯಕ್ಷ ಗಿರೀಶ ಅಂಕಲಕೋಟಿ, ಹಳೇ ವಿದ್ಯಾರ್ಥಿ ಹಾಗೂ ಪತ್ರಕರ್ತ ಬಸವರಾಜ ಮರಳಿಹಳ್ಳಿ, ಡಿಡಿಪಿಯು ಅಶೋಕ ಶಾಸ್ತ್ರೀ, ಉಪನ್ಯಾಸಕ ಎಚ್ ಪರಮೇಶ್ವರನಾಯ್ಕ ಸೇರಿದಂತೆ ಹಲವರು ಮಾತನಾಡಿದರು.

ಗುಡ್ಡದ ಆನ್ವೇರಿ ವಿರಕ್ತಮಠದ ಶಿವಯೋಗಿಶ್ವರ ಸ್ವಾಮೀಜಿ, ರಮೇಶ್ ಏಕಬೋಟೆ, ಸೇರಿದಂತೆ ಶಿಗ್ಗಿ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು. ನಿವೃತ್ತ ಪ್ರಾಚಾರ್ಯ ಎಚ್.ಆರ್. ಯಡಹಳ್ಳಿ ನಿರೂಪಿಸಿದರು.

ಕಿರುಸುದ್ದಿ

ಆಹಾರ, ನೀರಿಗಾಗಿ ಆಸ್ಪತ್ರೆಗೆ ಬಂದ ಕೋತಿ



ಬೆಳಗಾವಿ: ಗಡಿ ಜಿಲ್ಲೆ ಬೆಳಗಾವಿಯಲ್ಲಿ ದಿನದಿಂದ ದಿನಕ್ಕೆ ಬೇಸಿಗೆ ತಾಪಮಾನ ಹೆಚ್ಚುತ್ತಿದ್ದು, ಆಹಾರ ಮತ್ತು ನೀರಿಗಾಗಿ ಕಾಡು ಪ್ರದೇಶಗಳಿಂದ ನಗರಗಳತ್ತ ಮುಖ ಮಾಡುತ್ತಿರುವ ಪ್ರಾಣಿಗಳು ಸಂಖ್ಯೆಯು ಹೆಚ್ಚಾಗುತ್ತಿವೆ. ಇದೇ ರೀತಿಯ ಒಂದು ಹೃದಯಸ್ಪರ್ಶಿ ದೃಶ್ಯ ಬೆಳಗಾವಿಯ ಪ್ರತಿಷ್ಠಿತ ವಿಜಯ ಆಸ್ಪತ್ರೆ ಆವರಣದಲ್ಲಿ ಕಂಡುಬಂದಿದೆ. ರವಿವಾರ ಆಸ್ಪತ್ರೆ ಆವರಣದಲ್ಲಿದ್ದ ಅಂಬುಲೆನ್ಸ್ ವಾಹನದ ಮೇಲೇರಿ ಕುಳಿತ ಕೋತಿ ಶಾಂತವಾಗಿ ಕುಳಿತಿರುವ ದೃಶ್ಯ ಎಲ್ಲರ ಗಮನ ಸೆಳೆಯಿತು. ಕೋತಿ ಬಹಳ ದಣಿದಂತಿದ್ದು, ಏನೋ ನೋವನ್ನು ಅನುಭವಿಸುತ್ತಿರುವಂತೆ ಕಾಣಿಸುತ್ತಿತ್ತು. ವಿಶೇಷವಾಗಿ ಅದರ ಬಾಲದ ಭಾಗದಲ್ಲಿ ಗಾಯ ಅಥವಾ ನೋವು ಇರುವ ಸಾಧ್ಯತೆ ಇದೆ ಎಂದು ಅಲ್ಲಿದ್ದವರು ತಿಳಿಸಿದ್ದಾರೆ. ಬೇಸಿಗೆಯ ತೀವ್ರ ಬಿಸಿಲಿನ ಝಳಕ್ಕೆ ಆಹಾರ, ನೀರಿಗಾಗಿ ನಗರಕ್ಕೆ ಬಂದಿರಬಹುದಾದ ಈ ಕೋತಿ, ಅಂಬುಲೆನ್ಸ್ ಮೇಲೆ ಕುಳಿತುಕೊಂಡು ಶಾಂತವಾಗಿ ತನ್ನ ನೋವನ್ನು ಹೇಳಿಕೊಳ್ಳಲಾರದೆ ಭಾವುಕರಾಗಿ ಕಾಣಿಸಿಕೊಂಡ ದೃಶ್ಯ ಅಲ್ಲಿದ್ದವರ ಮನಸ್ಸಿಗೆ ಮುದ ನೀಡಿತು. ಆಸ್ಪತ್ರೆಯ ಸಿಬ್ಬಂದಿ ಮತ್ತು ಸಾರ್ವಜನಿಕರು ಕೋತಿಯನ್ನು ದೂರದಿಂದಲೇ ಗಮನಿಸುತ್ತಾ, ಅದಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಂಡರು. ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಾಣಿಗಳಿಗೆ ನೀರು ಮತ್ತು ಆಹಾರ ಒದಗಿಸುವುದು ಮಾನವೀಯ ಕರ್ತವ್ಯ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಈ ಘಟನೆ ಬೆಳಗಾವಿಯ ವಿಜಯ ಆಸ್ಪತ್ರೆ ಆವರಣದಲ್ಲಿ ಕಂಡುಬಂದಿದ್ದು, ಪ್ರಕೃತಿ ಮತ್ತು ಪ್ರಾಣಿಗಳೊಂದಿಗೆ ಮಾನವೀಯತೆ ತೋರಿಸುವ ಅಗತ್ಯವನ್ನು ಮತ್ತೆ ನೆನಪಿಸಿದೆ.

ಮಾನವ ಜನ್ಮ ಸಾರ್ಥಕ ಪಡಿಸಿಕೊಳ್ಳಿ



ಯಮಕನಮರಡಿ: ಶ್ರೇಷ್ಠವಾದ ಮಾನವ ಜನ್ಮವೂ ಲಭಿಸಬೇಕಾದರೇ ಸುಮಾರು 80 ಸಾವಿರ ಕೋಟಿಜೀವರಾಶಿ ತಿರುಗಿ ತಿರುಗಿ ಬಂದ ನಂತರ ಕಡೆ ಜನ್ಮ ಅದುವೇ ಮಾನವ ಜನ್ಮ. ಪ್ರತಿಯೊಬ್ಬರು ಈ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಹಿರಿಯ ಸಾಹಿತಿ ಗೋಪಾಲ ಚಪಣಿ ಹೇಳಿದರು. ಗುರುವಾರ ಹತ್ತರಗಿ ಗ್ರಾಮದಲ್ಲಿ ಹೋಳಿ ಹಬ್ಬದ ಪ್ರಯುಕ್ತ ಹೊನ್ನಕ್ಕನ್ನವರ ಗಲ್ಲಿಯಲ್ಲಿ ನಡೆದ ಆಧ್ಯಾತ್ಮಿಕ ಪ್ರವಚನದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಮನುಷ್ಯರಿಗೆ ಸಿಕ್ಕಿರುವುದನ್ನು ಮಾನವ ಜನ್ಮ ಸಾರ್ಥಕಮಾಡಿಕೊಂಡರೆ ಮಾತ್ರ ಮನುಷ್ಯನು ಮನುಷ್ಯನಾಗಿ ಉಳಿಯುತ್ತಾನೆ. ಅದರಿಂದಲೇ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿಕೊಂಡು ಸನ್ಮಾನ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಸನಾತನ ಧರ್ಮದವರಾದ ನಾವು ಪ್ರತಿಯೊಬ್ಬರು ಗುರು ಪುತ್ರರಾಗಿ ಗುರುವಿನ ಮಾರ್ಗದರ್ಶನದಲ್ಲಿ ನಡೆಯಬೇಕು. ಪ್ರತಿಯೊಬ್ಬರು ಲಿಂಗದೀಕ್ಷೆ ಪಡೆದು ಪುನಿತರಾಗಬೇಕು ಎಂದರು. ಹತ್ತರಗಿ ಕಾರಿಮಠದ ಗುರುಸಿದ್ದೇಶ್ವರ ಶ್ರೀಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.ಯಮಕನಮರಡಿ ಶೂನ್ಯ ಸಂಪಾಧನಾ ಹುಣಸಿಕೊಳ್ಳಮಠದ ಉತ್ತರಾಧಿಕಾರಿ ಸಿದ್ದಬಸವ ದೇವರು ಹೋಳಿ ಹಬ್ಬದ ಸಂಪ್ರದಾಯ ಕುರಿತು ಮಾತನಾಡಿದರು. ಕಾರ್ಯಕ್ರಮ ಆಯೋಜಕರಾದ ಶಿವಾನಂದ ಹೊನ್ನಕ್ಕನ್ನವರ, ಗಜಾನನ ತೆರಣಿ, ಅಶೋಕ ತವಗ, ಪರಪ್ಪಾ ಶಿರಗಾವಿ, ಅಮಿೀತ ಪಾಟೀಲ, ಶಿವಾಜಿ ಗಡಕರಿ, ಸತ್ಯಪ್ಪಾ ಮರಡಿ, ವಿನೋದ ಮರಡಿ, ಅನೀಲ ಶೇಲಾರ, ಸಿದ್ದಪ್ಪಾ ಬಿಸಿರೊಟ್ಟಿ, ಕೆಂಪಣ್ಣಾ ಸಮಯ, ಪ್ರಶಾಂತ ಹುಕ್ಕೇರಿ, ಗಣೇಶ ಹೊನ್ನಕ್ಕನವರ, ಶಿವಾನಂದ ಹೊನ್ನಕ್ಕನ್ನವರ ಶಾಂತಕುಮಾರ ಮಲಾಜಿ ಶುಭಂ ರಾಮಗೊಂಡಿ, ಸಾಗರ ಮಲಾಜಿ, ಸಚಿನ ಮರಡಿ, ಬಸವರಾಜ ಶಿರಗಾಂವಿ, ಬಸವರಾಜ ತವಗ, ಆನಂದ ಮಗದುಮ್ಮ, ಅಭಿಷೇಕ ಪಾಟೀಲ, ಮಲ್ಲಪ್ಪಾ ಮುತ್ಯನ್ನವರ, ಗಜಾನನ ತೇರಣಿ, ಈರಣ್ಣಾ ಶಿರಗಾಂವಿ ಮುಂತಾದವರು ಉಪಸ್ಥಿತರಿದ್ದರು.



ಬೆಳಗಾವಿ: ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಬೆಳಗಾವಿ ದಿನ ಪತ್ರಿಕೆ ವಿತರಕರ ಸಂಘದಿಂದ ನೈರ್ಮಲ್ಯ ಕರ್ಮಚಾರಿ ರೇಣುಕಾ ಶಶಿಕಾಂತ್ ಕಾಂಬಳೆ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ದೀಪಕ್ ರಾಜ ಗೋಳ್ಕರ, ಖಜಾಂಚಿ ಸಂಜಯ ಘೋರ್ಪಡೆ, ಕಾರ್ಯದರ್ಶಿ ರಾಜ ಭೋಸಲೆ, ರಾಷ್ಟ್ರೀಯ ಸಂಘದ ಸದಸ್ಯ ಪ್ರತಾಪ್ ಭೋಸಲೆ, ಎಲ್ಲಾ ಪತ್ರಿಕೆ ಮಾರಾಟಗಾರ ಸಹೋದರರು, ಸತೀಶ್ ನಾಯಕ್ ಉಪಸ್ಥಿತರಿದ್ದರು.

ಸಭೆಯಿಂದ ಹೊರ ನಡೆದ ಸಂಸದ ಶೆಟ್ಟರ

ಬೆಳಗಾವಿ: ಕಾಂಟೋನ್ಮೆಂಟ್ ದಂಡುಮಂಡಳಿನಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ ಶೆಟ್ಟರ್ ಭಾಗವಹಿಸಿ, ಹೂವಿನ ಮಾರುಕಟ್ಟೆ ಮಳಿಗೆ ನಿರ್ಮಾಣಕ್ಕೆ ದಂಡುಮಂಡಳಿ ಪ್ರದೇಶದ ಸುಮಾರು 6045 ಚ.ಮಿ ಕ್ಷೇತ್ರವನ್ನು ಕೃಷಿ ಮರುಕಟ್ಟೆ ಸಮಿತಿಯ ಪರವಾನಗಿ ಪಡೆಯದೆ ನಿಯಮ ಬಾಹಿರವಾಗಿ ಹಂಚಿಕೆ ಮಾಡಿರುವ ವಿಚಾರವಾಗಿ ದಂಡುಮಂಡಳಿಗೆ ಲಕ್ಷಾಂತರ ರೂಪಾಯಿ ನಷ್ಟಕ್ಕೆ ದಾರಿ ಮಾಡಿಕೊಟ್ಟಿರುವ ವಿಷಯ ಪ್ರಸ್ತಾಪಿಸಿ, ಸಂಬಂಧಿಸಿದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ದಂಡುಮಂಡಳಿ ಪ್ರದೇಶವನ್ನು ಯಾವುದೊ ಒಂದು ಉದ್ದೇಶಕ್ಕಾಗಿ ಹಂಚಿಕೆ ಮಾಡುವ ಪೂರ್ವದಲ್ಲಿ ಬೆಳಗಾವಿ ಲೋಕಸಭೆಯನ್ನು ಪ್ರತಿನಿಧಿಸುತ್ತಿರುವ ಸಂಸದರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಠರಾವು ಪಾಸು ಮಾಡಿ, ಟೆಂಡರ್ ಆಹ್ವಾನಿಸಿ, ಟೆಂಡರ್ ಪಡೆದ ವ್ಯಕ್ತಿ ಯಾವ ಉದ್ದೇಶಕ್ಕೆ ಇದನ್ನು ಬಳಸಬಹುದು ಎಂಬುವವನ್ನು ವಿಚಾರಿಸದೆ, ಹಂಚಿಕೆ ಮಾಡಿದು ಸಾರ್ವಜನಿಕರ ಟೀಕೆಗೆ ಗುರಿಯಾಗಿಯಾಗಿದೆ.

ಪ್ರಯುಕ್ತ, ಈ ಕೂಡಲೆ ಠರಾವನ್ನು ರದ್ದು ಪಡಿಸಿ, ಮರು ಅಥವಾ ಹೊಸ ಠರಾವು ಸಭೆಯಲ್ಲಿ ಪ್ರಸ್ತಾಪಿಸುವ ವಿಷಯವಾಗಿ ಅವಲೋಕಿಸುವಂತೆ, ಸಭೆಯ ಅಧ್ಯಕ್ಷರಲ್ಲಿ ಸಂಸದರು ಪ್ರಸ್ತಾಪಿಸಿದಾಗ ನಿಲುವಳಿಯನ್ನು ನಿರಾಕರಿಸಿ, ಅಧ್ಯಕ್ಷರು ಈ ಹಿಂದಿನ ಸಭೆಯ ಠರಾವು ಪರಿಗಣಿಸಲಾಗುವದೆಂದು ಸಭೆಗೆ ತಿಳಿದಾಗ, ಜಗದೀಶ ಶೆಟ್ಟರ ಇವರು ಅಧ್ಯಕ್ಷರ ನೀತಿಯನ್ನು ಖಂಡಿಸಿ, ಸಭೆಯ ಕೊಠಡಿಯಿಂದ ಹೊರ ನಡೆದು ಬಂದಿದ್ದಾರೆ.



ಚನ್ನಮ್ಮನ ಕಿತ್ತೂರು: ಬೆಳ್ಳಿ ಚುಕ್ಕಿ ರಾಣಿ ಚನ್ನಮ್ಮ ಮಹಿಳಾ ಮಂಡಳ, ಕನ್ನಡ ಸಾಹಿತ್ಯ ಪರಿಷತ್ತು ಪ್ರಣವ ಯೋಗ ಕೇಂದ್ರ ಇವುಗಳ ಸಂಯುಕ್ತಾಶ್ರಯದಲ್ಲಿ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಭಾನುವಾರ ಚನ್ನಮ್ಮಾಜಿಯ ಕೋಟೆಯೊಳಗಡೆ ಇರುವ ಗ್ರಾಮ ದೇವಿ ದೇವಸ್ಥಾನದಲ್ಲಿ ಪಟ್ಟಣ ಪಂಚಾಯತಿಯ ಮಹಿಳಾ ಪೌರ ಕಾರ್ಮಿಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಮಕ್ಕಳ ಹಕ್ಕು ರಕ್ಷಣೆಯ ಜಾಗೃತಿ ಕಾರ್ಯಕ್ರಮ

ಮಕ್ಕಳ ರಕ್ಷಣೆ ನಾಗರಿಕರ ಆದ್ಯ ಕರ್ತವ್ಯ: ನ್ಯಾ.ಜಯಂತ್

ಬೆಳಗಾವಿ: ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಬಾಲ್ಯ ವಿವಾಹ ನಿಷೇಧ ಮತ್ತು ಬಾಲ ಕಾರ್ಮಿಕ ನಿಷೇಧ ಕಾನೂನು ಜಾಗೃತಿ ಕುರಿತು ಕಾರ್ಯಕ್ರಮ ಇಲ್ಲಿನ ಕೆ.ಎಲ್.ಎಸ್. ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿತು. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ವರ್ಚುವಲ್ ಅವರು ಉದ್ಘಾಟಿಸುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಮಕ್ಕಳ ಹಕ್ಕುಗಳ ಅರಿವು ಮೂಡಿಸುವ ಜಾಹೀರಾತು ಫಲಕಗಳನ್ನು ಬಿಡುಗಡೆ ಗೊಳಿಸಿದರು.

ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಬಾಲ್ಯ ವಿವಾಹ ನಿಷೇಧ ಮತ್ತು ಬಾಲ ಕಾರ್ಮಿಕ ನಿಷೇಧ ಕಾನೂನು ಜಾಗೃತಿಕುರಿತು ಕಾರ್ಯಕ್ರಮ ಬಗ್ಗೆ ಮಾತನಾಡಿದ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ಅವರು, ಮಕ್ಕಳ ಬದುಕಿನ ಹಕ್ಕು ಸಂರಕ್ಷಿಸಿ ಉತ್ತಮ ನಾಗಕರಿಕರನ್ನಾಗಿ ಸೃಷ್ಟಿಸುವುದು ಪ್ರತಿಯೊಬ್ಬರ ನಾಗರಿಕರ ಆದ್ಯ ಕರ್ತ ವ್ಯವಾಗಿದೆ. ಮಕ್ಕಳಲ್ಲಿ ಸರಿ ತಪ್ಪುಗಳ ಬಗ್ಗೆ ಸೂಕ್ತ ತಿಳುವಳಿಕೆ ಮೂಡಿಸಿ ಅನ್ಯಾಯವನ್ನು ಪ್ರತಿರೋಧಿಸುವ ಧೈರ್ಯ ತುಂಬಬೇಕು ಎಂದು ಹೇಳಿದರು.

ಶೈಕ್ಷಣಿಕ ವಲಯ, ಪೊಲೀಸ್ ವ್ಯವಸ್ಥೆ, ನ್ಯಾಯಾಂಗ ಸೇರಿದಂತೆ ವಿವಿಧ ಇಲಾಖೆಗಳು ಮಕ್ಕಳ ಬದುಕಿನ ಹಕ್ಕುಗಳ ಸಂರಕ್ಷಣೆಯಲ್ಲಿ ನಿಷ್ಠೆಯಿಂದ ಕೆಲಸ ನಿರ್ವಹಿಸಬೇಕು. ಮಕ್ಕಳು ಗುರು ಹಿರಿಯರಿಗೆ ಗೌರವ, ಕಾಯ್ದೆ ಕಾನೂನುಗಳ ತಿಳುವಳಿಕೆ ಮತ್ತು ಸಾಮಾಜಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ವಿವರಿಸಿದರು.



ಇದೇ ವೇಳೆ ನ್ಯಾಯಾಧೀಶ ಮಂಜುನಾಥ ನಾಯಕ, ಅವರು ಮಾತನಾಡಿ, ಕಾಯ್ದೆಗಳ ಮೂಲಕ ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಅಪರಾಧಗಳ ತಡೆಗಟ್ಟುವಿಕೆ ನಡೆಯಬೇಕು ಎಂದು ಕರೆ ಕೊಟ್ಟರು.

ಬಳಿಕ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಅವರು ಮಾತನಾಡಿ, ಮಕ್ಕಳಲ್ಲಿ ತಮ್ಮ ಹಕ್ಕುಗಳ ಬಗ್ಗೆ, ಅರಿವು ಇದ್ದಾಗ ಅವುಗಳ ಸಂರಕ್ಷಣೆ ಸಾಧ್ಯವಿದೆ. ಹಕ್ಕುಗಳ ಜಾಗೃತಿ ಇದ್ದರೆ ಬೇರೆಯವರ ಹಕ್ಕುಗಳ ಸಂರಕ್ಷಣೆಗೂ ಅನುಕೂಲವಾಗುತ್ತದೆ. ಶಿಕ್ಷಣ ಹಾಗೂ ವೈವಾಹಿಕ ಜೀವನದ ಸೂಕ್ತ ಮಾಹಿತಿ ಮಕ್ಕಳಲ್ಲಿದ್ದರೆ ಭಾವಿ ಜೀವನ ಸುಗಮವಾಗಿ ಸಾಗಿಸಲು ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಮಂಜುನಾಥ ನಾಯಕ, ಜಿಲ್ಲಾಧಿಕಾರಿ ಮೊಹಮ್ಮದ ರೋಷನ್, ಪೊಲೀಸ್ ಆಯುಕ್ತ ಬೊರಸೆ ಭೂಷಣ ಗುಲಾಬರಾವ್, ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ಲೀಲಾವತಿ ಹಿರೇಮಠ, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಚೇತಕುಮಾರ, ಪ್ರಾಚಾರ್ಯ ಅಶೋಕ ಸಿಂದಗಿ, ಮುಖ್ಯೋಪಾಧ್ಯಯ ಲಕ್ಷ್ಮಿ ದೇಶಪಾಂಡೆ ಸೇರಿದಂತೆ ಹಲವರು ಇದ್ದರು.

ಮಹಿಳಾ ದಿನಾಚರಣೆ: ಕಾರ್ ರ್‍ಯಾಲಿ

ಬೆಳಗಾವಿ: ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸಮಾಜ ಸೇವೆಯೇ ಗುರಿಯಾಗಿಟ್ಟುಕೊಂಡು, ಜಿತೋ ಮಹಿಳಾ ಮತ್ತು ಯುವ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಬೃಹತ್ ಕಾರ್ ರ್‍ಯಾಲಿ ಎಲ್ಲರ ಗಮನ ಸೆಳೆಯಿತು. ಅಲ್ಲದೇ ವಿಶ್ವ ದಾಖಲೆ ಬರೆಯಲಾಗಿದೆ.

ಭಾನುವಾರ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಬೆಳಗಾವಿಯಲ್ಲಿ ನಡೆದ 'ಡ್ರೈವ್ ವಿಥ್ ಪರ್ಪಸ್' ರಾಷ್ಟ್ರೀಯ ಕಾರ್ ರ್‍ಯಾಲಿ, ಮಹಿಳಾ ಸಬಲೀಕರಣ ಮತ್ತು ಆರೋಗ್ಯ ಜಾಗೃತಿಯ ಸಂಕೇತವಾಗಿ ಮೂಡಿಬಂತು. ಸಿಪಿಇಡಿ ಮೈದಾನದಿಂದ ಆರಂಭಗೊಂಡ ಈ ರ್‍ಯಾಲಿಗೆ ಡಿಸಿಪಿ ನಾರಾಯಣ ಬರಮನಿ ಅವರು ಚಾಲನೆ ನೀಡಿದರು.

ಕೆಂಪು ಬಣ್ಣದ ಉಡುಪಿನಲ್ಲಿ ಸಜ್ಜಾಗಿದ್ದ ನೂರಾರು ಮಹಿಳೆಯರು ಮತ್ತು ಯುವಕರು, ಕ್ಯಾನ್ಸರ್ ಮತ್ತು ಥಲಸ್ಸೇಮಿಯಾದಂತಹ ಗಂಭೀರ ಕಾಯಿಲೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದರು. ಗೋಮಟೇಶ ವಿದ್ಯಾಪೀಠದಲ್ಲಿ ಅಂತ್ಯಗೊಂಡ ಈ ಕಾರ್ಯಕ್ರಮದಲ್ಲಿ ಖ್ಯಾತ ಅಂಕಾಲಜಿಸ್ಟ್ ಡಾ.ಅಭಿನಂದನ್ ಹಂಚಿ ಅವರು ಆರೋಗ್ಯ ಮತ್ತು ಪೌಷ್ಟಿಕಾಂಶದ ಮಹತ್ವದ ಕುರಿತು ಮಾತನಾಡಿದರು.

ಈ ಕಾರ್ ರ್‍ಯಾಲಿಯು ಕೇವಲ ಒಂದು ಸಂಚಾರವಾಗಿರದೆ, ಜೆಎಲ್ಡಬ್ಲ್ಯು ಅಪೆಕ್ಸ್ ತಂಡವು ದೇಶಾದ್ಯಂತ 3,000ಕ್ಕೂ ಹೆಚ್ಚು ಕಾರುಗಳ ಮೂಲಕ ಜಾಗೃತಿ ಮೂಡಿಸಿ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ದಾಖಲೆ ನಿರ್ಮಿಸಿರುವುದರ ಮುಂದುವರಿದ ಭಾಗವಾಗಿತ್ತು. ಜಿತೋ ಬೆಳಗಾವಿ ಶಾಖೆಯ ಸಾರಿಕಾ ಗಾಡಿಯಾ, ಕೀರ್ತಿ ದೊಡ್ಡಣ್ಣವರ್, ಲೀನಾ ಶಾಹ್, ಮಯೂರಾ ಪಾಟೀಲ್, ಅರ್ನವ್ ಶಾಹ್, ವೈಭವ ಮೆಹ್ರಾ, ಅಭಯ್ ಆದಿಮಣಿ, ಹರ್ಷವರ್ಧನ್ ಇಂಚಲ್ ಮತ್ತು ಅಂಕಿತ್ ಸಂಚೇತಿ ಸೇರಿದಂತೆ ಪ್ರಮುಖ ಪದಾಧಿಕಾರಿಗಳು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಸಮಾಜದ ಸ್ವಾಸ್ಥ್ಯಕ್ಕಾಗಿ ಇಂತಹ ಸಕಾರಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜಿತೋ ಸಂಘಟನೆಯು ಮಹಿಳಾ ನಾಯಕತ್ವವನ್ನು ಎತ್ತಿಹಿಡಿಯುವುದರಲ್ಲಿ ಸಾದನೆಯನ್ನು ಮಾಡಿದೆ.



ಸಾಮಾಜಿಕ ಪಿಡುಗು ತಡೆಯಲು ಕೈಜೋಡಿಸಿ

ಕಾಗವಾಡ: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಬಾಲ ಕಾರ್ಮಿಕ ಪದ್ಧತಿ ಮತ್ತು ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳನ್ನು ಮುಕ್ತಗೊಳಿಸಲು ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ನ್ಯಾಯವಾದಿ ರಾಹುಲ್ ಕಟಗೇರಿ ಹೇಳಿದರು.

ತಾಲೂಕಿನ ಐನಾಪುರ ಪಟ್ಟಣದ ಶಾಂತಿ ಸಾಗರ ಆಂಗ್ಲ ಮಾಧ್ಯಮ ಶಾಲೆಯ ಸಭಾ ಭವನದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲೂಕು ಕಾನೂನು ಸೇವಾಸಮಿತಿ ಕಾಗವಾಡ ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ, ಪೊಲೀಸ ಇಲಾಖೆ ಮತ್ತು ಶಾಂತಿಸಾಗರ ವಿದ್ಯಾಪೀಠ ಆಂಗ್ಲ ಮಾಧ್ಯಮ ಪ್ರಾಥಮಿಕ, ಪ್ರೌಢಶಾಲೆ ಐನಾಪುರ ಸಹಯೋಗದಲ್ಲಿ ನಡೆದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಮಾತನಾಡಿ, ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಇರುವ ಪೋಕ್ಸೋ ಕಾಯ್ದೆಯಿದೆ. ಸಮಾಜದಲ್ಲಿರುವ ಸಮಸ್ಯೆಗಳಾದ ಮೂಢನಂಬಿಕೆ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಭ್ರೂಣಹತ್ಯೆ ತೊಡೆದು ಹಾಕಬೇಕು ಎಂದರು.

ಬಾಲ್ಯ ವಿವಾಹ ನಿಷೇಧಕ್ಕೆ ಸಂಬಂಸಿದಂತೆ ಬಾಲ್ಯ ವಿವಾಹವು ಮಗುವಿನ ಭವಿಷ್ಯವನ್ನು ಕಸಿದುಕೊಳ್ಳುತ್ತದೆ. ಬಾಲ್ಯ ವಿವಾಹದಲ್ಲಿ ಭಾಗಿಯಾಗುವ ಪೋಷಕರು, ಪೂಜಾರಿಗಳು ಮತ್ತು ಅತಿಥಿಗಳ ವಿರುದ್ಧವೂ ಪ್ರಕರಣ ದಾಖಲಿಸಬಹುದು. ಬಾಲ ಕಾರ್ಮಿಕ ನಿರ್ಮೂಲನೆ ಶಿಕ್ಷಣದ ಹಕ್ಕು ಪಡೆಯಲು ಮಕ್ಕಳು 1098 ಸಹಾಯವಾಣಿಗೆ ಕರೆ ಮಾಡಬಹುದು. ನೊಂದ ಹಾಗೂ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯರಿಗೆ ಉಚಿತ ಕಾನೂನು ನೆರವು ನೀಡಲಾಗುತ್ತಿದೆ. ಪ್ರತಿ ನ್ಯಾಯಾಲಯದಲ್ಲಿ ಈ ವ್ಯವಸ್ಥೆ ಇದೆ ನೊಂದ ಮಹಿಳೆಯರು ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ತಾಲೂಕು ನ್ಯಾಯವಾದಿಗಳ ಸಂಘದ ಮಾಜಿ ಅಧ್ಯಕ್ಷ ನ್ಯಾಯವಾದಿ ಪ್ರಕಾಶ ಮಾನೆ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಮಹಾದೇವಿ ಶಿರಗುಪ್ಪಿ ಮಾತನಾಡಿದರು.

ಈ ವೇಳೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅರುಣ ಗಾಣಿಗೇರ, ಉಪಾಧ್ಯಕ್ಷ ಪಾಯಪ್ಪ ಕುಡವಕ್ಕಲಗಿ, ನಿವೃತ್ತ ಉಪನ್ಯಾಸಕ ಆರ್. ಬಿ.ಬಸನ್ನವರ, ಪತ್ರಕರ್ತ ಮುರಗೇಶ ಗಸ್ತಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು. ಮುಖ್ಯೋಪಾಧ್ಯಾಯ ಬಾಬುರಾವ ಮೋಳೆಕರ ನಿರೂಪಿಸಿ ವಂದಿಸಿದರು.



ಸತತ ಪರಿಶ್ರಮದಿಂದ ಸಾಧನೆ ಸಾಧ್ಯ: ಮರಿಗೌಡರ

ಯರಗಟ್ಟಿ: ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಮಾತ್ರ ತಮ್ಮ ಜೀವನದ ಗುರಿ ತಲುಪಲು ಸಾಧ್ಯ ಎಂದು ಯರಗಟ್ಟಿ ಮಾಮನಿ ಜೀವನ ನಿಂತ ನೀರಾಗದೆ ಹರಿಯುವ ನೀರಿನಂತಾಗಬೇಕು. ವಿದ್ಯಾರ್ಥಿಗಳು ನಿರಂತರ ಅಧ್ಯಯನದಲ್ಲಿ ತೊಡಗಬೇಕು ಎಂದು ಯರಗಟ್ಟಿ ಮಾಮನಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಆರ್.ಎಸ್. ಮರಿಗೌಡರ ಹೇಳಿದರು.



ಸಮೀಪದ ತಲ್ಲೂರ ಗ್ರಾಮದ ಶ್ರೀ ಬಸವೇಶ್ವರ ಯುವಕ ಮಂಡಳ ಪ್ರೌಡ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದ ಕಾರ್ಯಕ್ರಮದಲ್ಲಿ ಮಾತನಾಡಿ, ಜ್ಞಾನ ಶಕ್ತಿಯ ಜೊತೆಗೆ ಏಕಾಗ್ರತೆ ಎಂಬುವುದು ವಿದ್ಯಾರ್ಥಿಗಳಿಗೆ ಅವಶ್ಯವಿದೆ. ಏಕಾಗ್ರತೆ ರೂಢಿಸಿಕೊಳ್ಳಬೇಕು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಸಿ.ವಿ. ಮಾಸ್ತಮರ್ಡಿ, ಮುಖ್ಯ ಶಿಕ್ಷಕ ಡಿ.ಡಿ.ಭೋವಿ, ಯುವಕ ಮಂಡಳ ಕಾರ್ಯದರ್ಶಿ ಫಕೀರಪ್ಪ ಬಡಿಗೇರ ಮಾತನಾಡಿ, ಕೇವಲ ಶಿಕ್ಷಣ ಕಲಿಸಿದರೆ ಗುರುವಾಗುದಿಲ್ಲ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ತಂದೆ ತಾಯಿಯ ಸ್ವರೂಪದಲ್ಲಿ ನಿಂತು ಸಂಸ್ಕಾರವನ್ನು ಬಿತ್ತುವಂತಹ ಕಾರ್ಯ ಮಾಡಬೇಕು ಅಂದಾಗ ಮಕ್ಕಳಿಗೆ ಶೈಕ್ಷಣಿಕವಾಗಿ ಅಷ್ಟೇ ಅಲ್ಲದೇ ಸಂಸ್ಕಾರಯುತ ಬದುಕನ್ನು ರೂಪಿಸಿದಂತಾಗುತ್ತದೆ ಎಂದರು.

ನಂತರ ವಿದ್ಯಾಥಿಗಳಿಂದ ಸಂಸ್ಕೃತಿಕ ಕಾರ್ಯಕ್ರಮ ಜರುಗಿದವು.ಮುಖ್ಯ ಶಿಕ್ಷಕ ಆರ್.ಪಿ.ದುಂಡನಕೊಪ್ಪ, ನಿವೃತ್ತ ಮುಖ್ಯಶಿಕ್ಷಕ ಎಸ್. ಆರ್. ಬೆನಕಟ್ಟಿ, ಯುವಕ ಮಂಡಳ ನಿರ್ದೇಶಕ, ಬಸಪ್ಪ ಭೋವಿ, ಪಂಚಪ್ಪ ದುಂಡನಕೊಪ್ಪ, ಮಲ್ಲಿಕಾರ್ಜುನ ಗಾಣಿಗೇರ, ಬಸಪ್ರಭು ಮಲಕನ್ನವರ, ಲತಾ ತಲ್ಲೂರ, ಬಿ.ಸಿ.ಕರಿಕಟ್ಟಿ, ಎಸ್.ಎಫ್.ಬಡಿಗೇರ, ಸಚೀನ ಹೋಳಿ, ಎ.ಜೆ. ಕಾಂಬಳೆ, ಜಿ.ಎ.ಕೊಟ್ರಶೆಟ್ಟಿ, ಎನ್. ಜಿ.ಕತ್ತಿ, ಎಲ್.ವಿ.ಪಾಟೀಲ, ಎಸ್. ಎಂ.ಪಟೇಲ್, ಪಿ.ಸಿ.ಸುಣ ದೋಳಿ ಸೇರಿ ವಿದ್ಯಾರ್ಥಿಗಳು ಇದ್ದರು.

ಮಕ್ಕಳ ರಕ್ಷಣೆಗಾಗಿ ಎಲ್ಲ ಶಾಲೆಗಳಲ್ಲಿ ಕಾನೂನು ಅರಿವು ಅಗತ್ಯ

ರಾಯಬಾಗ: ಪೋಕ್ಸೋ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಮಕ್ಕಳಲ್ಲಿ ತಮ್ಮ ರಕ್ಷಣೆಗಳ ಬಗ್ಗೆ ಜಾಗೃತಗೊಳಿಸಲು ಎಲ್ಲ ಶಾಲೆಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೇರೊಟ್ಟಿ ಹೇಳಿದರು.

ಶನಿವಾರ ತಾಲೂಕಿನ ಮೇಖಳಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ತಾಲೂಕು ಕಾನೂನು ಸಮಿತಿ, ಶಿಕ್ಷಣ ಇಲಾಖೆ, ವಕೀಲರ ಸಂಘ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆ, ಮಕ್ಕಳ ಸುರಕ್ಷತೆ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,



ಬಾಲ್ಯ ವಿವಾಹ ಮಾಡುವುದರಿಂದ ಮಕ್ಕಳ ಭವಿಷ್ಯ ಹಾಳಾಗುತ್ತದೆ. ಬಾಲ್ಯ ವಿವಾಹದಲ್ಲಿ ಭಾಗವಹಿಸುವ ಎಲ್ಲರು ಅಪರಾಧಿಗಳಾಗುತ್ತಾರೆ. ಅವರು ಶಿಕ್ಷೆಗೆ ಒಳಗಾಗುತ್ತಾರೆ. ವರದಕ್ಷಿಣೆ ನಿಷೇಧ ಕಾಯ್ದೆ ಬಗ್ಗೆ ಪಠ್ಯದಲ್ಲಿ ಅಳವಡಿಸಲು ಸರ್ವೋಚ್ಚ ನ್ಯಾಯಾಲಯ ಆದೇಶಿಸಿದೆ ಎಂದು ತಿಳಿಸಿದರು.

ಬಿಇಒ ಬಸವರಾಜಪ್ಪ ಆರ್. ಮಾತನಾಡಿ, ಸಮಾಜಕ್ಕೆ ಮಾರಕವಾದ ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಬಾಲ ಕಾರ್ಮಿಕತೆಗಳಿಂದ ರಕ್ಷಣೆ ಮಾಡಲು ಸರ್ಕಾರ ಕಟ್ಟುನಿಟ್ಟಿನ ಕಾನೂನುಗಳು ಜಾರಿಗೊಳಿಸಿದೆ. ಮಕ್ಕಳು ತಮಗೆ ಆಗುವ ಕಿರುಕುಳ ಕುರಿತು ಪಾಲಕರಿಗೆ, ಶಿಕ್ಷಕರಿಗೆ ತಿಳಿಸಬೇ?ಕು. ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡಿ, ಮಕ್ಕಳು ತಮ್ಮ ತೊಂದರೆ ಬಗ್ಗೆ ದೂರು ಸಲ್ಲಿಸಬಹುದು ಎಂದರು.

ರಾಜಶ್ರೀ ಬಡೊದೆ, ವಕೀಲ ಕೆ.ಎಮ್.ಮದಾಳೆ ಮಾತನಾಡಿದರು. ಎಸ್‌ಡಿಎಂಸಿ ಉಪಾಧ್ಯಕ್ಷ ಸಂಜೀವ ಒಡೆಯರ, ವಿಠ್ಠಲ ಕೊಟ್ರೆ, ಮುಖ್ಯೋಧ್ಯಾಪಕ ಸಂತೋಷ ಬಸನಾಯಿಕ, ಎಸ್.ಎ. ಕಾಂಬಳೆ, ಎಸ್ .ಜಿ. ಖೊತ, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು. ಗೋಪಾಲ ಹುಚ್ಚೆನ್ನವರ ಸ್ವಾಗತಿಸಿ, ನಿರೂಪಿಸಿದರು.

ಕಾನೂನು ಅರಿವು ನೆರವು ಕಾರ್ಯಕ್ರಮ

ಹಲ್ಯಾಳ: ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ, ತಾಲೂಕ ಕಾನೂನು ಸೇವಾ ಸಮಿತಿ ಅಥಣಿ, ವಕೀಲರ ಸಂಘ ಅಥಣಿ, ತಾಲೂಕ ಆಡಳಿತ, ತಾಪಂ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿಡ್ಕದ್ಧಿ ಇಲಾಖೆ, ಶಿಕ್ಷಣ ಇಲಾಖೆ ಅಥಣಿ ಸಹಯೋಗದಲ್ಲಿ ಗ್ರಾಮದ ಸರಕಾರಿ ಪ್ರೌಢಶಾಲೆ (ಹಲ್ಯಾಳ)ಯಲ್ಲಿ ಮಕ್ಕಳಿಗೆ ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಬಾಲಕಾರ್ಮಿಕ ನಿಷೇಧ ಕಾಯ್ದೆ ಮತ್ತು ಮಕ್ಕಳ ಸುರಕ್ಷತೆಯ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ನಡೆಯಿತು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ, ಅಥಣಿ ತಾಲೂಕ ಕಾನೂನು ಸೇವಾ ಸಮಿತಿ ಅಧ್ಯಕ್ಷ ನಾಮದೇವ್ ಕಾಮಣ್ಣ ಸಾಲಮಂಟಪಿ ಮಾತನಾಡಿ ಪೋಕ್ಸೋ ಕಾಯ್ದೆ ಕುರಿತು ಮಕ್ಕಳಿಗೆ ಮಾಹಿತಿ ನೀಡಿದರು.

ಪಿಎಸ್ಐ ಗಿರಿಮಲ್ಲಪ್ಪ ಉಪ್ಪಾರ ಮಾತನಾಡಿ, ಇಂದಿನ ಸಮಾಜದಲ್ಲಿ ಹುಡುಗಿಯರು ತೆಗೆದುಕೊಳ್ಳುವ ಕೆಲವು ತಪ್ಪು ನಿರ್ಧಾರಗಳಿಂದ ತಂದೆ ತಾಯಿಗಳಿಗೆ ಆಗುವ ನೋವು ಮತ್ತು ಅವಮಾನಗಳನ್ನು ಸತ್ಯ ಘಟನೆಯ ಸಮೇತ



ವಿವರಿಸಿದರು.

ಹಲ್ಯಾಳ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ನಾಗಪ್ಪ ಉಗಾರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್. ಮುಂಜೆ, ಅಥಣಿ ವಕೀಲರ ಸಂಘ ಪ್ರಧಾನ ಕಾರ್ಯದರ್ಶಿ ಸಿ.ಕೆ.ಬಾಗಿ, ವಕೀಲರಾದ ಎಲ್.ಎಸ್. ಕಾಳೆ, ಎಂ.ಎಸ್. ಪಾಟೀಲ್, ಪ್ರವೀಣ್ ದಬಾಡಿ (ಪ್ರಾಥಮಿಕ ಆರೋಗ್ಯ ಕೇಂದ್ರ ಹಲ್ಯಾಳ), ಎಸ್ ಡಿ ಎಂಸಿ ಅಧ್ಯಕ್ಷರು ಭೀಮಣ್ಣಾ ಮುರಗುಂಡಿ, ಸಂಜೀವ್ ಮೆಂಡಿಗೇರಿ, ಸದಾಶಿವ್ ಶಿವಪುರ, ಶಿಕ್ಷಕರು, ಮಕ್ಕಳು, ಆಶಾ ಕಾರ್ಯಕರ್ತೆಯರಿದ್ದರು.ಶಿಕ್ಷಕ ಅನಿಲ್ ಕುಂಬಾರ ನಿರೂಪಿಸಿದರು.

ಅನ್ನಪ್ರಸಾದ ಸೇವೆಗೆ ಹಟ್ಟಿಹೊಳಿ ಚಾಲನೆ

ಬೆಳಗಾವಿ: ತಾಲೂಕಿನ ಉಚಗಾಂವ ಗ್ರಾಮದಲ್ಲಿ ಆದಿಶಕ್ತಿ ಶ್ರೀ ಮಳೆಕರಣಿ ದೇವಿಯ ಸೋಹಳಾ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಅನ್ನಪ್ರಸಾದ ಸೇವೆಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇವಿಯ ಕೃಪೆಯಿಂದ ಗ್ರಾಮದಲ್ಲಿ ಸದಾ ಸುಖ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಿದರು. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಭಕ್ತಿಭಾವದ ಜೊತೆಗೆ ಪರಸ್ಪರ ಸೌಹಾರ್ದತೆ ಮತ್ತು ಒಗ್ಗಟ್ಟನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಗ್ರಾಮಸ್ಥರು ಒಟ್ಟಾಗಿ ದೇವಿಯ ಸೋಹಳಾವನ್ನು ಭಕ್ತಿಭಾವದಿಂದ ಆಚರಿಸುತ್ತಿರುವುದು ಶ್ಲಾಘನೀಯವೆಂದು ತಿಳಿಸಿದರು. ಕಾರ್ಯಕ್ರಮದ ಭಾಗವಾಗಿ ನೂರಾರು ಭಕ್ತರಿಗೆ ಅನ್ನಪ್ರಸಾದ ವಿತರಿಸಲಾಯಿತು. ದೇವಿಯ ದರ್ಶನಕ್ಕಾಗಿ ಹಾಗೂ ಅನ್ನಪ್ರಸಾದ ಸ್ವೀಕರಿಸಲು ಸುತ್ತಮುತ್ತಲಿನ ಗ್ರಾಮಗಳಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಈ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್, ಉಚಗಾಂವ ಗ್ರಾಮದ ಹಿರಿಯರು, ಯುವಕರು, ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರು ಸೇರಿದಂತೆ ನೂರಾರು ಭಕ್ತಾಧಿಗಳು ಇದ್ದರು.



ಬಣ್ಣದಲ್ಲಿ ಮಿಂದೆದ್ದ ಬೆಳಗಾವಿ ಜನತೆ

ಬೆಳಗಾವಿ: ಕುಂದಾನಗರಿಯಲ್ಲಿ ರಂಗಪಂಚಮಿಯ ಸಡಗರ ಮುಗಿಲು ಮುಟ್ಟಿದೆ. ಶಹಾಪುರ, ಖಾಸಬಾಗ ಹಾಗೂ ವಡಗಾಂವ್ ಭಾಗದ ಗಲ್ಲಿ ಗಲ್ಲಿಗಳಲ್ಲಿ ಯುವಕ-ಯುವತಿಯರು ಬಣ್ಣದ ಓಕುಳಿಯಲ್ಲಿ ಮಿಂದೆದ್ದಿದ್ದು, ವಿವಿಧ ಕಾಲಕೃತಿಗಳ ಅಣುಕು ಶವಯಾತ್ರೆ ಹಾಗೂ ರೇನ್ ಡ್ಯಾನ್ಸ್ ಮಾಡುವ ಮೂಲಕ ಕುಂದಾನಗರಿ ಜನತೆಯು ಹೋಳಿ ಹಬ್ಬಕ್ಕೆ ಅದ್ದೂರಿಯಾಗಿ ಆಚರಿಸಿದರು.

ರವಿವಾರ ಶಹಾಪುರದಲ್ಲಿ ಬಣ್ಣದ ಹಬ್ಬದ ಹೋಳಿ ಹಬ್ಬದ ಸಂಭ್ರಮ ಮನೆ ಮಾಡಿತು, ಯುವಕರು-ಯುವತಿಯರು ಹಾಗೂ ಪುಟಾಣಿಗಳು ಬಣ್ಣದ ನೀರು ಎರಚುತ್ತಾ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಡೀಜೆ ಹಾಡುಗಳಿಗೆ ಹೆಜ್ಜೆ ಹಾಕುತ್ತಾ, ರೇನ್ ಡ್ಯಾನ್ಸ್ ನಲ್ಲಿ ಮಿಂದೇಳುತ್ತಾ ಯುವ ಸಮೂಹ ಸಂಭ್ರಮಿಸಿದರು. ವಿವಿಧ ವಿಚಿತ್ರ ವೇಷಭೂಷಣಗಳನ್ನು ತೊಟ್ಟ ಯುವಕರು ಎಲ್ಲರ ಗಮನ ಸೆಳೆದರೆ, ಸುಡು ಬಿಸಿಲಿನಲ್ಲೂ ಬಣ್ಣಗಳ ಲೋಕದಲ್ಲಿ ಎಲ್ಲರೂ ತಲ್ಲೀನರಾಗಿದ್ದರು.



ಶಹಾಪುರದ ಹೋಳಿ ಆಚರಣೆಯ ಪ್ರಮುಖ ಆಕರ್ಷಣೆಯಾದ ಅಣುಕು ಶವಯಾತ್ರೆ ಈ ಬಾರಿಯೂ ಸಾವಿರಾರು ಜನರನ್ನು ಆಕರ್ಷಿಸಿತು. ಜನರು ತಂಡೋಪತಂಡವಾಗಿ ಬಂದು ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರು.

ಹಬ್ಬದ ಆಚರಣೆಯ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಮಾಡಲಾಗಿತು. ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಅವರು ಸ್ವತಃ ಸ್ಥಳಕ್ಕೆ ಭೇಟಿ ನೀಡಿ, ಬಂದೋಬಸ್ತ್ ವ್ಯವಸ್ಥೆಯನ್ನು ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಆಯುಕ್ತರು ಸೂಚನೆ ನೀಡಿದರು.

ಕಿರುಸುದ್ದಿ

ಅಧ್ಯಕ್ಷರಾಗಿ ಪ್ರಕಾಶ ಆಯ್ಕೆ



ಮೂಡಲಗಿ: ಜೆಡಿಎಸ್ ಪಕ್ಷದ ತಾಲೂಕ ಅಧ್ಯಕ್ಷರಾಗಿ ಪ್ರಕಾಶ ರಾಮಪ್ಪ ಕಾಳಶೆಟ್ಟಿ ಅವರನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಆದೇಶದ ಮೇರಿಗೆ ಶನಿವಾರ ಪುನರಾಯ್ಕೆ ಮಾಡಲಾಯಿತು.ಮಾಜಿ ಸಚಿವರು ಹಾಗೂ ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ವೆಂಕಟರಾವ ನಾಡಗೌಡ ಹಾಗೂ ರಾಷ್ಟ್ರೀಯ ಉಪಾಧ್ಯಕ್ಷ ಪ್ರತಾಪರಾವ ಪಾಟೀಲ ಮತ್ತು ಜಿಲ್ಲಾ ಅಧ್ಯಕ್ಷ ಶಂಕರ ಮಾಡಲಗಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೂಡಲಗಿ ತಾಲೂಕಿನ ಅವರಾದಿ ಗ್ರಾಮದ ಪ್ರಕಾಶ ಕಾಳಶೆಟ್ಟಿ ಅವರು ಪಕ್ಷದಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿದ್ದಾರೆ, ಪಕ್ಷದ ಸದಸ್ಯತ್ವವನ್ನು ಹೆಚ್ಚಿಸುವಲ್ಲಿ ಅವರು ದುಡಿದಿದ್ದಾರೆ. ಹಾಗಾಗಿ ಮುಂದಿನ ಮೂರು ವರ್ಷದ ಅವಧಿಗೆ ಅವರನ್ನೇ ತಾಲೂಕ ಅಧ್ಯಕ್ಷರನ್ನಾಗಿ ಮುಂದುವರಿಸಿದ್ದೇವೆ ಎಂದು ಆದೇಶ ಪತ್ರ ನೀಡಿ ಶುಭ ಹಾರೈಸಿದರು.

ಕಾನೂನು ಅರಿವು ಕಾರ್ಯಕ್ರಮ



ಬೈಲಹೊಂಗಲ: ಬೈಲಹೊಂಗಲ ತಾಲೂಕಿನ ವಕ್ಕುಂದ ಗ್ರಾಮದ ಕನ್ನಡ ಮೋರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಾನೂನುಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ''ಪೋಷಕರ ಕಾಯ್ದೆ, ಬಾಲ ವಿವಾಹ ನಿಷೇಧ ಕಾಯ್ದೆ ಮತ್ತು ಮಕ್ಕಳ ಸುರಕ್ಷತೆ'' ಕುರಿತು ಕಾನೂನು ಅರಿವು ಕಾರ್ಯಕ್ರಮ ಶನಿವಾರ ನಡೆಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬಾಲ್ಯ ವಿವಾಹದ ದುಷ್ಪರಿಣಾಮಗಳು, ಮಕ್ಕಳ ಹಕ್ಕುಗಳು ಹಾಗೂ ಪೋಷಕರ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು. ವಕೀಲರಾದ ಸಿದ್ಧರಾಮ ಎಸ್. ಮಠದ ಉಪನ್ಯಾಸ ನೀಡಿದರು. ಪ್ರಾಂಶುಪಾಲ ಪಿ.ಎನ್. ಲಕ್ಷ್ಮಣಗೌಡರ, ವಕೀಲ ಎನ್.ಪಿ. ತೋಟಗಿ, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾನೂನುಗಳ ಬಗ್ಗೆ ಅರಿವು ಪಡೆದರು.

ನಿಧನ ಸುದ್ದಿ

ಸಂಜಯ ಮೂಡಲಗಿ



ಬೆಳಗಾವಿ: ವಡಗಾವಿಯ ಸಂಜಯ ಮಾರುತಿ ಮೂಡಲಗಿ ನಿಧನರಾದರು. ಮೃತರು ತಂದೆ-ತಾಯಿ ಇಬ್ಬರು ಪುತ್ರರು, ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಮಧ್ಯಾನ್ಹ 2:30ಕ್ಕೆ ಖಾಸಭಾಗ ಕುರುವಿನ ಶಟ್ಟಿ ಸಮಾಜದ ರುದ್ರ ಭೂಮಿಯಲ್ಲಿ ಜರಗುವುದು.

ಶಿವಪ್ಪ ಪುಗಟಿ



ನೇಸರಗಿ: ಸಮೀಪದ ಮದನಬಾವಿ ಗ್ರಾಮದ ಗಣ್ಯರಾದ ಶಿವಪ್ಪ ನಿಂಗಪ್ಪ ಪುಗಟಿ (61) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.

ಶಂಕರ ಗುರವ



ಚಿಕ್ಕೋಡಿ: ತಾಲೂಕಿನ ಯಕ್ಸಂಬಾ ಪಟ್ಟಣದ ನಿವಾಸಿ ಶಂಕರ ಗಣಪತಿ ಗುರವ (90) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಬಾಬುರಾವ ಪವಾರ



ಚಿಕ್ಕೋಡಿ: ಪಟ್ಟಣದ ಹೊಸಪೇಟೆ ಗಲ್ಲಿಯ ನಿವಾಸಿ, ಸಿಟಿಇ ಸಂಸ್ಥೆಯ ಶ್ರೀಮತಿ ಎ.ಎ. ಪಾಟೀಲ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಸಿಪಾಯಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಬಾಬುರಾವ ಪವಾರ (58) ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಚಂದ್ರಕಾಂತ ಸಾವಳಗಿ



ಹುಕ್ಕೇರಿ: ಪಟ್ಟಣದ ಹಳ್ಳಕದೇರಿ ನಿವಾಸಿ ಮರಾಠಾ ಸಮಾಜದ ಹಿರಿಯ ಚಂದ್ರಕಾಂತ ಮಾರುತಿ ಸಾವಳಗಿ (57) ನಿಧನರಾದರು. ಮೃತರಿಗೆ ಇಬ್ಬರು ಪುತ್ರಿಯರು ಓರ್ವ ಪುತ್ರ ಅಪಾರ ಬಂಧುಬಳ ಅಗಲಿದ್ದಾರೆ.



ರಾಯಬಾಗ: ಶನಿವಾರ ತಾಲೂಕಿನ ನಿಪನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ತಾಲೂಕು ಕಾನೂನು ಸಮಿತಿ, ಶಿಕ್ಷಣ ಇಲಾಖೆ, ವಕೀಲರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪೋಕ್ಸೊ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆ, ಮಕ್ಕಳ ಸುರಕ್ಷತೆ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ನಡೆಯಿತು. ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರೀಯಾ ಭಟ್ಟಡ, ಸಿಡಿಪಿಒ ಭಾರತಿ ಕಾಂಬಳಿ ಸೇರಿದಂತೆ ಇತರರಿದ್ದರು.

ಮಕ್ಕಳ ರಕ್ಷಣೆಯ ಜಾಗೃತಿ ಅಗತ್ಯ: ಭಟ್ಟಡ

ರಾಯಬಾಗ: ಮಕ್ಕಳ ಮೇಲೆ ದಿನದಿಂದ ದಿನಕ್ಕೆ ದೌರ್ಜನ್ಯ ಹೆಚ್ಚುತ್ತಿರುವುದರಿಂದ ಮಕ್ಕಳ ರಕ್ಷಣೆಗಳ ಬಗ್ಗೆ ಜಾಗೃತಗೊಳಿಸಲು ಎಲ್ಲ ಶಾಲೆಗಳಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರೀಯಾ ಭಟ್ಟಡ ಹೇಳಿದರು.

ಶನಿವಾರ ತಾಲೂಕಿನ ನಿಪನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ತಾಲೂಕು ಕಾನೂನು ಸಮಿತಿ, ಶಿಕ್ಷಣ ಇಲಾಖೆ, ವಕೀಲರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪೋಕ್ಸೊ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆ, ಮಕ್ಕಳ ಸುರಕ್ಷತೆ ಬಗ್ಗೆ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಬಾಲ ಕಾರ್ಮಿಕತೆಗಳಿಂದ ರಕ್ಷಣೆ ಮಾಡಲು ಸರ್ಕಾರ ಕಟ್ಟುನಿಟ್ಟಿನ ಕಾನೂನುಗಳು ಜಾರಿಗೊಳಿಸಿದೆ ಎಂದರು.

ಸಿಡಿಪಿಒ ಭಾರತಿ ಕಾಂಬಳೆ ಮಾತನಾಡಿ, ಮಕ್ಕಳು ತಮಗೆ ಆಗುವ ಕಿರುಕುಳ ಕುರಿತು ಪಾಲಕರಿಗೆ, ಶಿಕ್ಷಕರಿಗೆ ತಿಳಿಸಬೇಕು. ಮಕ್ಕಳ ಸಹಾಯವಾಣಿ ಸಂಖ್ಯೆ 1098 ಗೆ ಕರೆ ಮಾಡಿ, ಮಕ್ಕಳು ತಮ್ಮ ತೊಂದರೆ ಬಗ್ಗೆ ದೂರು ಸಲ್ಲಿಸಬಹುದು ಎಂದರು.

ವಕೀಲಎಲ್.ಆರ್.ಪಡತರೆ,ಎಸ್.ಎನ್ ಪಡತರೆ, ಪಿ.ಎಸ್.ಕುರಬೆಟ್ಟ, ಮುಖ್ಯೋಧ್ಯಾಪಕ ಐ.ಕೆ.ಅಕಿವಾಟೆ ಹಾಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.



ಬೆಳಗಾವಿ: ನಗರದ ವಡಗಾವಿಯಲ್ಲಿರುವ ಬಸವಜ್ಯೋತಿ ಮಹಿಳಾ ಮಂಡಳದ ವತಿಯಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ಬಿ.ಕೆ. ಅನಿತಾ ಅಕ್ಕನವರು, ಡಾ. ಸ್ಫೂರ್ತಿ ನಾಗಮೂರ್ತಿ, ಬಸವ ಜ್ಯೋತಿ ಮಹಿಳಾ ಮಂಡಳದ ಎಲ್ಲಾ ಸದಸ್ಯರು, ಪೂಜಾ ಅಂಗಡಿ, ವೀಣಾ ಉಧೋಶೀ, ಸಂಜಯ ಅಂಗಡಿ, ಸ್ಮಿತಾ ಜಮಖಂಡಿ, ಸಂಜಯ ಜಮಖಂಡಿ, ಆನಂದ ಹರತಿ, ಮಹಾಂತೇಶ್ ವಾಲಿ, ಮಂಜುಳಾ ಹಂದಿಗುಂದ, ಪ್ರೇಮಾ ಖಾನಾಪುರೆ ಇದ್ದರು.

ಕ್ಷೇತ್ರದ ವಿವಿಧ ಅಭಿವೃದ್ಧಿಗೆ ರೂ. 164 ಕೋಟಿ ಅನುದಾನ: ಅಶೋಕ ಪಟ್ಟಣ



- ರೂ. 30 ಕೋಟಿ ಅನುದಾನವನ್ನು ರಾಮದುರ್ಗ ನಗರದಲ್ಲಿ ಸುಸಜ್ಜಿತ ಹೊಸ ಬಸ್‌ನಿಲ್ದಾಣ ನಿರ್ಮಾಣ, ರೂ. 85 ಕೋಟಿ ವೆಚ್ಚದಲ್ಲಿ ಮಲಪ್ರಭಾ ನದಿಯಿಂದ ತಾಲೂಕಿನ ಚಂದರಗಿ, ಮುರಕಟ್ನಾಳ, ತೋರಣಗಟ್ಟಿ, ಕಟಕೋಳ ಸೇರಿದಂತೆ ವಿವಿಧ 8 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಅವಕಾಶ
- ತಾಲೂಕಿಗೆ ರೂ. 40 ಕೋಟಿ ವೆಚ್ಚದಲ್ಲಿ ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ, ರೂ. 9 ಕೋಟಿ ವೆಚ್ಚದಲ್ಲಿ ಮಲಪ್ರಭಾ ನದಿಗೆ ಗೊಣ್ಣಾಗರ ಗ್ರಾಮದಲ್ಲಿ ತಡೆಗೋಡೆ, ರೂ. 40 ಕೋಟಿ ವೆಚ್ಚದ 100 ಹಾಸಿಗೆಯ ಮಲ್ಟಿಸ್ಪೇಶಾಲಿಟಿ ಆಸ್ಪತ್ರೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಾಗರಿಗಳಿಗೆ ಬಜೆಟ್‌ನಲ್ಲಿ ಅನುದಾನಕ್ಕೆ ಅನುಮೋದನೆ

ರಾಮದುರ್ಗ: ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ 17ನೇ ಬಜೆಟ್‌ನಲ್ಲಿ ರಾಮದುರ್ಗ ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 164 ಕೋಟಿ ಅನುದಾನ ನೀಡಿದ್ದಾರೆ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಭಾನುವಾರ ಗೃಹ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೂ. 30 ಕೋಟಿ ಅನುದಾನವನ್ನು ರಾಮದುರ್ಗ ನಗರದಲ್ಲಿ ಸುಸಜ್ಜಿತ ಹೊಸ ಬಸ್‌ನಿಲ್ದಾಣ ನಿರ್ಮಾಣಕ್ಕೆ ಅನುಮತಿ ನೀಡಿದರೆ ರೂ. 85 ಕೋಟಿ ವೆಚ್ಚದಲ್ಲಿ ಮಲಪ್ರಭಾ ನದಿಯಿಂದ ತಾಲೂಕಿನ ಚಂದರಗಿ, ಮುರಕಟ್ನಾಳ, ತೋರಣಗಟ್ಟಿ, ಕಟಕೋಳ ಸೇರಿದಂತೆ ವಿವಿಧ 8 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಅವಕಾಶ ನೀಡಿದ್ದರಿಂದ ಜನ ಜಾನುವಾರಗಳಿಗೆ ಕುಡಿಯುವ ನೀರು ಹಾಗೂ ಅಂತರಜಲ ಹೆಚ್ಚಿಸುವ ಮೂಲಕ ನೀರಾವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ತಾಲೂಕಿಗೆ ರೂ. 40 ಕೋಟಿ ವೆಚ್ಚದಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಮಾದರಿಯಲ್ಲಿ ಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆ ಮಂಜೂರಾಗಿದೆ. ರೂ. 9 ಕೋಟಿ ವೆಚ್ಚದಲ್ಲಿ ಮಲಪ್ರಭಾ ನದಿಗೆ ಗೊಣ್ಣಾಗರ ಗ್ರಾಮದ ಅಗತ್ಯವಿರುವ ಸ್ಥಳದಲ್ಲಿ ತಡೆಗೋಡೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನುಮೋದನೆ ನೀಡಿದ್ದಾರೆ ಎಂದು ಹೇಳಿದರು.

ಕಳೆದ ಬಜೆಟ್‌ನಲ್ಲಿ ಅನುಮೋದಿತಗೊಂಡ ರೂ. 40 ಕೋಟಿ ವೆಚ್ಚದ 100 ಹಾಸಿಗೆಯ ಮಲ್ಟಿಸ್ಪೇಶಾಲಿಟಿ ಆಸ್ಪತ್ರೆಯ ಕಾಮಗಾರಿ ಆರಂಭವಾಗಿದೆ ಮತ್ತು ರಾಮದುರ್ಗ ನಗರದಲ್ಲಿ ರೂ. 20 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನ ರೂ. 50 ಕೋಟಿ ವೆಚ್ಚದಲ್ಲಿ ರೂ.37 ಕೋಟಿ ಅನುದಾನವನ್ನು ಪ್ರಮುಖ ರಸ್ತೆಗಳ ಸುಧಾರಣೆಗೆ ಹಂಚಿಕೆ ಮಾಡಲಾಗಿದೆ ಮತ್ತು ರೂ. 13 ಕೋಟಿ ಅನುದಾನವನ್ನು ರೈತರ ಜಮೀನುಗಳ ಅಭಿವೃದ್ಧಿಗೆ ಹಂಚಿಕೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಅಶೋಕ ಪಟ್ಟಣ ತಿಳಿಸಿದರು.

ಸಾಲಾಪೂರ ಮತ್ತು ಮುದೇನೂರದಲ್ಲಿ 110 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆಗೆ ತಲಾ ರೂ. 25 ಕೋಟಿ ಮಂಜೂರಾಗಿದೆ ಶೀಘ್ರದಲ್ಲಿ ಕೆಲಸ ಪ್ರಾರಂಭಿಸಲಾಗುವುದು ಮತ್ತು ರೂ. 350 ಕೋಟಿ ಅನುದಾನದ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿ ಗುತ್ತಿಗೆದಾರರ ನಿರ್ಲಕ್ಷದಿಂದ ವಿಳಂಭವಾಗಿತ್ತು ಬೇರೆ ಗುತ್ತಿಗೆದಾರರ ನೇಮಕಕ್ಕೆ ಅವಕಾಶ ನೀಡಿದ್ದು ಬೇಗನೆ ಕೆಲಸ ಪ್ರಾರಂಭವಾಗುತ್ತದೆ ಎಂದು ಹೇಳಿದರಲ್ಲದೆ ಸಾಲಾಪೂರ ಬಸವೇಶ್ವರ ಏತ ನೀರಾವರಿ ಕಾಮಗಾರಿಯನ್ನು ಡಿಸೆಂಬರ್ ಒಳಗೆ ಪೂರ್ತಿಮಾಡಿ ನೀರು ಹರಿಸಲಾಗುವುದು ಎಂದು ಭರವಸೆ ನೀಡಿದರು.

ಮಲಪ್ರಭಾ ನದಿಗೆ ಹಂಪಿಹೋಳಿ ಹತ್ತಿರ ರೂ. 126 ಕೋಟಿ ವೆಚ್ಚದ ತಡೆಗೋಡೆ ನಿರ್ಮಾಣ ಕಾಮಗಾರಿ ಸಹಿತ ಸ್ಥಗಿತಗೊಂಡಿತ್ತು ಅದನ್ನು ಸಹ ಪುನಃ ಪ್ರಾರಂಭಿಸಲು ಕ್ರಮಕ್ಕೈಗೊಳ್ಳಲಾಗಿದೆ. ಅಲ್ಲದೆ ತಾಲೂಕಿನ ಕಡ್ಲಿಕೊಪ್ಪ, ರೇವಡಿಕೊಪ್ಪ, ಜಾಲಿಕಟ್ಟಿ, ಮುಳ್ಳೂರ ಗ್ರಾಮಗಳ ರೈತರ ಜಮೀನಿಗೆ ನೀರಾವರಿ ಸೌಲಭ್ಯಕ್ಕೆ ಶಿರಸಂಗಿ ಹಂಚುಕಾಲುವೆ ಕಾಮಗಾರಿಗೆ ರೂ.94 ಕೋಟಿ ಅನುದಾನದ ಕಾಮಗಾರಿಗೆ ಪ್ರಸ್ತಾವಣೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ತಾಲೂಕಾ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಜಿ. ಬಿ. ರಂಗನಗೌಡ್ರ, ಪುರಸಭೆ ಅಧ್ಯಕ್ಷಸುರೇಶ ಪತ್ತೇಪೂರ, ಪ್ರದೀಪ ಪಟ್ಟಣ, ಪ್ರವೀಣ ನಿಜಗುಲಿ ಇದ್ದರು.

ನಾರಿ ಶಕ್ತಿಗೆ ನಮನ: ಅನ್ನಪೂರ್ಣ

ಮೂಡಲಗಿ: ಒಬ್ಬವ್ಯಕ್ತಿಯ ಜೀವನದಲ್ಲಿ ಮಹಿಳೆಯ ಪಾತ್ರ ತುಂಬಾ ದೊಡ್ಡದಿರುತ್ತದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ, ಮಗಳಾಗಿ ಬಾಳಿಗೆ ಬೆಳಕಾಗುತ್ತಾಳೆ. ವೈಯಕ್ತಿಕವಾಗಿ ಮನೆಯ ಅರ್ಧ ಜವಾಬ್ದಾರಿ ಹೊರುವ ಜೊತೆಗೆ ಒಬ್ಬ ಶಿಕ್ಷಕಿಯಾಗಿ, ಇಂಜಿನಿಯರ್ ಆಗಿ, ಪೈಲೆಟ್ ಆಗಿ ಕೂಡತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ ಎಂದು ಏಕ್ಸ್ ಮುನ್ಸಿಪಲ್ ಪದವಿ ಪೂರ್ವ ಕಾಲೇಜಿನ ಪ್ರಭಾರಿ ಪ್ರಾಚಾರ್ಯೆ ಅನ್ನಪೂರ್ಣ ಕುರಬೇಟ ಹೇಳಿದರು.

ಸಮೀಪದ ದತ್ತು ಗ್ರಾಮ ಬಳೋಬಾಳದಲ್ಲಿ, ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿರುವ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಭಾನುವಾರ ನಡೆದ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಶ್ರೇಷ್ಠ ಭಾರತ' ಎಂಬ ವಿಷಯದ ಉಪನ್ಯಾಸಕಾರ್ಯಕ್ರಮದಲ್ಲಿ ಮಾತನಾಡಿ, ಸಮಾಜದಕಟ್ಟುಪಾಡುಗಳಹೊರತಾಗಿಯೂ ಕೂಡ ಆಧುನಿಕ ದಿನಗಳಲ್ಲಿ ಆಕೆ ಸಾಧನೆಯ ಶಿಖರ ಮುಟ್ಟುತ್ತಿದ್ದಾಳೆ ಎಂದರು.

ಚೇತನ ಜೋಗನ್ನವರ ಮಾತನಾಡಿ, ವೈವಿಧ್ಯತೆಯಲ್ಲಿ ಏಕತೆ ಎನ್ನುವುದು ಭಾರತದ ಜೀವಾಳ. ನಮ್ಮ ದೇಶದಲ್ಲಿ ನೂರಾರು ಭಾಷೆಗಳು, ಸಾವಿರಾರು ಆಚಾರ-ವಿಚಾರಗಳು ಮತ್ತು ವೈವಿಧ್ಯಮಯ ಸಂಸ್ಕೃತಿಗಳಿವೆ. ನಾವು ಬೇರೆ ಪ್ರಾಂತ್ಯದಆಹಾರ, ಕಲೆಮತ್ತು ಭಾಷೆಯನ್ನು ಗೌರವಿಸಿದಾಗ ಮಾತ್ರ 'ಶ್ರೇಷ್ಠ ಭಾರತ' ನಿರ್ಮಾಣವಾಗಲು ಸಾಧ್ಯ. ನಾವೆಲ್ಲರೂ ಭಾರತೀಯರು, ಭಾರತವೇ ನಮ್ಮ ಹೆಮ್ಮೆ ಎಂದರು.

ಈಶ್ವರ ಬೆಳವಿ, ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಶಿಕ್ಷಕ ಈರಪ್ಪ ಕಳಸನ್ನವರ ಮಾತನಾಡಿದರು.

ಬಾಳವ್ವ ಕಂಕಣವಾಡಿ, ಶಾಂತಾ ಪಾಟೀಲ, ನೀಲವ್ವ ಹೆಬ್ಬಾಳ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಸಹ ಕಾರ್ಯಕ್ರಮಾಧಿಕಾರಿ ಡಿ.ಎಸ್. ಹುಗ್ಗಿ, ಮುಸ್ತಫಾಜಾಲಗಾರ, ಬಿ.ಸಿ.ಮಾಳಿ, ಬೋಧಕ ಬೋಧಕೇತರ ಸಿಬ್ಬಂದಿ, ಸ್ವಯಂಸೇವಕರು ಇದ್ದರು.

ಕು.ಸುಶ್ಮಿತಾ ಹೊರಟ್ಟಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಸೌಜನ್ಯ ಬಂಡ್ರೋಳ್ಳಿ, ಸಂಗಡಿಗರು ಎನ್‌ಎಸ್‌ಎಸ್ ಗೀತೆ ಹಾಡಿದರು. ಡಾ. ರಾಜಶ್ರೀ ತೋಟಗಿ ನಿರೂಪಿಸಿ, ವಿ.ವೈ. ಕಾಳೆ ಸ್ವಾಗತಿಸಿ, ಅಕ್ಷತಾ ಮೇದಾರ ವಂದಿಸಿದರು.



ರಂಜಾನ್ ಕಠಿಣ ಉಪವಾಸ ಕೈಗೊಂಡ ಜುಹೇರ

ಸಂಜೀವ ಮೊ.ಬ್ಯಾಕುಡೆ



ಕುಡಚಿ: ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ನಿವಾಸಿ ಪುಡಾರಿ ವರದಿಗಾರ ಖಾಲೀದ ಪೀರಜಾದೆ ಅವರ ಕಿರಿಯ ಮಗ ಜುಹೇರ ರಂಜಾನ್ ಉಪವಾಸ (ರೋಜಾ) ಮಾಡಿ ಭಕ್ತಿ ಪರಾಕಾಷ್ಟೆ ಮೆರೆದಿದ್ದಾನೆ.

ಮುಸ್ಲಿಂ ಸಮುದಾಯದ ಎರಡು ಅತಿ ದೊಡ್ಡ , ಪವಿತ್ರ ಹಬ್ಬಗಳಲ್ಲಿ ಒಂದಾದ ರಂಜಾನ್ ಮುಸ್ಲಿಂ ಬಾಂಧವರಲ್ಲಿ ಬಹಳ ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡುವ ಹಬ್ಬವಾಗಿದೆ. ಪ್ರಮುಖವಾಗಿ ಈ ರಂಜಾನ್ ಹಬ್ಬವು ಶಿವರಾತ್ರಿಯ ಎರಡು ದಿನದ ನಂತರದ ಚಂದ್ರನ ದರ್ಶನದ ಮೂಲಕ ಪ್ರಾರಂಭವಾಗುವ ಹಬ್ಬ ರಂಜಾನ್ ತಿಂಗಳಪರ್ಯಂತ ಉಪವಾಸ (ರೋಜಾ) ಮಾಡುವರು. ನಿತ್ಯ ಬೆಳಿಗ್ಗೆ 5.30ರ ಸುಮಾರಿಗೆ ಭೋಜನ ಮಾಡುವುದು (ಶಹರಿ) ಮೂಲಕ ಉಪವಾಸ (ರೋಜಾ) ಪ್ರಾರಂಭಿಸಿ ಸಂಜೆ 6.30ರ ಸುಮಾರಿಗೆ ಸಿಹಿ ಪದಾರ್ಥವನ್ನು ತಿಂದ ನಂತರ ಉಳಿದ ಉಪಹಾರ (ಇಫ್ತಿಯಾರ) ತಿನ್ನುವ ಮೂಲಕ ಉಪವಾಸ ಮುಗಿಸುವುದು.

ತಿಂಗಳ ಅಂತ್ಯದಲ್ಲಿ ಮತ್ತೆ ಚಂದ್ರನ ದರ್ಶನ ಪಡೆದುಕೊಂಡೆ ಮರುದಿನ ಹಬ್ಬವನ್ನು ಆಚರಿಸುವ ಸಂಪ್ರದಾಯ ಬೆಳೆದು ಬಂದಿದೆ.

ಮುಸ್ಲಿಂ ಧರ್ಮದಲ್ಲಿ ಮಕ್ಕಳಿಗೆ ಉಪವಾಸ ಕಡ್ಡಾಯವಲ್ಲದಿದ್ದರು ಹಿರಿಯರ ಮೇಲಿನ ಗೌರವ ಹಾಗೂ ಅವರ ಧರ್ಮದ ಮೇಲಿನ ಶ್ರದ್ಧಾ ಭಕ್ತಿಯಿಂದ ಪ್ರೇರಿತರಾಗಿ ಕೆಲ ಚಿಕ್ಕ ಮಕ್ಕಳು ದಿನ ಪೂರ್ತಿ ನೀರು ಕುಡಿಯದೆ ಕಠೋರ ಉಪವಾಸ (ರೋಜಾ) ಮಾಡುವರು.

ಕುಡಚಿ ಪಟ್ಟಣದ ನಿವಾಸಿ ಡಾ. ಮಹೆಬೂಬಪಾಶಾ ಪಿರಜಾದೆ ಅವರ ಮೊಮ್ಮಗ ಮತ್ತು ಹಾಜಿ ಖಾಲೀದ ಪಿರಜಾದೆ ಅವರ ಮಗನಾದ ಆರು ವರ್ಷದ ಮೊಹಮ್ಮದ್ ಜುಹೇರ್ ತನ್ನ ಮೊದಲ ಉಪವಾಸ ಆಚರಿಸಿದನು.

ಆ ಉಪವಾಸದ ಸಂತೋಷದಲ್ಲಿ ಜುಹೇರ ರಾತ್ರಿಯಿಡೀ ಸೆಹ್ರಿಗಾಗಿ ಕಾಯ್ದು ಮರುದಿನ ಬಹಳ ಉತ್ಸಾಹದಿಂದ ಬೆಳಿಗ್ಗೆ 5:15 ಕ್ಕೆ ಉಪವಾಸವನ್ನು ಪ್ರಾರಂಭಿಸಿ ಇಡೀ ದಿನ 13ಗಂಟೆ ಹಸಿವು ಮತ್ತು ಬಾಯಾರಿಕೆಯನ್ನು ಸಹಿಸಿಕೊಂಡು ಸವಾಲಿನ ಹೊರತಾಗಿಯೂ ಅಲ್ಲಾಹನಲ್ಲಿ ಪ್ರಾರ್ಥನೆ ಮಾಡುತ್ತ ಸಂಜೆ 6:45ಕ್ಕೆ ಉಪವಾಸ ಕೊನೆಗೊಳಿಸಿದನು.

ಈ ಸಮಯದಲ್ಲಿ ಡಾ. ಇಮ್ರಾನ್ ನೀಡಿದ್ದಾರೆ, ಇರ್ಫಾನ್ ಪಿರಜಾದೆ, ಇಕ್ರಮ್ ಪಿರಜಾದೆ, ನಿಜಾಮ್ ಚಮನ್‌ಶೇಖ, ಡಾ. ಅಜೀಜ್ ಬದನಕರಿ ಮತ್ತು ಕುಟುಂಬದ ಎಲ್ಲಾ ಸದಸ್ಯರು ಜುಹೇರನಿಗಾಗಿ ಪ್ರಾರ್ಥಿಸಿದರು.

ಕಬ್ಬು ನುರಿಸುವ ಸಾಮರ್ಥ್ಯ ಹೆಚ್ಚಳಕ್ಕೆ ಆದ್ಯತೆ: ರಾಜೇಂದ್ರ ಪಾಟೀಲ



ಹುಕ್ಕೇರಿ: ಮುಂಬರುವ ಹಂಗಾಮಿನಲ್ಲಿ ಹೆಚ್ಚು ಕಬ್ಬು ನುರಿಸುವ ಸಾಮರ್ಥ್ಯವನ್ನು 5 ಸಾವಿರ ಟಿಸಿಡಿ ಸಾಮರ್ಥ್ಯ ಹೆಚ್ಚಿಸಲಾಗುವುದು ಎಂದು ಸಂಗಮ ಸಕ್ಕರೆ ಕಾರ್ಖಾನೆ ಅಧ್ಯಕ್ಷ ರಾಜೇಂದ್ರ ಪಾಟೀಲ ಹೇಳಿದರು.

ತಾಲೂಕಿನ ಸಂಗಮ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಖಾನೆ ಅಧಿಕಾರಿಗಳು , ಆಡಳಿತ ಮಂಡಳಿಯವರ ಸಭೆಯಲ್ಲಿ ಮಾತನಾಡಿದರು.

ಕಾರ್ಖಾನೆ ಅತಿ ಹೆಚ್ಚು ಕಬ್ಬು ನುರಿಸಲಾಗಿದೆ. ಕಳೆದ ಹಂಗಾವಿನಲ್ಲಿ 2500 ಟಿಸಿಡಿ ಸಾಮರ್ಥ್ಯದವಿದ್ದು ಇದನ್ನು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರ ಮಾರ್ಗದರ್ಶನದಲ್ಲಿ 5 ಸಾವಿರ ಡಿಸಿಡಿ ಸಮಾರ್ಥ್ಯಕೆ ಹೆಚ್ಚಿಸಲಾಗಿದೆ ಸಹ ವಿದ್ಯುತ್ ಘಟಕದ 8 ಮೇಗಾ ವ್ಯಾಟ್ ನಿಂದ 14 ಮೇಗಾ ವ್ಯಾಟ್ ಹೆಚ್ಚಿಸಲು, ಕಾರ್ಖಾನೆಯಲ್ಲಿ ಹೊಸದಾಗಿ ಏಥಿನಾಲ್ ಘಟಕ ಪ್ರಾರಂಭಿಸಲು ನಿರ್ಧರಿಸಲಾಗಿದೆ. ಈಗಾಲೇ ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗಿದ್ದು ಟೆಂಟರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಈ ಯೋಜನೆಗೆ ಅವಶ್ಯವಿರುವ ಹಣಕಾಸಿನ ವ್ಯವಸ್ಥೆಯನ್ನು ಸಮೂಹ ಬ್ಯಾಂಕಗಳಿಂದ ಆರ್ಥಿಕಸಹಾಯ ಪಡೆಯಲು ತಿರ್ಮಾನಿಸಲಾಗಿದೆ. ಆಡಳಿತ ಮಂಡಳಿಯರ ಸಕಾಲಕ್ಕೆ ಸಲಹೆಸಹಕಾರದೊಂದಿಗೆ ರೈತರು, ಪ್ರಸಕ್ತ ಹಂಗಾಮಿನಲ್ಲಿ ಕಬ್ಬು ಪೂರೈಸಿದಕ್ಕಾಗಿ ಹಾಗೂ ಕಾರ್ಖಾನೆ ಸುಸುಜ್ಜಿತವಾಗಿ ಕಾರ್ಖಾನೆ ಕಾರ್ಯನಿರ್ವಸಿದೆ ಎಂದರು. ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮಾತನಾಡಿ, ಸಂಗಮ ಸಕ್ಕರೆ ಕಾರ್ಖಾನೆ ರೈತರು ಹಲವಾರು ವರ್ಷಗಳ ಪ್ರೀತಿ ಇದೆ, ರೈತರು ಕಬ್ಬು ಸಾಗಾಣಿಕೆ ಮಾಡಿ ಸಹಕಾರ ನೀಡುತ್ತಿರುವುದು ಹೆಮ್ಮೆ ಎನ್ನಿಸುತ್ತಿದೆ. ಕಾರ್ಖಾನೆಗೆ ಅವಶ್ಯವಿರುವ ಆರ್ಥಿಕ ಸಹಾಯದ ಜೊತೆಗೆ ಸಲಹೆ ಸಹಕಾರ ನೀಡಲಾವುದು ಎಂದರು. ಕಾರ್ಖಾನೆ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದ್ಸ್ಯರು ವ್ಯವಸ್ಥಾಪಕ ನಿರ್ದೇಶಕರು, ಸಿಬ್ಬಂದಿ ಇದ್ದರು.

ಹೈನುಗಾರರಿಗೆ ಪ್ರೋತ್ಸಾಹ ಧನ ವಿತರಣೆ: ರೈತರಿಂದ ಸಂಭ್ರಮಾಚರಣೆ



ತೆಲಸಂಗ: ಹೈನುಗಾರಿಕೆ ಇಂದು ಕೃಷಿಯ ಉಪಕಸುಬಾಗಿ ಉಳಿಯದೆ, ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದೆ ಎಂದು ಡಾ.ಬಿ.ಎಸ್. ಕಾಮನ್ ಹೇಳಿದರು.

ಕೆಎಂಎಫ್ ವತಿಯಿಂದ ಸಬ್ಸಿಡಿ ದರದಲ್ಲಿ ಜಾನುವಾರುಗಳಿಗೆ ರಬ್ಬರ್ ಮ್ಯಾಟ್‌ಗಳನ್ನು ವಿತರಿಸಿ ಮಾತನಾಡಿ, ಕೆಎಂಎಫ್ ಸಂಸ್ಥೆಯು ರೈತರ ಹಿತರಕ್ಷಣೆಗಾಗಿ ಸದಾ ಶ್ರಮಿಸುತ್ತಿದೆ. ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನವನ್ನು ರೈತರು ಸದುಪಯೋಗಪಡಿಸಿಕೊಂಡು, ವೈಜ್ಞಾನಿಕ ಹೈನುಗಾರಿಕೆಗೆ ಒತ್ತು ನೀಡಬೇಕು. ರೈತರು ಕೇವಲ ಹಾಲು ಉತ್ಪಾದನೆಗೆ ಸೀಮಿತವಾಗದೆ, ಕೆಎಂಎಫ್ ಮೂಲಕ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಜಾಗೃತರಾಗಬೇಕು. ಹಸುಗಳ ಆರೋಗ್ಯ ಕಾಪಾಡಲು ಸಬ್ಸಿಡಿ ದರದಲ್ಲಿ ನೀಡಲಾಗುವ ಮ್ಯಾಟ್‌ಗಳು ಬಹಳ ಸಹಕಾರಿ ಎಂದರು.

ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ವತಿಯಿಂದ ರೈತರಿಗೆ ಪ್ರತಿ ಲೀಟರ್ ಹಾಲಿಗೆ ಸರ್ಕಾರದ ವತಿಯಿಂದ ಬರಬೇಕಿದ್ದ ಪ್ರೋತ್ಸಾಹ ಧನ ಬಿಡುಗಡೆಯಾದ ಹಿನ್ನೆಲೆಯಲ್ಲಿ, ಗ್ರಾಮದ ಹೈನುಗಾರರು ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಿದರು.

ಗುರುರಾಜ ಕುಂಬಾರ ಮಾತನಾಡಿ, ಸಹಕಾರಿ ಸಂಘಗಳು ಬಲಗೊಂಡಾಗ ಮಾತ್ರ ಗ್ರಾಮದ ಅಭಿವೃದ್ಧಿ ಸಾಧ್ಯ ಎಂದರು.

ಶಿವಾನಂದ ಹತ್ತಿ, ಮುತ್ತುರಾಜ ಕೋಳಿ, ಸಂಜೀವ ಪಾಯಪ್ಪಗೋಳ, ಚೆನ್ನಪ್ಪ ಸೇಘವಿ, ಲಕ್ಷ್ಮಣ ಪಾಟೀಲ, ಪ್ರಕಾಶ ಮೋರೆ, ಸೈಬಣ್ಣ ಸನಗೊಂಡ, ಉಮೇಶ ಸನಗೊಂಡ, ಣ್ಣಪ್ಪಾ ಕುಮತಳ್ಳಿ, ಪಿಂಟು ಜಾದವ, ಸಂಘದ ಪದಾಧಿಕಾರಿಗಳು, ರೈತರು ಇದ್ದರು.

ಜೋಡೆತ್ತಿನ ಕೃಷಿ ರೂಢಿಸಿಕೊಳ್ಳಿ: ಶ್ರೀಗಳು



ಅಥಣಿ: ಇಂದಿನ ಯಾಂತ್ರಿಕ ಬದುಕಿನಲ್ಲಿ ಜೋಡೆತ್ತಿನ ಕೃಷಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಇದರಿಂದ ಫಲವತ್ತಾದ ಭೂಮಿ ಸತ್ವವನ್ನು ಕಳೆದುಕೊಳ್ಳುತ್ತಿದೆ. ಆರೋಗ್ಯವಂತ ಸಮಾಜಕ್ಕಾಗಿ ಜೋಡೆತ್ತಿನ ಕೃಷಿ ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಯಡೂರ ವೀರಭದ್ರೇಶ್ವರ ದೇವಸ್ಥಾನದಿಂದ ಶ್ರೀಶೈಲದವರಿಗೆ ಜೋಡೆತ್ತಿನ ಮಹತ್ವ ಸಾರುವ ನಂದೀರಥ ಯಾತ್ರೆಗೆ ಸ್ವಾಗತ ಸಮಾರಂಭದಲ್ಲಿ ಮಾತನಾಡಿ, ಶ್ರೀಶೈಲ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಸಿದ್ದೇಶ್ವರ ಸ್ವಾಮೀಜಿಯವರ ಪ್ರೇರಣೆಯಿಂದ ಸೋಮಲಿಂಗ ಅಜ್ಜನವರ ಹಾಗೂ ಬಸವರಾಜ ಬಿರಾದಾರ ನೇತೃತ್ವದಲ್ಲಿ ನಡೆಯುತ್ತಿರುವ ಈ ನಂದಿ ರಥಯಾತ್ರೆಯೂ ಯಶಸ್ವಿಯಾಗಿ ಸಾಗಲಿ. ಅಲ್ಲಲ್ಲಿ ರೈತ ಸಮಾವೇಶಗಳನ್ನು ನಡೆಸುವ ಮೂಲಕ ನಮ್ಮ ರೈತರಿಗೆ ಜೋಡೆತ್ತಿನ ಕೃಷಿ ಮಹತ್ವ, ಗೋ ಸಂಪತ್ತು ಉಳಿಸಿ ಬೆಳೆಸುವ ಜನಜಾಗ್ರತಿ ಅಭಿಯಾನ ಸಂಕಲ್ಪ ಮಾಡಿರುವುದು ಅತ್ಯಂತ ಶ್ಲಾಘನೀಯ ಎಂದರು. ಹಿರಿಯ ನ್ಯಾಯವಾದಿ ಬಿ.ಎಲ್. ಪಾಟೀಲ, ಪುರಸಭೆಯ ಅಧ್ಯಕ್ಷ ಶಿವಲೀಲಾ ಸದಾಶಿವ ಬೂಟಾಳಿ, ನಂದಿರಥ ಯಾತ್ರೆ ಅಭಿಯಾನದ ರೂವಾರಿ ಬಸವರಾಜ ಬಿರಾದಾರ ಮಾತನಾಡಿದರು.

ಈ ವೇಳೆ ಶೆಟ್ಟರ ಮಠದ ಮರುಳುಸಿದ್ದ ಸ್ವಾಮೀಜಿ, ಬಿಜೆಪಿ ಮುಖಂಡ ಸಂಪತ್ ಕುಮಾರಶೆಟ್ಟಿ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎ. ಎ. ಹುದ್ದಾರ, ರೈತ ಮುಖಂಡರಾದ ಗಿರೀಶ್ ಬುಟಾಳಿ, ಶಿವಾನಂದ ದಿವಾನಮಳ, ಮಹದೇವ ಮಡಿವಾಳ, ಸದಾಶಿವ ಬುಟಾಳಿ, ಪ್ರಶಾಂತ ತೋಡ್ಕರ, ಮುರುಗೇಶ ಬಾನೆ, ನ್ಯಾಯವಾದಿ ಸುಭಾಷ ನಾಯಕ, ಎಸ್.ಎಸ್.ಪಾಟೀಲ, ಅಶೋಕ ಐಗಳಿ, ಸಿದ್ದು ಪಾಟೀಲ, ಮಲ್ಲಿಕಾರ್ಜುನ ಅಂದಾನಿ, ಮಲ್ಲಪ್ಪಾ ಹಂಚಿನಾಳ,ಶಿವಾನಂದ ಐಗಳಿ, ಡಾ. ಪ್ರಕಾಶ್ ಕುಮಟಳ್ಳಿ, ಡಾ. ಮಹೇಶ್ ಕಾಪಸೆ, ಅಣ್ಣಾಸಾಬ ತೆಲಸಂಗ, ಉದಯ ಮಾಕಾಣಿ, ಸಿದ್ದು ಹಂಡಗಿ, ಜಗನ್ನಾಥ ಬಾಮನಿ, ಸೌರಭ ಮಾಶ್ಯಾಳ ಉಪಸ್ಥಿತರಿದ್ದರು.

ನಂದಿ ರಥಯಾತ್ರೆ

ಅಥಣಿ ಪಟ್ಟಣದಲ್ಲಿ ಜರುಗಿದ ನಂದಿ ರಥಯಾತ್ರೆ ಅಭಿಯಾನದಲ್ಲಿ ಸು. 50ಕ್ಕೂ ಅಧಿಕ ಜೋಡೆತ್ತಿನ ಬಂಡಿಗಳು ಸರದಿ ಸಾಲಿನಲ್ಲಿ ಭಾಗವಹಿಸಿದ್ದವು. ಮೆರವಣಿಗೆ ಉದ್ದಕ್ಕೂ ಜೋಡೆತ್ತಿನ ಕೃಷಿಕರಿಗೆ ಜಯವಾಗಲಿ, ನಂದಿ ರಥ ಯಾತ್ರೆಗೆ ಜಯವಾಗಲಿ, ನಾವೆಲ್ಲರೂ ನಂದಿ ಸೇನಾನಿಗಳು, ಜೈಜವಾನ್ ಜೈ ಕಿಸಾನ್, ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಸಾವಯುವ ಕೃಷಿ, ನಮ್ಮೆಲ್ಲರ ಬದುಕು ಖುಷಿ, ನಂದಿ ಸೇನೆ ಉಳಿಸಿ ಸದೃಢ ದೇಶ ಬೆಳೆಸಿ ಎಂಬ ಘೋಷಣೆಗಳು ಪ್ರತಿಧ್ವನಿಸಿದವು.

ವಿರಾಟ ಹಿಂದು ಸಮಾಜೋತ್ಸವ ಇಂದು

ಸುರೇಬಾನ: ಸುರೇಬಾನ-ಹೋಬಳಿ ಮಟ್ಟದ ವಿರಾಟ ಹಿಂದು ಸಮಾಜ್ಯೋತ್ಸವ ಕಾರ್ಯಕ್ರಮ ಮಾ.9ರಂದು ಶ್ರೀ ಮಾರುತೇಶ್ವರ ತೇರಿನ ಬಯಲು, ಮನಿಹಾಳ-ಸುರೇಬಾನ ನಡೆಯಲಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಜಿ ಹಿರೇಮಠ ಮುಳ್ಳೂರ, ಶಿವಮೂರ್ತಿ ಶ್ರೀಗಳು, ಫಲಾಹಾರೇಶ್ವರ ಸಂಸ್ಥಾನ ಮಠ, ಅವರಾದಿ, ಕೃಷ್ಣಾನಂದ ಶ್ರೀಗಳು, ಪೂರ್ಣಾನಂದ ಮಠ ಲಖನಾಯ್ಕನಕೊಪ್ಪ, ಶಂಕ್ರಯ್ಯ ಶ್ರೀಗಳು, ಹಿರೇಮಠ ಮನಿಹಾಳ, ಅವದೇಶದಾಸ ಮಹಾರಾಜ ಶ್ರೀರಾಮ ಮಂದಿರ, ಶಬರಿ ಆಶ್ರಮ ಸುರೇಬಾನ. ಅಧ್ಯಕ್ಷತೆಯನ್ನು ಸಮರ್ಥ ಶಿವಾನಂದ ಶ್ರೀಗಳು, ಗುರುದೇವ ಆತ್ಮಾನಂದ ಪುಣ್ಯಾಶ್ರಮ ಮನಿಹಾಳ, ಸುರೇಬಾನ, ರೇವಡಿಕೊಪ್ಪ,



ದಿಕ್ಸೂಚಿ ಭಾಷಣ ಸಂಜಯ ಅಡಿಕೆ ಬೆಳಗಾವಿ ವಿಭಾಗ ಕಾರ್ಯವಾಹರು, ರಾ. ಸ್ವ. ಸಂಘ, ಚಿಕ್ಕೋಡಿ, ಶಿವಾನಂದ ಬಡಿಗೇರ ಹಿಂದೂ ಜಾಗರಣೆ ವೇದಿಕೆ ಮಾತೃ ಸುರಕ್ಷಾ ಪ್ರಾಂತ ಪ್ರಮುಖರು, ಮುಧೋಳ ಉಪಸ್ಥಿತರಿರುವರು. ಸೋಮವಾರ ಬೆಳಿಗ್ಗೆ 10ಕ್ಕೆ ಸುರೇಬಾನ ಉಪ ಮಾರುಕಟ್ಟೆ ರೇವಡಿಕೊಪ್ಪದಿಂದ ಬೈಕ್ ರ್‍ಯಾಲಿ ನಡೆಯಲಿದೆ.

ಮಧ್ಯಾನ್ಹ 3ಕ್ಕೆ ಗುರುದೇವ ಆತ್ಮಾನಂದ ಗೆಳೆಯರ ಬಳಗದಿಂದ ಶೋಭಾಯಾತ್ರೆ ಹೊರಡುತ್ತದೆ. ಸಂಜೆ 5ಕ್ಕೆ ಮಾರುತೇಶ್ವರ ತೇರಿನ ಮೈದಾನದಲ್ಲಿ ಕಾರ್ಯಕ್ರಮ ಪ್ರಾರಂಭವಾಗಲಿದೆ ಎಂದು ಸಂಘಟಿಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀರ್ಘದಂಡ ನಮಸ್ಕಾರದಿಂದ ಶ್ರೀಶೈಲಕ್ಕೆ ಯಾತ್ರೆ



ಅಡಹಳ್ಳಿ: ಭಕ್ತಿಯ ದಾರಿಯಲ್ಲಿ ನಡೆದರೇ ಬದುಕಿಗೆ ಸನ್ಮಾರ್ಗದ ಶಕ್ತಿ ಲಭಿಸುವುದು ಎನ್ನುವ ಭ್ದರ ನಂಬಿಕೆ. ಈ ನಂಬಿಕೆಯಿಂದಲೇ ಸುಮಾರು 600 ಕಿ.ಮೀ. ದೂರದ ವರೆಗೆ ದೀರ್ಘದಂಡ ನಮಸ್ಕಾರ ಹಾಕುತ್ತಾ ತಮ್ಮ ಸ್ವಗ್ರಾಮದಿಂದ ಶ್ರೀಶೈಲ ಮಲ್ಲಿಕಾರ್ಜುನ ದೇವರ ದರ್ಶನಕ್ಕೆ ಯುವಕರು ಹೊರಟಿದ್ದಾರೆ.

ಅಥಣಿ ಅಡಹಳ್ಳಿ ಗ್ರಾಮದ ರಾಮು ಬಿಜ್ಜರಗಿ ಎಂಬುವವರೇ ಶ್ರೀಶೈಲಕ್ಕೆ ದೀರ್ಘದಂಡ ನಮಸ್ಕಾರ ಹಾಕುತ್ತಾ ಹೊರಟಿದ್ದಾರೆ. ಫೆಬ್ರವರಿ 15 ರಂದು ಮಹಾಶಿವರಾತ್ರಿ ದಿದಂದು ಅಡಹಳ್ಳಿ ಗ್ರಾಮದಿಂದ ದೀರ್ಘದಂಡ ನಮಸ್ಕಾರ ಹಾಕುತ್ತಾ ಹೊರಟಿರುತ್ತಾರೆ. ಈಗ ಆಂದ್ರಪ್ರದೇಶದ ಗಡಿಯವರೆಗೆ ಹೋಗಿದ್ದಾರೆ.

600 ಕಿಮೀ ದಾರಿ: ಅಡಹಳ್ಳಿ ಗ್ರಾಮದಿಂದ ಶ್ರೀಶೈಲ 600 ಕಿ.ಮೀ ದೂರದ ಅಂತರವಿದೆ. ಅಡಹಳ್ಳಿ, ತೆಲಸಂಗ, ತಿಕ್ಕೋಟಾ, ಮನಗೂಳಿ, ಬಸವನ ಬಾಗೇವಾಡಿ, ತಾಳಿಕೋಟೆ, ದೇವದುರ್ಗ, ರಾಯಚೂರು, ಮಂತ್ರಾಲಯ, ಕರ್ನೂಲ್ ಮಾರ್ಗವಾಗಿ 25 ದಿನಗಳವರೆಗೆ ದೀರ್ಘದಂಡ ನಮಸ್ಕಾರ ಹಾಕುತ್ತಾ ಯುಗಾದಿಯ ದಿನದಂದು ಶ್ರೀಶೈಲ ತಲುಪಲಿದ್ದಾರೆ. ಪಾದಯಾತ್ರೆಯ ಮೂಲಕ ನಡೆಯುದೇ ಕಷ್ಟವಾಗುತ್ತದೆ ಅದರಲ್ಲಿಯೂ ದೀರ್ಘದಂಡನಮಸ್ಕಾರಹಾಕುವುದೆಂದರೆ ಕಷ್ಟವೇ ಸರಿ.

ದೈವ ಭಕ್ತಿಗೆ ಕೊನೆ ಹಾಗೂ ಬೆಲೆ ಕಟ್ಟಲಾಗುವುದಿಲ್ಲ. ತನ್ನ ಆರಾಧ್ಯ ದೇವರನ್ನು ಕಂಡು ದರ್ಶನ ಪಡೆಯುವ ಹಂಬಲವು ಭಕ್ತರಲ್ಲಿ ಹುದುಗಿರುತ್ತದೆ. ಅಂತಹ ಭಕ್ತರಲ್ಲಿ ಅಪರೂಪದ ಶ್ರೀಶೈಲ ಮಲ್ಲಿಕಾರ್ಜುನ ದೇವರ ಭಕ್ತರಾಗಿದ್ದಾರೆ ರಾಮು ಬಿಜ್ಜರಗಿಯವರು ಎಂದು ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರಿಗಳು ತಿಳಿಸಿದ್ದಾರೆ.

> **ಪ್ರತಿ ವರ್ಷವು ನಾನು ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ವಾಹನದಲ್ಲಿ ಹೋಗುತ್ತಿದ್ದೆ. ಆದರೆ ಈ ಸಲ ದೀರ್ಘದಂಡ ನಮಸ್ಕಾರ ಹಾಕುತ್ತಾ ಹೋಗಬೇಕೆಂದು ನಿರ್ಧರಿಸಿ ಈಗಾಗಲೇ 300 ಕಿಮೀ. ದೂರವೇ ಬಂದಿರುತ್ತೇನೆ ಯುಗಾದಿಯ ದಿನದಂದು ಶ್ರೀ ಮಲ್ಲಿಕಾರ್ಜುನ ದೇವರ ದರ್ಶನ ಪಡೆಯುತ್ತೇವೆ. ತಮಗೆ ಯಾವುದೇ ತೊಂದರೆಯಾಗಿರುವುದಿಲ್ಲ. ಎಲ್ಲವೂ ದೇವರ ಕೃಪೆಯಿಂದ ಮುಂದೆ ಸಾಗುತ್ತಿದ್ದೇವೆ.**
>
> ■ ರಾಮು ಬಿಜ್ಜರಗಿ, ಪಾದಯಾತ್ರೆ, ಭಕ್ತ ಅಡಹಳ್ಳಿ.

ಕಿರುಸುದ್ದಿ

ವಿದ್ಯಾರ್ಥಿನಿಗೆ ಸೋಲಾರ್ ದೀಪ ವಿತರಣೆ

ಕೆರೂರ: ಪಟ್ಟಣದ ಮೌಲಾ ಅಜ್ಜನ ದರ್ಗಾ ಹತ್ತಿರ ವಿದ್ಯುತ್ ಇಲ್ಲದೆ ತಗಡಿನ ಮನೆಯಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಶನಿವಾರ ಶಾಸಕ ಬಿ.ಬಿ. ಚಿಮ್ಮನಕಟ್ಟಿ ಅಭಿಮಾನಿ ಬಳಗದವರು ಸೋಲಾರ್ ದೀಪ ವಿತರಿಸಿದರು.

ಪಟ್ಟಣದ ನಿವಾಸಿ ಹನಮಂತ ಕುಟುಂಬವು ಸ್ವಂತ ಮನೆ ಹಾಗೂ ವಿದ್ಯುತ್ ಇಲ್ಲದೆ ದರ್ಗಾ ಹತ್ತಿರ ವಾಸಿಸುತ್ತಿದ್ದಾರೆ. ಕುಟುಂಬದಲ್ಲಿ ಓರ್ವ ವಿದ್ಯಾರ್ಥಿನಿ ಪಿಯುಸಿ ಪರೀಕ್ಷೆ ಬರೆಯುತ್ತಿರುವುದನ್ನು ಗಮನಿಸಿದ ಚಿಮ್ಮನಕಟ್ಟಿ ಅಭಿಮಾನಿ ಬಳಗದವರು, ಕುಟುಂಬಕ್ಕೆ ಹಾಗೂ ವಿದ್ಯಾರ್ಥಿನಿಯ ಪರೀಕ್ಷೆಗೆ ತೊಂದರೆಯಾಗದಂತೆ ಸೋಲಾರ್ ದೀಪ ವಿತರಿಸಿದರು.

ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ ಮಾತನಾಡಿ, ವಿದ್ಯಾರ್ಥಿನಿಯ ಭವಿಷ್ಯದ ಹಿತದೃಷ್ಟಿಯಿಂದ ಸೋಲಾರ ದೀಪವನ್ನು ವಿತರಿಸಲಾಗಿದೆ. ಚೆನ್ನಾಗಿ ಓದಿ, ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಇತರೆ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಪರಸಪ್ಪಜ್ಜ ಚೂರಿ, ನಾಗಪ್ಪ ಚೂರಿ, ಯೂತ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಚೂರಿ, ಸತೀಶ ಕ್ಷತ್ರಿ, ಮಂಜುನಾಥ ತಿಮ್ಮಾಪೂರ, ರಾಜು ಚೋರಗಸ್ತಿ, ಯಮನೂರ ವಡ್ಡರ, ಶ್ರೀಧರ ಕಾಂಬಳೆ, ಮಾಂತೇಶ ಅಂಬಿಗೇರ, ಹನಮಂತ ದಾಸರ, ಪಾಂಡು ಮುದಕವಿ ಇದ್ದರು.

ಮಾ.11ರಿಂದ ಶ್ರೀಶೈಲದಲ್ಲಿ ನಿರಂತರ ಅನ್ನದಾಸೋಹ

ಮಹಾಲಿಂಗಪುರ: ಮಹಾಲಿಂಗಪುರದ ಶ್ರೀಶೈಲ ಮಲ್ಲಿಕಾರ್ಜುನ ಅನ್ನದಾಸೋಹ ಸೇವಾ ಸಮಿತಿ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಮಾ.13ರ ಶುಕ್ರವಾರದಿಂದ ಮಾ.19ರ ಯುಗಾದಿ ಪಾಡ್ಯದವರೆಗೆ ನಿರಂತರ 7 ದಿನ ಶ್ರೀಶೈಲದಲ್ಲಿ ಅನ್ನ ದಾಸೋಹ ನೆರವೇರಿಸಲು ಮಾರ್ಚ್ 11ರ ಬುಧವಾರ ಹಿಟ್ಟಕ್ಕಿ ವಾಹನದೊಂದಿಗೆ ಶ್ರೀಶೈಲಕ್ಕೆ ತೆರಳುವುದಾಗಿ ತಿಳಿಸಿರುವ ಶ್ರೀಶೈಲ ಮಲ್ಲಿಕಾರ್ಜುನ ಅನ್ನದಾಸೋಹ ಸಮಿತಿ, ಹಿಟ್ಟಕ್ಕಿ ನೀಡಬಯಸುವ ಸದ್ಭಕ್ತರು ಮಾ.11ರ ಬುಧವಾರ ಮಧ್ಯಾಹ್ನ 12 ಗಂಟೆ ಒಳಗಾಗಿ ಹಿಟ್ಟಕ್ಕಿ ಮತ್ತು ಅನ್ನದಾಸೋಹ ಸಲಕರಣೆಗಳನ್ನು ನೀಡಬಹುದು ಎಂದು ತಿಳಿಸಿದ್ದಾರೆ.

ಮಾ.12ರಂದು ಕೆಲವಡಿ ಶ್ರೀ ಲಕ್ಷ್ಮೀ ರಂಗನಾಥ ರಥೋತ್ಸವ



ಗುಳೇದಗುಡ್ಡ: ತಾಲೂಕಿನ ಕೆಲವಡಿ ಗ್ರಾಮದ ಶ್ರೀ ಲಕ್ಷ್ಮೀರಂಗನಾಥ ದೇವಸ್ಥಾನದ ಶ್ರೀ ಲಕ್ಷ್ಮೀರಂಗನಾಥ ದೇವರ ರಥೋತ್ಸವ ಮಾ. 12ರಂದು ನಡೆಯಲಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ಕಳಸದ ಮೆರವಣಿಗೆ, ಸಂಜೆ 5 ಗಂಟೆಗೆ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿಯ ಮಹಾರಥೋತ್ಸವ ನಡೆಯಲಿದೆ. ರಾತ್ರಿ 10 ಗಂಟೆಗೆ ಮನರಂಜನಾ ಕಾರ್ಯಕ್ರಮ ನಡೆಯುವುದು. ಜಾತ್ರೋತ್ಸವದ ಅಂಗವಾಗಿ ಮಾ.13ರಂದು ಸಂಜೆ 4 ಗಂಟೆಗೆ ಜಂಗೀ ಕುಸ್ತಿ ಪಂದ್ಯಗಳು ಹಾಗೂ ರಾತ್ರಿ ಕಡುಬಿನ ಕಾಳಗ ನಡೆಯಲಿದೆ. ಇದಕ್ಕೂ ಮೊದಲು ಮಾ. 11ರಂದು ಸಮೀಪದ ಲಿಂಗಾಪೂರ ಗ್ರಾಮದಲ್ಲಿ ಕನಕರಾಯನ ಜಾತ್ರೆ ನಡೆಯಲಿದೆ.

ಮಲ್ಲಿಕಾರ್ಜುನ ಮುದಕವಿಗೆ ಪ್ರಶಸ್ತಿ ಪ್ರದಾನ



ಲೋಕಾಪುರ: ಡಾ. ವ್ಹಿ.ಬಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನ ಹಾಗೂ ಅಶ್ವಿನಿ ಪ್ರಕಾಶನ ಗದಗ, ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿಗಳವರ 112 ನೇ ಜಯಂತ್ಯುತ್ಸವ ಪ್ರಯುಕ್ತ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಹಾಗೂ ಶ್ರೀಗಳಿಗೆ ತುಲಾಭಾರ ಸಮಾರಂಭದಲ್ಲಿ ಸಮೀಪದ ದಾದನಟ್ಟಿ ಗ್ರಾಮದ ಪ್ರವಚನಕಾರರು, ರಾಜ್ಯೋತ್ಸವ, ಜಾನಪದ ಹಾಗೂ ಯಕ್ಷಗಾನ ಬೈಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಲ್ಲಿಕಾರ್ಜುನ ರಾಚಪ್ಪ ಮುದಕವಿ ಅವರಿಗೆ ಶ್ರೀಗುರು ಪುಟ್ಟರಾಜ ಗವಾಯಿಗಳವರ ಸದ್ಭಾವನ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಡಾ. ವ್ಹಿ.ಬಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನ ಹಾಗೂ ಅಶ್ವಿನಿ ಪ್ರಕಾಶನ ಅಧ್ಯಕ್ಷೆ ಡಾ. ವ್ಹಿ.ವ್ಹಿ. ಹಿರೇಮಠ, ಡಾ. ಶ್ರೀ ಕಲ್ಲಯ್ಯಜ್ಜನವರು, ಪಾರಿಜಾತ ಕಲಾವಿದ ನಾರಾಯಣ ಪತ್ತಾರ, ಪ್ರತಿಷ್ಠಾನ ಪದಾಧಿಕಾರಿಗಳು, ಕಲಾವಿದರು ಇದ್ದರು.



ಕೆರೂರ: ಪಟ್ಟಣದ ಮೌಲಾ ಅಜ್ಜನ ದರ್ಗಾ ಹತ್ತಿರ ವಿದ್ಯುತ್ ಇಲ್ಲದೆ ತಗಡಿನ ಮನೆಯಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಶನಿವಾರ ಶಾಸಕ ಬಿ.ಬಿ. ಚಿಮ್ಮನಕಟ್ಟಿ ಅಭಿಮಾನಿ ಬಳಗದವರು ಸೋಲಾರ್ ದೀಪ ವಿತರಿಸಿದರು. ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ಕಾಂಗ್ರೆಸ್ ಮುಖಂಡರಾದ ಪರಸಪ್ಪಜ್ಜ ಚೂರಿ, ನಾಗಪ್ಪ ಚೂರಿ, ಯೂತ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಚೂರಿ, ಸತೀಶ ಕ್ಷತ್ರಿ, ಮಂಜುನಾಥ ತಿಮ್ಮಾಪೂರ, ರಾಜು ಚೋರಗಸ್ತಿ, ಯಮನೂರ ವಡ್ಡರ, ಶ್ರೀಧರ ಕಾಂಬಳೆ, ಮಾಂತೇಶ ಅಂಬಿಗೇರ, ಹನಮಂತ ದಾಸರ, ಪಾಂಡು ಮುದಕವಿ ಇದ್ದರು.

ಒಳಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಜಮಖಂಡಿ: ನಗರದ ಲಕ್ಷ್ಮೀನಗರ ಬಡಾವಣೆಯ ಹನುಮಾನ ಮಂದಿರದ ಹತ್ತಿರ ಜಿಲ್ಲಾ ನಗರಾಭಿವೃದ್ಧಿಕೋಶ ಹಾಗೂ ನಗರ ಸಭೆಯ ಸಹಯೋಗದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ 4 ರ ಅಡಿಯಲ್ಲಿ 94.99 ಲಕ್ಷರೂ.ಗಳ ಅನುದಾನದಲ್ಲಿ ವಾರ್ಡ್ ನಂ 2.30,29.31 ರಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸರ್ಕಾರದಿಂದ ಹಂತ ಹಂತವಾಗಿ ಬಂದ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ಇನ್ನೂ ಅನೇಕ ಅನುದಾನವು ಬರಬೇಕಿದೆ ಅವುಗಳ ಬಂದ ನಂತರ ಮತ್ತೇ ಕಾಮಗಾರಿಯು ಪ್ರಾಂಭವಾಗುತ್ತದೆ. ನಗರದ ಸರ್ವಾಂಗೀಣ ಅಭಿವೃದ್ಧಿಯತ್ತ ಶ್ರಮ ವಹಿಸುತ್ತೇವೆ ಎಂದು ಹೇಳಿದರು.

ಪೌರಾಯುಕ್ತರಾದ ಜ್ಯೋತಿ ಗಿರೀಶ, ನಗರ ಮಂಡಳ ಅಧ್ಯಕ್ಷ ಅಜಯ ಕಡಪಟ್ಟಿ, ರಾಜು ಚಿಕನಾಳ, ಶ್ರೀಧರ ಕಂಬಿ, ಶಂಕರ ಕಾಳೆ, ಕೃಷ್ಣಾ ತಳವಾರ, ಸಂತೋಷ ಮಾನೆ, ಪ್ರದೀಪ ಶಿಂಗಾರಿ, ಕೃಷ್ಣಾ ಗವಳಿ, ಎ.ಬಿ.ಕುಂಬಾರ, ಜಿ.ವೈ. ಜೈನಾಪೂರ, ಪರಶುರಾಮ ಗೋರೆ, ಆರ್.ಎಸ್.ಚಿಕನಾಳ, ಸಿದ್ದು ಮೀಸಿ, ಆರ್.ಕೆ. ರಾಠೋಡ, ಸಂತೋಷ ಹುಲಕುಂದ, ಅಶೋಕ ಮಾಲೋಜಿ, ಬಕ್ಕರ ಅಪರಾದ, ಕಿರಣ ಪಾವಸೆ, ಮಹಾನಂದಾ ಪಾಯಗೊಂಡ, ಜಾಕೀರ್ ಹವಾಲದಾರ, ಸಲೀಮ ಕೊರತಿ, ಎಸ್.ಎಂ.ಪಾಟೀಲ, ಆನಂದ ಹೊಸಕೋಟಿ ಇನ್ನಿತರರಿದ್ದರು.



ಜಮಖಂಡಿ: ನಗರದ ಲಕ್ಷ್ಮೀನಗರ ಬಡಾವಣೆಯ ಹನುಮಾನ ಮಂದಿರದ ಹತ್ತಿರ ಜಿಲ್ಲಾ ನಗರಾಭಿವೃದ್ಧಿಕೋಶ ಹಾಗೂ ನಗರ ಸಭೆಯ ಸಹಯೋಗದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ 4 ರ ಅಡಿಯಲ್ಲಿ 94.99 ಲಕ್ಷರೂ.ಗಳ ಅನುದಾನದಲ್ಲಿ ವಾರ್ಡ್ ನಂ 2.30,29.31 ರಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿಪೂಜೆ ನೆರವೇರಿಸಿದರು.

ಹೊಯ್ಸಳ, ಕೆಳದಿ ಚನ್ನಮ್ಮ ಪ್ರಶಸ್ತಿ ಪಡೆದವರಿಗೆ ಸನ್ಮಾನ
ಮಹಿಳೆ ಸಬಲರಾದರೆ, ಕುಟುಂಬ, ಸಮಾಜ ಸಬಲ

ಬಾಗಲಕೋಟೆ: ಮಹಿಳೆ ಸಬಲರಾದಾಗ ಮಾತ್ರ ಕುಟುಂಬ ಮತ್ತು ಸಮಾಜವೂ ಸಹ ಸಬಲವಾಗುತ್ತದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಸಹಭಾಗಿತ್ವ ಇಲಾಖೆಗಳ ಸಹಯೋಗದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆ ಮಾನಸಿಕವಾಗಿ ಕುಗ್ಗದೇ ದೃಢಸಂಕಲ್ಪ ಹೊಂದಿ, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು ಎಂದರು.

ಅಂತಾ ರಾಷ್ಟ್ರೀಯ ಮಹಿಳಾ ದಿನಾಚರಣೆ

ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಸಾಕಷ್ಟು ಯೋಜನೆ ಗಳನ್ನು ಹಾಕಿ ಕೊಂಡಿದೆ. ಗ್ಯಾರಂಟಿ ಯೋಜನೆಗಳ ಮೂಲಕ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮೀ ಯೋಜನೆಯಡಿ ತಿಂಗಳಿಗೆ 2 ಸಾವಿರ ರೂ. ಹಾಗೂ ಸ್ವಾವಲಂಬಿ ಜೀವನಕ್ಕೆ ಅಕ್ಕಪಡೆ ಸೇರಿದಂತೆ ಅನೇಕ ಯೋಜನೆಗಳು ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನುಕೂಲವಾಗಿವೆ. ಒಂದು ಕಾಲದಲ್ಲಿ ಮಹಿಳೆ ತನ್ನ ತವರು ಮನೆಗೆ ಹೋಗಬೇಕೆಂದರೆ ದುಡ್ಡು ಇರುತ್ತಿರಲಿಲ್ಲ. ಉಚಿತ ಬಸ್ ಪ್ರಯಾಣದಿಂದ ಸಾಧ್ಯವಾಗಿದೆ ಎಂದು ತಿಳಿಸಿದರು.

ವಿಪ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಗಂಡು ಮತ್ತು ಹೆಣ್ಣು ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ಇವರಿಬ್ಬರೂ ಸಮಾನರಾಗಿದ್ದಾಗ ಮಾತ್ರ ಬದುಕು ಸಾಗಿಸಲು ಸಾಧ್ಯವಾಗುತ್ತದೆ. ಹೆಣ್ಣು ಗೌರವದ ಪ್ರತೀಕವಾಗಿದ್ದು, ಹೆಣ್ಣನ್ನು ಭಾರತ ಮಾತೆಗೆ ಹೋಲಿಸುತ್ತಾರೆ. ಎಲ್ಲ ಮಹಿಳೆಯರಿಗೆ ಸ್ಥಾನಮಾನ ಇಲ್ಲವೋ ಅಲ್ಲಿ ಅಭಿವೃದ್ಧಿ ಕುಂಟಿತಗೊಂಡಿರುತ್ತದೆ. ಮಹಿಳೆಯರಿಗೆ ಸಮಾನ ಅವಕಾಶ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಒದಗಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯವೆಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಮಹಿಳೆ ಎಂದರೆ ಒಂದು ವ್ಯಕ್ತಿ ಮಾತ್ರವಲ್ಲ, ಕುಟುಂಬದ ಬೆಳವಣಿಗೆಗೂ, ಸಮಾಜದ ಅಭಿವೃದ್ಧಿಗೂ ಮಹಿಳೆಯರ ಪಾತ್ರ ಅತೀ ಮಹತ್ವರವಾಗಿದೆ. ಇಂದು ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಮಕ್ಕಳಿಗೆ ಶಿಕ್ಷಣ ಮುಖ್ಯವಾಗಿರಬೇಕು ಅಂದಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಿಳೆಯರಿಗೆ ಸಮಾನವಾದ ಅವಕಾಶ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಒದಗಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಮಹಿಳೆಯರ ಹಕ್ಕು ಮತ್ತು ಸಮಾನತೆ ಬಗ್ಗೆ ಬೆಳಕು ಚೆಲ್ಲಬೇಕಿದೆ. ಮಹಿಳೆಯರ ಗೌರವ ಮತ್ತು ಸಮಾನತೆ ಕಾಪಾಡುವ ಸಮಾಜ ನಿರ್ಮಾಣವಾಗಲಿ ಎಂದು ಆಶಿಸುತ್ತೇನೆ ಎಂದರು. ನವನಗರದ ಮಹಿಳಾ ಪೊಲೀಸ್ ಠಾಣೆಯ ಡಿಎಸ್‌ಪಿ ಗಿರೀಶ ಭೋಜನ್ನವರ ಕೃಷಿ ವಿಜ್ಞಾನ ಕೇಂದ್ರದ ತಜ್ಞೆ ಡಾ.ರಮೀತ ಬಿ. ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಯೋಜನಾ ನಿರ್ದೇಶಕ ಮಂಜುನಾಥ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ ಉಪಸ್ಥಿತರಿದ್ದರು.



ಪ್ರಶಸ್ತಿ ವಿಜೇತರಿಗೆ ಸನ್ಮಾನ
ಜಿಲ್ಲಾ ಮಟ್ಟದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಪಡೆದ ಸಂಗಮೇಶ ತೋಳಮಟ್ಟಿ, ನಂದಿನಿ ಲಮಾಣಿ (ಕ್ರೀಡೆ-ಸೈಕ್ಲಿಂಗ್) ಅನಘಾ ಪಾಟೀಲ (ಕಲೆ-ಸಂಗೀತ), ಚಿದಾನಂದ ಜವಳಗಿ (ನಾವಿನ್ಯತೆ) ಇವರನ್ನು ಸನ್ಮಾನಿಸಲಾಯಿತು.

ಶಾಲಾ ಉನ್ನತಿಗೆ ಸಂಘಟಿತ ಪ್ರಯತ್ನ ಇರಲಿ

ಮಕ್ಕಳ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮ

ಹುನಗುಂದ: ಶತಮಾನ ಕಂಡ ನಗರದ ಕೇಂದ್ರ ಶಾಲೆ ಮೊದಲಿನ ವೈಭವ ಕಾಣಬೇಕು. ಇದಕ್ಕೆ ಇಲ್ಲಿನ ಗುರುವೃಂದ, ಇಲಾಖೆ ಮತ್ತು ಹಳೆಯ ವಿದ್ಯಾರ್ಥಿಗಳು ಸಂಘಟಿತವಾಗಿ ಕಾರ್ಯ ಮಾಡಬೇಕು ಎಂದು ಪ್ರೌಢಶಾಲೆ ನಿವೃತ್ತ ಮುಖ್ಯಾಧ್ಯಾಪಕ ಎಂ.ಬಿ. ಗಂಜಿಹಾಳ ಹೇಳಿದರು.

ನಗರದ ಕೇಂದ್ರ ಶಾಲೆಯಲ್ಲಿ ಶನಿವಾರ ನಡೆದ ಮಕ್ಕಳ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 80ರ ದಶಕದಲ್ಲಿ ತಮಗೆ ಕಲಿಸಿದ ಎಲ್ಲ ಗುರುಗಳನ್ನು ಸ್ಮರಿಸಿದರು.

ಮುಖ್ಯಾಧ್ಯಾಪಕ ಕೆ.ವಾಯ್. ಮಡಿವಾಳರ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತರಾದ ಎಸ್.ಜಿ.ಕಡಿವಾಲ, ಎಸ್.ಕೆ. ಕೊನೆಸಾಗರ, ಸಿದ್ದಲಿಂಗಪ್ಪ ಬೀಳಗಿ, ಜಿ.ಕೆ.ದೇವಶೆಟ್ಟಿ, ವಾಯ್. ಎಸ್. ಮನ್ನಾಪುರ, ಸಂಗಣ್ಣ ನಾಗೂರ, ಬಿ.ವಾಯ್. ಹೊಸಗೌಡರ, ಎಸ್.ಎಸ್. ತೋಟಗೇರ ಆರ್. ಎಸ್.ಪಂಚಾಳ ಮುಂತಾದವರನ್ನು ಸತ್ಕರಿಸಲಾಯಿತು. ಶಿಕ್ಷಣ ಸಂಯೋಜಕ ಎಂ.ಎಚ್. ಮೂಲಿಮನಿ, ಜಾಧವ ಮತ್ತು ಸಿಆರ್ ಪಿ ಬಿ.ಎಚ್. ಮುಂಡೇವಾಡಿ, ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ಸರಸ್ವತಿ ಮಸ್ಕಿ ಹಾಗೂ ಸದಸ್ಯರಾದ ಮಲ್ಲಪ್ಪ ಶೇಬಣ್ಣವರ, ಬಂದೆನವಾಜ ಬೀಳಗಿ, ಮಹಾಂತೇಶ ಶೆಟ್ಟರ, ಸಂಗು ಹುನ್ನಳ್ಳಿ, ಶೇಖಣ್ಣ ಕಡಪಟ್ಟಿ, ನಾಗರತ್ನ ಕುರಿ, ಆಶಾ ನದಾಫ್ ಮತ್ತು ಮುತ್ತಣ್ಣ ತೊಂಡಿಹಾಳ ಉಪಸ್ಥಿತರಿದ್ದರು. ನೌಕರರ ಸಂಘದ ಅಧ್ಯಕ್ಷ ಸಂಗಮೇಶ ಪಾಟೀಲ ಮತ್ತು ಶಿಕ್ಷಕ ಸಂಘದ ಅಧ್ಯಕ್ಷ ಎಂ.ಟಿ. ನಡುವಿನಮನಿ ಅತಿಥಿಗಳಾಗಿದ್ದರು. ಎಸ್.ಎಸ್. ಗಂಗಾಧರಮಠ ಸ್ವಾಗತಿಸಿದರು. ಆರ್.ಆಯ್.ಗಾಡಿವಾನ ನಿರೂಪಿಸಿದರು. ಚೆನ್ನಮ್ಮ ಕುಟಕಮರಿ ವಂದಿಸಿದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.



ಪುಸ್ತಕಗಳ ಬಿಡುಗಡೆ: ಅವಲೋಕನ ಕಾರ್ಯಕ್ರಮ

ಬಾದಾಮಿ: ಕೋವಿಡ್ ಸಂದರ್ಭದಲ್ಲಿನ ಕಾರ್ಮಿಕರು ಮತ್ತು ಇತರರು ಅನುಭವಿಸಿದ ಚಿತ್ರಣಗಳನ್ನು ಕವಯಿತ್ರಿ ಶೀಲಾ ಗೌಡರ ಮಹಾಯಾನ ಕಾದಂಬರಿಯಲ್ಲಿ ಚೆನ್ನಾಗಿ ದಾಖಲಿಸಿದ್ದಾರೆ ಎಂದು ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಲಲಿತಾ ಹೊಸಪ್ಯಾಟಿ ಹೇಳಿದರು.

ಅವರು ಭಾನುವಾರ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಕಾಲೇಜು ರಸ್ತೆಯ ಶ್ರೀ ಶಿವಯೋಗಮಂದಿರದ ಶಾಖಾಮಠದಲ್ಲಿ ತಾಲೂಕಿನ ಹೆಬ್ಬಳ್ಳಿ ಗ್ರಾಮದ ಸರಕಾರಿ ಪ್ರೌಢಶಾಲೆಯ ಸಹಶಿಕ್ಷಕಿ ಶೀಲಾ ಶಿವಾನಂದ ಗೌಡರ ಇವರ ಮಹಾಯಾನ ಕಾದಂಬರಿ ಮತ್ತು ಅವ್ಯಕ್ತ ಕಥಾಸಂಕಲನ ಪುಸ್ತಕಗಳ ಬಿಡುಗಡೆ ಹಾಗೂ ಅವಲೋಕನ ಕಾರ್ಯಕ್ರಮವನ್ನು ಅನಾವರಣ ಮಾಡಿ ಮಾತನಾಡಿದರು.

ಮೊದಲ ಬಾರಿಗೆ ಕಾದಂಬರಿ ಬರೆದಿರುವ ಶೀಲಾ ಗೌಡರ ಬರುವ ದಿನಮಾನಗಳಲ್ಲಿ ಉತ್ತಮ ಕಾದಂಬರಿ, ಕವಯಿತ್ರಿಯಾಗಿ ಹೊರಹೊಮ್ಮುತ್ತಾರೆ ಎಂದು ಹೇಳಿದ ಅವರು ಮಹಾಯಾನ ಕಾದಂಬರಿ ಮತ್ತು ಅವ್ಯಕ್ತ ಕಥಾಸಂಕಲನದಲ್ಲಿ ಮೂಡಿಬಂದಿರುವ ಪ್ರಮುಖ ಸನ್ನಿವೇಶಗಳನ್ನು ಉತ್ತಮವಾಗಿ ವಿವರಿಸಿದರು.

ಬೆಂಗಳೂರಿನ ಖ್ಯಾತ ಸಾಹಿತಿ ಡಾ. ರಾಜಶೇಖರ ಮಠಪತಿ (ರಾಗಂ) ಅವಲೋಕನ ಮಾಡಿ ಮಾತನಾಡಿ, ಕೋವಿಡ್ ಸಂದರ್ಭದಲ್ಲಿನ ಸನ್ನಿವೇಶದಲ್ಲಿ ಮನುಷ್ಯ ಮನುಷ್ಯತ್ವ ಬಿಟ್ಟು ಬದುಕಿದನು. ಒಬ್ಬರನ್ನೊಬ್ಬರು ಮುಟ್ಟಿಸಿಕೊಳ್ಳಲಾರದ, ಭೇಟಿಯಾಗದ, ಸ್ಥಿತಿ ನೋಡಿ ಬಹಳ ನೋವನ್ನು ವ್ಯಕ್ತಪಡಿಸಿದರು. ಅವ್ಯಕ್ತ ದಲ್ಲಿ ಬರುವ 12 ಕಥೆಗಳನ್ನು ಎಳೆಎಳೆಯಾಗಿ ಬಿಡಿಸಿ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸಹಶಿಕ್ಷಕಿ, ಲೇಖಕಿ ಶೀಲಾ ಶಿವಾನಂದ ಗೌಡರ, ತಾಲೂಕಾ ಕಸಾಪ ಅಧ್ಯಕ್ಷ ಬಿ.ಎಫ್. ಹೊರಕೇರಿ ಉಪಸ್ಥಿತರಿದ್ದರು. ಇಷ್ಟಲಿಂಗ ಶಿರಶಿ ಸ್ವಾಗತಿಸಿದರು. ಉಜ್ವಲ ಬಸರಿ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಕವಿಗಳು, ಹಿರಿಯರು, ಸಾಹಿತ್ಯಾಸಕ್ತರು, ಮಹಿಳೆಯರು ಭಾಗವಹಿಸಿದ್ದರು.





ಗಲಗಲಿ: ಸಮೀಪದ ಹೊಸೂರು ಗ್ರಾಮದ ಅಂಕುರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ಅಂಕುರ ಪರಿವಾರದಿಂದ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು. ಶಾಲೆಯ ಮುಖ್ಯ ಗುರುಮಾತೆ ಸುಮೇಧಾ ಓಂಕಾರ, ಮುಖ್ಯ ಅತಿಥಿಗಳಾಗಿ ಮೇಘಾ ಜಾಧವ, ಅಂಜನಾ ಬಾರಡ್ಡಿ, ಸುಜಾತಾ ಕೋರಡ್ಡಿ, ಸವಿತಾ ಕೋರಡ್ಡಿ, ಶೋಭಾ ಪಾಟೀಲ ಹಾಗೂ ಶಿಕ್ಷಕರು ಇದ್ದರು.

ಜನಸಂಪರ್ಕ ಕಾರ್ಯಾಲಯ ಉದ್ಘಾಟನೆ



ರಬಕವಿ-ಬನಹಟ್ಟಿ: ಇಲ್ಲಿನ ನಗರಸಭಾ ಕಾರ್ಯಾಲಯದಲ್ಲಿ ನೂತನವಾಗಿ ರಬಕವಿ-ಬನಹಟ್ಟಿ-ರಾಂಪುರ-ಹೊಸೂರ ಸಾರ್ವಜನಿಕರ ಕುಂದು ಕೊರತೆ ವಿಚಾರಿಸಲು ಜನ ಸಂಪರ್ಕ ಕಾರ್ಯಾಲಯವನ್ನು ತೇರದಾಳ ಶಾಸಕ ಸಿದ್ದು ಸವದಿ ಉದ್ಘಾಟಿಸಿದರು.

ಈಚೆಗೆ ನಗರಸಭೆಯಲ್ಲಿ ಉದ್ಘಾಟನೆಗೊಳಿಸಿ ಮಾತನಾಡಿದ ಅವರು, ಪ್ರತಿ ಸೋಮವಾರ ಮತ್ತು ಗುರುವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೂ ಸಾರ್ವಜನಿಕರ ಏನೇ ಸಮಸ್ಯೆಗಳಿದ್ದರೂ ನಗರಸಭಾ ಕಾರ್ಯಾಲಯಕ್ಕೆ ಬಂದು ನಿಮ್ಮ ದೂರನ್ನು ಸಲ್ಲಿಸಿಯೆಂದರು. ಸಮಸ್ಯೆಗಳೇನೇಯಿದ್ದರೂ ಅಲ್ಲೇ ಬಗೆಹರಿಸುವ ಕೆಲಸ ನಾವು ಮಾಡುತ್ತೇವೆ ಎಲ್ಲಾ ಸಾರ್ವಜನಿಕರು ಇದರ ಲಾಭವನ್ನು ಪಡೆದುಕೊಳ್ಳಿ ಎಂದು ಶಾಸಕ ಸಿದ್ದು ಸವದಿ ಹೇಳಿದರು. ನಗರಸಭಾ ಮಾಜಿ ಅಧ್ಯಕ್ಷರುಗಳಾದ ಶ್ರೀಶೈಲ ಬೀಳಗಿ, ಸಂಜಯ ತೆಗ್ಗಿ, ಅರುಣ ಬುದ್ನಿ, ಪ್ರವೀಣ ದಭಾಡಿ, ಯಲ್ಲಪ್ಪ ಕಟಗಿ, ಮಲ್ಲು ಹೋಳಗಿ, ರವಿ ಕೊರತೆ ಸೇರಿದಂತೆ ಅನೇಕರಿದ್ದರು.

ಶಾಲಾ ವಿದ್ಯಾರ್ಥಿಗಳಿಂದ ವ್ಯಾಪಾರ ಮಳಿಗೆ


ಮಹಾಲಿಂಗಪುರ: ಶನಿವಾರ ಬೆಳಗ್ಗೆಯೇ ಶಾಲೆಯ ಆವರಣದಲ್ಲಿ ಬಿಸಿಬಿಸಿ ಇಡ್ಲಿ, ವಡಾ, ಬಜಿ, ಪಾನಿಪೂರಿ, ಗುಲಾಬ್ ಜಾಮೂನು ಮತ್ತು ಸ್ಟೇಷನರಿ, ಅಲಂಕಾರಿಕ ವಸ್ತುಗಳ ಮಾರಾಟ ಮಳಿಗೆಗಳು ತಲೆಯೆತ್ತಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ತಿಂಡಿ ತಿನ್ನುವುದರಲ್ಲಿ, ಎಳನೀರು ಮಜ್ಜಿಗೆ ಕುಡಿಯುವುದರಲ್ಲಿ, ಬಜಿ ಜಾಮೂನು ಸವಿಯುದರಲ್ಲಿ ಬಿಜಿಯಾಗಿದ್ದು ಕಂಡುಬಂತು.

ಸಮೀಪದ ಮದಭಾವಿಯ ಸರ್ಕಾರಿ ಪ್ರೌಢಶಾಲೆಯ ಆವರಣ ದಲ್ಲಿ ಹಮ್ಮಿಕೊಂಡಿದ್ದ ವೃತ್ತಿ ಮಾರ್ಗ ದರ್ಶನ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳಾದ ಭಾಗ್ಯಶ್ರೀ ಜ್ಯೋತೆಪ್ಪನವರ, ದೀಪಾ ಸಂಗಾನಟ್ಟಿ, ಪಲ್ಲವಿ ಬಿಳಿಕುರಿ, ಸೃಷ್ಟಿ ವಗ್ಗರ, ಸಂತೋಷ ಉಳ್ಳಾಗಡ್ಡಿ, ಸಾಗರ ಒಂಟಿ, ಪವನ ಪಾಟೀಲ, ರೋಹಿತ ಚಿಂಚಖಂಡಿ, ಶ್ರವಣ ಬೆಳಕೂಡ, ಪ್ರಜ್ವಲ ಮಂಟೂರ, ಸಪ್ನಾ ಮೇಟಿ, ನೌಶಾದ್ ನದಾಫ್, ಆನಂದ ಸುತಾರ, ನರೇಂದ್ರ ಚಿಕ್ಕೋಡಿ, ಐಶ್ವರ್ಯ ಸುತಾರ, ಲಾವಣ್ಯ ಡುಮ್ಮಣ್ಣವರ, ಸೌಂದರ್ಯ ತೇಲಿ, ಲಕ್ಷ್ಮಿ ಕಬ್ಬೂರ ಮುಂತಾದವರು ತಾವೇ ತಯಾರಿಸಿದ ಖಾದ್ಯಗಳ ಅಂಗಡಿಗಳನ್ನು ತೆರೆದು ಭರಪೂರ ವ್ಯಾಪಾರ ಮಾಡಿ ಭರ್ಜರಿ ಆದಾಯ ಗಳಿಸಿ ಖುಷಿ ಹಂಚಿಕೊಂಡರು.

ಗಂಗೋತ್ರಿ ಬ್ಯೂಟಿ ಪಾರ್ಲರ್‌ನ ವತಿಯಿಂದ ವಿದ್ಯಾರ್ಥಿನಿಯರಿಗೆ ತರಬೇತಿ ನೀಡಲಾಯಿತು. ಪತ್ರಕರ್ತ ನಾರಾಯಣಗೌಡ ಉತ್ತಂಗಿ, ಉದ್ಯಮಿ ಶ್ರೀನಾಥ ಹಲಗಿಗೌಡರ, ರಸೂಲ್ ಸಿರಗುಪ್ಪಿ ಮಕ್ಕಳಿಗೆ ವೃತ್ತಿ ಮಾರ್ಗದರ್ಶನದ ಉಪನ್ಯಾಸ ನೀಡಿದರು. ಎಸ್ ಡಿಎಂಸಿ ಅಧ್ಯಕ್ಷ ಸದಾಶಿವ ಪಟ್ಟಣಶೆಟ್ಟಿ, ಉಪಾಧ್ಯಕ್ಷ ನಾರಾಯಣ ಸುತಾರ, ಮುಖ್ಯೋಪಾಧ್ಯಾಯ ಐ.ಜಿ. ಯರಗಾಣಿ, ಮುಖಂಡರಾದ ವಿನೋದಗೌಡ ಉಳ್ಳಾಗಡ್ಡಿ, ಸುಭಾಷ್ ತಿಮ್ಮಾಪುರ, ಮಲ್ಲಪ್ಪ ಉರಬಿನ್ನವರ, ಸಂಗಪ್ಪ ವಡರಟ್ಟಿ, ಸಂಜು ಮಾಳಿ, ಸದಾಶಿವ ಕೋಳೆಕಾರ, ಮುತ್ತಪ್ಪ ವಗ್ಗರ, ಸತ್ಯಪ್ಪ ಮುಧೋಳ ಸದಾಶಿವ ಮ. ಪಟ್ಟಣಶೆಟ್ಟಿ ಎಸ್.ಎಸ್.ಮಾಳಿ ಇತರರಿದ್ದರು.



ಜಿಲ್ಲಾ ಯುವ ಮೋರ್ಚಾ ನೂತನ ಅಧ್ಯಕ್ಷ ವಿದ್ಯಾಧರ ಸವದಿಗೆ ಸನ್ಮಾನ



ಮಹಾಲಿಂಗಪುರ: ಶಾಸಕ ಸಿದ್ದು ಸವದಿ ಅವರ ಪುತ್ರ ವಿದ್ಯಾಧರ ಸವದಿ ಅವರು ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾಗಿ ಆಯ್ಕೆಯಾದ ಪ್ರಯುಕ್ತ ಬೆಳಗಲಿ ಪಪಂ ಮಾಜಿ ಅಧ್ಯಕ್ಷ ಸಿದ್ದುಗೌಡ ಪಾಟೀಲ ಅವರ ನಿವಾಸದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಭಾಜಪ ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಮುಖಂಡರಾದ ಶಿವನಗೌಡ ಪಾಟೀಲ, ಪಂಡಿತ ಪೂಜಾರಿ, ಚಿಕ್ಕಪ್ಪ ನಾಯಕ, ಮಹಾಲಿಂಗ ಪುರಾಣಿಕ, ಭಾಜಪ ಯುವ ಮೋರ್ಚಾ ನಗರ ಘಟಕದ ಅಧ್ಯಕ್ಷ ಮಲ್ಲು ದಲಾಲ, ಉಪಾಧ್ಯಕ್ಷ ಜಗದೀಶ ಜಕ್ಕನ್ನವರ, ಪ್ರವೀಣ ಭರಮನಿ, ಸಂಜು ಬಾರುಕೋಲು, ಹನಮಂತ ಶಿರೋಳ, ಸಂಗನಗೌಡ ಪಾಟೀಲ, ಸತ್ಯಪ್ಪ ಸಿದ್ದಾಪುರ, ಸದಾಶಿವ ಸಂಕ್ರಟ್ಟಿ ಇತರರಿದ್ದರು.

ಶಿವಾಜಿ ಮಹಾರಾಜರ ಜಯಂತ್ಯುತ್ಸವ

ಕಮತಗಿ: ಪಟ್ಟಣದ ವಿಶ್ವ ಹಿಂದು ಪರಿಷತ್ ಭಜರಂಗದಳ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಿದರು.

ಈ ಸಮಾರಂಭದಲ್ಲಿ ಹಿರೇಮಠ ಕಮತಗಿ ಶ್ರೀ ಷ.ಬ್ರ 108 ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಷ.ಬ್ರ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಅಮರೇಶ್ವರ ಮಠ ಗುಳೇದಗುಡ್ಡ, ಕೋಟೆಕಲ್, ತೋಗುಣಸಿ, ನಿವೃತ್ತ ವೈದ್ಯಾಧಿಕಾರಿಗಳು ಚಂದ್ರಕಾಂತ ಪರಪ್ಪ ರಕ್ಕಸಗಿ ಅಧ್ಯಕ್ಷತೆ ವಹಿಸಿದ್ದರು. ಉತ್ತರ ಪ್ರಾಂತ ಸಹ ಕಾರ್ಯದರ್ಶಿಗಳು ವಿಶ್ವ ಹಿಂದು ಪರಿಷದ್ ಪುಂಡಲೀಕ ದಳವಾಯಿ ಮುಖ್ಯ ವಕ್ತಾರರಾಗಿ ಆಗಮಿಸಿದ್ದರು.

ಮಧ್ಯಾಹ್ನ 2ಕ್ಕೆ ಶ್ರೀ ಶಹರ ಗಜಾನನ ವೇದಿಕೆಯಿಂದ ಶೋಭಾಯಾತ್ರೆ ಪ್ರಾರಂಭವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಈ ಸಮಾರಂಭದಲ್ಲಿ ವಿಶ್ವ ಹಿಂದು ಪರಿಷತ್ ಭಜರಂಗದಳ ಕಮತಗಿ ಎಲ್ಲ ಪದಾಧಿಕಾರಿಗಳು, ಪಟ್ಟಣದ ಎಲ್ಲ ಹಿಂದೂ ಸಮಾಜದ ಮುಖಂಡರು ಭಾಗವಹಿಸಿದ್ದರು. ಯಾವುದೇ ರೀತಿ ಅಹಿಕರ ಘಟನೆ ನಡೆದಂತೆ ಪೊಲೀಸ್ ಸಿಬ್ಬಂದಿಯವರು ಬಿಗಿ ಬಂದೋಬಸ್ತ್ ಮಾಡಿದ್ದರು.



ಇಂದು ವಿವಿಕೆ ಫೌಂಡೇಶನ್‌ದಿಂದ ಸ್ತ್ರೀ ಸಂಭ್ರಮ: ಕಾಶಪ್ಪನವರ



ಬಾಗಲಕೋಟೆ: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವೀಣಾ ವಿ.ಕಾಶಪ್ಪನವರ ಫೌಂಡೇಶನ್ (ವಿವಿಕೆ) ವತಿಯಿಂದ ಸ್ತ್ರೀ ಸಂಭ್ರಮ ಬಾಗಲಕೋಟೆ ಪಿಂಕ್ ವಾಕ್ -2026 ಕಾರ್ಯಕ್ರಮವನ್ನು ಮಾ.9ರಂದು ನವನಗರದ ಕಲಾಭವನದಲ್ಲಿ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷೆ ವೀಣಾ ಕಾಶಪ್ಪನವರ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಆರೋಗ್ಯ ಮತ್ತು ಕ್ಯಾನ್ಸರ್ ಜಾಗೃತಿ ಅಭಿಯಾನವನ್ನು ನವನಗರದ ಜಿಲ್ಲಾಧಿಕಾರಿಗಳ ಕಚೇರಿಯಿಂದ ಬೆಳಿಗ್ಗೆ 10 ಗಂಟೆಗೆ ಪಿಂಕ್ ವಾಕ್ -2027 ಅಭಿಯಾನ ನಡೆಯಲಿದೆ. ನಂತರ ಮಹಿಳಾ ಆರೋಗ್ಯ ತಪಾಸಣಾ ಶಿಬಿರ ಕೂಡ ನಡೆಯಲಿದೆ.

ನವನಗರದ ಕಲಾಭವನದಲ್ಲಿ ಬೆಳಿಗ್ಗೆ 10-30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಇಳಕಲ್ಲ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನಮಠದ ಗುರುಮಹಾಂತಸ್ವಾಮಿಗಳು, ಬಿಲ್‌ಕೆರೂರ-ಅಡವಿಹಾಳದ ಸಿದ್ದಲಿಂಗ ಶಿವಾಚಾರ್ಯರು ಸ್ವಾಮಿಗಳು, ನಿರಂತರ ಅನ್ನದಾಸೋಹ ಹಾಗೂ ಕಲಾ ಪೋಷಕರ ಮಠದ ಡಾ.ಶಿವಕುಮಾರ ಮಹಾಸ್ವಾಮಿಗಳು, ಕಮತಗಿ ಹೊಳೆಹುಚ್ಚೇಶ್ವರ ಮಠದ ಹುಚ್ಚೇಶ್ವರ ಸ್ವಾಮಿಗಳು, ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ಶ್ರೀಗಳು ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ವಿ.ವಿ.ಕೆ.ಫೌಂಡೇಶನ್ ಸಂಸ್ಥಾಪಕಿ ವೀಣಾ ಕಾಶಪ್ಪನವರ ವಹಿಸುವರು. ಕಾರ್ಯಕ್ರಮವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಸಂಗಪ್ಪ, ಜಿಪಂ ಮುಖ್ಯಕಾರ್ಯನಿರ್ವಾಹಕ ಶಶಿಧರ ಕುರೇರ, ಜಾನಪದ ಕಲಾವಿದೆ ಗೌರಮ್ಮ ಸಂಕೀನಮಠ, ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಘಟಕದ ರಾಜ್ಯ ಗೌರವಾಧ್ಯಕ್ಷೆ ಅಶ್ವಿನಿಗೌಡ ಆಗಮಿಸುವರು ಎಂದರು.

ಹಾಸ್ಯ ಕಲಾವಿದೆ ಇಂದುಮತಿ ಸಾಲಿಮಠ, ಎಸ್.ಬಿ.ವಿಸ್ಡಮ್ ಕರಿಯರ್ ಅಕಾಡೆಮಿದ ಗೌರವಾಧ್ಯಕ್ಷ ಶರಣಯ್ಯ ಭಂಡಾರಿಮಠ, ಸಾವಯವ ಕೃಷಿ ತಜ್ಞೆ ಕವಿತಾ ಮಿಶ್ರಾ, ಜಿ ಕನ್ನಡ ಸರಿಗಮಪ 11ನೇ ಸಿಜನ್ ವಿಜೇತ ಹನಮಂತ ಲಮಾಣಿ, ಬೆಂಗಳೂರಿನ ಡಾ.ವಿಮುಕ್ತಾ ಭಾರತಿ ಬಿ.ಎಲ್, ಜಿ ಕನ್ನಡ ಸರಿಗಮಪ 21ನೇ ಸಿಜನ್ ಗಾಯಕಿ ಕು. ಅನಗಾ ಪಾಟೀಲ, ಬಾಗಲಕೋಟೆಯ ಡಾ.ಪ್ರೀತಿ ಅಸ್ಕಿ, ಜಾನಪದ ಖ್ಯಾತ ಗಾಯಕರಾದ ಮಾಳು ನಿಪನಾಳ, ಬಿಗ್‌ಬಾಸ್ ವಿನ್ನರ್ ಪ್ರಥಮ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

> ಬಾಗಲಕೋಟೆ ವಿಧಾನಸಭೆಯ ಮತಕ್ಷೇತ್ರದ ಉಪಚುನಾವಣೆ ಆಕಾಂಕ್ಷಿ ನಾನಲ್ಲ, ಮೇಟಿ ಕುಟುಂಬದವರಿಗೆ ಟಿಕೆಟ್ ಸಿಗಬೇಕು ಎಂಬುದು ನನ್ನ ಬೆಂಬಲ. ಚುನಾವಣೆಗೋಸ್ಕರ ಕಾರ್ಯಕ್ರಮವನ್ನು ಬಾಗಲಕೋಟೆಯಲ್ಲಿ ಮಾಡುತ್ತಿಲ್ಲ, ಪ್ರತಿವರ್ಷ ಇಂತಹ ಕಾರ್ಯಕ್ರಮವನ್ನು ಫೌಂಡೇಶನದಿಂದ ನಡೆಸುತ್ತೇವೆ.
>
> ■ ವೀಣಾ ಕಾಶಪ್ಪನವರ, ಜಿ.ಪಂ.ಮಾಜಿ ಅಧ್ಯಕ್ಷೆ

ಕಿರುಸುದ್ದಿ

ದಿವ್ಯಾಂಗರ ವಾಲಿಬಾಲ್‌ನಲ್ಲಿ ಮಿಂಚಿದ ದೊಡಮನಿ



ಸಿಂದಗಿ: ಆಂಧ್ರಪ್ರದೇಶದಲ್ಲಿ ಪ್ಯಾರಾ ವಾಲಿಬಾಲ್ ಫೆಡರೇಶನ್ ಆಫ್ ಇಂಡಿಯಾ ಹಾಗೂ ಪ್ಯಾರಾ ಒಲಂಪಿಕ್ ಕಮಿಟಿ ಆಫ್ ಇಂಡಿಯಾ ಜಂಟಿಯಾಗಿ ಆಯೋಜನೆ ಮಾಡಿದ್ದ 14ನೇ ಹಿರಿಯರ ಪುರುಷರ ಸಿಟ್ಟಿಂಗ್ ವಾಲಿಬಾಲ್ ನ್ಯಾಷನಲ್ ಚಾಂಪಿಯನ್ ಶಿಪ್ ಲೀಗ್‌ನಲ್ಲಿ ಕರ್ನಾಟಕ ತಂಡ ದ್ವಿತೀಯ ಸ್ಥಾನ ಪಡೆದು ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಈ ಆಟದಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಹೊನ್ನಳ್ಳಿ ಗ್ರಾಮದ ದಿವ್ಯಾಂಗ ಕ್ರೀಡಾಪಟು ಯಮನಪ್ಪ ಶಂಕ್ರೆಪ್ಪ ದೊಡಮನಿ ಭಾಗಿಯಾಗಿ ಪಂದ್ಯದಲ್ಲಿ ಅದ್ಭುತ ಆಟ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದಾರೆ. ಪ್ಯಾರಾಲಿಂಪಿಕ್ ಕಮಿಟಿ ಆಫ್ ಇಂಡಿಯಾ ಅಧ್ಯಕ್ಷ ಸತ್ಯ ನಾರಾಯಣ, ಪ್ಯಾರಾ ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾದ ಜನರಲ್ ಸೆಕ್ರೆಟರಿ ವಿಜಯರಾವ್ ಶಿಂದೆ, ದಿವ್ಯಾಂಗ ಪ್ಯಾರಾ ವಾಲಿಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ ಪ್ರಧಾನ ಕಾರ್ಯದರ್ಶಿ ತರಬೇತುದಾರ ರಾಘವೇಂದ್ರ, ಸಿಂದಗಿ ತಾಪಂ ಕಚೇರಿಯ ಎಂ.ಆರ್.ಡಬ್ಲ್ಯೂ ಮುತ್ತುರಾಜ ಸಾತಿಹಾಳ ಸೇರಿದಂತೆ ಸಹಚರ ಆಟಗಾರರು ದಿವ್ಯಾಂಗ ಮಿತ್ರರು ಹರ್ಷ ವ್ಯಕ್ತಪಡಿಸಿದ್ದಾರೆ.

ತಸ್ಲೀಮ್, ಶ್ರೀದೇವಿಗೆ ಪ್ರಶಸ್ತಿ ಪ್ರದಾನ



ದೇವರಹಿಪ್ಪರಗಿ: ಪಟ್ಟಣದ ಪಿಎಂಶ್ರೀ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿಯಾಗಿರುವ ತಸ್ಲಿಮ್ ಎಂ.ಪೀರಜಾದೆ ಹಾಗೂ ತಾಲೂಕಿನ ಕೋರವಾರ ಕೆಬಿಎಂಪಿಎಸ್ ಶಾಲೆಯ ಸಹಶಿಕ್ಷಕಿಯಾಗಿರುವ ಶ್ರೀದೇವಿ.ಬಿ.ಕಕ್ಕಳಮೇಲಿ ಅವರಿಗೆ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಭಾನುವಾರ ವಿಜಯಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ವೀರರಾಣಿ ಕಿತ್ತೂರು ಚೆನ್ನಮ್ಮ ಪ್ರಥಮ ಸಾಧನಾ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.ಇರ್ವರು ಶಿಕ್ಷಕಿಯರಿಗೆ ಹಾಗೂ ಈ ಶಿಕ್ಷಕಿಯರ ಸೇವೆಯನ್ನು ಗುರುತಿಸಿರುವ ರಾಜ್ಯಾಧ್ಯಕ್ಷೆ ಲತಾ.ಎಂ.ಬಿರಾದಾರ ಅವರಿಗೆ ತಾಲ್ಲೂಕಿನ ಶಿಕ್ಷಕರು ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

ಸುಯತೀಂದ್ರರ ಆರಾಧನೆ



ವಿಜಯಪುರ: ನವಮಂತ್ರಾಲಯದ ರೂವಾರಿ ಸುಯತೀಂದ್ರ ಶ್ರೀಪಾದಂಗಳವರ ಆರಾಧನೆ ಭಾನುವಾರ ಇಲ್ಲಿನ ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠದಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಅದರಂಗವಾಗಿ ಬೆಳಗ್ಗೆ ನಿರ್ಮಾಲ್ಯ ವಿಸರ್ಜನೆ, ಅಷ್ಟೋತ್ತರ ನಡೆದು, ಬಳಿಕ ವೃಂದಾವನಕ್ಕೆ ಪಂಚಾಮೃತ ಅಭಿಷೇಕ ಮಾಡ ಲಾಯಿತು. ಬಳಿಕ ಪ್ರಲ್ಹಾದರಾಜರಿಗೆ ಕನಕಾಭಿಷೇಕ ನಡೆದು, ಸುಯತೀಂದ್ರರ ಭಾವಚಿತ್ರವನ್ನಿಟ್ಟ ರಥೋತ್ಸವ ಜರುಗಿತು.2009 ರಲ್ಲಿ ಪೀಠಾಧಿಕಾರಿಗಳ ಅವಧಿಯಲ್ಲಿ ಶತಮಾನ ಕಂಡರಿಯದ ಪ್ರವಾಹದಿಂದ ತಲ್ಲಣಿಸಿದ ಮಂತ್ರಾಲಯ ಪುಣ್ಯಕ್ಷೇತ್ರ ನಿರ್ಮಿಸಿದ ಪರಿಯಲ್ಲೆ ಸುಯತೀಂದ್ರತೀರ್ಥರು ತಾವು ಭಿನ್ನರೆಂದು ಲೌಕಿಕ ಜಗತ್ತಿಗೆ ಸಾರಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಪಂಡಿತ ಮಧ್ವೇಶಾಚಾರ್ಯ ಜೋಶಿ (ಮುತ್ತಗಿ) ಉಪನ್ಯಾಸ ನೀಡಿ ಮಾತನಾಡಿದರು.

ಮಠದ ಅರ್ಚಕ ರವಿ ಆಚಾರ್ಯ ಹಾಗೂ ಶ್ರೀಧರಾಚಾರ್ಯ ವೃಂದಾವನಕ್ಕೆ ಬಗೆಬಗೆಯ ಹೂಮಾಲೆಗಳಿಂದ ಅಲಂಕರಿಸಿದ್ದರು.

ಶ್ರೀಮಠದ ವಿಚಾರಣಾಕರ್ತಾ ಗೋಪಾಲ ನಾಯಕ, ವಾಮನರಾವ ದೇಶಪಾಂಡೆ, ಕೆ.ಜಿ. ದೇಶಪಾಂಡೆ, ಪ್ರಕಾಶ ಬಿಜಾಪುರ, ಶ್ರೀಧರ ಜೋಶಿ (ಮುತ್ತಗಿ), ಅರುಣ ತೊರವಿ, ಗೋವಿಂದ ಸವದತ್ತಿ, ಅಶೋಕ ತಾವರಗೇರಿ, ಡಿ.ಆರ್. ನಾಡಿಗ, ವಿಜಯೀಂದ್ರ ಜೋಶಿ, ಭೀಮಣ್ಣ ಹೆಗಡ್ಯಾಳ, ಪ್ರದೀಪ ಪಾಟೀಲ, ಅನಿಲ ಕುಮಾರ ಕಣಬೂರ ಇದ್ದರು.



ವಿಜಯಪುರ: ನಗರದ ಖೇಡ ಕಾಲೇಜ್ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ವತಿಯಿಂದ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭ ಮೀನಾಕ್ಷಿ, ಕಸ್ತೂರಿ ಬೂದಿಹಾಳ, ಶಂಕ್ರಮ್ಮ ಕೋರಿ, ಜಯಶ್ರೀ ವಾಂಗಿ, ಅಂಬವ್ವ ಖೇಡ ಕಾಲೇಜ್ ಉಪ ಪ್ರಾಚಾರ್ಯ ಸಂಜೋತ ಪಾಟೀಲ, ರಾಜ್ಯ ಅಂಗವಿಕಲರ ಪಾಲಕರ ಒಕ್ಕೂಟದ ಜಿಲ್ಲಾಧ್ಯಕ್ಷ ವಿನೋದ ಖೇಡ ಇದ್ದರು.

ವಸ್ತು ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ

ವಿಜಯಪುರ: ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾ ಪಂಚಾಯಿತಿ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ-2026 ಕ್ಕೆ ಜಿಲ್ಲಾಧಿಕಾರಿ ಕೆ. ಆನಂದ ಚಾಲನೆ ನೀಡಿದರು.

ಸ್ವ- ಸಹಾಯ ಸಂಘದ ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಸ್ವ- ಸಹಾಯ ಸಂಘಗಳ ಮಹಿಳೆಯರು ತಯಾರಿಸಿದ ಹಲವು ವಸ್ತುಗಳನ್ನು ಜಿಲ್ಲಾಧಿಕಾರಿಗಳು ವೀಕ್ಷಿಸಿ, ಪ್ರಶಂಸಿಸಿದರು. ಗ್ರಾಮೀಣ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಬೇಕು. ಎಲ್ಲ ಮಹಿಳೆಯರು ಸಬಲೀಕರಣ ಹೊಂದಬೇಕು ಎಂದರು. ಮೇಳದಲ್ಲಿ ಜಿಲ್ಲೆಯ 13 ತಾಲೂಕುಗಳ ಸ್ವ- ಸಹಾಯ ಸಂಘಗಳ ಮಹಿಳಾ ಉದ್ಯಮಿದಾರರು ಭಾಗವಹಿಸಿದ್ದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಎನ್‌ಆರ್‌ಎಲ್‌ಎಂ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅತ್ಯುತ್ತಮವಾಗಿ ಕಾರ್ಯಸುತ್ತಿರುವ ಕೃಷಿ ಸಖಿಯರು ಹಾಗೂ ಪಶು ಸಖಿಯರನ್ನು ಸನ್ಮಾನಿಸಲಾಯಿತು.ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ. ಚವ್ಹಾಣ, ಜಿಲ್ಲಾ ಪಂಚಾಯಿತಿ ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ, ಜಿಲ್ಲೆಯ ಎಲ್ಲ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಎನ್‌ಆರ್‌ಎಲ್‌ಎಂ ಸಿಬ್ಬಂದಿ ಇದ್ದರು.



ವಿಜಯಪುರ: ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾ ಪಂಚಾಯಿತಿ, ಕೌಶಲ್ಯಾಭಿವೃದ್ಧಿ ಉದ್ಯಮಿಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ-2026 ಕ್ಕೆ ಜಿಲ್ಲಾಧಿಕಾರಿ ಕೆ. ಆನಂದ ಚಾಲನೆ ನೀಡಿದರು.

ಸರ್ಕಾರಿ ಸೌಲಭ್ಯ ಪಡೆದು ಮಹಿಳೆಯರು ಉತ್ತಮ ಬದುಕು ರೂಪಿಸಿಕೊಳ್ಳಲಿ: ಡಿಸಿ

ವಿಜಯಪುರ: ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಸಾಕಷ್ಟು ಯೋಜನೆ ಜಾರಿಗೊಳಿಸಿದ್ದು, ಅವುಗಳ ಸದುಪಯೋಗ ಪಡೆಸಿಕೊಂಡು ಉತ್ತಮ ಬದುಕು ರೂಪಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿಜಿಲ್ಲಾಡಳಿತ,ಜಿಲ್ಲಾಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಶಿಶು ಅಭಿವೃದ್ಧಿ ಯೋಜನೆ, ಸರ್ಕಾರೇತರ ಸಂಘ- ಸಂಸ್ಥೆಗಳ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಮಾಜಿಕ ಪಿಡುಗಾಗಿರುವ ಬಾಲ್ಯವಿವಾಹ, ವರದಕ್ಷಿಣೆ, ಪ್ರಸವ ಪೂರ್ವ ಲಿಂಗ ಪತ್ತೆ ಹಾಗೂ ಹತ್ಯೆ, ಕೌಟುಂಬಿಕ ಹಿಂಸೆಯಂತಹ ಸಮಸ್ಯೆಗಳನ್ನು ತೊಡೆದು ಹಾಕಲು ಸಾಕಷ್ಟು ಕಾಯ್ದೆ ಕಾನೂನು ಜಾರಿಯಲ್ಲಿದ್ದು, ಸಂಬಂಧಿಸಿದ ಇಲಾಖೆಗಳು ಈ ನಿಟ್ಟಿನಲ್ಲಿ ಕೈಜೋಡಿಸುವ ಮೂಲಕ, ಈ ಪಿಡುಗುಗಳ ನಿರ್ಮೂಲನೆ ಹಾಗೂ ಕಡಿವಾಣಕ್ಕೆ ಕಟಿಬದ್ಧರಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಸಾಮಾಜಿಕ ಸ್ಥಳದಲ್ಲಿ ಮಹಿಳೆ ಸ್ವಾವಲಂಬಿಯಾಗಿ ತನ್ನ ಕುಟುಂಬವನ್ನು ಸಮರ್ಪಕವಾಗಿ ನಿಭಾಯಿಸುವ ದೃಷ್ಟಿಯಿಂದ ಹಲವು ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದೆ. ಸಾಕಷ್ಟು ಮಹಿಳೆಯರು ಇಂದು ಅಭಿವೃದ್ಧಿಯ ಪಥದತ್ತಮುಖ ಮಾಡಿದ್ದಾರೆ. ಆದಾಗ್ಯೂ ಮಹಿಳೆಯರು ಉನ್ನತ ಶಿಕ್ಷಣ ಪಡೆಯುವುದು ಮೂಲಕ ಸ್ವಾವಲಂಬಿ ಜೀವನದತ್ತ ದಿಟ್ಟ ಹೆಜ್ಜೆ ಇರಿಸಬೇಕು ಎಂದರು.



> **ಮಹಿಳೆಯರು ಇಂದು ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಫ್ಲೈಟ್ ಓಡಿಸುತ್ತಿದ್ದಾರೆ. ಸೈನ್ಯದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಮಹಿಳಾ ಕ್ರಿಕೆಟ್‌ನಲ್ಲಿ ನಮ್ಮದೇಶದ ಮಹಿಳೆಯರು ತೋರಿರುವ ಸಾಧನೆ ಅಪಾರವಾಗಿದೆ.**
> ■ **ಡಾ.ಆನಂದ ಕೆ. ಜಿಲ್ಲಾಧಿಕಾರಿ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದಲೂ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಪೋಕ್ಸೊ ಪ್ರಕರಣ ಜರುಗದಂತೆ, ಬಾಲ್ಯ ವಿವಾಹ ತಡೆಗಟ್ಟಲಾಗುತ್ತಿದೆ. ಜೊತೆಗೆ ಪೋಷಣ ಅಭಿಯಾನ, ಬೇಟಿ ಬಚಾವೋ ಬೇಟಿ ಪಡಾವೋ ಸೇರಿದಂತೆ ಅನೇಕ ಕಾಯ್ದೆ, ಯೋಜನೆ ಮಹಿಳೆಯರ ಅಭ್ಯುದಯಕ್ಕಾಗಿವೆ. ಮಹಿಳೆಯರು ಅವುಗಳ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಕೆ. ಚವ್ಹಾಣ ಪ್ರಾಸ್ತಾವಿಕವಾಗಿ ಮಾತನಾಡಿ, ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಲಕ್ಷ್ಮೀ ಯೋಜನೆಯಡಿ ಮಹಿಳಾ ಸಬಲೀಕರಣ ಹಾಗೂ ಸ್ವಾವಲಂಬನೆಯ ಬದುಕು ನಡೆಸಲು ಬಹಳ ಅನುಕೂಲಕರವಾಗಿದೆ. ಗೃಹ ಲಕ್ಷ್ಮೀ ಯೋಜನೆಯಡಿ ನಮ್ಮ ಜಿಲ್ಲೆಯಲ್ಲಿ ಶೇ.98 ರಷ್ಟು ಲಾಭವನ್ನು ಪಡೆದುಕೊಂಡಿದ್ದರಿಂದ ರಾಜ್ಯದಲ್ಲಿ 6 ನೇ ಸ್ಥಾನದಲ್ಲಿದೆ ಎಂದರು. ಇದೇ ವೇಳೆ ಬಾಲ್ಯ ವಿವಾಹ ದಂತಹ ಅನೇಕ ಸಾಮಾಜಿಕ ಸೇವೆ, ಮಕ್ಕಳ ಹಕ್ಕುಗಳ ರಕ್ಷಣೆ ಸೇರಿದಂತೆ ಸಾಮಾಜಿಕ ಕಳಕಳಿಯ ಕಾರ್ಯ ನಿರ್ವಹಿಸಿರುವ ಮಹಿಳಾ ಮೇಲ್ವಿಚಾರಕರು, ಇಲಾಖೆಯ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ಕಾರ್ಯಕರ್ತರು ಹಾಗೂ ಸಹಾಯಕಿಯರು ಇದ್ದರು.

ಬಜೆಟ್‌ನಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿಗೆ ಆದ್ಯತೆ

ಇಂಡಿ: ರಾಜ್ಯದ ಸರ್ವತೋಮುಖ ಅಭಿವೃದ್ಧಿ ಪೂರಕ ಬಜೆಟ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿ ದಾಖಲೆ ಸೃಷ್ಟಿಸಿದ್ದಾರೆ. ನೂತನ 10 ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ 4.48 ಕೋಟಿ ಮೊತ್ತದ ಬೃಹತ್ ಗಾತ್ರದ ಬಜೆಟ್ ಮಂಡಿಸಿ ದಾಖಲೆ ಮಾಡಿ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಿ ಸಮಗ್ರ ಕರ್ನಾಟಕ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಅಪರ್ ಕೃಷ್ಣಾ ಯೋಜನೆಯಲ್ಲಿ ಬರುವ ಅವಳಿ ಜಿಲ್ಲೆಯ 22 ಹಳ್ಳಿ ಜನ ತಮ್ಮ ಮನೆ, ಮಠ, ಭೂಮಿ ಕಳೆದುಕೊಂಡ ರೈತರಿಗೆ ಭೂಪರಿಹಾರ ನೀಡುವ ಮಹತ್ತರ ನಿರ್ಣಯ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರಿಗೆ ಹೃದಯ ಪೂರ್ವಕ ಅಭಿನಂದಿಸುವುದಾಗಿ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.



ಅವರು ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಇಂಡಿ ಭಾಗಕ್ಕೆ ಬರುವ ಎಲ್ಲ ನೀರಾವರಿ ಯೋಜನೆಗಳು ಸಮರ್ಪಕವಾಗಿ ಸಾಕಾರ ಗೊಳ್ಳಬೇಕಾದರೆ519.6 ಮೀ.ದಿಂದ524.256 ಮೀ ಎತ್ತರಿಸಿದಾಗ ಮಾತ್ರ ನಮಗೆ ನೀರು ಬರಲು ಸಾಧ್ಯ. ಇದರಿಂದ ನಮ್ಮ ಪಾಲೀನ 80 ಟಿಎಮ್‌ಸಿ ನೀರು ಸದ್ಬಳಕೆ ಮಾಡಿಕೊಂಡಾಗ ಇಂಡಿ ಭಾಗದಲ್ಲಿ ಶೇಕಡಾ 80ರಷ್ಟು ಪ್ರದೇಶ ನೀರಾವರಿಯಾಗಲಿದೆ ಎಂದರು.

ಮುಳುಗಡೆ ಪ್ರದೇಶಕ್ಕೆ ಭೂಪರಿಹಾರ ನೀಡಲು ಸುಮಾರು 70 ಸಾವಿರ ಕೋಟಿ ರೂ.ಗಳ ಬೃಹತ್ ಮೊತ್ತದ ಅನುದಾನಬೇಕು. ಆ ಪರಿಣಾಮಈಬಜೆಟನಲ್ಲಿಆದ್ಯತೆನೀಡಿದ್ದರಿಂದ ಇದೇ ಮಾ.14 ರಂದು ಬಾಗಲಕೋಟದಲ್ಲಿ ಮುಖ್ಯಮಂತ್ರಿಗಳಿಗೆ ಹಾಗೂ ಉಪಮುಖ್ಯಮಂತ್ರಿಗಳಿಗೆ ಅಭಿನಂಧನಾ ಸಮಾರಂಭ ಹಮ್ಮಿಕೊಂಡಿದ್ದಾರೆ ಎಂದರು.

ಈಗಾಗಲೆ ಪ್ರಗತಿ ಹಂತದಲ್ಲಿರುವ ಸಣ್ಣ ಕೈಗಾರಿಕೆ ವಸಾಹತು ಉದ್ಘಾಟನೆ ಸಜ್ಜುಗೊಳ್ಳುತ್ತಿದೆ. ಚಡಚಣದಿಂದ ಇಂಡಿ, ಆಲಮೇಲ,ಅಫಜಲಪೂರ ಮಾರ್ಗವಾಗಿ ಗಾಣಗಾಪೂರಕ್ಕೆ ಹೊಗುವ 115ಕಿಮೀ ರಸ್ತೆ ಅಭಿವೃದ್ಧಿಗೆ 500.50 ಕೋಟಿ ಅನುದಾನದಲ್ಲಿ ನಿರ್ಮಾಣವಾಗಲಿದೆ. ಇದರಲ್ಲಿ ಇಂಡಿ ಭಾಗದಲ್ಲಿ 55ಕಿಮೀ ರಸ್ತೆ ಹೊಂದಿದ್ದರಿಂದ ನಮ್ಮ ಭಾಗದ ಜನರಿಗೆ ಅತಿ ಹೆಚ್ಚು ಅನುಕೂಲವಾಗಲಿದೆ. ಇಂಡಿ ನಗರಕ್ಕೆ ಕುಡಿಯುವ ನೀರಿನ ತೊಂದರೆ ಹೊಗಲಾಡಿಸಲು ಮಹಾರಾಷ್ಟ್ರದ ಉಜ್ಜನಿ ಜಲಾಶಯದಿಂದ ಭೀಮಾನದಿಗೆ ನೀರು ಹರಿಸುವಲ್ಲಿ ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿವರು ಮಹಾರಾಷ್ಟ್ರ ಸರ್ಕಾರದ ಜೊತೆ ಮಾತು ಕಥೆ ನಡೆಸಿ ನೀರು ಹರಿಸಿದ್ದಾರೆ ಎಂದರು.

ನೂತನವಾಗಿ ರಚನೆಯಾಗಿರುವ ಇಂಡಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಜೀತ ಧನಶೆಟ್ಟಿ ಅಧ್ಯಕ್ಷರನ್ನಾಗಿ ಇನ್ನೂ ಸದಸ್ಯರಾಗಿ ಚನ್ನಪ್ಪ ಬೋಡಿ, ಅನೀಲ ಜೋಶಿ, ರವಿ ನೀಗಡಿಯವರನ್ನು ನೇಮಕ ಮಾಡಲಾಗಿದೆ. ಕೆಲವು ದಿನಗಳಲ್ಲಿ ಸರ್ಕಾರದಿಂದ ಆದೇಶ ಬರಲಿದೆ ಎಂದರು.

ಮಹಿಳೆ ಯಾವುದಕ್ಕೂ ಕಡಿಮೆಯಿಲ್ಲ: ಡಾ. ಪಾಟೀಲ

ಆಲಮೇಲ: ಹೋರಾಟದ ಹಾದಿಯನ್ನು ತುಳಿದು ಸರ್ವಕಾಲದಲ್ಲಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಮಹಿಳೆಯು ಯಾವುದಕ್ಕೂ ಕಡಿಮೆಯೇನಿಲ್ಲ ಎಂದು ವೈದ್ಯೆ ಡಾ. ದೀಪಮಾಲಾ ಪಾಟೀಲ ಹೇಳಿದರು.

ಅವರು ಆಲಮೇಲ ಪಟ್ಟಣದಲ್ಲಿ ಭಾನುವಾರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಶಾಸಕ ಅಶೋಕ ಮನಗೂಳಿ ಕಾರ್ಯಕ್ರಮ ಉದ್ಘಾಟಿಸಿ, ಉತ್ತಮ ಸಂಸ್ಕಾರ ನೀಡುವ ಶಕ್ತಿ ಮಹಿಳೆಗಿದೆ, ಮಹಿಳೆಯನ್ನು ಸಬಲೆಯನ್ನಾಗಿ ಮಾಡಲು ಸರಕಾರ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ತಂದಿದೆ, ಆ ಮೂಲಕ ಅವಳ ಬದುಕಿಗೆ ಗ್ಯಾರಂಟಿ ಕೊಡುವ ಕೆಲಸ ಸರಕಾರ ಮಾಡುತ್ತಿದೆ ಎಂದರು.

ಬ್ರಹ್ಮಕುಮಾರಿ ರೇಣುಕಾ ಅಕ್ಕನವರು ಸಾನಿಧ್ಯವಹಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಅಶೋಕ ಕೊಳಾರಿ ವಹಿಸಿಕೊಂಡಿದ್ದರು.

ಡಾ.ಮಂಜೂಷಾ ಪಾಟೀಲ, ಜಿ.ಪಂ. ಮಾಜಿ ಸದಸ್ಯ ಶಂಕ್ರಮ್ಮ ಹೂಗಾರ, ತಾ.ಪಂ. ಮಾಜಿ ಅಧ್ಯಕ್ಷೆ ಸುನೀತಾ ಮೇಲಿನಮನಿ, ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಶೈಲಾ ಹೊಸಮನಿ, ಸುನಂದಾ ಯಂಪೂರೆ ಮೊದಲಾದವರು ವೇದಿಕೆಯಲ್ಲಿದ್ದರು.

> **ತಾಲೂಕಿನಲ್ಲಿ ಪಂಚ ಗ್ಯಾರಂಟಿಗಳು ಯೋಜನೆಗಳನ್ನು ಎಲ್ಲರಿಗೂ ತಲುಪುವಂತೆ ಮಾಡಿದ್ದು ಶೇ 99.5 ಪ್ರತಿಶತ ಯಶಸ್ಸು ಸಾಧಿಸಿದೆ. ಸಮಿತಿಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿಯೊಂದು ಯೋಜನೆಯನ್ನು ಫಲಾನುಭವಿಗಳಿಗೆ ತಲುಪುವಂತೆ ಮಾಡಿದ್ದೇವೆ**
> ■ **ಅಶೋಕಗೌಡ ಎಂ.ಕೊಳಾರಿ. ಅಧ್ಯಕ್ಷರು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ**

ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಸ್ವಾಗತಿಸಿದರು. ಶರಣಮ್ಮ ಬೂದಿಹಾಳ ನಿರೂಪಿಸಿದರು. ಅಪ್ಪು ಶೆಟ್ಟಿ ವಂದಿಸಿದರು.

ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು. ಬಯಲಾಟ ಕಲಾವಿದೆ ಲಲಿತಾಬಾಯಿ ಹಿಕ್ಕನಗುತ್ತಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಂಗೋಲಿ ಸ್ಪರ್ಧೆ ವಿಜೇತರು: ಪೂಜಾ ಹಳೆಮನಿ(ಪ್ರಥಮ), ಮೊನಾಲಿ ರಾಠೋಡ (ದ್ವಿತೀಯ), ಶಿಲ್ಪಾ ರಾಂಪೂರಮಠ (ತೃತೀಯ).



ಯಮನೂರೇಶ್ವರ ಚಾಂಗದೇವರ ಜಾತ್ರೋತ್ಸವ



ಬಸವನಬಾಗೇವಾಡಿ: ತಾಲೂಕಿನ ನಾಗೂರ ಗ್ರಾಮದ ಯಮನೂರೇಶ್ವರ ಚಕ್ರವರ್ತಿ ಚಾಂಗದೇವರ ಜಾತ್ರೆಯು ಸಡಗರ, ಸಂಭ್ರಮದಿಂದ ನಡೆಯಿತು. ಜಾತ್ರೆಯ ನಿಮಿತ್ತ ಶನಿವಾರ ರಾತ್ರಿ ಗ್ರಾಮದ ಶಿವಬಸಪ್ಪ ಭದ್ರಗೊಂಡ ಅವರ ಮನೆಯಿಂದ ಗಂಧ(ಸಂದಲ್)ವನ್ನು ವಿವಿಧ ವಾದ್ಯ ವೈಭವಗಳೊಂದಿಗೆ ಹಿಂದೂ-ಮುಸ್ಲಿಂ ಸಮಾಜ ಬಾಂಧವರು ಯಮನೂರೇಶ್ವರ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿ ನಂತರ ದರ್ಗಾದ ಸಿಕ್ಕಂದರ ದರ್ಗಾ ನೇತೃತ್ವದಲ್ಲಿ ಗಂಧ ಏರಿಸುವ ಕಾರ್ಯಕ್ರಮ ಜರುಗಿತು. ಜಾತ್ರಾ ಮಹೋತ್ಸವದ ನಿಮಿತ್ತ ಸಂಜೆ 1,111 ದೀಪೋತ್ಸವ ಕಾರ್ಯಕ್ರಮಕ್ಕೆ ಗ್ರಾಮದ ಹಿರಿಯರು ಚಾಲನೆ ನೀಡಿದರು.

ರಾತ್ರಿ ವಾದಿ, ಪ್ರತಿವಾದಿ ಡೊಳ್ಳಿನ ಪದಗಳ ಕಾರ್ಯಕ್ರಮ ನಡೆಯಿತು.

ರವಿವಾರ ಬೆಳಗ್ಗೆಯಿಂದಲೇ ಬಸವನಬಾಗೇವಾಡಿ ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳ ಜನರು ಸಹಕುಟುಂಬ ಪರಿವಾರದೊಡನೆ ಪಾದಯಾತ್ರೆ ಮೂಲಕ ನಾಗೂರ ಗ್ರಾಮದ ಯಮನೂರೇಶ್ವರ ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ಸಕ್ಕರೆ, ಲೋಬಾನ ಹಚ್ಚುವ ಮೂಲಕ ಹರಕೆ ತೀರಿಸಿದರು. ಕೆಲ ಭಕ್ತರು ದೀಡ್ ನಮಸ್ಕಾರ ಹಾಕಿದರು. ವಿವಿಧ ಗ್ರಾಮಗಳ ಅಪಾರ ಸಂಖ್ಯೆಯ ಜನರು ವಾಹನಗಳ ಮೂಲಕ ದೇವಸ್ಥಾನಕ್ಕೆ ಆಗಮಿಸಿ ದೇವರಿಗೆ ಪೂಜೆ ಸಲ್ಲಿಸಿದರು. ನಂತರ ಮಕ್ಕಳ ಆಟಿಕೆ ಸಾಮಾನುಗಳು ಹಾಗೂ ಬೆಂಡು ಬತ್ತಾಸ್ ಸೇರಿದಂತೆ ವಿವಿಧ ವಸ್ತುಗಳನ್ನು ಖರೀದಿಸಿದರು.

ಜಾತ್ರೆಯ ಅಂಗವಾಗಿ ಭಜನಾ ಪದಗಳ ಕಾರ್ಯಕ್ರಮ ಹಾಗೂ ಟಗರಿನ ಕಾಳಗ, ರಾತ್ರಿ ಸಾಹುಕಾರನ ಸಂಪತ್ತು ಬಡವನ ತಾಕತ್ತು ನಾಟಕ ಪ್ರದರ್ಶನಗೊಂಡಿತು. ಚಂದ್ರಶೇಖರ ಮುಳವಾಡ, ಚಂದ್ರಶೇಖರ ಮರೋಳ, ಬಸಯ್ಯ ಶೀಕಳವಾಡಿಮಠ, ರುದ್ರಯ್ಯ ಶೀಕಳವಾಡಿಮಠ, ಶಿವಾನಂದ ಡೋಣೂರ, ಮಲ್ಲಪ್ಪ ಪೂಜಾರಿ, ಧರ್ಮಣ್ಣ ಪೂಜಾರಿ, ಮಹೇಶ ಮುಳವಾಡ, ಶಿವಾನಂದ ಬೆಲ್ಲದ, ಶರಣು ಮರೋಳ, ರೇವಣಸಿದ್ಧ ನಂದಿಹಾಳ, ಯಮನೂರಿ ಅಂಗಡಗೇರಿ, ರಮೇಶ ಮುಳವಾಡ, ಬಂದೇನವಾಜ ವಾಲಿಕಾರ, ಗಿರೀಶ ಹೆಬ್ಬಾಳ, ಮಹಾಂತೇಶ ಗೌರಾ, ಭಾಷಾಸಾಬ ಚಪ್ಪರಬಂದ, ಬಾಬುಸಾಬ ಚಪ್ಪರಬಂದ, ಹೈದರಸಾಬ ಚಪ್ಪರಬಂದ ಇದ್ದರು.

ಗ್ರಂಥಗಳಿಂದ ಸೌಹಾರ್ದತೆಯ ತಿಳಿವಳಿಕೆ

ಮುದ್ದೇಬಿಹಾಳ: ಉಪವಾಸದಿಂದ ದೇಹವನ್ನು ಶುದ್ಧಗೊಳಿಸುವಂತೆ ನಿಮ್ಮ ಆತ್ಮ, ನಿಮ್ಮ ಮನಸ್ಸು ಶುದ್ಧ ಮಾಡಿಕೊಳ್ಳಬೇಕು. ಉಪವಾಸ ಆಚರಣೆ ದೈಹಿಕ ಮಾನಸಿಕ ಶುದ್ಧತೆಗೆ ಕಾರಣ ಆಗುತ್ತದೆ. ಪ್ರತಿಯೊಬ್ಬರೂ ಕುರಾನ್, ಭಗವದ್ಗೀತೆ ಓದಿದರೆ ತಪ್ಪಲ್ಲ, ಓದದಿದ್ದರೆ ತಪ್ಪಾಗುತ್ತದೆ. ತಪ್ಪು ತಿಳಿವಳಿಕೆಗೆ ಕಾರಣವಾಗುತ್ತದೆ. ಮಹಾನ್ ಗ್ರಂಥಗಳು ಮಾನವ ಜನಾಂಗದ ಸ್ವತ್ತು, ಯಾರೊಬ್ಬರ ಸ್ವತ್ತು ಅಲ್ಲ ಎಂದು ಖ್ಯಾತ ಉಪನ್ಯಾಸಕ ಲಾಲಹುಸೇನ್ ಕಂದಗಲ್ ಹೇಳಿದರು.

ನಗರದ ಟಾಪ್ ಇನ್ ಟೌನ್ ಮಂಗಲ ಕಾರ್ಯಾಲಯದಲ್ಲಿ ಜಮಾತೆ ಹಿಂದ್ ಆಯೋಜಿಸಿದ್ದ ರಂಜಾನ್ ಸೌಹಾರ್ದ ಕೂಟದಲ್ಲಿ ಉಪನ್ಯಾಸಕರಾಗಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಪಿಐ ಮಹಮ್ಮದ್ ಫಸಿವುದ್ದೀನ್ ಅವರು ಮಾತನಾಡಿ, ಇಫ್ತಾರ್ ಎಂದರೆ ಸೌಹಾರ್ದ ಕೂಟ ಎಂದು ಅರ್ಥ, ದೇವರ ಆರಾಧನೆಗಾಗಿ ಉಪಾಸವಿದ್ದು ಆರೋಗ್ಯ ಮತ್ತು ಪ್ರವಾಸದ ದೃಷ್ಟಿಯಿಂದ ಮಾತ್ರ ರೋಜಾ ನಿಲ್ಲಿಸಬಹುದು. ಇಲ್ಲದಿದ್ದರೆ 30 ದಿನಗಳ ಉಪವಾಸ, ದಾನ ನೀಡುವುದು ಹಾಗೂ ಪ್ರತಿಯೊಂದು ಕರ್ತವ್ಯದಲ್ಲಿ ನಮ್ಮನ್ನು ನಾವು ಶುದ್ಧತೆ ಹಾಗೂ ಪಾವಿತ್ರತೆ ಇಟ್ಟುಕೊಂಡಾಗ ರೋಜಾ ಸಾರ್ಥಕವಾಗುತ್ತದೆ ಎಂದು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಅಬ್ದುಲ್ ರಹಿಮಾನ್ ನಸೀರ್ ಮಾತನಾಡಿ, ಸೌಹಾರ್ದತೆ, ಸಮಾನತೆ, ಉಪವಾಸ, ತ್ಯಾಗದ ಕುರಿತು ಎಲ್ಲಾ ಧರ್ಮಗಳಲ್ಲೂ ತಿಳುವಳಿಕೆ ಇದೆ. ಮುಖ್ಯವಾಗಿ ದೇವ ಭಯವನ್ನು ಬೆಳೆಸುವದು, ದೈಹಿಕ ಮಾನಸಿಕ ಸ್ವಾಸ್ಥ್ಯ ಗಳಿಸುವದು ರಮಜಾನ್ ಉದ್ದೇಶ ಎಂದು ಹೇಳಿದರು.

ಎಂಜಿವಿಸಿ ಕಾಲೇಜು ಕನ್ನಡ ಪ್ರಾಧ್ಯಾಪಕ ಡಾ ಪ್ರಕಾಶ್ ನರಗುಂದ ಕಾರ್ಯಕ್ರಮದ ಅತಿಥಿಗಳಾಗಿ ಮಾತನಾಡಿದರು. ಕೂಟದಲ್ಲಿ ಮುಖಂಡರಾದ ಎಂ ಡಿ ಝುರತಾರಫರ್, ಪಿಂಟು ಸಾಲಿಮನಿ, ಎಸ್ ಜಿ ನಂದಿ, ಸಿಬಿ ಅಸ್ಕಿ, ಅಮರೇಶ್ ಗೂಳಿ, ಕಾಮರಾಜ್ ಬಿರಾದಾರ, ಲಾಡ್ಲೆ ಮಶಾಕ್ ನಾಯ್ಕೋಡಿ, ಜಮಾತೆ ಹಿಂದು ತಾಲೂಕ ಸಂಚಾಲಕ ನೂರೆ ನಬಿ ನದಾಫ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು.



ಧರಣಿ ಸತ್ಯಾಗ್ರಹಕ್ಕೆ ವಿವಿಧ ಸಂಘಟನೆಗಳಿಂದ ಸಾಥ್

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಶನಿವಾರ 12 ನೇ ದಿನದ ಸತ್ಯಾಗ್ರಹವು ತಾಳಿಕೋಟಿಯ ಕ್ಷತ್ರಿಯ ಮರಾಠ ಸಮಾಜ ತಾಳಿಕೋಟಿ, ಹಾಗೂ ಬಸವೇಶ್ವರ ಅಟೋ ಸಂಘ ತಾಳಿಕೋಟಿ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿ 12 ನೇ ದಿನದ ಸತ್ಯಾಗ್ರಹ ನಡೆಸಿದರು.

ಕ್ಷತ್ರಿಯ ಮರಾಠ ಸಮಾಜದ ಅಧ್ಯಕ್ಷ ಸಂಬಾಜಿರಾವ್ ವಾಡಕರ ಮಾತನಾಡಿ, ಈಗಾಗಲೇ ಪ್ರಜಾಸೌಧಕ್ಕೆ ನಿಗದಿ ಪಡಿಸಿರುವ ಸ್ಥಳ ತಾಳಿಕೋಟಿ ಪಟ್ಟಣದಿಂದ ಐದು ಕಿಮೀ ದೂರವಿದ್ದು ಕಾರಣ ವೃದ್ಧರಿಗೆ, ಮಹಿಳಿಯರಿಗೆ, ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ರೈತಾಪಿ ಜನರಿಗೆ ತುಂಬಾ ಈ ಸ್ಥಳ ಬಹಳ ದೂರವಾಗುವುದರಿಂದ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕು ಹಾಗೂ ಈಗ ನಿಗದಿ ಪಡಿಸಿರುವ ಸ್ಥಳ ಕೂಡಲೇ ರದ್ದು ಪಡಿಸಬೇಕು ಎಂದು ಆಗ್ರಹಿಸಿದರು.



ಈ ಸಂದರ್ಭದಲ್ಲಿ ರಾಘವೇಂದ್ರ ಮಾನೆ, ಶಿವಾಜಿ ಮೋಹಿತೆ, ರಂಗನಾಥ ನೂಲಿಕಾರ, ಸಂಜು ಕದಂ, ನಾರಾಯಣ ಸುಬೇದಾರ, ಸಾಗರ್ ಕೋಡಗೆ, ಅಂಬಾಜಿ ಜಾದವ್, ಧನಂಜಯ್ ಶಿಂಧೆ, ಸುಭಾಷ್ ಗಾವಾಡೆ, ಆನಂದ್ ಪಿಸಾಳೆ, ಸಂಭಾಜಿ ಡಿಸ್ಲೆ, ರಾಜು ನಿಕ್ಕಂ, ಸಂತೋಷ ಕದಂ, ಬಸವೇಶ್ವರ ಆಟೋ ಸಂಘದ ಪದಾಧಿಕಾರಿಗಳು ರಮೇಶ್ ಹರಿಜನ, ರಫಿಕ್ ಕೈರೋಬ, ವಿಠ್ಠಲ್ ದೊಡ್ಮನಿ, ಗೌಡಪ್ಪ ಗೌಡ ಪಾಟಿಲ, ಶಿವಾನಂದ ಸಜ್ಜನ, ಶ್ರೀಕಾಂತ್ ತಳವಾರ, ಜುಮ್ಮಣ್ಣ ಬಸರಿಕಟ್ಟಿ, ಶರಣು ಜಾಲಹಳ್ಳಿ, ಸಂತೋಷ ಬಾಗೇವಾಡಿ, ಶಿವು ಅಂಬಿಗೇರ ಹೋರಾಟ ಸಮಿತಿಯ ಪದಾಧಿಕಾರಿಗಳಾದ, ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್ ಬಿ ಕಟ್ಟಿಮನಿ, ಆರ್.ಎಸ್. ಪಾಟಿಲ್ (ಕುಚುಬಾಳ) ಮುತ್ತಪ್ಪ ಚಮಲಾಪುರ, ಕಾಶಿನಾಥ ಮುರಾಳ, ಮೆಹೆಬೂಬ ಚೋರಗಸ್ತಿ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಗಂಗಾಧರ ಕಸ್ತೂರಿ, ಪ್ರಕಾಶ ಹಜೇರಿ, ಮಯೂರ ಪಾಟೀಲ, ದಸ್ತಗೀರಸಾಬ್ ಕೆಂಭಾವಿ, ಮುದಕಪ್ಪ ಬಡಿಗೇರ, ಅಮಿತ್ ಮನಗೂಳಿ, ಮಹೇಶ ಚಲವಾದಿ, ರವಿ ಕಟ್ಟಿಮನಿ, ಮಂಜುನಾಥ್ ಶೆಟ್ಟಿ, ತಿಪ್ಪಣ್ಣ ಸಜ್ಜನ್, ಸುರೇಶ್ ಹಜೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೆನಾಳ, ಸದ್ದಾಮ್ ಹುಸೇನ್ ಬೀಳಗಿ, ರಾಜು ಹಜೇರಿ, ನಿತಿನ್ ವಿಜಾಪುರ, ಸಿರಸಕುಮಾರ್ ಹಜೇರಿ, ರಾಗು ಪಡಾಸಲಿ, ಬಸವರಾಜ ಬಿಸನಾಳ ಹಾಗೂ ಪಟ್ಟಣದ ಎಲ್ಲಾ ಸಮಾಜದ ಗುರುಹಿರಿಯರು ಹಾಜರಿದ್ದರು.

ಸನಾತನ ಧರ್ಮದಲ್ಲಿ ಮಹಿಳೆಗೆ ಉನ್ನತ ಸ್ಥಾನ: ಶ್ರೀಗಳು

ಝಳಕಿ: ನಮ್ಮ ಭಾರತೀಯ ಸಂಸ್ಕೃತಿ, ಸಂಸ್ಕಾರದ ಸನಾತನ ಧರ್ಮದಲ್ಲಿ ಮಹಿಳೆಯರಿಗೆ ಪೂಜಾ ಸ್ಥಾನದಲ್ಲಿ ನೋಡುತ್ತೇವೆ ಎಂದು ಕಾಶಿ ಪೀಠ ಶ್ರೀ ಡಾ. ಮಲ್ಲಿಕಾರ್ಜುನ ಮಹಾಶಿವಾಚಾರ್ಯರು ಆಶೀರ್ವಚನ ನೀಡಿದರು.

ಸಮೀಪದ ಜೆವೂರ ಗ್ರಾಮದ ಶ್ರೀ ಹಠಯೋಗಿ ರೇವಣಸಿದ್ದೇಶ್ವರ 40ನೇಯ ಪುಣ್ಯಾರಾಧನೆ ನಿಮಿತ್ತವಾಗಿ 31ನವ ವದು-ವರಗಳಿಗೆ ಆಶೀರ್ವದಿಸಿ ಆರ್ಶಿವಚನ ನೀಡಿದರು.

ಭಾರತೀಯ ಸನಾತನ ಧರ್ಮದಲ್ಲಿ ಮಹಿಳೆಯರಿಗೆ ಶಕ್ತಿಯ ರೂಪದಲ್ಲಿ ಹಾಗೂ ಪೂಜಾ ಸ್ಥಾನದಲ್ಲಿ ನೋಡುತ್ತೇವೆ.

ನಮ್ಮ ಭಾರತೀಯ ಮಹಿಳೆಗೆ ನಾವು ನೋಡುವುದು ಅಕ್ಕ ತಂಗಿ, ತಾಯಿ, ಪತ್ನಿ ರೂಪದಲ್ಲಿ ನೋಡುತ್ತವೆ. ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರ ಮಹಿಳೆಯರಿಗೆ ಗೌರವ ರೂಪದಲ್ಲಿ ನೋಡುತ್ತೆವೆ. ಕೆಲವು ದೇಶಗಳು ನಮ್ಮ ಭಾರತೀಯ ಸಂಸ್ಕೃತಿಯಂತೆ ನಡೆದುಕೋಳ್ಳುತ್ತಿದ್ದಾರೆ.



ನಮ್ಮ ಸನಾತನ ಹಿಂದೂ ದರ್ಮ ಮಹಿಳೆಯರಿಗೆ ಉನ್ನತ ಸ್ಥಾನದಲ್ಲಿ ನೋಡುತ್ತೇವೆ ನಮ್ಮ ಹಿಂದೂ ಸನಾತನ ದರ್ಮ ಉಳಿಸಿ ಬೆಳೆಸಿರಿ ಎಂದು ಆಶೀರ್ವಚನ ನೀಡಿದರು.

ವೇ. ಮೂ. ಶ್ರೀ ಮಾಹಾಂತೇಷ ಸ್ವಾಮೀಜಿ ಆಶೀರ್ವಚನ ನೀಡಿದ ಅವರು, ಪವಾಡ ಪುರುಷರು ಸಾವಿರಾರು ಪವಾಡ ಮಾಡಿದ್ದಾರೆ. ಇನ್ನೂ ಪವಾಡಗಳನ್ನು ನಡೆದ್ದೀವೆ. ಶ್ರೀ ಹಠಯೋಗಿ ರೇವಣಸಿದ್ದೇಶ್ವರ ಮಹಾಸ್ವಾಮಿಗಳು ಅವರಸನ್ನಿಧಿಯಲ್ಲಿ ಬಡವರ ಮದುವೆ ಅಲ್ಲ ಪುಣ್ಯವಂತರ ಮದುವೆ ಈ ಮಠದಲ್ಲಿ ಸಾವಿರಾರು ಮದುವೆಗಳನ್ನೂ ಆಗಿ ಹೋಗಿವೆ ಶ್ರೀ ಹಠಯೋಗಿ ರೇವಸಿದ್ದೇಶ್ವರ ಪವಾಡ ಪುರುಷ ಅವರು ಹೇಳದಂತೆ ಪವಾಡಗಳನ್ನು ಇವಾಗಲೂ ನಡದ್ದಿವೆ ಎಂದು ಹೇಳಿದರು.

ಭೀಮಾಶಂಕರ ಸಕ್ಕರೆ ಕಾರ್ಖಾನೆ ನಿರ್ದೇಶಕ ಎಂ.ಆರ್. ಪಾಟೀಲ ಮಾತನಾಡಿ, 40ನೇಯ ವರ್ಷಗಳಿಂದ ಶ್ರೀ ಹಠಯೋಗಿ ರೇವಣಸಿದ್ದೇಶ್ವರ ಪುಣ್ಯ ರಾಧನೆಯದಲ್ಲಿ ಸಾಮೂಹಿಕ ವಿವಾಹದಲ್ಲಿ ವಿವಾಹಯಾಗುವ ವದು-ವರಗಳು ಭಾಗ್ಯವಂತರು ಪುಣ್ಯವಂತರು ಎಂದರು.

ಈ ಸಂದರ್ಭದಲ್ಲಿ ಸಾನಿಧ್ಯ ಶ್ರೀ ಗುರು ಗುರುಪಾದೇಶ್ವರ ಶಿವಚಾರ್ಯರ ಹಿರೇಮಠ ಹಾವಿನಾಳ - ಹತ್ತಳ್ಳಿ, ಶ್ರೀ ಅಭಿನವ ರಾಚೋಟೇಶ್ವರ ಶಿವಾಚಾರ್ಯರು, ಶ್ರೀ ಜಯಸಿದ್ದೇಶ್ವರ ಶಿವಾಚಾರ್ಯರು ಹಿರೂರ ತಮದಡ್ಡಿ, ಶ್ರೀ ಚಂದ್ರಶೇಖರ್ ಶಿವಾಚಾರ್ಯರ ಆಲಮೇಲ, ಸಂತೋಷಗೌಡ ಪಾಟೀಲ, ರಾಘವೇಂದ್ರ ಸಾಹುಕಾರ ಕಾಪಸೆ, ಧನರಾಜ ಮುಜಗೊಂಡ, ಸಣ್ಣಪ್ಪ ತಳವಾರ, ನಾಗನಾಥಗೌಡ ಬಿರಾದಾರ , ಡಿವೈಎಸ್ಪಿ ಕಟ್ಟಿಮನಿ, ಚಡಚಣ ಸಿಪಿಐ ಪರುಶುರಾಮ ಮನಗೂಳಿ, ಪಿಎಸ್‌ಐ ಮಂಜುನಾಥ ತೀರಕ್ಕನ್ನವರ, ವಿನೋಧ ಶಿರಶ್ಯಾಡ, ಇಂಡಿ ಪಿಎಸ್‌ಐ ಎಂ.ಬಿ. ಬಿರಾದಾರ, ಪೊಲೀಸ್, ಆರೋಗ್ಯ, ಅಂಗನವಾಡಿ, ಇಲಾಖೆ, ಹಾಗೂ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ವಕೀಲರ ಸಂಘದಿಂದ ಕಾಮಗಾರಿ ತಡೆಗೆ ಮನವಿ

ಹಗರಿಬೊಮ್ಮನಹಳ್ಳಿ: ನ್ಯಾಯಾಲಯಕ್ಕೆ ಮುಂಜೂರಾದ ನಿವೇಶನದಲ್ಲಿ ಇಲಾಖೆಯ ಇಂಜಿನಿಯರ್ ಕೆಲಸ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಕಾಮಗಾರಿಯನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿ ಪುರಸಭೆ ಅಧಿಕಾರಿ ಮಾರೆಪ್ಪ ಅವರಿಗೆ ಹಗರಿಬೊಮ್ಮನಹಳ್ಳಿ ವಕೀಲರ ಸಂಘದಿಂದ ಮನವಿ ಸಲ್ಲಿಸಲಾಯಿತು. ನ್ಯಾಯಾಲಯಕ್ಕೆ ಬೇಕಾದ ಸ.ನಂ.260 ನ.3.44 ಎಕರೆ ವಿಸ್ತೀರ್ಣದಲ್ಲಿ 44 ಸೆಂಟ್ಸ್ ನ್ನೂ ನಿವೇಶನ ಒದಗಿಸಲು ಶಾಸಕರಿಗೆ,ಸಂಸದರಿಗೆ ಉಸ್ತುವಾರಿ ಸಚಿವರು ನಿರ್ಣಯಿಸಿ ಸ್ಥಳೀಯ ತಹಶೀಲ್ದಾರ್ ಪಿಡಬ್ಲ್ಯೂಡಿ ಯವರು ಅಳತೆ ಮಾಡಿ ನಕಾಶೆಯನ್ನು ಸಿದ್ಧಪಡಿಸಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಜಿಲ್ಲಾ ನ್ಯಾಯಾಲಯ ವಿಜಯನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸಿ ಆ ಪ್ರಕಾರ ನ್ಯಾಯಾಲಯದ ಪೂರ್ವ ಮತ್ತು ಪಶ್ಚಿಮ 80 ಅಡಿ ಹಾಗೂ ಉತ್ತರ ದಕ್ಷಿಣ 260 ಅಡಿಗಳನ್ನು ನ್ಯಾಯಾಲಕ್ಕಾಗಿ ಮೀಸಲಿಡಬೇಕೆಂದು ವರದಿ ಸಲ್ಲಿಸಿದ್ದರು. ಇಂದು ಇಲಾಖೆಯ ಸಂಬಂಧ ಪಟ್ಟ ಇಂಜಿನಿಯರ್ ನ್ಯಾಯಾಲಯಕ್ಕೆ ಮೀಸಲಿಟ್ಟ ಜಾಗದಲ್ಲಿ ಕೆಲಸ ಕಾರ್ಯಗಳ ಕಾಮಗಾರಿಗಳನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದ ಕಾಮಗಾರಿ ಕೆಲಸವನ್ನು ಕೂಡಲೇ ನಿಲ್ಲಿಸಬೇಕೆಂದು ವಕೀಲರ ಸಂಘದಿಂದ ಒತ್ತಾಯಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್, ಉಪಾಧ್ಯಕ್ಷ ಬಿ.ಎಂ. ಆಂಜನೇಯ, ಕಾರ್ಯದರ್ಶಿ ಡಿ.ಮಂಜಣ್ಣ ಜಂಟಿ ನಿರ್ದೇಶಕ ಕೆ.ಪ್ರಹ್ಲಾದ್, ಖಜಾಂಚಿ ಪೂರ್ಣಿಮ ಕೆ.ನಿಕಟ ಪೂರ್ವ ಅಧ್ಯಕ್ಷ ಪಿ ರಮೇಶ್ ಹಿರಿಯ ವಕೀಲರಾದ ಶಿವಯೋಗಿ ಬಿ.ವಿ.ಸತ್ಯನಾರಾಯಣ ಎಚ್., ವಿಶಾಲಾಕ್ಷಮ್ಮ ಕನಕೇರಿ ಅಶೋಕ್, ಬಾವಿ ಪ್ರಕಾಶ್ ಲಿಂಗನ ಗೌಡ್ರು,ಸಿ ಬಸವರಾಜ, ಟಿಜಿಎಂ ಕೊಟ್ರೇಶ್, ಅಕ್ಕಿ ಮಲ್ಲಿಕಾರ್ಜುನ, ಸುಭಾಷ್ ನಾಯ್ಕ್, ಯು.ಕೊಟ್ರೇಶ್, ಕೆ.ಜಗದೀಶ್, ಎಸ್.ನರೇಂದ್ರ ಬಾಬು, ಟಿ.ಶಿವಪ್ರಕಾಶ, ಬಿ.ಬಸವರಾಜ್, ಸಿ.ಹುಲುಗಪ್ಪ ಎ.ಚಂದ್ರ ಶೇಖರ್, ಸಂತೋಷ ಎಚ್.ಎಂ.ವೀಣಾ ಎಸ್. ರಶ್ಮಿ ಬಣಕಾರ್, ಎಚ್.ಮಹಾಲಿಂಗಪ್ಪ ಹಾಗೂ ವಕೀಲರ ಸಂಘದ ಇತರರು ಇದ್ದರು.

ಪುಸ್ತಕ ಆಯ್ಕೆ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ವಿಜಯನಗರ: 2022ರಲ್ಲಿ ಪ್ರಥಮ ಮುದ್ರಣಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ಇಲಾಖೆ ಜಾಲತಾಣ dpl. karnataka.gov.in ನಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಲೇಖಕ – ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಸರಬರಾಜುದಾರರು ಸಲ್ಲಿಸಿದ ಪುಸ್ತಕಗಳ ಹೆಸರು, ಪ್ರಕಾಶಕರ, ಮಾರಾಟಗಾರರ ಪುಸ್ತಕಗಳಲ್ಲಿ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಮುಖಬೆಲೆ ಮತ್ತು ನಿಗದಿತ ಬೆಲೆಯಲ್ಲಿ ಹೆಚ್ಚು ಅಥವಾ ಕಡಿಮೆಯಾದಲ್ಲಿ ಪುಸ್ತಕದ ಅಳತೆ ಪು ಸಂಖ್ಯೆ ಇನ್ನಿತರೆ ಯಾವುದೇ ತಾಂತ್ರಿಕ ಲೋಪ ದೋಷಗಳಿದ್ದಲ್ಲಿ ಮಾ.16ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ವೀದಿ ಬೆಂಗಳೂರು ಇಲ್ಲಿಗೆ ಲಿಖಿತ ಅಥವಾ ಇ–ಮೇಲ್ ಮೂಲಕ ಮನವಿ ಸಲ್ಲಿಸಲು ಸೂಚಿಸಿದೆ. ಅವಧಿಯ ನಂತರ ಬಂದ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

8ನೇ ತರಗತಿ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

ಬಳ್ಳಾರಿ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಸಾಲಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಗಂಡು ಮಕ್ಕಳಿಗೆ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 8ನೇ ತರಗತಿ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಜಿಲ್ಲೆಯಿಂದ ಅರ್ಹ 06 ವಿದ್ಯಾರ್ಥಿಗಳಿಗೆ ಸೌಲಭ್ಯವಿದ್ದು, ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಪರಿಶಿಷ್ಟ ಜಾತಿಯ ಅನೈರ್ಮಲ್ಯಕರ ವೃತ್ತಿಗಳಲ್ಲಿ ತೊಡಗಿರುವ ಪೋಷಕರ ವರ್ಗದಡಿ–03 ಮತ್ತು ಪರಿಶಿಷ್ಟ ವರ್ಗದ (ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ?ಮ ಹಾಗೂ ಅತಿ ಸೂಕ್ಷ್ಮ?ಮ ಸಮುದಾಯ) 03 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅರ್ಜಿಗಳನ್ನು ನಗರದ ಕೌಲ್ ಬಜಾರ್ ನ 1ನೇ ಗೇಟ್ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು, ಭರ್ತಿ ಮಾಡಿ ಅರ್ಜಿಯೊಂದಿಗೆ 6 ಮತ್ತು 7 ನೇ ತರಗತಿಯ ಅಂಕಪಟ್ಟಿ ಹಾಗೂ ಇತರೆ ದಾಖಲೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಮಾ.24 ಕೊನೆಯ ದಿನವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ; ನ್ಯಾಯಾಲಯಕ್ಕೆ ಮುಂಜೂರಾದ ನಿವೇಶನದಲ್ಲಿ ಇಲಾಖೆಯ ಇಂಜಿನಿಯರ್ ಕೆಲಸ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಕಾಮಗಾರಿಯನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿ ಪುರಸಭೆ ಅಧಿಕಾರಿ ಮಾರೆಪ್ಪ ಅವರಿಗೆ ಹಗರಿಬೊಮ್ಮನಹಳ್ಳಿ ವಕೀಲರ ಸಂಘದಿಂದ ಮನವಿ ಸಲ್ಲಿಸಲಾಯಿತು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಕೊಪ್ಪಳ: ಕ್ಷೇತ್ರದಲ್ಲಿ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ಕಳೆದ ವರ್ಷ ಅಂದಾಜು ಮೊತ್ತ 180ಕ್ಕೂ ಅಧಿಕ ಕೋಟಿ ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇವು. ಕೆಲವು ರಸ್ತೆಗಳ ಕಾಮಗಾರಿ ಪೂರ್ಣಗೊಂಡಿದ್ದು ಇನ್ನೂ ಕೆಲವು ರಸ್ತೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ್ ಹೇಳಿದರು.

ಡಂಬ್ರಳ್ಳಿ ಗ್ರಾಮದಲ್ಲಿ 1 ಕೋಟಿ ವೆಚ್ಚದಲ್ಲಿ ರಾಜ್ಯ ಹೆದ್ದಾರಿ–29ರಿಂದ ಡಂಬ್ರಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿದರು.

ಈ ವರ್ಷದ ಆರ್ಥಿಕ ವರ್ಷದಲ್ಲಿ ಕೂಡ ರಸ್ತೆಗಳ ಅಭಿವೃದ್ಧಿಗೆ 200 ಕೋಟಿ ಅನುದಾನ ತರುವ ಕೆಲಸ ಮಾಡಿ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಹದಗೆಟ್ಟಿರುವ ಕ್ಷೇತ್ರದ ಎಲ್ಲ ರಸ್ತೆಗಳನ್ನು ಈ ವರ್ಷದಲ್ಲಿಯೇ ಅಭಿವೃದ್ಧಿ ಪಡಿಸಿ ಸುಗಮ ಸಂಚಾರಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಕೊಪ್ಪಳ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ್, ರಾಬಕೊವಿ ನಿರ್ದೇಶಕರಾದ ಕೃಷ್ಣರೆಡ್ಡಿ ಗಲ್ಬಿ, ಕಾಂಗ್ರೆಸ್ ಮುಖಂಡರಾದ ಯಲ್ಲನಗೌಡ್ರು ಗುಡ್ಲಾನೂರು, ಕೇಶವ್ ರೆಡ್ಡಿ, ಗಾಳೆಪ್ಪ ಪೂಜಾರ್, ನಿಂಗಪ್ಪ ಯತ್ನಟ್ಟಿ, ರಾಮನಗೌಡ, ಶಂಕ್ರಪ್ಪ ಮಾಟ್ರ, ಬಸುರೆಡ್ಡಿ, ದೇವರೆಡ್ಡಿ ಮಾಟ್ರ, ಯಂಕಪ್ಪ ಮಡಿವಾಳ, ಅಶೋಕ್ ಹರಿಜನ್, ಪ್ರಶಾಂತ್ ನಾಯಕ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕೊಪ್ಪಳ: ಡಂಬ್ರಳ್ಳಿ ಗ್ರಾಮದಲ್ಲಿ 1 ಕೋಟಿ ವೆಚ್ಚದಲ್ಲಿ ರಾಜ್ಯ ಹೆದ್ದಾರಿ–29ರಿಂದ ಡಂಬ್ರಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಾಘವೇಂದ್ರ ಹಿಟ್ನಾಳ್‌ಭೂಮಿಪೂಜೆ

ಮಹಿಳಾ ದಿನಾಚರಣೆ | ನ್ಯಾ.ಮಂಜುನಾಥ ಆರ್. ಅಭಿಮತ

ತಾಯಿ ಅನುಗ್ರಹದಿಂದ ಸಾಧನೆ ಸಾಧ್ಯ

ಕುಷ್ಟಗಿ: ತಾಯಿ ಅನುಗ್ರಹದಿಂದ ಸಾಧನೆ ಮಾಡಲು ಸಾಧ್ಯ. ಪ್ರತಿಯೊಬ್ಬ ಪುರಷನ ಏಳ್ಗೆಯ ಹಿಂದೆ ತಾಯಿ, ಸಹೋದರಿ, ಮಡದಿ ಇರುತ್ತಾರೆ. ತಾಯಿಗೆ ನಾವು ಏನು ಕೊಟ್ಟಿದ್ದೇವೆ ಎಂದು ಆತ್ಮ ಅವಲೋಕನ ಮಾಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಂಜುನಾಥ ಆರ್. ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ ಹಾಗೂ ತಾಲೂಕು ಆಡಳಿತದ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತನ್ನನ್ನು ತಾನೂ ದೀಪದಂತೆ ಉರಿಸಿ ತನ್ನ ಕುಟುಂಬಕ್ಕಾಗಿ ಸಲವುವಳು ತಾಯಿ, ದೇಶಕ್ಕೆ ವೀರಯೋಧರ ನೀಡಿದ ತಾಯಿಯಂದಿರೆಲ್ಲರಿಗೂ ಮಹಿಳಾ ದಿನಾಚರಣೆ ಶುಭಾಶಯಗಳು. ತನ್ನನ್ನು ತಾನು ಬೆನ್ನು ತಟ್ಟಿಕೊಳ್ಳದೆ ಯಾವುದೇ ಪ್ರತಿಫಲ ಅಪೇಕ್ಷೇ ಇಲ್ಲದೇ ಸಾಕಿ ಸಲವುವಳು ತಾಯಿ. ವಿದ್ಯಾರ್ಥಿಗಳಿಗೆ ದ್ರೌಪದಿ ಮುರ್ಮು,ಸಾಲುಮರದ ತಿಮಕ್ಕ, ಸುಧಾಮೂರ್ತಿ ಸೇರಿದಂತೆ ಸಾಧನೆ ಮಾಡಿದ ಮಹಿಳೆಯರು ಸ್ಫೂರ್ತಿಯಾಗಬೇಕು ಎಂದರು.

ಯುವತಿಯರು ಪ್ರೀತಿ, ಪ್ರೇಮದ ಸುಳಿಯಲ್ಲಿ ಸಿಲುಕದೆ. ಉತ್ತಮ ವ್ಯಾಸಂಗ ಪಡೆದು ತಂದೆ, ತಾಯಿಯ ಆಸೆಯನ್ನು ಈಡೇರಿಸಬೇಕು. ನಿಮ್ಮಿಂದ ಈ ದೇಶಕ್ಕೆ ಕೊಡುಗೆ ನೀಡಬೇಕು. ಡಿಜಿಟಲ್ ಸಾಧನ ನಮ್ಮ ಜೀವನಕ್ಕೆ ಪೂರಕವಾಗಬೇಕು. ಮಾರಕವಾಗ ಬಾರದು. ವಿದ್ಯಾರ್ಥಿ ಜೀವನದಲ್ಲಿ ಯಾವುದೇ ಆಮಿಷ್ಯಕ್ಕೆ ಒಳಗಾಗದೇ ಓದಿನ ಕಡೆ ಗಮನ ಕೊಡಬೇಕು ಎಂದರು.

ಸಿಡಿಪಿಓ ಯಲ್ಲಮ್ಮ ಹಂಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರೇಡ್ –02 ತಹಶೀಲ್ದಾರ್ ರಜೇನಿಕಾಂತ ಕೆಂಗೇರಿ, ಕೊಪ್ಪಳ ವಿವಿಯ ಕುಲಪತಿ ಡಾ.ಎಸ್ .ವಿ.ಡಾಣಿ, ಸಮಾಜ ಕಲ್ಯಾಣ ಅಧಿಕಾರಿ ತುಗ್ಗೇಲಪ್ಪ ದೇಸಾಯಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ವೀರಪ್ಪ, ವಕೀಲರ ಸಂಘದ ಅಧ್ಯಕ್ಷ ಎಚ್. ಆರ್.ನಾಯಕ, ಸಹಾಯಕ ಸರ್ಕಾರಿ ಅಭಿಯೋಜಕ ರಾಯನಗೌಡ ಎಲ್., ಅಪರ ಸರ್ಕಾರಿ ವಕೀಲ ಪರಸಪ್ಪ ಗುಜಮಾಗಡಿ, ವಕೀಲರ ಸಂಘದ ಕಾರ್ಯದರ್ಶಿ ಶಶಿಧರ ಶೆಟ್ಟರ್, ವಕೀಲರಾದ ಮರಿಯಪ್ಪ ಲಿಂಗದಹಳ್ಳಿ, ಮಲ್ಲು ಕೊನಸಾಗರ, ಲತಾ ಸ್ಥಾವರಮಠ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯರು, ವಸತಿ ನಿಲಯದ ಬಾಲಕಿಯರು ಇದ್ದರು.



> **ಮಹಿಳೆಯರ ಮತ್ತು ಮಕ್ಕಳ ಮೇಲಿನ ಡೆಯುವ ಶೋಷಣೆ ದೌರ್ಜನ್ಯ ತಡೆಯಬೇಕು. ಈ ದೇಶದ ಸಂಪತ್ತು ಯುವಕರು, ಗ್ರಾಮೀಣ ಭಾಗದಲ್ಲಿ ಯುಕವಕರಿಗಿಂತ ಕುಡುಕರ ಸಂಖ್ಯೆ ಹೆಚ್ಚಳವಾಗಿದೆ. ಓದಿನ ಕಡೆ ಗಮನ ಕೊಟ್ಟು ತಂದೆ, ತಾಯಿಯ ಕೀರ್ತಿ ತರಬೇಕು. ನಿಮ್ಮ ತಂದೆ, ತಾಯಿಗಳು ನಿಮ್ಮಗೆ ಶಿಕ್ಷಣ ಕೊಡಿಸಲು ಎಷ್ಟು ಪರಿಶ್ರಮ ಪಡುತಿದ್ದಾರೆ ಎಂದು ಒಂದು ಸಾರಿ ಅವರನ್ನು ಸ್ಮರಿಸಿಕೊಂಡು ಓದಿನ ಕಡೆ ಗಮನ ಕೊಡಬೇಕು.**
> ■ ವಿಶ್ವನಾಥ ಹಿರೇಗೌಡ್ರು, ಸಿಪಿಐ

> **ಯುವತಿಯರು ಪ್ರೀತಿ, ಪ್ರೇಮದ ಸುಳಿಯಲ್ಲಿ ಸಿಲುಕದೆ. ಉತ್ತಮ ವ್ಯಾಸಂಗ ಪಡೆದು ತಂದೆ, ತಾಯಿಯ ಆಸೆಯನ್ನು ಈಡೇರಿಸಬೇಕು.**

ಕೂಳಿಗಾಗಿ ಅಲ್ಲ ಧೂಳಿಗಾಗಿ ನಡೆದ ಹೋರಾಟ

ಕೊಪ್ಪಳ: ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ನಗರಸಭೆ ಬಯಲಿನಲ್ಲಿ ನಡೆದ ಹೋರಾಟ 129ನೇ ದಿನದ ಕಾಲಿಟ್ಟಿದೆ.

ವಕೀಲ ಉಮೇಶ ಮಾಳೆಕೊಪ್ಪ ಮಾತನಾಡಿ, ಅವರು ಒಂದು ಕಾಲದಲ್ಲಿ ಜನರು ಸರ್ಕಾರದ ಮುಂದೆ ತಾವು ಬದುಕಲು ಆಗತ್ಯ ಸೌಕರ್ಯಗಳನ್ನು ಒದಗಿಸಬೇಕು ಎಂದು ಹೋರಾಡುತ್ತಿದ್ದರು. ಈಗ ನೋಡಿ ಜೀವ ಉಳಿಸಿ, ಆರೋಗ್ಯ ಉಳಿಸಿ ಎಂದು ಹೋರಾಟ ಮಾಡುವುದು ಎಂತಹ ವಿಪರ್ಯಾಸ. ಕ್ಯಾನ್ಸರ್ ಆಸ್ಪತ್ರೆ ಸಾಧನೆಯ ಪ್ರತೀಕವಾಗಿದೆಯೇ ಎಂದು ಪ್ರಶ್ನಿಸಿದ ಅವರು, ಮುಂದಿನ ದಿನ ರೋಗಗಳಿಗೆ ಸಿದ್ಧರಾಗಿ ಎನ್ನುವ ಸೂಚನೆ ಇದೆ. ನಾವು ಈಗಾಗಲೇ ಬಾಧಿತರಾಗಿದ್ದು, ಹಳ್ಳಿಗೆ ಬಂದ ಸ್ಥಿತಿ ಇನ್ನು ಕೆಲವೇ ದಿನಗಳಲ್ಲಿ ಈಗ ಕಾರ್ಯಾಚರಣೆ ಮಾಡುತ್ತಿರುವ ಕಾರ್ಖಾನೆಗಳಿಂದ ನಮಗೂ ಬರುತ್ತದೆ. ಅವುಗಳ ವಿಷಾನಿಲ ನಿಯಂತ್ರಣ ಮಾಡದಿರುವ ರಾಜಕಾರಣಿಗಳು ನಮಗೇಕೆ ಬೇಕು ಎಂದು ಪ್ರಶ್ನಿಸಿದರು. ಕೊಪ್ಪಳ ವಕೀಲರು ಸದಾ ಜನರ ಜೊತೆಗಿದ್ದು ಹೋರಾಡುತ್ತೇವೆ ಎಂದರು.

ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ನಾವು ಈಗಿನಿಂದಲೇ ಬೆಂಗಳೂರು ಚಲೋ ಸತ್ಯಾಗ್ರಹದ ಅನುಮತಿ ಪಡೆಯುವ ಪ್ರಕ್ರಿಯೆ ಆರಂಭಿಸಿದ್ದೇವೆ. ಕೊಪ್ಪಳ ಮತ್ತು ಕಾರ್ಖಾನೆ ಬಾಧಿತ ಹಳ್ಳಿಯ ಜನರು ಬೆಂಗಳೂರು ಚಲೋ ಹೋರಾಟಕ್ಕೆ ಸ್ವಯಂ ಪ್ರೇರಿತವಾಗಿ ಮುಂದೆ ಬರಬೇಕೆಂದು ವಿನಂತಿಸಿದರು.

ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ ಮಾತನಾಡಿ, ಭೂಮಿ ರೈತರು ಸ್ವಯಂ ಪ್ರೇರಿತವಾಗಿ ಕಾರ್ಖಾನೆಗಳಿಗೆ ಕೊಟ್ಟಿಲ್ಲ, ಕೆಐಎಡಿಬಿ ಬಲವಂತದಿಂದ ಭೂಸ್ವಾಧೀನ ಮಾಡಿದೆ. ಮತ್ತೊಂದು ಕಡೆ ಮಧ್ಯವರ್ತಿಗಳ ಮೂಲಕ ವಂಚಿಸಿ ಭೂಮಿ ಕಿತ್ತುಕೊಂಡ ಕಾರ್ಖಾನೆಗಳು ಯಾವ ಉದ್ಯೋಗಗಳನ್ನು ಭೂಬಾಧಿತರಿಗೆ ಕೊಟ್ಟಿಲ್ಲ. ಆರೋಗ್ಯವಿಲ್ಲದ ಉದ್ಯೋಗ ವ್ಯಸನ ಬೇಡ ಎಂದರು.

ಜಂಟಿ ಕ್ರಿಯಾ ವೇದಿಕೆ ಸಂಚಾಲಕ ಮಂಜುನಾಥ ಜಿ. ಗೊಂಡಬಾಳ, ಗಂಗಾಧರ ಖಾನಾಪೂರ, ಮಹಾದೇವಪ್ಪ ಮಾವಿನಮಡು, ರಾಜಶೇಖರ ಏಳುಬಾವಿ, ನಾಗರಾಜ ಕುಷ್ಟಗಿ, ಎಸ್.ಎಂ. ಕಂಬಾಳಿಮಠ, ಶಿವಕುಮಾರ ಹಿರೇಮಠ, ವಿಜಯ ಮಹಾಂತೇಶ ಹಟ್ಟಿ, ಎಸ್.ಬಿ.ರಾಜೂರು, ರವಿ ಕಾಂತನವರ, ಗಂಗಮ್ಮ ಕೊಡೇಕಲ್, ಶಿವಲಿಂಗಪ್ಪ ವಣಗೇರಿ, ಜಿ. ವೆಂಕಟೇಶ ಗುಳೇದಾಳ, ಪಂಪಣ್ಣ ಚಿಂತಪಲ್ಲಿ, ಸುಭಾನ್ ಸಾಬ್ ನೀರಲಗಿ, ಶಂಕ್ರಪ್ಪ ಗುಳದಳ್ಳಿ ಇದ್ದರು.



ಶಿವಾಜಿ ಒಂದೇ ಸಮುದಾಯಕ್ಕೆ ಸೀಮಿತರಲ್ಲ

ಮಾನ್ವಿ: ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀಛತ್ರಪತಿ ಶಿವಾಜಿ ಯುವಕರ ಸೇನೆ ಮಾನ್ವಿ ವತಿಯಿಂದ ನಡೆದ ಶ್ರೀಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅದ್ದೂರಿಯಾಗಿ ನಡೆಯಿತು.

ಈ ವೇಳೆ ಚೀಕಲಪರ್ವಿ ಶ್ರೀರುದ್ರಮುನೀಶ್ವರ ಮಠದ ಸದಾಶಿವ ಸ್ವಾಮೀಜಿ ಆಶೀರ್ವಾಚನ ನೀಡಿ, ನಮ್ಮ ಪುಣ್ಯ ಭೂಮಿ ಭಾರತದೇಶವು ಅನೇಕ ಮಹಾನಿಯರು, ಸಂತರು, ಯೋಗಿಗಳನ್ನು ಕಂಡಿದ್ದು ನಾಡಿನ ಮಹಾನಿಯರನ್ನು ಒಂದು ಸಮುದಾಯಕ್ಕೆ, ಜಾತಿ, ಧರ್ಮಗಳಿಗೆ ಸೀಮಿತ ಗೊಳ್ಳಿಸಲಾಗುತ್ತಿರುವುದು ಸರಿಯಲ್ಲ. ಮಹಾನಿಯರ ಜೀವನ, ತತ್ವ, ಸಂದೇಶ, ಸಾಧನೆಗಳನ್ನು ಸದಾ ಸ್ಮರಿಸಿಕೊಳ್ಳುವ ಮೂಲಕ ಅವರನ್ನು ವಿಶ್ವಮಾನವರನ್ನಾಗಿ ಕಾಣುವುದೆ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ. ಯುವ ಸಮುದಾಯ ಸಮಾಜದಲ್ಲಿನ ಎಲ್ಲಾರನ್ನು ಕೂಡ ಸಮಾನವಾಗಿ ಕಾಣುವ, ಪ್ರತಿಯೊಬ್ಬರು ಕೂಡ ತಮ್ಮ ದೇಶ, ಧರ್ಮ, ಸಂಸ್ಕೃತಿ ಪರಂಪರೆಯ ಬಗ್ಗೆ ಗೌರವ ಭಾವನೆಯನ್ನು ಬೆಳಸಿಕೊಳ್ಳಬೇಕಾಗಿದೆ. ಶಿವಾಜಿ ಮಹಾರಾಜರು ತಮ್ಮ ಜೀವನವನ್ನು ಹಿಂದೂ ಧರ್ಮದ ರಕ್ಷಣೆಗಾಗಿ ಮುಡಿಪಾಗಿಟ್ಟಿದ್ದರು. ಶಿವಾಜಿ ಪ್ರತಿಯೊಬ್ಬ ಮಹಿಳೆಯರಲ್ಲಿ ತಾವು ಪೂಜಿಸುವ ತಾಯಿ ತುಳಜಾ ಭವನಿಯನ್ನು ಕಾಣುತ್ತಿದ್ದರು ಹಾಗೂ ಗೌರವಿಸುತ್ತಿದ್ದರು ಎಂದು ತಿಳಿಸಿದರು. ಹುಬ್ಬಳಿಯ ನಿರಾಮಯ ಫೌಂಡೇಶನ್ ಸಂಸ್ಥಾಪಕ ಡಾ.ಮಲ್ಲಿಕಾರ್ಜುನ ಬಾಳೆಕಾಯಿ ಧಿಕ್ಸೂಚಿ ಭಾಷಣದಲ್ಲಿ ಮಾತನಾಡಿ, ಸನಾತನ ಧರ್ಮವು ಇಂದು ವಿಶ್ವದ ಗಮನವನ್ನು ಸೆಳೆದು ವಿಶ್ವಗುರುವಾಗಿರುವುದಕ್ಕೆ , ಸಾವಿರಾರು ವರ್ಷಗಳ ಪರಕಿಯರ ದಾಳಿಯ ನಂತರವು ಇಂದಿಗೂ ಕೂಡ ಉಳಿದುಕೊಂಡಿರುವುದಕ್ಕೆ ಹಿಂದೂ ಧರ್ಮದಲ್ಲಿನ ಶರಣರು,ಸಂತರು,ಯೋಗಿಗಳು, ಆರೂಢರು, ಸ್ವಾಮಿಜಿಗಳು , ಮಹಾತ್ಮರು ನೀಡಿದ ಸಂದೇಶ, ಭೋದಿಸಿದ ಧರ್ಮ ಮಾರ್ಗವಾಗಿದೆ ಎಂದು ತಿಳಿಸಿದರು. ಶಾಂತ ಬಲ್ಲಟಗಿ ರವರಿಂದ ಗಾಯನ ನಡೆಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕರೆಗುಡ್ಡ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಮಹಾಸ್ವಾಮಿಗಳು, ನವಲಕಲ್ ಸಂಸ್ಥಾನ ಬೃಹನ್ಮಠದ ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಸ್ವಾಮೀಜಿ, ಅಂಕಲಗಿ ಶ್ರೀ ಅಡವಿಸಿದ್ದೇಶ್ವರ ಸಂಸ್ಥಾನಮಠದ ಡಾ.ಶ್ರೀ ಅಮರಸಿದ್ದೇಶ್ವರ ಮಹಾಸ್ವಾಮಿಗಳು. ಶ್ರೀ ಛತ್ರಪತಿ ಶಿವಾಜಿ ಯುವಕರ ಸೇನೆ ಮಾನ್ವಿ ತಾಲೂಕು ಅಧ್ಯಕ್ಷರಾದ ಬಸವನಗೌಡ ಆಲ್ದಾಳ್ ಇತರರಿದ್ದರು.



ಅನುಭವಗಳ ಸಾರದಿಂದ ಮಾತ್ರ ಉತ್ತಮ ಕವಿಯಾಗಲು ಸಾಧ್ಯ

ಗಂಗಾವತಿ: ಬರೆದದ್ದು ಗೀಚಿದ್ದು ಕವನವಲ್ಲ ಒಬ್ಬ ಉತ್ತಮ ಕವಿಯಾಗಲು ಹೆಚ್ಚು ಅಧ್ಯಯನ ಶೀಲತೆಯನ್ನು ಹಾಗೂ ಜೀವನದ ಅನುಭವಗಳನ್ನು ಹಂಚಿಕೊಂಡಾಗ ಮಾತ್ರ ಅತ್ಯುತ್ತಮವಾದ ಕವಿಯಾಗಲು ಸಾಧ್ಯ ಎಂದು ಸಾಹಿತ್ಯ ಹಾಗೂ ನಾಟಕ ರಚನೆಕಾರ ಎಸ್.ವಿ.ಪಾಟೀಲ ಗುಂಡೂರ್ ಹೇಳಿದರು.

ಅವರು ಶನಿವಾರ ಕನ್ನಡ ಜಾಗೃತಿ ಭವನದಲ್ಲಿ ತಾಲೂಕು ಚುಟುಕು ಸಾಹಿತ್ಯ ಪರಿಷತ್, ಶ್ರೀರಾಜರಾಜೇಶ್ವರಿ ಜನಪದ ಸಾಂಸ್ಕೃತಿಕ ಕಲಾಭಿವೃದ್ಧಿ ಸಂಘ ಅರಳಹಳ್ಳಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಡಾ.ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ ಕವಿಗೋಷ್ಠಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಭತ್ತದ ಕಣಜ ಎನಿಸಿದ ಗಂಗಾವತಿ ವಿಧಾನಸಭಾ ಕ್ಷೇತ್ರ ಭಾಗದಲ್ಲಿ ದಿನದಿಂದ ದಿನಕ್ಕೆ ಕವಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಪ್ರಶಂಶಿಯ ಕಾರ್ಯವಾಗಿದೆ. ಕವಿಗೋಷ್ಠಿಯಲ್ಲಿ ಸುಮಾರು 24 ಅಧಿಕ ಕವಿಗಳು ತಮ್ಮದೇ ಆದಂತಹ ಕವನಗಳನ್ನು ರಚಿಸಿ ವಾಚನ ಮಾಡಿರುವುದು ಅದರಲ್ಲಿ ಹೊಸದಾಗಿ ಸೇರ್ಪಡೆಗೊಂಡ ಕವಿಗಳು ಸ್ವಲ್ಪ ಪ್ರಾಸಗಳನ್ನು ರಚಿಸಲು ಹೋಗಿ ತ್ರಾಸು ಅನುಭವಿಸಿದ್ದು ಕಾಣಬಹುದಾಗಿದೆ. ಉಳಿದಂತೆ ಕವನಗಳನ್ನು ಗಮನಿಸಿದಾಗ ನೋವು ನಲಿವು ಪ್ರೀತಿ ಭಾಷಾಭಿಮಾನ ಇತರೆ ಅಂಶಗಳು ಅತ್ಯುತ್ತಮವಾಗಿ ಮೂಡಿ ಬಂದಿದೆ ಎಂದು ಹೇಳಿದರು.

ದಂತ ವೈದ್ಯ ಡಾ.ಶಿವಕುಮಾರ್ ಮಾಲಿಪಾಟೀಲ, ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ರುದ್ರಪ್ಪ ಭಂಡಾರಿ, ವೆಂಕಟೇಶ್ ದರೋಜಿ, ಎಸ್ .ಬಿ.ಹಿರೇಮಠ್, ಜಿಮುದ್ದಾಬಳ್ಳಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಬೇಸಿಗೆ ಆರಂಭ: ಆರೋಗ್ಯದ ಕಾಳಜಿ ವಹಿಸಲು ಡಿಎಚ್‌ಒ ಸಲಹೆ

ರಾಯಚೂರು: ಬೇಸಿಗೆ ಆರಂಭವಾಗಲಿದ್ದು, ಪ್ರಸಕ್ತ ವರ್ಷ ಬಿಸಿಲಿನ ತಾಪಮಾನವು ಹೆಚ್ಚಾಗುವ ಸಂಭವವಿದೆ ಎಂದು ಭಾರತೀಯ ಹವಮಾನ ಇಲಾಖೆಯ ನಿರಂತರ ಮುನ್ಸೂಚನೆ ಇರುವುದರಿಂದ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮ ಹಾಗೂ ಅವುಗಳ ಮುಂಜಾಗ್ರತಾ ಕ್ರಮಗಳ ಬಗ್ಗೆ ಜಿಲ್ಲೆಯಲ್ಲಿ ಸಾರ್ವಜನಿಕರು ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಡಿಎಚ್‌ಓ ಡಾ.ಸುರೇಂದ್ರ ಬಾಬು ಜಿಲ್ಲೆಯ ಸಾರ್ವಜನಿಕರಲ್ಲಿ ಕೋರಿದ್ದಾರೆ.

ಬಿಸಿಲಿನ ತಾಪಮಾನದಿಂದ ಹೇಗೆ ರಕ್ಷಿಸಿಕೊಳ್ಳಬೇಕು ಮತ್ತು ಬಿಸಿಲಿನ ಬೇಗೆಯಿಂದ ಶಾಖಾಘಾತಕ್ಕೊಳಗಾದಾಗ ತಕ್ಷಣ ಕೈಗೊಳ್ಳಬೇಕಾದ ಮುಂಜಾಗೃತೆ ಬಗ್ಗೆ ಜಿಲ್ಲಾ ವಿಪತ್ತು ನಿರ್ವಹಣ ಪ್ರಾಧಿಕಾರದ ನಿರ್ದೇಶನ ಹಾಗೂ ಹವಮಾನ ಬದಲಾವಣೆ ಮತ್ತು ಮಾನವ ಆರೋಗ್ಯ ಕಾರ್ಯಕ್ರಮದ ಮಾರ್ಗದರ್ಶನದಂತೆ ಈ ಕೆಳಕಂಡಂತೆ ಜಾಗೃತಿ ವಹಿಸಲು ಕೋರಲಾಗಿದೆ. ಮನೆಯ ಹೊರಗೆ ಹೋಗುವಾಗ ಸಡಿಲವಾದ, ತೆಳು ಬಣ್ಣದ ಹತ್ತಿಯ ಬಟ್ಟೆ ಧರಿಸಬೇಕು. ಕೈಗೆಟುಕುವಂತೆ ಕುಡಿಯುವ ನೀರನ್ನು ಇಟ್ಟುಕೊಳ್ಳಿ. ಆಗಾಗ್ಗೆ ನಿಧಾನವಾಗಿ ಧಾರಾಳವಾಗಿ ಉಪ್ಪು, ಸಕ್ಕರೆ ಮಿಶ್ರಿತ ನೀರನ್ನು ಕುಡಿಯಿರಿ. ಹಣ್ಣಿನ ರಸ, ಪಾನಕಗಳನ್ನು ಕುಡಿಯಿರಿ. ಹತ್ತಿಯ ನುಣುಪಾದ ಬಟ್ಟೆ, ಕರವಸ್ತ್ರ ಟಿಶ್ಯು ಪೇಪರ್‌ನಿಂದ ಬೆವರನ್ನು ಒರೆಸಿಕೊಳ್ಳಬೇಕು. ನೀರು, ಮಜ್ಜಿಗೆ ಎಳನೀರು ಕುಡಿಯಬಹುದು. ಆದಷ್ಟು ಮಸಾಲೆ ರಹಿತ, ಶುದ್ಧ ಆಹಾರ ಸೇವಿಸಬೇಕು. ಗಾಳಿಯಾಡುವಂತಹ ಪಾದರಕ್ಷೆ ಧರಿಸಿರಿ. ಮನೆಯಿಂದ ಹೊರಗಡೆ ಹೋಗುವಾಗ ಜೊತೆಯಲ್ಲಿ ತಪ್ಪದೇ ಶುದ್ಧ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಬೇಕು. ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸಿದ ನೀರು ಅಥವಾ ನೀರು ಶುದ್ಧೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು. ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಬಿಗಿಯಾದ, ಗಾಢ ಬಣ್ಣದ, ಸಿಂಥೆಟಿಕ್ ಬಟ್ಟೆ ಧರಿಸಬಾರದು. ಕುಷನ್‌ಯುಕ್ತ ಕುರ್ಚಿಯಲ್ಲಿ ಸತತವಾಗಿ ಕೂಡಬಾರದು. ಸೋಡಾ ಇತ್ಯಾದಿ ಕಾರ್ಬೋನೇಟೆಡ್ ತಂಪು ಪಾನಿಯಗಳನ್ನು ಕುಡಿಯಬೇಡಿ (ಬಾಯಾರಿಕೆಯಾದಾಗ ಕಡ್ಡಾಯವಾಗಿ ನೀರು ಕುಡಿಯಬೇಕು). ಬೆವರನ್ನು ಒರೆಸಲು ಒರಟಾದ ಬಟ್ಟೆಯನ್ನು ಉಪಯೋಗಿಸಬೇಡಿ. ಕಾಫಿ, ಟೀ, ಅತಿ ಸಕ್ಕರೆ ಅಂಶವುಳ್ಳ ಪಾನೀಯ ಅತಿಯಾಗಿ ಸೇವಿಸಬಾರದು ಎಂದು ತಿಳಿಸಿದ್ದಾರೆ.

ಪಾಲಕರು ಮಕ್ಕಳ ಕೈಗೆ ಮೊಬೈಲ್ ನೀಡಬೇಡಿ: ಹಾಲಕೇರಿ

ಕುಕನೂರ: ಪಾಲಕರು ಮಕ್ಕಳ ಕೈಗೆ ಮೊಬೈಲ್ ಕೊಡಬಾರದು, ಮೊಬೈಲ್‌ಗಳಿಂದ ಮಕ್ಕಳ ಶೈಕ್ಷಣಿಕ ಮಟ್ಟ ಕುಸಿತ, ಮೊಬೈಲ್‌ಗಳು ಸಾಮಾಜಿಕ ಜಾಲತಾಣಗಳು ಮಕ್ಕಳನ್ನು ಬಲು ಬೇಗ ಆಕರ್ಷಿಸಿ ಅಭ್ಯಾಸದ ಕಡೆ ಗಮನ ಕಡಿಮೆಯಾಗುತ್ತದೆ ಎಂದು ಇಟಗಿಯ ಪಿಎಂಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದ ಪ್ರಾಚಾರ್ಯ ರಾಮರಡೆಪ್ಪ ಹಾಲಕೇರಿ ಹೇಳಿದರು.

ತಾಲೂಕಿನ ಇಟಗಿ ಗ್ರಾಮದ ಪಿಎಂಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ವಿದ್ಯಾರ್ಥಿ ಪೋಷಕರ ಹಾಗೂ ಪಾಲಕರ ಸಭೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಲಕರು ಶಿಕ್ಷಕರು ವಿದ್ಯಾರ್ಥಿಗಳ ಕಾಳಜಿ ವಹಿಸಿ ಶೈಕ್ಷಣಿಕ ಆಶಯಗಳನ್ನು ಈಡೇರಿಸುವ ಅವಶ್ಯಕತೆ ಇದೆ, ಮಕ್ಕಳು ಶೈಕ್ಷಣಿಕವಾಗಿ ಮುಂದೆ ಬರಲು ಪಾಲಕರು ಹಾಗೂ ಶಿಕ್ಷಕರ ಪಾತ್ರ ಬಹುಮುಖ್ಯ, ಪಾಲಕರು ಮನೆಯಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಓದುವುದಕ್ಕೆ ಹಾಗೂ ಬರೆಯಲು ಒಂದು ಸೂಕ್ತ ಜಾಗವನ್ನು ಮಾಡಬೇಕು, ಮಕ್ಕಳು ಶಾಲೆಯನ್ನು ತಪ್ಪಿಸದಂತೆ ಶಾಲೆಗೆ ಹಾಜರಾಗಿದ್ದರು, ಇಲ್ಲವೇ ಶಾಲೆಯ ಶಿಕ್ಷಕರನ್ನು ಸಂಪರ್ಕಿಸಿ ಖಚಿತ ಮಾಡಿಕೊಳ್ಳಬೇಕು. ಶಾಲೆ ಹಾಗೂ ತರಗತಿಗೆ ನಿರಂತರವಾಗಿ ವಿದ್ಯಾರ್ಥಿಗಳು ಬರುತ್ತಿದ್ದರೆ. ಮಕ್ಕಳ ಶೈಕ್ಷಣಿಕ ಮಟ್ಟದಲ್ಲಿ ಬಹಳ ಬದಲಾವಣೆ ಯಾಗುತ್ತದೆ, ಯಾವ ವಿಷಯದಲ್ಲಿ ಕುಂಠಿತವಾಗಿದ್ದಾರೋ ಆ ವಿಷಯದ ಶಿಕ್ಷಕರನ್ನು ಸರ್ಪಕಿಸಿ ಅವರೊಂದಿಗೆ ಸಮಾಲೋಚಿಸಿ ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಬಹುದು. ತರಗತಿಯ ಎಲ್ಲಾ ಮಕ್ಕಳ ಪಾಲಕರು ಕಾರ್ಯಕ್ರಮಕ್ಕೆ ಬಂದು ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು, ಎಲ್ಲಾ ಶಿಕ್ಷಕರ ಹಾಗೂ ಶಾಲೆಯ ಸಂಪರ್ಕ ಸಾಧನವಾಗುತ್ತದೆ. ಶಿಕ್ಷಕರೊಂದಿಗೆ ಪಾಲಕರು ಕೈಜೋಡಿಸಿದಾಗ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸಲು, ಸಹಾಯ ಆಗುತ್ತದೆ. ಪಾಲಕರ, ಪೋಷಕರ ಪ್ರೀತಿ ಬೆಂಬಲದೊಂದಿಗೆ ಅದಕ್ಕೊಂದು ಒಳ್ಳೆಯ ಅರ್ಥ ಬರುತ್ತದೆ. ಪಾಲಕರ ಶಿಕ್ಷಕರ ಇದು ಬರಿ ಸಭೆಯಲ್ಲ ಇಬ್ಬರು ಒಟ್ಟಾಗಿ ಮಕ್ಕಳ ಭವಿಷ್ಯ ರೂಪಿಸುವ ಸಂವಾದ ವೇದಿಕೆಯಾಗಿದೆ ಎಂದರು.

ಪದಾಧಿಕಾರಿಗಳಾದ ಗವಿಸಿದ್ದಪ್ಪ ಗುಳಗಣ್ಣನವರ್, ಶೈಲಜಾ ಹತ್ತಿಕಟಗಿ, ಶಾಲಾ ಶಿಕ್ಷಕರಾದ ವಿರೂಪಾಕ್ಷಪ್ಪ ಮ್ಯಾಲಿ, ಜಗದೀಶ ಅಜ್ಜಣ್ಣನವರ್, ರಂಗಪ್ಪ ಓಲೇಕರ್, ಜಯಪ್ಪ ಕನಕಮ್ಮನವರ್, ಬಸಮ್ಮ ಮೇಟಿ, ಶರಣಪ್ಪ ಬೊಮಳೇಕರ್, ರೋಹಿಣಿ, ಸಂತೋಷ್ ಕುಮಾರಿ, ನಾಗರಾಜ್ ಸುನಗ, ಶ್ರೀದೇವಿ ಬೆಳದಡಿ, ಮಹೇಶ್ ರಾಮದುರ್ಗ, ಮುರಾರಿ ಭಜಂತ್ರಿ, ವಿಜಯಲಕ್ಷ್ಮೀ ಹಿರೇಮಠ, ಮಯೂರ್ ತಳವಾರ್, ಹನಮಂತ್ ಇಟಗಿ, ಶ್ವೇತಾ ಬನ್ನಿಕೊಪ್ಪ, ಶ್ವೇತ ಹಳ್ಳಿ, ರೂಬಿನಾ ಬೇಗಂ ಲಕ್ಕುಂಡಿ, ಭೀಮಾಂಬಿಕ, ರೈಮನ್ ಹಾಗೂ ಬಸಣ್ಣ, ಎಸ್‌ಡಿಎಂಸಿಯ ಸದಸ್ಯರು, ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳ ಪಾಲಕರು ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಇತರರಿದ್ದರು.



ಶಿಕ್ಷಣದಿಂದ ಉನ್ನತ ಬದುಕು: ಡಾ.ಎಸ್.ವಿ.ಡಾಣಿ

ಯಲಬುರ್ಗಾ: ಸಾಮಾಜಿಕ ಮೌಲ್ಯ ಕಾಪಾಡುವುದರ ಜೊತೆಗೆ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ವಿದ್ಯೆ ಅತಿ ಮುಖ್ಯವಾಗಿರುವುದರಿಂದ ಶಿಕ್ಷಣದಿಂದ ಉನ್ನತ ಬದುಕು ಸಾಗಿಸಲು ಸಾಧ್ಯವಾಗುವುದು ಎಂದು ಕೊಪ್ಪಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಸ್.ವಿ.ಡಾಣಿ ಹೇಳಿದರು.

ಪಟ್ಟಣದ ಎಸ್.ಎ.ನಿಂಗೋಜಿ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ)ದಲ್ಲಿ ಆಯೋಜಿಸಿದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಒಕ್ಕೂಟಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಮಾತ್ರ ಏನೆಲ್ಲಾ ಸಾಧಿಸಬಹುದು ಆ ಕಾರಣಕ್ಕಾಗಿ ಶಿಕ್ಷಣ ಸಂಸ್ಥೆಗಳು ಮಹತ್ವಸ್ಥಾನವನ್ನು ಸಮಾಜದಲ್ಲಿ ಹೊಂದಿವೆ. ಯಾವುದೆ ಒಬ್ಬ ವ್ಯಕ್ತಿ ಕೀಳರಮೆ ತೊರೆದು ಕ್ರಿಯಾಶೀಲರಾಗಿ ಒಳ್ಳೆ ಹವ್ಯಾಸವನ್ನು ರೂಢಿಸಿಕೊಂಡರೆ ಆ ವ್ಯಕ್ತಿಯ ವ್ಯಕ್ತಿತ್ವ ವಿಕಸನಗೊಂಡು ಸಮಾಜದಲ್ಲಿ ಗಮನ ಸೆಳೆಯುತ್ತಾನೆ ಎಂದರು.

ಮುನಿರಾಬಾದದ ಡಯಟ್ ಉಪನ್ಯಾಸಕರಾದ ಎಂ.ಪ್ರಾಣೇಶ್ ಹಾಗೂ ಮಲ್ಲಿಕಾರ್ಜುನ ಬೇಲೇರಿ ಹಿರಿಯ ನ್ಯಾಯವಾದಿ ಸಂಗಮೇಶ ಅಂಗಡಿ ಮಾತನಾಡಿ, ರಾಜಕೀಯ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳು ಪವಿತ್ರವಾಗ ಬೇಕಾದರೆ ಮೌಲ್ಯಯುತ ಶಿಕ್ಷಣದಿಂದ ಮಾತ್ರ ಸಾಧ್ಯವೆಂದು ಹೇಳುತ್ತಾ ವಿದ್ಯೆಯಿಂದ ವಿನಯ ಬರಬೇಕು ಅಹಂಕಾರವನ್ನು ಹೊಂದಿದ ವ್ಯಕ್ತಿ ಎಷ್ಟೇ ಜ್ಞಾನವನ್ನು ಪಡೆದರು ವ್ಯರ್ಥ ಎಂದರು.

ನಿಂಗೋಜಿ ಶಿಕ್ಷಣ ಸಂಸ್ಥೆ ಉತ್ತರೋತ್ತರವಾಗಿ ಬೆಳೆದು ಜಿಲ್ಲೆಯಲ್ಲಿಯೇ ಹೆಸರು ಗಳಿಸಲಿ ಎಂದು ಶುಭಕೋರಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಹಾಗೂ ಟ್ರಸ್ಟಿಗಳಾದ ವೀರಪ್ಪ ಮ.ನಿಂಗೋಜಿ ಅಧ್ಯಕ್ಷತೆ ವಹಿಸಿದ್ದರು. ಹಲವಾರು ಪ್ರಶಿಕ್ಷಣಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು .

ನಿಂಗೋಜಿ ಶಿಕ್ಷಣ ಹಾಗೂ ಗ್ರಾ.ಅ.ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷ ಹಾಗೂ ಹಿರಿಯ ನ್ಯಾಯವಾದಿಗಳಾದ ಶಶಿಕಾಂತ ನಿಂಗೋಜಿ ಪ್ರಾಚಾರ್ಯರಾದ ಡಾ.ಪ್ರಕಾಶ ಡಿ.ಎಚ್.ಡಾ.ರವಿ ನಿಂಗೋಜಿ, ಡಾ.ಗೀತಾ ಕಂದಕೂರ, ನಾಗರಾಜ ತಳವಾರ, ವೈ.ಎಲ್ .ನದಾಫ, ವೀರೇಶ್ ಹೊನ್ನೂರ, ವಿ.ವಿ.ಪತ್ತಾರ, ರಾಘವೇಂದ್ರ ಆರ್.ಬಿ.ಜಿ. ವೀರೇಶ್ ಇನ್ನಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಟ್ರಸ್ಟಿಗಳಾದ ಗದುಗಿನ ಪಿಪಿಜಿ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ವಿ.ಎ.ನಿಂಗೋಜಿ ಶಿಕ್ಷಣ ಸಂಸ್ಥೆ ನಡೆದು ಬಂದ ದಾರಿಯನ್ನು ಪ್ರಾಸ್ತಾವಿಕ ಮಾತಿನಲ್ಲಿ ವಿವರಿಸಿದರು. ವಿದ್ಯಾ ಎಸ್ .ನಿರೂಪಿಸಿದರು. ಕವಿತಾ ಛಲವಾದಿ ಸ್ವಾಗತಿಸಿದರು. ವಾಣೀಶ್ರೀ ಹಾಗೂ ಸಂಗಡಿಗರು ಪ್ರಾರ್ಥನೆಗೈದರು

ವಿಜಯಲಕ್ಷ್ಮೀ ನಿಂಗೋಜಿ ಹಾಗೂ ಶಿವಾನಂದರವರು ಅತಿಥಿಗಳನ್ನು ಪರಿಚಯಿಸಿದರು. ಚೇತನಾ ಕೊಡಗಲಿ ವಂದಿಸಿದರು.



ಕಿರುಸುದ್ದಿ

ಜಂಬನಗೌಡಗೆ ಪಿಎಚ್‌ಡಿ ಪದವಿ ಪ್ರದಾನ



ಬಳ್ಳಾರಿ: ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ಜಂಬನಗೌಡ ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ. ವಿವಿಯ ಡಾ.ಎಂ.ಮಲ್ಲಿಕಾರ್ಜುನ ಗೌಡ ಅವರ ಮಾರ್ಗದರ್ಶನದಲ್ಲಿ 'ವಿಜಯನಗರ ಸಾಮ್ರಾಜ್ಯ ಕುರಿತ ಕನ್ನಡ ನಾಟಕಗಳ ಅಧ್ಯಯನ' ಎನ್ನುವ ವಿಷಯದ ಮೇಲೆ ಸಮಗ್ರ ಅಧ್ಯಯನ ಮಾಡಿ ಸಲ್ಲಿಸಿದ ಮಹಾ ಪ್ರಬಂಧಕ್ಕೆ ಇತ್ತೀಚೆಗೆ ನಡೆದ ಕನ್ನಡ ವಿಶ್ವವಿದ್ಯಾಲಯದ 34 ನೇ ಘಟಿಕೋತ್ಸವದ ನುಡಿ ಹಬ್ಬದಲ್ಲಿ ಜಂಬನಗೌಡ ಅವರಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ.

ಈ ಸಂದರ್ಭದಲ್ಲಿ ಮಾರ್ಗದರ್ಶಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ಪೋಷಕರು, ಮಿತ್ರರು ಅಭಿನಂದನೆ ಸಲ್ಲಿಸಿದ್ದಾರೆ.

ಗೌರವಧನ ಹೆಚ್ಚಿಸಿ: ಬಿ.ಜಯಲಕ್ಷ್ಮೀ

ಹೂವಿನಹಡಗಲಿ: ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸುಮಾರು 45 ವರ್ಷಗಳಿಂದಲೂ ಅಲ್ಪ ಗೌರವಧನದಲ್ಲಿ ಸೇವೆ ಸಲ್ಲಿಸುತ್ತಿದ್ದು, ಶೀಘ್ರ ಗೌರವಧನ ಹೆಚ್ಚಳ ಮಾಡಬೇಕು ಎಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ಎಐಟಿಯುಸಿ ತಾಲೂಕು ಅಧ್ಯಕ್ಷೆ ಬಿ.ಜಯಲಕ್ಷ್ಮೀ ಆಗ್ರಹಿಸಿದ್ದಾರೆ.



ಪಟ್ಟಣದ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ನಮ್ಮ ಕಾರ್ಯಕರ್ತೆಯರು ಸುಮಾರು ವರ್ಷಗಳ ಹಿಂದೆ ಅಲ್ಪ ಗೌರವ ಧನದಲ್ಲಿ ಸೇವೆ ಸಲ್ಲಿಸುತ್ತಿದ್ದು ಈ ಬಾರಿ ಯಾದರೂ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಮಹಿಳೆಯರ ಮೇಲೆ ದುಡಿಯುವ ವರ್ಗದ ಜನರ ಬೇಡಿಕೆಗೆ ಈಡೇರಿಸುವ ಭರವಸೆ ಇಟ್ಟಿದ್ದೇವು. ಆದರೆ ನಮಗೆ ಬಜೆಟ್‌ನಲ್ಲಿ ಸೀರೆ ಘೋಷಿಸಿದ್ದಾರೆ. ಇದು ನಮಗೆ ಇಷ್ಟವಿಲ್ಲ ನಮಗೆ ಸೀರೆ ಬದಲು ಗೌರವ ಧನವನ್ನು ಹೆಚ್ಚಿಸಿ ನಮಗೆ ಮುಖ್ಯವಾಗಿ ಬಹುಕಾಲದ ಬೇಡಿಕೆಯಾದ ಕನಿಷ್ಠ ವೇತನ ಸೇರಿದಂತೆ ಮೂಲ ಸೌಲಭ್ಯ ಜಾರಿ ಮಾಡಬೇಕು ಎಂದು ಒತ್ತಾಯಿದರು.ತಾಲೂಕು ಕಾರ್ಯದರ್ಶಿ ಹೆಚ್.ಸವಿತಾ ಹರವಿ.ಎಐಟಿಯುಸಿ ಮುಖಂಡ ಹಲಗಿ ಸುರೇಶ.ಡಿ.ಮುಕುಂದಗೌಡ.ಇತರರುಇದ್ದರು

ಪೋಷಕ, ಶಿಕ್ಷಕರ ಮಹಾಸಭೆ

ಸುರಪುರ: ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಉತ್ತಮ ಸಮಾಜ ನಿರ್ಮಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಎಂದು ಶಾಲೆಯ ಮುಖ್ಯಗುರು ಸಾಮುವೇಲ್ ಹೇಳಿದರು.

ನಗರದ ಖುರೇಶಿ ಮೊಹಲ್ಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪೋಷಕ ಶಿಕ್ಷಕರ ಮಹಾಸಭೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ಶಾಲೆಯ ಅಭಿವೃದ್ಧಿಯಲ್ಲಿ ಪೋಷಕರ ಪಾತ್ರ ಮಹತ್ವದಾಗಿರುತ್ತದೆ.

ಸರ್ಕಾರದ ಸೌಲಭ್ಯಗಳು, ಬಾಲ್ಯ ವಿವಾಹ ನಿಷೇಧ, ಅವರು ಆರ್‌ಟಿಇ ಕಾಯ್ದೆ, ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣಾ ನೀತಿ, ಪೋಕ್ಸೋ ಕಾಯ್ದೆ ಹಾಗೂ ಶಾಲಾ ಚಟುವಟಿಕೆಗಳ ಕುರಿತು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಪೋಷಕರುಗಳು ಶಾಲೆಯ ವಾತಾವರಣ ಮತ್ತು ಕಲಿಕಾ ಚಟುವಟಿಕೆಗಳ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ಶಾಲೆಯ ಶಿಕ್ಷಕಿಯರಾದ ಮಮತಾ ಪುರಾಣಿಕಮಠ, ರೇಣುಕಾದೇವಿ, ಮಂಜುಳಾ, ಹಣಮಂತಿ, ಪೋಷಕರಾದ ರೇಖಾ, ಗೀತಾ, ತಾಯಮ್ಮ, ಶ್ರೀದೇವಿ, ರೂಪ, ಗೌರಮ್ಮ ಹಾಗೂ ಮಕ್ಕಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವಿಜಯನಗರ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ ಹೊಸಪೇಟೆ ತಾಲೂಕು ಘಟಕದಿಂದ ಸಾಧ್ಯ ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ನೋಟ್ ಪುಸ್ತಕ ಪೆನ್ ಮತ್ತು ಸಿಹಿ ವಿತರಿಸುವ ಮೂಲಕ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು. ಟ್ರಸ್ಟ್‌ನ ಸಂಸ್ಥಾಪಕಿ ಆರತಿ, ರಾಜ್ಯ ಸಂಘಟನಾ ಕಾರ್ಯದರ್ಶಿ ರೇಷ್ಮಾ, ತಾಲೂಕು ಅಧ್ಯಕ್ಷೆ ರೂಪಾ ಇತರರಿದ್ದರು.

ಪೌರನೌಕರರ ಬೇಡಿಕೆ ಈಡೇರದಿದ್ದರೆ ಹೋರಾಟ

ಹಗರಿಬೊಮ್ಮನಹಳ್ಳಿ: ಪೌರ ನೌಕರರ ಬೇಡಿಕೆಗಳನ್ನು ಈಡೇರಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡುವುದಾಗಿ ಪೌರನೌಕರರ ಸಂಘದ ರಾಜ್ಯಾಧ್ಯಕ್ಷ ಕೆ.ಪ್ರಭಾಕರ್ ಹೇಳಿದರು. ಶನಿವಾರ ಕಾರ್ಯ ನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.ದಿನಗೂಲಿ ನೌಕರರನ್ನು ಜೀತ ಪದ್ಧತಿಯಿಂದ ಮುಕ್ತಗೊಳಿಸಬೇಕು. ಪೌರ ಸೇವಾ ನೌಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಸರ್ಕಾರಿ ನೌಕರರಿಗೆ ಸಿಗುವ ಜಿಪಿಎಫ್, ಕೆಜಿಐಡಿ, ಜ್ಯೋತಿ ಸಂಜೀವಿನಿ ಯೋಜನೆ ಸೇರಿದಂತೆ ಇತರ ಸರ್ಕಾರಿ ನೌಕರರು ಪಡೆಯುವ ಸೌಲಭ್ಯಗಳು ಪೌರ ನೌಕರರಿಗೂ ಕಾರ್ಮಿಕರಿಗೂ ಸಿಗುವಂತಾಗಬೇಕು ಎಂದು ಒತ್ತಾಯಿಸಿ ಎರಡು ಬಾರಿ ಮುಷ್ಕರ ನಡೆಸಲಾಗಿತ್ತು.

ನಮ್ಮ ಬೇಡಿಕೆ ಈಡೇರಿಸುವ ಬಗ್ಗೆ ಲಿಖಿತ ರೂಪದಲ್ಲಿ ಭರವಸೆ ನೀಡಿತ್ತು. ಈ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸಿಲ್ಲ. ಇದುವರೆಗೂ ಒಂದು ಬೇಡಿಕೆ ಸಹ ಈಡೇರಿಲ್ಲ. ನೌಕರರಿಗೆ ಬಜೆಟ್‌ನಲ್ಲಿ ಬಿಡಿಗಾಸು ನೀಡದೇ ರಾಜ್ಯ ಸರ್ಕಾರ ಪೌರ ನೌಕರರಿಗೆ ಅನ್ಯಾಯ ಮಾಡಿದೆ ಎಂದು ದೂರಿದರು.ಮಾ.9ರಂದು ರಾಜ್ಯ ಕಾರ್ಯಕಾರಣಿ ಸಭೆ ನಡೆಯಲಿದೆ. ಬೇಡಿಕೆ ಈಡೇರಿಸದಿದ್ದರೆ ಸಭೆಯಲ್ಲಿ ನಿರ್ಣಯಿಸಿ ಪೌರ ನೌಕರರು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ತಾಲೂಕ ಅಧ್ಯಕ್ಷ ಬಿ.ಮಾರುತಿ, ಕಾರ್ಯದರ್ಶಿ ಚಂದ್ರಶೇಖರ್ ಸಂಘಟನಾ ಕಾರ್ಯದರ್ಶಿ ಕಡ್ಲೇಪ್ಪ, ಸಂತೋಷ್ ಕುಮಾರ್ ಇದ್ದರು.



ಸುರಪುರ: ನಗರದ ಖುರೇಶಿ ಮೊಹಲ್ಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪೋಷಕ ಶಿಕ್ಷಕರ ಮಹಾಸಭೆಯ ಕಾರ್ಯಕ್ರಮವನ್ನು ಶಾಲೆಯ ಮುಖ್ಯಗುರು ಸಾಮುವೇಲ್ ಉದ್ಘಾಟಿಸಿದರು.

ತಂಬ್ರಹಳ್ಳಿ ಉಪಕೇಂದ್ರ, 20 ಎಂವಿಎ ಪರಿವರ್ತಕಕ್ಕೆ ಚಾಲನೆ

ರೈತರ ಸಮಸ್ಯೆಗೆ ಸ್ಪಂದಿಸಿ: ಶಾಸಕ

ಹಗರಿಬೊಮ್ಮನಹಳ್ಳಿ: ರೈತರೆಂದರೆ ಎಲ್ಲರೂ ಒಂದೇ ಇವರು ಈ ಪಕ್ಷದ ರೈತರು ಅವರು ಆ ಪಕ್ಷದ ರೈತರು ಎಂದು ರೈತರ ವಿಷಯದಲ್ಲಿ ರಾಜಕಾರಣ ಮಾಡದೇ ರೈತರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಿ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ತಾಲೂಕಿನ ತಂಬ್ರಹಳ್ಳಿ ಗ್ರಾಮದ ವಿದ್ಯುತ್ ಉಪ ಕೇಂದ್ರದಲ್ಲಿ ಅಳವಡಿಸಲಾಗಿದ್ದ 20 ಎಂವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕಕ್ಕೆ ಭಾನುವಾರ ಶಾಸಕ ಕೆ.ನೇಮಿರಾಜ್ ನಾಯ್ಕ್ ಚಾಲನೆ ನೀಡಿ ಮಾತನಾಡಿದರು. ನಮ್ಮ ಎರಡು ವರೆ ವರ್ಷದ ಅವಧಿಯಲ್ಲಿ ಕ್ಷೇತ್ರ ವ್ಯಾಪ್ತಿಯ 145 ಹಳ್ಳಿಗಳಿಗೆ ಮರಿಯಮ್ಮನಹಳ್ಳಿ, ಕೊಟ್ಟೂರು ಮತ್ತು ಹಗರಿಬೊಮ್ಮನಹಳ್ಳಿ ಪಟ್ಟಣಗಳ ತಲಾ 20 ವಾರ್ಡ್‌ಗಳಿಗೆ ಅನುದಾನ ನೀಡಿದ್ದೇನೆ. ಕುಡಿಯುವ ನೀರಿಗೆ 350 ಕೋಟಿ ಕೇಂದ್ರ ಸರ್ಕಾರದಿಂದ ಅನುದಾನ ತಂದಿರುವುದಾಗಿ ಸರ್ಕಾರಿ ಶಾಲಾ ಅಭಿವೃದ್ಧಿ 120 ಕೋಟಿ ಅನುದಾನ ನೀಡಿದ್ದೇನೆ. ರಸ್ತೆ ಸಿಸಿ ರಸ್ತೆ ಚೆಕ್ ಡ್ಯಾಂ ನಿರ್ಮಿಸಿದ್ದೇನೆ. 8ರಿಂದ 10 ಸಾವಿರ ವಿದ್ಯುತ್ ಹೊಸ ಕಂಬಗಳನ್ನು ಹಾಕಲಾಗಿದೆ.

ಟಿಸಿ ಓವರ್ ಲೋಡ್ ಎಲ್‌ಟಿ ಲೈನ್‌ಗೆ ಹಾಕಲು ಹೇಳಬೇಡಿ ಓವರ್ ಲೋಡ್ ಆದ ಟಿಸಿಗಳನ್ನು ತಕ್ಷಣವೇ ಹೆಚ್ಚಿನ ಸಾಮರ್ಥ್ಯದ ಟಿಸಿ ಅಳವಡಿಸಿಕೊಡಬೇಕು. ರೈತರು ಟಿಸಿ ಸುಟ್ಟರೆ ಲೈನ್‌ಮ್ಯಾನ್ ಅವರಲ್ಲಿ ರಿಜಿಸ್ಟರ್ ಮಾಡಿಸಿದರೆ 24 ಗಂಟೆಗಳಲ್ಲಿ ಟಿಸಿ ಬದಲಾವಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



> **ರೈತರ ಅನುಕೂಲಕ್ಕಾಗಿ ತಂಬ್ರಹಳ್ಳಿಯಲ್ಲಿ ಮೂರು ತಿಂಗಳಲ್ಲಿ ಮತ್ತೊಂದು 12 ಎಂವಿಎ ಪರಿವರ್ತಕವನ್ನು ಅಳವಡಿಸುವ ಮತ್ತು ಜಿಕೋಡಿಹಳ್ಳಿ ಗ್ರಾಮದ 12 ಕೋಟಿ ವೆಚ್ಚದಲ್ಲಿ 66/11 ಕೇವಿಯನ್ನು ಹಾಗೂ ತೇಲುಗೋಳಿ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ರೈತರಿಗೆ ಎರಡು ಹಂತದಲ್ಲಿ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.**
> ■ **ಕೆ.ನೇಮಿರಾಜ್ ನಾಯ್ಕ್, ಶಾಸಕ**

ಜೆಡಿಎಸ್ ಜಿಲ್ಲಾಧ್ಯಕ್ಷಬಾದಾಮಿ ಮೃತ್ಯುಂಜಯ, ಮುಖಂಡರಾದ ಬಣಕಾರ ಕೊಟ್ರೇಶಪ್ಪ, ಬನ್ನಿಗೋಳು ರವಿಪ್ರಸಾದ್, ಸೀಗನಹಳ್ಳಿ ವೆಂಕಣ್ಣ, ಕೃಷ್ಣಾಪುರ ದೊಡ್ಡಬಸಪ್ಪ, ಈರನಗೌಡ ತೆಲಗೋಳಿ, ಮುತ್ಕೂರ್ ಲಿಂಗಾರೆಡ್ಡಿ, ಸೊಬಟಿ ಹರೀಶ್, ಮಾಬುಸಾಬು, ಜೆಸ್ಕಾಂ ಇಲಾಖೆಯ ಇಇ ಸತೀಶ್, ಎಡಬ್ಲ್ಯೂ ಡಿ.ರವೀಂದ್ರ ಸುತ್ತಮುತ್ತಲಿನ ಗ್ರಾಮಸ್ಥರು ರೈತರು ಪಾಲ್ಗೊಂಡಿದ್ದರು. ಜೆಸ್ಕಾಂ ಇಲಾಖೆಯ ತಿರುಕ ರೆಡ್ಡಿ ಮತ್ತು ಕೊಟ್ರೇಶ್ ನಿರ್ವಹಿಸಿದರು.

ಸರ್ಕಾರಿ ಜಮೀನು ಅತಿಕ್ರಮಣ ತೆರವಿಗೆ ಕಾರ್ಯಪಡೆ ರಚನೆ

ಬಳ್ಳಾರಿ: ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಸರ್ಕಾರದ ಹೆಸರಿನಲ್ಲಿರುವ, ಸರ್ಕಾರಿ-ಸಂಘ ಸಂಸ್ಥೆಗಳಿಗೆ ಮಂಜೂರಾದ, ವಿವಿಧ ಉದ್ದೇಶಗಳಿಗೆ ಭೂಸ್ವಾಧೀನವಾದ, ವಿವಿಧ ಮಂಡಳಿಗಳ ಹೆಸರಿನಲ್ಲಿರುವ ಸರ್ಕಾರಿ ಜಮೀನುಗಳನ್ನು ಅನಧಿಕೃತವಾಗಿ ಒತ್ತುವರಿ ಮಾಡಿ, ಅಕ್ರಮವಾಗಿ ನೋಂದಣಿ ಮಾಡಿಕೊಂಡು ಜಮೀನು, ನಿವೇಶನಗಳನ್ನು ಮಾರಾಟ ಮಾಡುವುದನ್ನು ತಡೆಯಲು ಹಾಗೂ ಸರ್ಕಾರಿ ಜಮೀನು, ನಿವೇಶನಗಳನ್ನು ಸಂರಕ್ಷಿಸಲು, ಅನಧಿಕೃತವಾಗಿ ಒತ್ತುವರಿ ಮಾಡಿರುವ ಪ್ರಕರಣಗಳನ್ನು ಗುರುತಿಸಿ, ಒತ್ತುವರಿಮಾಡಿರುವವರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಂಡು, ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಲು ವಿಶೇಷ ಕಾರ್ಯಪಡೆ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ತಿಳಿಸಿದ್ದಾರೆ.



ಸಮಿತಿ ರಚನೆ: ಈ ಉನ್ನತ ಮಟ್ಟದ ಕಾರ್ಯಪಡೆಯಲ್ಲಿ ಈ ಕೆಳಗಿನ ಅಧಿಕಾರಿಗಳಿರುತ್ತಾರೆ. ಅಧ್ಯಕ್ಷರಾಗಿ ಅಪರ ಜಿಲ್ಲಾಧಿಕಾರಿಗಳು. ಸದಸ್ಯರಾಗಿ ಮಹಾನಗರ ಪಾಲಿಕೆ ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಳ್ಳಾರಿ ನಗರ ಮತ್ತು ಬಳ್ಳಾರಿ ಗ್ರಾಮೀಣ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕರು, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಭೂ ದಾಖಲೆಗಳ ಸಹಾಯಕ ನಿರ್ದೇಶಕರು (ನಗರ ಮತ್ತು ಗ್ರಾಮೀಣ) ಹಾಗೂ ಸಹಾಯಕ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿಯಾಗಿ ಬಳ್ಳಾರಿ ತಹಶೀಲ್ದಾರ್ ಇರುತ್ತಾರೆ. ಕಾರ್ಯಪಡೆಯ ಕಾರ್ಯ ನಿರ್ವಹಣೆ: ಪ್ರಥಮ ಹಂತದಲ್ಲಿ ಬಳ್ಳಾರಿ ನಗರದಲ್ಲಿ ಸರ್ಕಾರದ ಹೆಸರಿನಲ್ಲಿರುವ ಜಮೀನುಗಳು ವಿವಿಧ ಸರ್ಕಾರಿ, ಸಂಘ ಸಂಸ್ಥೆಗಳಿಗೆ ಮಂಜೂರಾದ, ವಿವಿಧ ಉದ್ದೇಶಗಳಿಗೆ ಭೂಸ್ವಾಧೀನವಾದ, ವಿವಿಧಮಂಡಳಿಗಳಹೆಸರಿನಲ್ಲಿರುವ, ಸರ್ಕಾರದ ಇಲಾಖೆಗಳಿಗೆ ವರ್ಗಾವಣೆಯಾಗಿರುವ, ವಿವಿಧ ಇಲಾಖೆ ಹೆಸರಿನಲ್ಲಿರುವ ಜಮೀನು, ನಿವೇಶನಗಳ ಪಟ್ಟಿ ತಯಾರಿಸುವುದು.

ತಹಶೀಲ್ದಾರರು, ಉಪ ಆಯುಕ್ತರು (ಕಂದಾಯ) ನಗರ ಪಾಲಿಕೆ ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬಳ್ಳಾರಿ (ನಗರ ಮತ್ತು ಗ್ರಾಮೀಣ) ಇವರುಗಳು ಸರ್ವೇಯರ್, ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಆಡಳಿತಾಧಿಕಾರಿಗಳ ಮೂಲಕ ಅಂತಹ ಎಲ್ಲಾ ಜಮೀನುಗಳನ್ನು ಸ್ಥಳ ತನಿಖೆ ನಡೆಸುವುದು. ಒತ್ತುವರಿಯಾಗಿದೆ ಎಂದು ಕಂಡುಬಂದಲ್ಲಿ (ನಗರ ಮತ್ತು ಗ್ರಾಮೀಣ) ಸರ್ವೇಯರ್ ಯಿಂದ ಆದ್ಯತೆ ಮೇರೆಗೆ ಅಳತೆ ಮಾಡಿಸಿ, ಒತ್ತುವರಿಯನ್ನು ನಕ್ಷೆ ಸಮೇತ ಗುರುತಿಸುವುದು.ಒತ್ತುವರಿ ಸ್ಥಿರಪಟ್ಟಲ್ಲಿ ಕೂಡಲೇ ಮೇಲಿನ ಸಮಿತಿಗೆ ವರದಿಯನ್ನು ಸಲ್ಲಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 104 ಮತ್ತು 192ಎ ರಡಿಯಲ್ಲಿ ಕೂಡಲೇ ಒತ್ತುವರಿಯನ್ನು ನಿಯಮಾನುಸಾರ ತೆರವುಗೊಳಿಸಲು ತಹಶೀಲ್ದಾರರು ಕ್ರಮ ಜರುಗಿಸುವುದು ಎಂದು ತಿಳಿಸಿದ್ದಾರೆ.

ರೂಲ್ಸ್ ಬ್ರೇಕ್: 228 ವಾಹನ ಮಾಲೀಕರ ವಿರುದ್ಧ ಕೇಸ್

ವಿಜಯನಗರ: ಜಿಲ್ಲಾ ಪೊಲೀಸ್ ಇಲಾಖೆ, ಆರ್‌ಟಿಓ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ವಾಹನಗಳಿಗೆ ದೋಷಪೂರಿತ ನಂಬರ್ ಪ್ಲೇಟ್ ಅಳವಡಿಸಿಕೊಂಡು ಮತ್ತು ನಂಬರ್ ಪ್ಲೇಟ್ ಇಲ್ಲದೇ ಸಂಚರಿಸುತ್ತಿದ್ದ 228 ವಾಹನ ಚಾಲಕರಿಗೆ ದಂಡ ವಿಧಿಸಿ ಬಿಸಿ ಮುಟ್ಟಿಸಿದೆ. ಹೊಸಪೇಟೆ ಉಪ ವಿಭಾಗದಲ್ಲಿ 65, ಕೂಡ್ಲಿಗಿ ಉಪ ವಿಭಾಗದಲ್ಲಿ 73, ಹರಪನಹಳ್ಳಿ ಉಪ ವಿಭಾಗದಲ್ಲಿ 150 ಪ್ರಕರಣಗಳು ಸೇರಿದಂತೆ ಜಿಲ್ಲಾದ್ಯಂತ 288 ಪ್ರಕರಣಗಳನ್ನು ದಾಖಲಿಸಿಕೊಂಡು ದಂಡ ಸಂಗ್ರಹಿಸಲಾಗಿದೆ. ಸಾರ್ವಜನಿಕರು ತಮ್ಮ ವಾಹನಗಳಲ್ಲಿ ನಿರ್ವಹಿಸಬೇಕಾದ ಅಗತ್ಯ ದಾಖಲಾತಿಗಳಾದ ಡಿಎಲ್‌ಆರ್‌ಸಿ, ಇನ್ಶೂರೆನ್ಸ್ ಪ್ರಮಾಣ ಪತ್ರ ಹೊಂದಿರಬೇಕು. ನಿಯಮಾನುಸಾರ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಎಸ್ಪಿ ಜಾಹ್ನವಿ ಎಸ್. ತಿಳಿಸಿದ್ದಾರೆ.

ಭಕ್ತಿ, ಕಾಯಕದಿಂದ ಸನ್ಮಾರ್ಗ ಸಾಧ್ಯ: ಸ್ವಾಮೀಜಿ

ಹೂವಿನಹಡಗಲಿ: ಭಕ್ತಿ ಕಾಯಕದ ಮೂಲಕ ಮಾನವನ್ನು ಸನ್ಮಾರ್ಗವನ್ನು ಕಂಡುಕೊಳ್ಳಬಹುದು ಎಂದು ಕಡಲಬಾಳು ಗವಿಸಿದ್ದೇಶ್ವರ ಮಠದ ಮರಿಶಾಂತವೀರ ಸ್ವಾಮೀಜಿ ಹಾಗೂ ಬಿಸರಳ್ಳಿ ಗವಿಸಿದ್ದೇಶ್ವರ ಶಾಖಾಮಠದ ಶಿವಶಾಂತವೀರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಗವಿಸಿದ್ದೇಶ್ವರ ಮಠದಲ್ಲಿ ಆಯೋಜಿಸಿದ್ದ 213ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಮಾಜದಲ್ಲಿ ಮನುಷ್ಯನು ಭೌತಿಕ ಸುಖಸೌಲಭ್ಯಗಳ ಹಿಂದೆ ಓಡುತ್ತಾ ಮಾನವೀಯ ಮೌಲ್ಯಗಳನ್ನು ಮರೆತು ಹೋಗುತ್ತಿರುವುದು ವಿಷಾದನೀಯ. ಜೀವನದಲ್ಲಿ ಶಾಂತಿ, ನೆಮ್ಮದಿ ನಿಜವಾದ ಸಂತೋಷವನ್ನು ಪಡೆಯಲು ಭಕ್ತಿ ಕಾಯಕದ ಮಾರ್ಗವನ್ನು ಅನುಸರಿಸುವುದು ಅಗತ್ಯ ಎಂದರು.

ಕವಯತ್ರಿ ಶೋಭಾ ಮಲ್ಕಿ ಒಡೆಯರ ಸಂಪಾದನೆಯ ಹನಿಗವನಗಳ ಹಂದರ ಪುಸ್ತಕವನ್ನು ಹಿರೇಮನ್ನಾಪುರದ ಸಾಹಿತಿ ಎಸ್.ವಿ.ಕಾಡಗಿಮಠ ಬಿಡುಗಡೆಗೊಳಿಸಿ ಮಾತನಾಡಿದರು.

ಕೊಂಬಳಿಯ ಸೊಪ್ಪಿನ ಗಂಗಮ್ಮ ಬಾಳಪ್ಪ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶೋಭಾ ಮಲ್ಕಿಒಡೆಯರ್, ನೀರಾವರಿ ಇಲಾಖೆಯ ಎಇಇ ಬಸವರಾಜ ಅಂಬಿಗರ, ನಿವೃತ್ತ ದೈಹಿಕ ಶಿಕ್ಷಕ ಪಿ.ಕೆ.ಪಾಟೀಲ, ನಿವೃತ್ತ ಗ್ರಂಥಪಾಲಕ ಪಂಚಾಕ್ಷರಪ್ಪ ಮಗ್ಗದ, ನಿವೃತ್ತ ಉಪನ್ಯಾಸಕ ಹನುಮಂತಪ್ಪ, ಪ್ರೇಮಾ ಶಾಂತಪ್ಪ, ನಿವೃತ್ತ ಮುಖ್ಯಗುರು ಕೊಟ್ರಪ್ಪ ಹಾವನೂರು ಭಾಗವಹಿಸಿದ್ದರು.

ಹಡಗಲಿ ಗವಿಸಿದ್ದೇಶ್ವರ ಶಾಖಾಮಠದ ಪೀಠಾಧಿಪತಿ ಡಾ.ಹಿರಿಶಾಂತವೀರ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಚೇತನ ಎಂ.ಕೆ., ಬಡಿಗೇರ ಧನುಷ್ ಆಚಾರ್ಯ, ಎನ್.ಡಿ.ಪೃಥ್ವಿರಾಜ, ಮಹಮ್ಮದ್ ಸುಫೀಯಾಸ್, ಗಗನ್ ಜೈನ್ ಅವರಿಗೆ ಗುರುರಕ್ಷೆ ನೀಡಿ ಗೌರವಿಸಲಾಯಿತು. ನಂತರ ಮಂಜುಳಾ ರವಿ ಗಡ್ಕರ್ ಅವರಿಂದ ಗಾಂದಾರಿ ವಿದ್ಯೆ ಪ್ರದರ್ಶನ ಹಾಗೂ ದೂರದರ್ಶನ ಹಾಸ್ಯಕಲಾವಿದರಾದ ಮರಿಯಪ್ಪ ಅವರಿಂದ ಹಾಸ್ಯ ಸಂಗಮ ಶ್ರೀಗವಿಸಿದ್ದೇಶ್ವರ ಸ್ವರಸಂಚಾರ ಕಲಾತಂಡದಿಂದ ವಚನಗಾಯನ ನಡೆಯಿತು.



ಸೂಕ್ತ ತರಬೇತಿ ಪಡೆದರೆ ಪರ್ವತಾರೋಹಣ ಕಷ್ಟವಲ್ಲ

ಕೊಟ್ಟೂರು: ಪರ್ವತಾರೋಹಣ ಸಾಹಸ ಮಯವಾದುದು. ಸ್ವಲ್ಪ ಎಚ್ಚರಿಕೆ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಆದರೆ, ಸೂಕ್ತ ತರಬೇತಿ ಪಡೆದುಕೊಂಡಲ್ಲಿ ಯಾವುದೂ ಕಷ್ಟವಾಗುವುದಿಲ್ಲವೆಂದು ಕ್ಯಾ.ಡಾ.ಜಿ.ಸಂತೋಷ 'ಕುಮಾರ್ ಹೇಳಿದರು.

ಪಟ್ಟಣದ ಶ್ರೀಮಹಾದೇವ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಶ್ರೀಶಾರದಾ ಪೂಜೆ ಸಮಾರಂಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಯಾಗಿ ಸನ್ಮಾನಿತಗೊಂಡ ಅವರು ಮಾತನಾಡಿದರು. ಇತ್ತೀಚಿಗೆ ನನ್ನ ಹಲವು ಸಹದ್ಯೋಗಿಗಳೊಂದಿಗೆ ಮೌಂಟ್ ಅಕಾಂಕಗುವಾ ಪರ್ವತವನ್ನು ಎಂಟು ತಾಸಿನಲ್ಲಿ ಏರಿದ್ದೆ. ಪರ್ವತಾರೋಹಣವೇ ಒಂದು ರೋಚಕವಾಗಿರುತ್ತದೆ. ಪರ್ವತ ಮೇಲೆ ಹೋದಂತೆಲ್ಲಾ ಆಮ್ಲಜನಕ ಕೊರತೆಯಾಗುತ್ತದೆ. ಹಾಗೂ ಕಠಿಣವಾಗುತ್ತಾ ಹೋಗುತ್ತದೆ. ಇದಕ್ಕೂ ಮೊದಲು ಸೂಕ್ತ ತರಬೇತಿ ಪಡೆದುಕೊಂಡಲ್ಲಿ ಪರ್ವತಾರೋಹಣವನ್ನು ಮಾಡಬಹುದು. ಗ್ರಾಮೀಣ ಪ್ರದೇಶ ಎಂಬ ಕೀಳರಿಮೆ ತೊರೆದು ಉತ್ತಮ ವಿದ್ಯಾಭ್ಯಾಸದಲ್ಲಿ ತೊಡಗಬೇಕು. ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಪೈಪೋಟಿ ನೀಡಿದಲ್ಲಿ ನಾವೂ ಎಲ್ಲ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಬಹುದ ಎಂದು ಹೇಳಿ, ಪರ್ವತಾರೋಹಣದ ಅನುಭವವನ್ನು ಹಂಚಿಕೊಂಡರು.



ಶಾಲಾ ಆಡಳಿತಾಧಿಕಾರಿ ಬಸಾಪುರ ಪಂಪಾಪತಿ ಮಾತನಾಡಿ, ನಮ್ಮ ಶಾಲೆಯ ಹಳೆ ವಿದ್ಯಾರ್ಥಿ ಸಂತೋಷ್‌ಕುಮಾರ್, ತನ್ನ ಪರಿಶ್ರಮದ ಮೂಲಕ ವೈದ್ಯನಾಗಿ, ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಪರ್ವತಗಳನ್ನು ಏರಿರುವ ಅವರು ಇತ್ತೀಚಿಗೆ ಅತೀ ಹೆಚ್ಚು ಎತ್ತರದ ಮೌಂಟ್ ಅಕಾಂಕಗುವ ಪರ್ವತ ಏರಿದ್ದು ಅವರ ಸಾಹಸಕ್ಕೆ ಸಾಕ್ಷಿಯಾಗಿದೆ. ನಮ್ಮ ಶಾಲೆ ಹಳೆ ವಿದ್ಯಾರ್ಥಿ ದೊಡ್ಡ ಮಟ್ಟದಲ್ಲಿ ಹೆಸರು ಪಡೆದಿರುವುದು ಶಾಲೆಯ ಹೆಮ್ಮೆಯಾಗಿದೆ ಎಂದರು. ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಬಿ.ಸರೋಜ, ಮುಖ್ಯ ಶಿಕ್ಷಕ ಪ್ರದೀಪ್ ಎಸ್., ಶಿಕ್ಷಕರಾದ ಎಚ್. ಕೊಟ್ರೇಶ್, ಚಪ್ಪರದಹಳ್ಳಿ ಕೊಟ್ರೇಶ್, ನಾಗವೇಣಿ, ಎಚ್.ಸಂಜಯ್, ಪ್ರಶಾಂತ್, ಬಿ.ಬಸವರಾಜ ಇತರರಿದ್ದರು.

ಕುಡಿಯುವ ನೀರು ಪೂರೈಕೆಗೆ ತೊಂದರೆಯಿಲ್ಲ: ಶಾಸಕ ಭರತ್ ರೆಡ್ಡಿ

ಬಳ್ಳಾರಿ: ಕೆರೆಗಳಲ್ಲಿ ಅಗತ್ಯಕ್ಕೆ ಬೇಕಾಗುವಷ್ಟು ನೀರಿದ್ದು, ಬೇಸಿಗೆಯಲ್ಲಿ ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ನಗರದ ಹೊರ ವಲಯದಲ್ಲಿರುವ ಅಲ್ಲಿಪುರ ಕೆರೆಗೆ ಭೇಟಿ ನೀಡಿ, ಪರಿಶೀಲಿಸಿ ಮಾತನಾಡಿದರು.

ಕಾಲುವೆ ದುರಸ್ತಿ, ಕ್ರಸ್ಟ್ ಗೇಟ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಕುಡಿಯುವ ನೀರಿಗೆ ಬೇಕಾಗುವಷ್ಟು ಸಂಗ್ರಹ ಜಲಾಶಯದಲ್ಲಿ ಇದೆ, ನಮ್ಮ ಪಾಲಿನ 1.3 ಟಿಎಂಸಿ ನೀರನ್ನು ಮುಂದಿನ ತಿಂಗಳ ಒಳಗೆ ಪಡೆಯಲಾಗುವುದು ಎಂದರು.

ಅಲ್ಲಿಪುರ ಕೆರೆಯ ಬಾಂದು ಹಾಗೂ ಸುತ್ತಮುತ್ತ ಪ್ರದೇಶದ ಅಭಿವೃದ್ಧಿಗೆ ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು. 1200 ಕೋಟಿ ರೂ.ಗಳ ನಿರಂತರ ಕುಡಿಯುವ ನೀರಿನ ಯೋಜನೆಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತಿದ್ದು, ಕೊಳಗಲ್ ಬಳಿ ಬೃಹತ್ ಕೆರೆ ನಿರ್ಮಿಸಲಾಗುವುದು ಎಂದರು.



ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಳ ಚರಂಡಿ ನಿರ್ಮಾಣಕ್ಕಾಗಿ 380 ಕೋಟಿ ರೂ.ಗಳನ್ನು ನೀಡುವಂತೆ ಸಿಎಂ ಅವರಿಗೆ ಮನವಿ ಮಾಡಲಾಗಿತ್ತು, ಬಜೆಟ್ಟಿನಲ್ಲಿ ಘೋಷಣೆ ಆಗಿಲ್ಲ, ಆದರೆ ಹೆಚ್ಚುವರಿ ಯೋಜನೆಯಲ್ಲಿ ಸೇರಿಸಲು ಮಂಜೂರಾತಿ ಸಿಕ್ಕಿದೆ ಎಂದು ಹೇಳಿದರು.

ಅಕ್ರಮ ಯೂರಿಯಾ ಮಾರಾಟದ ಕುರಿತು ಮಾತನಾಡಿ, ಅಕ್ರಮ ಯುರಿಯಾ ಮಾತ್ರವಲ್ಲದೇ ಅಕ್ರಮ ಜೋಳ ಸಂಗ್ರಹ ಮತ್ತು ಮಾರಾಟ ಜಾಲದ ಬಗ್ಗೆಯೂ ಗಂಭೀರ ತನಿಖೆ ನಡೆಸಲಾಗುವುದು ಎಂದರು. ಮೇಯರ್ ಪಿ.ಗಾದೆಪ್ಪ, ಮಾಜಿ ಮೇಯರ್ ಎಂ.ರಾಜೇಶ್ವರಿ, ಪಾಲಿಕೆಯ ಸದಸ್ಯರಾದ ಕುಬೇರಾ, ಪೇರಂ ವಿವೇಕ್, ಪಾಲಿಕೆಯ ಆಯುಕ್ತ ಮಂಜುನಾಥ, ಕಾಂಗ್ರೆಸ್ ಮುಖಂಡರಾದ ಎಂ.ಸುಬ್ಬರಾಯುಡು, ಪರಶುರಾಮುಡು, ಹೊನ್ನೂರಪ್ಪ ಶೇಖರ್, ಪಾಲಿಕೆಯ ಅಧಿಕಾರಿಗಳು ಇದ್ದರು.

ಮಾ.18ರಿಂದ ಏ.2ರ ವರೆಗೆ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ

ಅಕ್ರಮಗಳಿಗೆ ಕಡಿವಾಣ ಹಾಕಿ: ಜಿಲ್ಲಾಧಿಕಾರಿ

ವಿಜಯನಗರ: ಇದೇ ಮಾರ್ಚ್ 18ರಿಂದ ಏ.2ರವರೆಗೆ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ-1 ನಡೆಯುತ್ತಿದ್ದು, ಪರೀಕ್ಷೆ ವೇಳೆ ಯಾವುದೇ ಅಕ್ರಮಗಳಿಗೆ ಎಡಮಾಡಿಕೊಡದೇ ಪಾರದರ್ಶಕವಾಗಿ ಮತ್ತು ಸುಗಮವಾಗಿ ನಡೆಸಲು ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ಜಿಲ್ಲಾಧಿಕಾರಿಕಚೇರಿಸಭಾಂಗಣದಲ್ಲಿ ಶನಿವಾರ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷಾ-1 ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾ.18ರಿಂದ ಎ.2 ರವರೆಗೆ ಜಿಲ್ಲಾ ಕೇಂದ್ರದಲ್ಲಿ 16, ತಾಲೂಕು ಕೇಂದ್ರದಲ್ಲಿ 15, ಹೋಬಳಿ ಮಟ್ಟದಲ್ಲಿ 14 ಹಾಗೂ ಗ್ರಾಮೀಣ ಪ್ರದೇಶದಲ್ಲಿ 28 ಕೇಂದ್ರ ಸೇರಿ ಒಟ್ಟು 73 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 22,041 ವಿದ್ಯಾರ್ಥಿಗಳು ಪರೀಕ್ಷೆಗೆ ಎದುರಿಸಲಿದ್ದಾರೆ.



> **ಕಲಿಕಾ ವಿಷಯದಲ್ಲಿ ತೀರಾ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ಗಳಿಸಲು ಸೂಕ್ತ ನಿರ್ದೇಶನ ನೀಡಿ, ಪ್ರೋತ್ಸಾಹ ನೀಡಬೇಕು. ಫಲಿತಾಂಶ ವೃದ್ಧಿಗೆ ಅಧಿಕಾರಿಗಳು ಶ್ರಮಿಸಬೇಕು. ಪರೀಕ್ಷಾ ವೇಳೆ ಯಾವುದೇ ರೀತಿಯ ಸಮಸ್ಯೆ, ಗೊಂದಲಗಳು ಉಂಟಾದಲ್ಲಿ ತಕ್ಷಣ ಮೇಲಧಿಕಾರಿಗಳನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬೇಕು.**
> ■ **ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಜಿಪಂ ಸಿಇಒ**

ಪರೀಕ್ಷಾ ಕೇಂದ್ರಗಳಿಗೆ ನಿಗಧಿತ ಅವಧಿಯೊಳಗೆ ಪ್ರಶ್ನೆ ಪತ್ರಿಕೆ ರವಾನಿಸಬೇಕು. ಈ ನಿಟ್ಟಿನಲ್ಲಿ ಪರೀಕ್ಷಾರ್ಥಿಗಳಿಗೆ ಪೂರಕ ವಾತಾವರಣ ಕೊಠಡಿ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಬೇಕು. ಆರೋಗ್ಯ ಇಲಾಖೆಯಿಂದ ಪ್ರಥಮ ಚಿಕಿತ್ಸೆ ಕಿಟ್ ನೊಂದಿಗೆ ಸಿಬ್ಬಂದಿ ನಿಯೋಜಿಸಬೇಕು. ಪರೀಕ್ಷ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಜೆಸ್ಕಾಂ ಇಲಾಖೆ ಎಚ್ಚರವಹಿಸಬೇಕು ಎಂದು ತಿಳಿಸಿದರು. ಎಸ್ಪಿ ಎಸ್.ಜಾಹ್ನವಿ, ಡಿಡಿಪಿಐ ವೆಂಕಟೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಶೇಕರಪ್ಪ ಹೊರಪೇಟೆ ಸೇರಿದಂತೆ ಮತ್ತಿತರರು ಇದ್ದರು.

ಶರಣಬಸವೇಶ್ವರರ ಮಹಾರಥೋತ್ಸವ

ಕುರುಗೋಡು : ತಾಲೂಕಿನ ಎಚ್.ವೀರಾಪುರ ಗ್ರಾಮದಲ್ಲಿ ಭಾನುವಾರ ಸಂಜೆ ಗ್ರಾಮದ ಆರಾಧ್ಯದೈವ ಶ್ರೀಶರಣಬಸವೇಶ್ವರ ಸ್ವಾಮಿಯ ಮಹಾರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.

50ನೇ ವರ್ಷ ಅಂಗವಾಗಿ ವಿವಿಧ ಧಾರ್ಮಿಕ ಜರಗಿದವು. ಅಂದು ಬೆಳಿಗ್ಗೆ ದೇವಸ್ಥಾನ ಉತ್ಸವ ಮೂರ್ತಿಗೆ ರುದ್ರ ಅಭಿಷೇಕ, ಹೂವಿನ ಅಲಕಾಂರ, ಮಹಿಳೆಯರು ಕಳಸ ಕನ್ನಡಿ ಆರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಅಂದು ಬೆಳಿಗ್ಗೆ ಉಚ್ಚಾಯ ಜರುಗಿದ್ದು, ಇಂದು ಸಂಜೆ ರಥೋತ್ಸವ ದೇವಸ್ಥಾನದಿಂದ ಆರಂಭಗೊಂಡು ಗ್ರಾಮದ ಮುಖ್ಯರಸ್ತೆಯಿಂದ ಎದುರು ಬಸವಣ್ಣ ಎಳೆದು ಸಂಪನ್ನಗೊಂಡಿತು. ಭಕ್ತರು ಉತ್ತತ್ತಿ, ಹೂವು, ಬಿಲ್ವಪತ್ರಿ, ಬಾಳೆಹಣ್ಣು ಅರ್ಪಿಸಿದರು. ಡೊಳ್ಳು ಕುಣಿತ, ತಾಷಾ ರಾಂಡೋಲು, ಉತ್ಸವ ಭಜನೆ, ಮಂಗಳ ವಾದ್ಯ, ಜಾನಪದ ಮೂರ್ತಿಗಳಿಗೆ ರುದ್ರಾಭಿಷೇಕ, ಕಲಾ ಪ್ರಕಾರಗಳು ಗಮನ ಸೆಳೆದವು. ಮಹಾಮಂಗಳಾರತಿ ನಡೆಯಿತು. ಸುತ್ತಲಿನ ಎಮ್ಮಿಗನೂರು, ಹಾವಿನಹಾಳ್ ಚಿಟಿಗಿನಹಾಳ್, ಸೋಮಲಾಪುರ, ಮಣ್ಣೂರು, ಸೂಗೂರು ಮುದಟ್ಟನೂರು ಗ್ರಾಮಗಳ ಭಕ್ತರು ಭಾಗವಹಿಸಿದ್ದರು.



ಸುಭಾಷ್ ಚಂದ್ರಭೋಸ್ ಕೊಡುಗೆ ಅಪಾರ

ಕೊಟ್ಟೂರು: ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯಿಂದ ಮಾತ್ರ ಸಿಗುವುದಿಲ್ಲ, ಪ್ರಬಲ ಹೋರಾಟ ನಡೆಸಬೇಕು ಎಂದು ಸುಭಾಷ್ ಚಂದ್ರಭೋಸ್, ಭಗತ್‌ಸಿಂಗ್, ಪಟ್ಟಾಭಿರಾಮರವರು ಗಾಂಧೀಜಿಯವರು ಅನೇಕ ಚಳವಳಿಗಳ ಕುರಿತು ಟೀಕೆ ಮಾಡಿದ್ದರು ಎಂದು ಗುಲಬರ್ಗಾ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಬಿ.ಸಿ.ಮಹಾಬಲೇಶ್ವರಪ್ಪ ಹೇಳಿದರು.

ಪಟ್ಟಣದ ತುಂಗಭದ್ರ ಬಿ.ಇಡಿ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಸ್ವಾತಂತ್ರ್ಯ ಮತ್ತು ಏಕೀಕರಣ ಕುರಿತು ಉಪನ್ಯಾಸವನ್ನು ನೀಡಿ ಮಾತನಾಡಿದರು.

ಗಾಂಧೀಜಿಯವರ ಅಸಹಾಕಾರ, ಕ್ವಿಟ್ ಇಂಡಿಯಾ, ಚಳುವಳಿಗಳಿಂದ ದೇಶಕ್ಕೆ ಬ್ರಿಟಿಷರು ಸ್ವಾತಂತ್ರ್ಯ ನೀಡುವುದಿಲ್ಲ ಎಂದು ವಿರೋಧಿಸಿದ್ದರು. ಗಾಂಧೀಜಿಯವರನ್ನು ಸೈದ್ಧಾಂತಿಕವಾಗಿ ಎದುರಿಸಿ 1937ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸುಭಾಷ್ ಚಂದ್ರಭೋಸ್‌ರವರಿಗೆ ಯಾವುದೇ ಅಧಿಕಾರಿ ಸಿಗಲಿಲ್ಲ. ಮುಸಲೋನಿ, ಹಿಟ್ಲರ್ ಸಂಬಂಧ ಬೆಳೆಸಿಕೊಂಡು ಜರ್ಮನ್‌ಗೆ ಹೋಗಿದ್ದ ಸುಭಾಷ್ ರೇಡಿಯೋ ಮೂಲಕ ಪ್ರಚಾರ ನಡೆಸಿ ಐಎನ್‌ಎ ಸ್ಥಾಪಿಸಿದ್ದರು ಎಂದರು.

ಕನ್ನಡ ಭಾಷಿಕರನ್ನು ಒಂದುಗೂಡಿಸುವದಕ್ಕಾಗಿ ನಡೆದ ಏಕೀಕರಣ ಹೋರಾಟ ಅವಿಸ್ಮರಣೀಯವಾಗಿತ್ತು. ಅಂದು ನಡೆದ ಏಕೀಕರಣ ಹೋರಾಟದ ಫಲವಾಗಿ ಕನ್ನಡ ಭಾಷಿಕರೆಲ್ಲಾ ಒಂದೇ ರಾಜ್ಯದಲ್ಲಿ ನೆಲೆಸುವಂತಾಗಿದೆ ಎಂದು ಹೇಳಿದರು.

ಭೌತಶಾಸ್ತ್ರ ನಡೆದು ಬಂದ ದಾರಿ ಕುರಿತು ವರ್ತಕ ಪಿ.ಶ್ರೀಧರಶೆಟ್ಟಿ ಮಾತನಾಡಿ, ಮಹಾಭಾರತ, ರಾಮಾಯಣ ಕಾಲದಲ್ಲಿಯೇ ಗ್ರಹಣಗಳ ಚಲನೆ ಗಮನಿಸಿ ನಿಖರ ಮಾಹಿತಿಗಳನ್ನು ವಾಲ್ಮೀಕಿ, ವೇದವ್ಯಾಸರನ್ನು ವಿಜ್ಞಾನಿಗಳೆಂದು ಕರೆಯಬೇಕು. ಧೃವ ನಕ್ಷತ್ರ ಸ್ಥಳಾಂತರಗೊಳ್ಳವುದಿಲ್ಲ, ಅರುಂಧತಿ, ವಶಿಷ್ಟ ನಕ್ಷತ್ರಗಳು ಜೋಡಿ ಎಂದು 14 ಸಾವಿರ ವರ್ಷಗಳ ಹಿಂದೆಯೇ ಮಹರ್ಷಿಗಳು ಹೇಳಿದ್ದರು. ಇದರೊಂದಿಗೆ ಅಲ್ಬರ್ಟ್ ಐನ್‌ಸ್ಟೀನ್, ನ್ಯೂಟನ್‌ರ ಕುರಿತು ಸವಿಸ್ತಾರವಾಗಿ ಮಾತನಾಡಿದರು.



ಸನ್ಮಾನಿತರಾದ ಮೌಂಟ್ ಅಕಾಂಕಗುವ ಪರ್ವತವೇರಿದ್ದ ಸ್ಥಳೀಯ ಕ್ಯಾ.ಸಂತೋಷ್‌ಕುಮಾರ್, ಪರ್ವತಾರೋಹಣದ ಅನುಭವ ಹಂಚಿಕೊಂಡರು.ಅಧ್ಯಕ್ಷತೆ ವಹಿಸಿದ್ದ ತಾಲೂಕು ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ್, ಉದ್ಘಾಟಿಸಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಶಿವಣ್ಣ, ಪ್ರಾಚಾರ್ಯ ಡಾ.ಟಿ.ಶ್ಯಾಮರಾಜ ಮಾತನಾಡಿದರು. ಕಸಾಪ ಪದಾಧಿಕಾರಿಗಳಾದ ಎಸ್.ರಾಜಣ್ಣ, ಎಚ್.ಎನ್.ಪ್ರಭಾಕರ ಇತರರು ಇದ್ದರು. ಈಶ್ವರಪ್ಪ ತುರಕಾಣಿ ಪ್ರಾಸ್ತಾವಿಕ ಮಾತನಾಡಿದರು, ಅರವಿಂದ ಬಸಾಪುರ, ನಿರ್ವಹಿಸಿದರು.